# ಅಧ್ಯಾಯ 3

# ಜನತೆ

ಕೊಡಗು ಜಿಲ್ಲೆಯು ಪಶ್ಚಿಮ ಘಟ್ಟಗಳಲ್ಲಿ ಬೆಟ್ಟಗಳಿಂದಲೂ ಕಣಿವೆಗಳಿಂದಲೂ ಕೂಡಿರುವ ಜಿಲ್ಲೆಯಾಗಿದ್ದು ಇಲ್ಲಿ ಜನ ಸಾಂದ್ರತೆ ಕಡಿಮೆ. ಟಿಪ್ಪುಸುಲ್ತಾನನು ಕೊಡಗನ್ನು ಆಕ್ರಮಿಸಿದಾಗ ಸಾಕಷ್ಟು ಜನರು ಕೊಡಗನ್ನು ಬಿಟ್ಟು ಓಡಿಹೋದರು. ಕೆಲವರನ್ನು ಸುಲ್ತಾನನೇ ಬಲವಂತವಾಗಿ ಸಾಗಿಸಿಕೊಂಡು ಹೋದನು. ಹೀಗಾಗಿ 1780–90 ರ ಸಮಯದಲ್ಲಿ ಕೊಡಗಿನ ಜನಸಂಖ್ಯೆ ಕಡಿಮೆಯಾಯಿತಲ್ಲದೆ ಅನೇಕ ಹಳ್ಳಿಗಳೂ ನಾಶವಾದವು. ಲೆಫ್ಟಿನೆಂಟ್ ಕೊನೋರ ಪ್ರಕಾರ ಈ ಜಿಲ್ಲೆಯಲ್ಲಿ 1817 ರಲ್ಲಿ 40,000 ಜನರಿದ್ದರೆಂದು ಅಂದಾಜು ಮಾಡಲಾಗಿತ್ತು. 1839–40ರಲ್ಲಿ ಅಧಿಕಾರಿಗಳ ಅಂದಾಜಿನಂತೆ ಇಲ್ಲಿನ ಜನಸಂಖ್ಯೆ 81,437ಕ್ಕೆ ಹೆಚ್ಚಿತು. ಇವರಲ್ಲಿ 17,096 ಜನರು ಕೊಡವರಾಗಿದ್ದರು. ಉಳಿದ 64,341 ಜನರು ಇತರರಾಗಿದ್ದರು. 1854 ರ ಹೊತ್ತಿಗೆ ಜಿಲ್ಲೆಯ ಜನಸಂಖ್ಯೆಯು 125 ಸಾವಿರದಿಂದ 135 ಸಾವಿರವಿದ್ದಿರಬಹುದೆಂದು ಅಂದಾಜು ಮಾಡಲಾಗಿದೆ. ಈ ಜನಸಂಖ್ಯೆಯು 1864 ರಲ್ಲಿ 1,19,118 ರಷ್ಟು ಇತ್ತೆಂದೂ, 1871ನೇ ಜನಗಣತಿಯಲ್ಲಿ 1,68,312ಕ್ಕೆ ಹೆಚ್ಚಿತೆಂದೂ ತಿಳಿದುಬಂದಿದೆ. ಇವರಲ್ಲಿ 26,389 ಜನರು ಕೊಡವರೂ, 1,28,085 ಜನ ಇತರ ಹಿಂದುಗಳೂ 112 ಜನ ಜೈನರೂ, 11,304 ಜನ ಮುಸಲ್ಮಾನರೂ 2,410 ಜನ ಕ್ರೈಸ್ತರೂ, 10 ಜನ ಪಾರ್ಸಿಗಳೂ, ಇಬ್ಬರು ಚೀನಿಯರೂ ಇದ್ದರು. ಇವರಲ್ಲಿ ಅಂದಿನ ಆರೂ ತಾಲೂಕುಗಳಲ್ಲಿ 32,132 ಜನರು ಮಡಿಕೇರಿ ತಾಲೂಕಿನಲ್ಲೂ, 32,350 ಜನರು ಪಾಡಿನಾಲ್ಕುನಾಡಿನಲ್ಲೂ, 31,104 ಜನರು ಯೆಡೆನಾಲ್ಕು ನಾಡಿನಲ್ಲೂ, 27,738 ಜನರು ಕಿಗ್ಗಟ್ಟು ನಾಡಿನಲ್ಲೂ, 26,159 ಜನರು ನಂಜರಾಜಪಟ್ಟಣ ತಾಲೂಕಿನಲ್ಲೂ, 18,829ಜನರು ಯೇಳು ಸಾವಿರ ಸೀಮೆಯಲ್ಲೂ ಇದ್ದರು. ಜನಸಂಖ್ಯೆಯು 1871ರಿಂದ 1891ರ ವರೆಗೂ ಹೆಚ್ಚುತ್ತಾ ಹೋಗಿ ಮುಂದಿನ ದಶಕಗಳಲ್ಲಿ ಕಡಮೆಯಾಗಿ ನಂತರ ಪುನಃ ಹೆಚ್ಚುತ್ತ ಬಂದಿದೆ. ಈ ಮುಂದಿನ ಪಟ್ಟಿಯಲ್ಲಿ ಕೊಡಗು ಜಿಲ್ಲೆಯ 1961, 1971, 1981 ಹಾಗೂ 1991ರ ಜನಗಣತಿಯ ಜನಸಂಖ್ಯೆಯನ್ನು ಕೊಡಲಾಗಿದೆ. ಜಿಲ್ಲೆಯ ಜನಸಂಖ್ಯೆಯು 1991 ರ ಜನಗಣತಿಯ ತಾತ್ಕಾಲಿಕ ಅಂಕಿಅಂಶಗಳ ಪ್ರಕಾರ 4,85,229 ಆಗಿದ್ದು, ಜಿಲ್ಲೆಯು ರಾಜ್ಯದಲ್ಲಿ ವಿಸ್ತೀರ್ಣನಲ್ಲಿ 19 ನೇಯ ಸ್ಥಾನವನ್ನೂ ಜನಸಂಖ್ಯೆಯಲ್ಲಿ ಕಡೆಯ ಸ್ಥಾನವನ್ನೂ ಪಡೆದಿದೆ.

(ಜನಸಂಖ್ಯೆಯ ಅಂಕಿ ಅಂಶಗಳ ವಿವರ ಮುಂದಿನ ಪುಟದಲ್ಲಿದೆ)

### ಜನಸಂಖ್ಯಾ ಬೆಳವಣಿಗೆ

ಒಂದು ಅಂದಾಜಿನ ಪ್ರಕಾರ ಕೊಡಗು ಜಿಲ್ಲೆಯ ಜನಸಂಖ್ಯೆಯು 1839–40ರಲ್ಲಿ 81,437 ಇದ್ದಿತು. ಮೊದಲನೇ ಜನಗಣತಿ 1871ರಲ್ಲಿ ಪ್ರಾರಂಭವಾದಾಗ ಕೊಡಗಿನ ಜನಸಂಖ್ಯೆ 1,68,312 ರಷ್ಟಿತ್ತು. ಅದು ಮುಂದೆ 1881 ರಲ್ಲಿ 1,78,302ಕ್ಕೆ ಹೆಚ್ಚಿ 1891ರಲ್ಲಿ 1,73,055ಕ್ಕೆ ಇಳಿಯಿತು. ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ 1901 ರಿಂದ 1991ರವರೆವಿಗೆ ಜಿಲ್ಲೆಯ ಜನಸಂಖ್ಯಾ ಬೆಳವಣಿಗೆ, ದಶಕದ ಜನಸಂಖ್ಯೆಯ ವ್ಯತ್ಯಾಸ ಹಾಗೂ ಶೇಕಡಾ ಬೆಳವಣಿಗೆಯನ್ನು ಕೊಡಲಾಗಿದೆ. ಜಿಲ್ಲೆಯ ಜನಸಂಖ್ಯೆಯು 1991ರಲ್ಲಿ 4,85,229 (ತಾತ್ಕಾಲಿಕ) ಆಗಿದ್ದು, 1981–91ರ

| ತಾಲೂಕು | | 1961 | 1971 | 1981 | 1991 |
|---|---|---|---|---|---|
| | ಗ್ರಾಮಾಂತರ | 65,087 | 76,880 | 93,002 | 97,753 |
| ಮಡಿಕೇರಿ ತಾಲೂಕು | ನಗರ | 14,453 | 19,357 | 24,724 | 28,729 |
| | ಒಟ್ಟು | 79,540 | 96,237 | 1,17,726 | 1,26,482 |
| | ಗ್ರಾಮಾಂತರ | 94,689 | 1,15,540 | 1,38,327 | 1,56,345 |
| ಸೋಮವಾರಪೇಟೆ ತಾಲೂಕು | ನಗರ | 14,728 | 23,530 | 25,505 | 25,168 |
| | ಒಟ್ಟು | 1,09,417 | 1,39,070 | 1,63,832 | 1,81,513 |
| | ಗ್ರಾಮಾಂತರ | 1,20,364 | 1,27,180 | 1,58,896 | 1,53,224 |
| ವೀರರಾಜಪೇಟೆ ತಾಲೂಕು | ನಗರ | 13,508 | 15,804 | 21,434 | 24,010 |
| | ಒಟ್ಟು | 1,33,887 | 1,42,984 | 1,80,330 | 1,77,234 |
| | ಗ್ರಾಮಾಂತರ | 2,80,140 | 3,19,600 | 3,90,225 | 4,07,322 |
| ಜಿಲ್ಲೆಯ ಮೊತ್ತ | ನಗರ | 42,689 | 58,691 | 71,663 | 77,907 |
| | ಒಟ್ಟು | 3,22,829 | 3,78,291 | 4,61,888 | 4,85,229 |

(ಆಧಾರ : ಸೆನ್ಸಸ್ ವರದಿಗಳು)

ದಶಕದಲ್ಲಿ ಕೇವಲ 23,341 ಜನರ ಹೆಚ್ಚಳ ಕಂಡುಬರುತ್ತದೆ. ಇದು ದಶಕದ ಬೆಳವಣಿಗೆಯ ಶೇ. 5.05 ಆಗಿದ್ದು, ರಾಜ್ಯದ ಜನಸಂಖ್ಯಾ ಬೆಳವಣಿಗೆಯಾದ ಶೇ. 20.69ಕ್ಕಿಂತ ತುಂಬಾ ಕಡಿಮೆಯಾಗಿದೆ.

| ಜನಗಣತಿಯ ವರ್ಷ | ಪುರುಷರು | ಸ್ತ್ರೀಯರು | ಒಟ್ಟು | ದಶಕದ ವ್ಯತ್ಯಾಸ | ದಶಕದ ವ್ಯತ್ಯಾಸದ ಪ್ರತಿಶತ |
|---|---|---|---|---|---|
| 1901 | 1,00,258 | 80,349 | 1,80,607 | — 7,552 | — 4.36 |
| 1911 | 97,279 | 77,697 | 1,74,976 | — 5,631 | — 3.12 |
| 1921 | 89,501 | 74,337 | 1,63,838 | —11,138 | — 6.37 |
| 1931 | 90,575 | 72,752 | 1,63,327 | — 511 | — 0.31 |
| 1941 | 92,347 | 76,379 | 1,68,726 | + 5,399 | + 3.31 |
| 1951 | 1,25,327 | 1,04,078 | 2,29,405 | +60,679 | +35.96 |
| 1961 | 1,73,338 | 1,49,491 | 3,22,829 | +93,424 | +40.72 |
| 1971 | 1,98,109 | 1,80,182 | 3,78,291 | +55,462 | +17.18 |
| 1981 | 2,38,893 | 2,22,995 | 4,61,888 | +83,597 | +22.10 |
| 1991 | 2,43,977 | 2,41,252 | 4,85,229 | +23,341 | + 5.05 |

(ಆಧಾರ : ಸೆನ್ಸಸ್ ವರದಿಗಳು)

ತೋಟಗಳಲ್ಲಿ ಕೆಲಸ ಮಾಡುವ ಪರರಾಜ್ಯಗಳ ಹಾಗೂ ಪಕ್ಕದ ಜಿಲ್ಲೆಗಳ ಕಾರ್ಮಿಕರು ತೋಟಗಳಲ್ಲಿ ಬಹುಕಾಲ ನಿಲ್ಲದೆ ಬರುವುದು ಹೋಗುವುದು ಮಾಡುತ್ತಿದ್ದುದರಿಂದಲೂ, ಮಲೇರಿಯಾ ಮೊದಲಾದ ರೋಗಗಳಿಂದಲೂ, 1871 ರಿಂದ 1931ರವರೆಗೆ ಜನಸಂಖ್ಯೆಯಲ್ಲಿ ಏರಿಳಿತಗಳು ಕಂಡುಬಂದಿವೆ. ಮಲೇರಿಯಾ ನಿಯಂತ್ರಣ, ಸಾರಿಗೆ ಸಂಪರ್ಕ ಉತ್ತಮಗೊಂಡಿರುವುದು ಹಾಗೂ ಸಾಂಬಾರ ಪದಾರ್ಥಗಳ ಬೆಲೆ ಹೆಚ್ಚಿ ತೋಟಗಳು ಅಭಿವೃದ್ಧಿಗೊಂಡುದು–ಇವುಗಳಿಂದ ಜನಸಂಖ್ಯೆಯು 1941 ರಿಂದೀಚೆಗೆ ಹೆಚ್ಚುತ್ತಾ ಬಂದಿದೆಯೆಂದು ಅಭಿಪ್ರಾಯ ಪಡುತ್ತಾರೆ.

ಜನಸಂಖ್ಯಾ ಹೆಚ್ಚಳವು 1901 ರಿಂದ 1981ಕ್ಕೆ ಪ್ರತಿಶತ 155.74 ರಷ್ಟಾಗಿದೆ. ಜಿಲ್ಲೆಯಲ್ಲಿ ಅತಿ ಹೆಚ್ಚಿನ ಜನಸಂಖ್ಯಾ ಬೆಳವಣಿಗೆ ಪ್ರತಿಶತ 40.72 ರಷ್ಟು 1951–61ರ ದಶಕದಲ್ಲಿ ಕಂಡುಬರುತ್ತದೆ. ಸ್ವಾತಂತ್ರ್ಯಾನಂತರ ಕೈಗೊಂಡ ಬೃಹತ್ ಅಭಿವೃದ್ಧಿ ಚಟುವಟಿಕೆಗಳಿಂದ ಹೊರಗಿನಿಂದ ಜನ ವಲಸೆ ಬಂದಿರಬೇಕು. ಜಿಲ್ಲೆಯ ಜನಸಂಖ್ಯೆಯು 1981–91ರ ದಶಕದಲ್ಲಿ ಶೇ. 5.05ರಷ್ಟು ಮಾತ್ರ ಹೆಚ್ಚಾಗಿದ್ದು ಇದು ರಾಜ್ಯದ ಬೆಳವಣಿಗೆಗಿಂತ ತುಂಬಾ ಕಡಿಮೆಯಿದೆ. ಬಹುಶಃ ಜನಸಂಖ್ಯಾ ನಿಯಂತ್ರಣ ಹಾಗೂ ವಲಸೆಗಳು ಇದಕ್ಕೆ ಕಾರಣವಾಗಿರಬಹುದು.

**ಜನಸಾಂದ್ರತೆ**

ಒಂದು ಪ್ರದೇಶದಲ್ಲಿ ಸರಾಸರಿ ಪ್ರತೀ ಚದರ ಕಿಲೋಮೀಟರ್ ಪ್ರದೇಶದಲ್ಲಿ ವಾಸಿಸುವ ಜನಸಂಖ್ಯೆಯನ್ನು ಜನಸಾಂದ್ರತೆ ಎನ್ನುತ್ತೇವೆ. ಜನಸಾಂದ್ರತೆಯು ನಗರ ಪ್ರದೇಶಗಳಲ್ಲಿ ಹೆಚ್ಚಾಗಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆಯಿರುತ್ತದೆ. ಕೊಡಗು ಜಿಲ್ಲೆಯು ಬೆಟ್ಟಗಳಿಂದಲೂ, ಕಾಡುಗಳಿಂದಲೂ, ಕಣಿವೆಗಳಿಂದಲೂ ಹಾಗೂ ಏಲಕ್ಕಿ, ಕಿತ್ತಳೆ, ಕಾಫಿ ತೋಟಗಳಿಂದಲೂ ಕೂಡಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಜನಸಾಂದ್ರತೆ ಇನ್ನೂ ಕಡಿಮೆ ಕಂಡುಬರುತ್ತದೆ. ಜಿಲ್ಲೆಯ ವಿಸ್ತೀರ್ಣವು 1981 ಜನಗಣತಿ ಪ್ರಕಾರ 4102 ಚ.ಕಿ.ಮೀ ಇದ್ದು ಜನಸಂಖ್ಯೆಯು 1991ರಲ್ಲಿ 4,85,229 ಇದ್ದಿತು. ಜಿಲ್ಲೆಯ ಸರಾಸರಿ ಜನಸಾಂದ್ರತೆಯು 1991ರಲ್ಲಿ ಪ್ರತೀ ಚ.ಕಿ.ಮೀ.ಗೆ 118.29 ಆಗುತ್ತದೆ. ಗ್ರಾಮಾಂತರ ಪ್ರದೇಶದ ಜನಸಾಂದ್ರತೆ ಚ.ಕಿ.ಮೀಟರ್‌ಗೆ 100 ಇದ್ದರೆ, ನಗರ ಪ್ರದೇಶಗಳಲ್ಲಿ 1957 ಆಗಿರುತ್ತದೆ. ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆ ಜನಸಾಂದ್ರತೆಯನ್ನು 1971, 1981 ಹಾಗೂ 1991ಕ್ಕೆ ಪ್ರತೀ ತಾಲೂಕಿಗೂ ನಗರ, ಗ್ರಾಮಾಂತರ ಪ್ರದೇಶಗಳಿಗೆ ಬೇರೆ ಬೇರೆಯಾಗಿ ಕೊಡಲಾಗಿದೆ. ಜನಗಣತಿಯ ತಾತ್ಕಾಲಿಕ ಅಂಕಿಅಂಶಗಳ ಪ್ರಕಾರ 1991ರಲ್ಲಿ ಜಿಲ್ಲೆಯ ಜನಸಾಂದ್ರತೆಯು ಪ್ರತಿ ಚ.ಕಿ.ಮಿ.ಗೆ 118 ಇದ್ದು, ಇದು ರಾಜ್ಯದ ಜನಸಾಂದ್ರತೆಯಾದ 234ಕ್ಕಿಂತ ತುಂಬಾ ಕಡಿಮೆಯಿದೆ. ರಾಜ್ಯದಲ್ಲಿ ಈ ಜಿಲ್ಲೆಯು ಜನಸಾಂದ್ರತೆಯಲ್ಲಿ ಕಡೆಯ ಸ್ಥಾನವನ್ನು ಪಡೆದಿದೆ.

| ತಾಲೂಕುಗಳು | | ಜನಸಾಂದ್ರತೆ 1971 | 1981 | 1991 |
|---|---|---|---|---|
| ಮಡಿಕೇರಿ | ಗ್ರಾಮಾಂತರ | 51 | 65 | 68 |
| | ನಗರ | 1,437 | 1,707 | 1968 |
| | ಒಟ್ಟು | 63 | 81 | 87 |
| ಸೋಮವಾರಪೇಟೆ | ಗ್ರಾಮಾಂತರ | 126 | 141 | 159 |
| | ನಗರ | 1,144 | 1,512 | 1489 |
| | ಒಟ್ಟು | 148 | 164 | 182 |
| ವೀರರಾಜಪೇಟೆ | ಗ್ರಾಮಾಂತರ | 79 | 96 | 94 |
| | ನಗರ | 2,034 | 2,546 | 2858 |
| | ಒಟ್ಟು | 88 | 110 | 108 |
| ಜಿಲ್ಲೆಯ ಒಟ್ಟು | ಗ್ರಾಮಾಂತರ | 79 | 96 | 100 |
| ಜನ ಸಾಂದ್ರತೆ | ನಗರ | 1,404 | 1,802 | 1957 |
| | ಒಟ್ಟು | 92 | 113 | 118 |

### ವಾಸದ ಮನೆಗಳೂ ಮತ್ತು ಕುಟುಂಬಗಳು

ಜನಗಣತಿಯ ಪ್ರಕಾರ ವಾಸದ ಮನೆಯೆಂದರೆ ಪೂರ್ತಿಯಾಗಿ ಅಥವಾ ಭಾಗಶಃ ಒಂದು ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸಿಸುವ ಜಾಗ ಎಂದರ್ಥ. ಕುಟುಂಬವೆಂದರೆ ಜನಗಣತಿಯ ಪ್ರಕಾರ ಒಂದು ಅಥವಾ ಒಂದಕ್ಕಿಂತ ಹೆಚ್ಚು ಜನರು ಒಟ್ಟಿಗೇ ವಾಸಿಸುತ್ತಿದ್ದು ಒಂದೇ ಅಡಿಗೇ ಮನೆಯಲ್ಲಿ (ಅನೇಕ ವೇಳೆ ಕೆಲಸ ಕಾರ್ಯಗಳ ಕಾರಣಗಳನ್ನು ಹೊರತುಪಡಿಸಿ) ಊಟಮಾಡುವ ಜನರ ಸಮೂಹ ಎಂದರ್ಥ. ಹೋಟೆಲು, ಜೈಲು, ಹಾಸ್ಟೆಲ್, ಮೊದಲಾದ ಕಡೆಗಳಲ್ಲಿ ಸಂಬಂಧವಿಲ್ಲದವರೂ ಒಟ್ಟಿಗೇ ವಾಸಿಸುವುದರಿಂದ ಅವುಗಳನ್ನು ಜನಗಣತಿಯ ಪ್ರಕಾರ ಕುಟುಂಬಗಳೆಂದೇ ಕರೆಯುತ್ತಾರೆ. ಅಂತಹ ಕುಟುಂಬಗಳಿಗೆ ಸಾಂಸ್ಥಿಕ ಕುಟುಂಬಗಳೆನ್ನುತ್ತಾರೆ. ಕೆಲವು ಕುಟುಂಬಗಳಿಗೆ ವಾಸದ ಮನೆಗಳೇ ಇರುವುದಿಲ್ಲ. ಅಂತಹವುಗಳನ್ನು ಮನೆಗಳಿಲ್ಲದ ಕುಟುಂಬಗಳೆನ್ನುತ್ತಾರೆ. ಜಿಲ್ಲೆಯಲ್ಲಿ 1981 ರಲ್ಲಿ 92,267 ವಾಸದ ಮನೆಗಳೂ ಮತ್ತು 94,795 ಕುಟುಂಬಗಳೂ ಇದ್ದುವು. ಪ್ರತೀ ಸಾವಿರ ವಾಸದ ಮನೆಗಳಿಗೆ 1,024 ಕುಟುಂಬಗಳಿದ್ದವು. ಈ ಕೆಳಗಿನ ಪಟ್ಟಿಯಲ್ಲಿ 1971 ಮತ್ತು 1981ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿನ ವಾಸದ ಮನೆಗಳೂ ಹಾಗೂ ಕುಟುಂಬಗಳನ್ನು ತಾಲೂಕುಗಳಿಗೆ ಪ್ರತ್ಯೇಕವಾಗಿ, ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗೆ ಬೇರೆ ಬೇರೆಯಾಗಿ ಕೊಟ್ಟಿದೆ. (1991ನೇ ಜನಗಣತಿಯ ಅಂಕಿಅಂಶಗಳು ಲಭ್ಯವಿಲ್ಲ).

| ತಾಲೂಕುಗಳು | 1971 | | | 1981 | | |
|---|---|---|---|---|---|---|
| | ಗ್ರಾಮಾಂತರ | ನಗರ | ಒಟ್ಟು | ಗ್ರಾಮಾಂತರ | ನಗರ | ಒಟ್ಟು |
| ಮಡಿಕೇರಿ | | | | | | |
| ವಾಸದ ಮನೆಗಳು | 11,853 | 3,492 | 15,345 | 18,249 | 4,847 | 23,096 |
| ಕುಟುಂಬಗಳು | 14,432 | 3,756 | 18,188 | 18,826 | 4,976 | 23,802 |
| ಸೋಮವಾರಪೇಟೆ | | | | | | |
| ವಾಸದ ಮನೆಗಳು | 18,537 | 3,974 | 22,511 | 26,794 | 5,120 | 31,914 |
| ಕುಟುಂಬಗಳು | 22,652 | 4,831 | 27,483 | 27,219 | 5,269 | 32,488 |
| ವೀರರಾಜ ಪೇಟೆ | | | | | | |
| ವಾಸದ ಮನೆಗಳು | 20,272 | 2,858 | 23,130 | 33,324 | 4,233 | 37,557 |
| ಕುಟುಂಬಗಳು | 24,973 | 3,362 | 28,335 | 34,182 | 4,323 | 38,505 |
| ಜಿಲ್ಲೆಯ ಒಟ್ಟು ಸಂಖ್ಯೆ | | | | | | |
| ವಾಸದ ಮನೆಗಳು | 50,662 | 10,324 | 60,986 | 78,367 | 14,200 | 92,567 |
| ಕುಟುಂಬಗಳು | 62,057 | 11,949 | 74,006 | 80,227 | 14,568 | 94,795 |

### ಸಾಂಸ್ಥಿಕ ಕುಟುಂಬಗಳು ಮತ್ತು ಜನಸಂಖ್ಯೆ

ಭೋಜನ ಗೃಹಗಳು, ವಿದ್ಯಾರ್ಥಿನಿಲಯಗಳು, ಸೆರೆಮನೆ, ಮಠ ಮುಂತಾದವುಗಳಲ್ಲಿ ವಾಸಿಸುವ ಜನರನ್ನು ಸಂಸ್ಥೆಗಳ ಜನಸಂಖ್ಯೆಯೆಂದು ಜನಗಣತಿಯಲ್ಲಿ ಹೇಳುತ್ತಾರೆ. ಕೊಡಗು ಜಿಲ್ಲೆಯಲ್ಲಿ 1971 ಮತ್ತು 1981ರ ಜನಗಣತಿಯ ಪ್ರಕಾರ ಸಾಂಸ್ಥಿಕ ಕುಟುಂಬಗಳು, ಅವುಗಳಲ್ಲಿ ವಾಸಿಸುತ್ತಿದ್ದ ಜನಸಂಖ್ಯೆಯನ್ನು ತಾಲೂಕುಗಳಿಗೂ, ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೂ ಬೇರೆ ಬೇರೆಯಾಗಿ ಈ ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ. (1991ರ ಅಂಕಿಅಂಶಗಳು ಲಭ್ಯವಿಲ್ಲ).

| | 1971 | | | | 1981 | | | |
|---|---|---|---|---|---|---|---|---|
| ಮಡಿಕೇರಿ ತಾಲೂಕು : | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ |
| ಗ್ರಾಮಾಂತರ | 81 | 255 | 31 | 286 | 63 | 495 | 72 | 567 |
| ನಗರ | 76 | 535 | 239 | 774 | 267 | 1,354 | 655 | 2,009 |
| ಒಟ್ಟು | 157 | 790 | 270 | 1,060 | 330 | 1,849 | 727 | 2,576 |
| ಸೋಮವಾರಪೇಟೆ | | | | | | | | |
| ಗ್ರಾಮಾಂತರ | 309 | 723 | 153 | 876 | 39 | 541 | 132 | 673 |
| ನಗರ | 122 | 576 | 122 | 968 | 125 | 725 | 162 | 887 |
| ಒಟ್ಟು | 431 | 1,299 | 275 | 1,574 | 164 | 1,266 | 294 | 1,560 |
| ವೀರರಾಜಪೇಟೆ | | | | | | | | |
| ಗ್ರಾಮಾಂತರ | 214 | 464 | 133 | 597 | 112 | 991 | 521 | 1,512 |
| ನಗರ | 96 | 528 | 357 | 171 | 114 | 737 | 307 | 1,044 |
| ಒಟ್ಟು | 310 | 821 | 304 | 1,125 | 226 | 1,728 | 828 | 2,556 |
| ಜಿಲ್ಲೆಯ ಒಟ್ಟು ಮೊತ್ತ | | | | | | | | |
| ಗ್ರಾಮಾಂತರ | 604 | 1,442 | 317 | 1,759 | 214 | 2,027 | 725 | 2,752 |
| ನಗರ | 294 | 1,468 | 532 | 2,000 | 506 | 2,816 | 1,124 | 3,940 |
| ಒಟ್ಟು | 898 | 2,910 | 849 | 3,759 | 720 | 4,843 | 1,849 | 6,692 |

ಎ–ಸಾಂಸ್ಥಿಕ ಕುಟುಂಬಗಳ ಸಂಖ್ಯೆ; ಬಿ–ಗಂಡಸರು ; ಸಿ–ಹೆಂಗಸರು ; ಡಿ–ಒಟ್ಟು.

### ನಿರ್ವಸಿತ ಕುಟುಂಬಗಳು ಮತ್ತು ಜನಸಂಖ್ಯೆ

ಅಲೆಮಾರಿ ಜನಾಂಗಗಳು, ಭಿಕ್ಷುಕರು ಮೊದಲಾದವರು ಬಸ್ ನಿಲ್ದಾಣಗಳಲ್ಲಿ, ರಸ್ತೆ ಬದಿಗಳಲ್ಲಿ ಧರ್ಮಶಾಲೆಗಳಲ್ಲಿ ಮೊದಲಾದ ಸ್ಥಳಗಳಲ್ಲಿ ವಾಸಿಸುತ್ತಾರೆ. ಇಂತಹವರು ನಿರ್ದಿಷ್ಟವಾದ ಮನೆಗಳನ್ನು ಹೊಂದಿರುವುದಿಲ್ಲ. ಇವುಗಳನ್ನು ಜನಗಣತಿಯಲ್ಲಿ ನಿರ್ವಸಿತ ಅಥವಾ ಮನೆಯಿಲ್ಲದ ಕುಟುಂಬಗಳೆಂದು ಕರೆದಿದ್ದಾರೆ. ಈ ಕುಟುಂಬಗಳ ಜನರನ್ನು ನಿರ್ವಸಿತ ಅಥವಾ ಮನೆಯಿಲ್ಲದ ಜನಸಂಖ್ಯೆಯೆಂದು ಕರೆಯುತ್ತಾರೆ. ಈ ಕೆಳಗಿನ ಪಟ್ಟಿಯಲ್ಲಿ ಅಂತಹ ಕುಟುಂಬಗಳು ಹಾಗೂ ಅವುಗಳ ಜನಸಂಖ್ಯೆಯನ್ನು ತಾಲೂಕುಗಳಿಗೆ ಬೇರೆ ಬೇರೆಯಾಗಿ ಗ್ರಾಮಾಂತರ, ನಗರ ಪ್ರದೇಶಗಳಿಗೆ 1971 ಮತ್ತು 1981 ನೇ ಜನಗಣತಿಗನುಸಾರವಾಗಿ ಕೊಟ್ಟಿದೆ.

| ತಾಲೂಕು | 1971 | | | | 1981 | | | |
|---|---|---|---|---|---|---|---|---|
| ಮಡಿಕೇರಿ | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ |
| ಗ್ರಾಮಾಂತರ | 63 | 82 | 25 | 107 | 194 | 586 | 234 | 820 |
| ನಗರ | 51 | 54 | 20 | 74 | 54 | 116 | 65 | 181 |
| ಒಟ್ಟು | 114 | 136 | 45 | 181 | 248 | 702 | 299 | 1,001 |
| ಸೋಮವಾರಪೇಟೆ | | | | | | | | |
| ಗ್ರಾಮಾಂತರ | 81 | 181 | 112 | 293 | 73 | 190 | 121 | 311 |
| ನಗರ | 97 | 145 | 124 | 269 | 87 | 142 | 107 | 249 |
| ಒಟ್ಟು | 178 | 326 | 236 | 562 | 160 | 332 | 228 | 560 |
| ವೀರರಾಜಪೇಟೆ | | | | | | | | |
| ಗ್ರಾಮಾಂತರ | 120 | 125 | 46 | 171 | 131 | 444 | 234 | 678 |
| ನಗರ | 33 | 54 | 27 | 81 | 50 | 108 | 66 | 174 |
| ಒಟ್ಟು | 153 | 179 | 73 | 252 | 181 | 552 | 300 | 852 |
| ಜಿಲ್ಲೆಯ ಒಟ್ಟು ಮೊತ್ತ | | | | | | | | |
| ಗ್ರಾಮಾಂತರ | 264 | 388 | 183 | 571 | 398 | 1,220 | 589 | 1,808 |
| ನಗರ | 181 | 253 | 171 | 424 | 191 | 366 | 238 | 604 |
| ಒಟ್ಟು | 445 | 641 | 354 | 995 | 589 | 1,586 | 827 | 2,413 |

ಎ—ಮನೆ ಇಲ್ಲದ ಕುಟುಂಬಗಳು ; ಬಿ—ಗಂಡಸರು ; ಸಿ—ಹೆಂಗಸರು ; ಡಿ—ಒಟ್ಟು.

## ವಲಸೆ

ಜನರು ಹಲವಾರು ಕಾರಣಗಳಿಂದ ಒಂದು ಭೂಪ್ರದೇಶದಿಂದ ಇನ್ನೊಂದು ಭೂ ಪ್ರದೇಶಕ್ಕೆ ಹೋಗಿ ವಾಸಿಸುವುದಕ್ಕೆ ವಲಸೆ ಎನ್ನುತ್ತಾರೆ. ಇದು ಪುರಾತನ ಕಾಲದಿಂದಲೂ ನಡೆದು ಬಂದಿದೆ. ವಲಸೆಯು ತಾತ್ಕಾಲಿಕವಾಗಿರಬಹುದು ಇಲ್ಲವೇ ಶಾಶ್ವತವಾಗಿರಬಹುದು. ತಾತ್ಕಾಲಿಕ ವಲಸೆಯು ವರ್ಷದ ಯಾವುದಾದರೂ ಒಂದು ಋತುಮಾನಕ್ಕೆ ಸೀಮಿತವಾಗಿರುತ್ತದೆ, ಇಲ್ಲವೆ ಒಂದು ನಿರ್ದಿಷ್ಟ ಅವಧಿಯದಾಗಿರುತ್ತದೆ. ಮಲೆನಾಡು ಜಿಲ್ಲೆಗಳಿಗೆ ಮೈದಾನ ಪ್ರದೇಶದಿಂದ ಬಿತ್ತನೆ ಹಾಗೂ ಕೊಯಿಲು ಕಾಲದಲ್ಲಿ ಜನ ವಲಸೆ ಹೋಗಿ ನಂತರ ಹಿಂದಿರುಗುತ್ತಾರೆ. ಕೊಡಗು ಜಿಲ್ಲೆಗೆ ಬಹಳ ಕಾಲದಿಂದಲೂ ಪಕ್ಕದ ರಾಜ್ಯಗಳಿಂದ, ಜಿಲ್ಲೆಗಳಿಂದ ಜನರು ವಲಸೆ ಬಂದು ನೆಲೆಸಿದ್ದಾರೆ. ಕೇರಳದ ಕೆಲವು ವರ್ಗದ ಜನರು ಭತ್ತದ ಬಿತ್ತನೆಯ ಹಾಗೂ ಕೊಯಿಲಿನ ಕಾಲದಲ್ಲಿ ಮೊದಲಿನಿಂದಲೂ ವಲಸೆ ಬರುತ್ತಿದ್ದರು. ಅಲೆಮಾರಿಗಳಾದ ಹಾವಾಡಿಗರು, ಕೊರಚರು, ಕರಡಿ ಆಡಿಸುವವರು, ಬುಡುಬುಡಿಕೆಯವರು, ದೊಂಬರು, ಜಂಗಮರು ಮೊದಲಾದವರು ಋತುಮಾನದ ಅಲೆಮಾರಿಗಳಾಗಿ ವಲಸೆ ಬಂದು ಹೋಗುತ್ತಾರೆ. ಜಿಲ್ಲೆಯ ಕಾಫಿ, ಏಲಕ್ಕಿ ತೋಟಗಳಲ್ಲಿ ಕೆಲಸ ಮಾಡಲು ಪಕ್ಕದ ರಾಜ್ಯಗಳಿಂದ ಹೆಚ್ಚು ಜನ ವಲಸೆ ಬಂದಿದ್ದಾರೆ. ಕೆಲವರು ಕಾಯಂ ಆಗಿ ಇಲ್ಲಿಯೇ ನೆಲಸಿ ಜಮೀನುಗಳನ್ನು ಕೊಂಡು ಮನೆ ಮಾಡಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕೇರಳದಿಂದ ಬಂದ ವಲಸೆಗಾರರು ಜಿಲ್ಲೆಯ ಮೂಲನಿವಾಸಿಗಳಿಗೆ ಸಾಮಾಜಿಕ ಸಮಸ್ಯೆಯಾಗಿರುವಂತೆ ಕಂಡು ಬರುತ್ತಿದೆ. ಕೊಡವರಲ್ಲಿ ಈಗೀಗ ಜಾಗೃತಿಯುಂಟಾಗಿ ತಮ್ಮ ಮನೆ ಮಠ ಜಮೀನುಗಳ ರಕ್ಷಣೆಗಾಗಿ ಪರಸ್ಥಳಗಳಿಗೆ ಹೋಗಿದ್ದವರು ಸ್ವಕ್ಷೇತ್ರಕ್ಕೆ ಹಿಂತಿರುಗಿ ಬರತೊಡಗಿದ್ದಾರೆ.

ಟಿಪ್ಪುಸುಲ್ತಾನನ ಕಾಲದಲ್ಲಿ ಕೊಡಗಿನಲ್ಲಿ ಉಂಟಾದ ಕ್ಷೋಭೆಯಿಂದಾಗಿ ಬಲವಾರು ಜನರು ಸ್ಥಳಬಿಟ್ಟು ಓಡಿ ಹೋದರು. ಆಗ ಕೊಡಗಿನ ರಾಜನು ಪಕ್ಕದ ರಾಜ್ಯ ಜಿಲ್ಲೆಗಳಿಂದ ಜನರನ್ನು ಬಂದು ನೆಲೆಸಲು ಆಹ್ವಾನಿಸಿದನು ಹಾಗೂ ಬಲವಂತ ಮಾಡಿದನು. ವಿಶೇಷವಾಗಿ ತೋಟಗಳಲ್ಲಿ ಉದ್ಯೋಗ ಹುಡುಕಿಕೊಂಡು ಬರುವವರ ಸಂಖ್ಯೆಯೂ ಹೆಚ್ಚಿದೆ. ಜಿಲ್ಲೆಯಲ್ಲಿ 1981 ಜನಗಣತಿಯ ಪ್ರಕಾರ 4,61,888 ಜನರಿದ್ದು, ಅವರಲ್ಲಿ 3,48,436 ಜನರು ಅದೇ ಜಿಲ್ಲೆಯಲ್ಲಿ ಹುಟ್ಟಿದವರಾಗಿದ್ದು, 56,657 ಜನರು ರಾಜ್ಯದ ಇತರ ಜಿಲ್ಲೆಗಳಲ್ಲಿಯೂ 54,638 ಜನ ರಾಷ್ಟ್ರದ ಇತರ ರಾಜ್ಯಗಳಲ್ಲಿಯೂ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಮತ್ತು 3,846 ಜನರು ಏಷ್ಯಾ ರಾಷ್ಟ್ರಗಳಲ್ಲಿಯೂ ಹುಟ್ಟಿದವರಾಗಿದ್ದರು. ಇತರ ರಾಜ್ಯಗಳಲ್ಲಿ 738 ಜನರು ಆಂಧ್ರಪ್ರದೇಶಕ್ಕೂ 33,276 ಜನರು (ಶೇ. 60.90) ಕೇರಳಕ್ಕೂ, 20,088 (ಶೇ. 36.77) ತಮಿಳುನಾಡಿಗೂ ಸೇರಿದವರಾಗಿದ್ದರು. ಕೇರಳದಲ್ಲಿ ಹುಟ್ಟಿದವರಲ್ಲಿ ಶೇ. 81.49 ಮಂದಿ ಅಲ್ಲಿಯ ಗ್ರಾಮಾಂತರ ಪ್ರದೇಶಕ್ಕೆ ಸೇರಿದವರಾಗಿದ್ದರು. ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಹುಟ್ಟಿ ಕೊಡಗಿನಲ್ಲಿ ಜನಗಣತಿಯಾದವರಲ್ಲಿ 21,507 ಮಂದಿ (ಶೇ. 38.18) ದಕ್ಷಿಣಕನ್ನಡಕ್ಕೂ, 15,344 ಮಂದಿ (ಶೇ.27.24) ಮೈಸೂರು ಜಿಲ್ಲೆಗೂ 11,111 ಮಂದಿ (ಶೇ.19.72) ಹಾಸನ ಜಿಲ್ಲೆಗೂ 2,337 ಮಂದಿ (ಶೇ.4.15) ಬೆಂಗಳೂರು ಜಿಲ್ಲೆಗೂ ಸೇರಿದವರಾಗಿದ್ದರು. ಬಹುಮಂದಿ ವಲಸೆಗಾರರು ಕೇರಳದಿಂದ ಬಂದವರಾಗಿದ್ದಾರೆ. ಹಾಗೆಯೇ ತಮಿಳುನಾಡಿನಿಂದಲೂ ಸಾಕಷ್ಟು ಮಂದಿ ವಲಸೆ ಬಂದಿರುವುದು ಜನಗಣತಿಯಲ್ಲಿ ದಾಖಲಾಗಿದೆ. ಕಾಫಿ, ಏಲಕ್ಕಿ ತೋಟಗಳಲ್ಲಿ ಕೆಲಸ ಮಾಡುವವರೂ, ಕಾಡಿನಲ್ಲಿ ಮರ ಕಡಿಯುವವರೂ, ಹೆಚ್ಚಾಗಿ ವಲಸೆ ಬಂದಿರುವುದು ಕಂಡು ಬರುತ್ತದೆ. ಮುಂದಿನ ಪಟ್ಟಿಯಲ್ಲಿ 1981ನೇ ಜನಗಣತಿಯಂತೆ ಹೊರಗಡೆ ಹುಟ್ಟಿ ಜಿಲ್ಲೆಯಲ್ಲಿ ಗಣತಿಯಾದವರನ್ನು ಕೊಡಲಾಗಿ.

| ಹುಟ್ಟಿದ ಸ್ಥಳ | ಗ್ರಾಮಾಂತರ | | ನಗರ | | ಒಟ್ಟು |
|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | |
| 1. ಭಾರತದಲ್ಲಿ | 1,98,887 | 1,88,329 | 37,918 | 33,598 | 4,59,732 |
| ಎ. ಕರ್ನಾಟಕದಲ್ಲಿ | 1,73,512 | 1,68,624 | 32,512 | 30,406 | 4,05,094 |
| ಸಿ. ಗಣತಿಯಾಗುವ ಸ್ಥಳದಲ್ಲಿ | 1,28,097 | 1,00,748 | 17,738 | 15,799 | 2,62,382 |
| ಬಿ. ಜಿಲ್ಲೆಯಲ್ಲಿ | 25,866 | 46,708 | 6,774 | 6,706 | 86,054 |
| ಡಿ. ರಾಜ್ಯದ ಇತರ ಜಿಲ್ಲೆಗಳಲ್ಲಿ | 19,548 | 21,167 | 8,041 | 7,901 | 56,657 |
| ಇ. ಇತರ ರಾಜ್ಯ ಹಾಗೂ | | | | | |
| ಕೇಂದ್ರಾಡಳಿತ ಪ್ರದೇಶಗಳಲ್ಲಿ | 26,375 | 19,705 | 5,366 | 13,192 | 54,638 |
| ಆಂಧ್ರಪ್ರದೇಶ | 300 | 237 | 135 | 66 | 738 |
| ಕೇರಳ | 16,070 | 11,048 | 3,901 | 2,257 | 33,276 |
| ತಮಿಳುನಾಡು | 9,848 | 8,267 | 1,220 | 753 | 20,088 |
| 2. ಏಷ್ಯಾ ರಾಷ್ಟ್ರಗಳಲ್ಲಿ | 922 | 933 | 100 | 32 | 1,989 |
| 3. ಶ್ರೀಲಂಕಾದಲ್ಲ | 882 | 894 | 65 | 18 | 1,857 |

### ಸ್ತ್ರೀ ಪುರುಷರ ಪ್ರಮಾಣ

ಸ್ತ್ರೀ ಪುರುಷರ ಪ್ರಮಾಣವೆಂದರೆ ಪ್ರತೀಸಾವಿರ ಗಂಡಸರಿಗೆ ಇರುವ ಹೆಂಗಸರ ಸಂಖ್ಯೆ. ಸ್ತ್ರೀ ಪುರುಷರ ಪ್ರಮಾಣವು ಒಂದು ಪ್ರದೇಶದಲ್ಲಿ ವಾಸಿಸುವ ಜನರ ವಲಸೆ, ಸಂಪ್ರದಾಯ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ಇದಲ್ಲದೆ ಸ್ತ್ರೀಯರ ಮತ್ತು ಪುರುಷರ ಸಾವಿನ ಪ್ರಮಾಣದ ಅಂತರವೂ ಕಾರಣವಾಗಿರುತ್ತದೆ. ಪ್ರಸವ ಕಾಲದ ತಾಯಂದಿರ ಸಾವುಗಳೂ, ಹಲವು ಗುಡ್ಡಗಾಡು ಜನಗಳಲ್ಲಿ ಇದ್ದ ಸ್ತ್ರೀ ಶಿಶುಹತ್ಯೆಯಂತಹ ಕೆಟ್ಟ ಪದ್ಧತಿಗಳೂ ಸ್ತ್ರೀ ಶಿಶುಗಳಿಗೆ ಹೆಚ್ಚು ಗಮನ ಕೊಡದೇಯಿರುವುದೂ ಮೊದಲಾದ ಕಾರಣಗಳೂ ಉಂಟು. 1981 ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತೀ ಸಾವಿರ ಗಂಡಸರಿಗೆ 943 ಹೆಂಗಸರು ನಗರ ಪ್ರದೇಶಗಳಲ್ಲಿ 884 ಹೆಂಗಸರು ಇದ್ದರು. ಜಿಲ್ಲೆಯ ಸರಾಸರಿ ಸ್ತ್ರೀ ಪುರುಷರ ಪ್ರಮಾಣ ಪ್ರತೀ ಸಾವಿರ ಪುರುಷರಿಗೆ 933 ಸ್ತ್ರೀಯರು. ಸ್ತ್ರೀ ಪುರುಷರ ಪ್ರಮಾಣವು ಜಿಲ್ಲೆಯಲ್ಲಿ ಮೊದಲಿನಿಂದಲೂ ರಾಜ್ಯದ ಪ್ರಮಾಣಕ್ಕಿಂತ ಕಡಿಮೆಯೇ ಇರುವುದು ಕಂಡು ಬಂದಿದೆ. ಜಿಲ್ಲೆಯ ಸ್ತ್ರೀ ಪುರುಷರ ಪ್ರಮಾಣವು 1981-91 ರ ದಶಕದಲ್ಲಿ ಪ್ರತೀ ಸಾವಿರ ಪುರುಷರಿಗೆ 989 ಸ್ತ್ರೀಯರಾಗಿದ್ದು ಇದು ರಾಜ್ಯದ ಸ್ತ್ರೀ ಪುರುಷರ ಪ್ರಮಾಣಕ್ಕಿಂತ ಹೆಚ್ಚಿದೆ (960). ಹಿಂದಿನ ದಶಕದಲ್ಲಿ ಜಿಲ್ಲೆಯ ಸ್ತ್ರೀ ಪುರುಷ ಪ್ರಮಾಣವು 933 ಆಗಿದ್ದು ಅದು ರಾಜ್ಯದ ಸ್ತ್ರೀ ಪುರುಷರ ಪ್ರಮಾಣಕ್ಕಿಂತ ಕಡಿಮೆ ಇತ್ತು. ಜನಸಂಖ್ಯಾ ಅಧ್ಯಯನದ ದೃಷ್ಟಿಯಿಂದ ಇದೊಂದು ಮುಖ್ಯ ಸಂಗತಿಯಾಗಿದೆ. ಹೊರಗಿನಿಂದ ಉದ್ಯೋಗಕ್ಕಾಗಿ ಪುರುಷರು ಹೆಚ್ಚಾಗಿ ವಲಸೆ ಬಂದುದರಿಂದ ಈ ರೀತಿ ಆಗಿರುವ ಸಾಧ್ಯತೆ ಇದೆ.

ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯ ಸ್ತ್ರೀ ಪುರುಷರ ಪ್ರಮಾಣವನ್ನು ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗೆ ಪ್ರತ್ಯೇಕವಾಗಿ 1901-1991ರ ವರೆವಿಗೆ ಕೊಟ್ಟಿದೆ. ರಾಜ್ಯದಲ್ಲಿನ ಸ್ತ್ರೀ ಪುರುಷರ ಪ್ರಮಾಣವನ್ನು ಹೋಲಿಕೆಗೋಸ್ಕರ ಆವರಣಗಳಲ್ಲಿ ಕೊಡಲಾಗಿದೆ.

| ದಶಕಗಳು | ಗ್ರಾಮಾಂತರ | ನಗರ | ಒಟ್ಟು |
|---|---|---|---|
| 1901 | 808 (984) | 703 (976) | 801 (983) |
| 1911 | 806 (984) | 693 (959) | 799 (981) |
| 1921 | 840 (974) | 674 (941) | 831 (969) |
| 1931 | 812 (972) | 680 (927) | 803 (965) |
| 1941 | 831 (963) | 772 (947) | 827 (960) |
| 1951 | 837 (974) | 750 (941) | 830 (966) |
| 1961 | 872 (973) | 803 (913) | 862 (959) |
| 1971 | 917 (971) | 872 (913) | 910 (957) |
| 1981 | 943 (978) | 884 (926) | 933 (963) |
| 1991 | 999 (973) | 939 (930) | 980 (961) |

### ವಯೋಮಾನದಂತೆ ವಿಂಗಡಣೆ

ಜನತೆಯನ್ನು ವಯೋಮಾನದ ಆಧಾರದ ಮೇಲೆ ವಿಂಗಡಿಸುತ್ತಾರೆ. ಇದರಿಂದ ಯಾವ ಯಾವ ವಯೋಮಾನದ ಜನರು ಎಷ್ಟು ಎಂಬುದು ತಿಳಿಯುತ್ತದೆ. ಇದರಿಂದ ದುಡಿಯುವ ವಯಸ್ಸಿನವರು, ದುಡಿಯಲು ಸಾಧ್ಯವಿಲ್ಲದವರು ಎಷ್ಟು ಎಂಬುದನ್ನು ಕೂಡ ತಿಳಿಯಲು ಸಾಧ್ಯ. ವಯೋಮಾನವನ್ನು ಸಾಮಾನ್ಯವಾಗಿ 5 ಅಥವಾ 10 ವರ್ಷಗಳ ಅಂತರದಲ್ಲಿ ವರ್ಗೀಕರಿಸಲಾಗುತ್ತದೆ. ಜಿಲ್ಲೆಯ ಜನತೆಯ ವಯೋಮಾನಗಳ ವರ್ಗ ಅಥವಾ ಗುಂಪನ್ನು 1981 ರ ಜನಗಣತಿಯಂತೆ ಈ ಕೆಳಗಿನ ಪಟ್ಟಿಯಲ್ಲಿ ತೋರಿಸಲಾಗಿದೆ. ಜೊತೆಗೆ ಹೋಲಿಸಲು ರಾಜ್ಯದ ವಯೋಮಾನದ ಗುಂಪಿನ ಶತಾಂಶವನ್ನು ಕೂಡ ಕೊಡಲಾಗಿದೆ.

ಪಟ್ಟಿಯ ಪ್ರಕಾರ ಜಿಲ್ಲೆಯಲ್ಲಿ 0-9, 10-14 ವರ್ಷದ ಮಕ್ಕಳ ಸಂಖ್ಯೆ 1,63,541 ; ಅರವತ್ತು ವರ್ಷಕ್ಕಿಂತ

ಮೇಲ್ಪಟ್ಟವರ ಸಂಖ್ಯೆ 27,743. ಸಾಮಾನ್ಯವಾಗಿ 15 ವರ್ಷಗಳಿಗಿಂತ ಕಡಿಮೆ ವಯಸ್ಸಿನವರನ್ನು, 60 ವರ್ಷಕ್ಕಿಂತ ಮೇಲ್ಪಟ್ಟವರನ್ನು ವೃತ್ತಿ ಯೋಗ್ಯರೆಂದು ಪರಿಗಣಿಸುವುದಿಲ್ಲ. ಅವರ ಸಂಖ್ಯೆ ಜಿಲ್ಲೆಯಲ್ಲಿ 1,91,284 ಇದ್ದು, ಇದು ಜಿಲ್ಲೆಯ ಜನಸಂಖ್ಯೆಯ ಶೇ. 41.4 ರಷ್ಟಿದೆ.

(ವಯೋಗುಂಪಿನ ಪಟ್ಟಿ ಪುಟ 137ರಲ್ಲಿದೆ)

**ವಯೋಗುಂಪು ಮತ್ತು ವೈವಾಹಿಕ ಸ್ಥಿತಿ**

ಜನತೆಯನ್ನು ವೈವಾಹಿಕ ಸ್ಥಿತಿಯ ಆಧಾರದ ಮೇಲೆ ನಾಲ್ಕು ಗುಂಪುಗಳಾಗಿ ವಿಂಗಡಿಸುತ್ತಾರೆ. ವಿವಾಹವಾಗದವರು, ವಿವಾಹವಾದವರು, ವಿವಾಹ ವಿಚ್ಛೇದನ ಪಡೆದವರು ಹಾಗೂ ಬೇರೆಯಾದವರು ಮತ್ತು ವಿಧುರರು ಹಾಗೂ ವಿಧವೆಯರು. ಸಾಮಾಜಿಕ ಜೀವನವನ್ನು ಅಧ್ಯಯನ ಮಾಡುವಾಗ ವಯೋಗುಂಪಿಗೆ (ಏಜ್ ಗ್ರೂಪ್)ತಕ್ಕಂತೆ ಈ ರೀತಿಯ ವಿಂಗಡಣೆಯು ಅತಿ ಮುಖ್ಯವಾದದು. ಇದು ಸಮುದಾಯದ ಬಾಲ್ಯವಿವಾಹ, ವಿಧವಾ ವಿವಾಹ ಮೊದಲಾದ ಹಲವಾರು ಸಾಮಾಜಿಕ ಸಂಪ್ರದಾಯಗಳನ್ನು ಸೂಚಿಸುತ್ತದೆ. ಜೊತೆಗೆ ಸಮಾಜದಲ್ಲಿ ಉಂಟಾಗುತ್ತಿರುವ ಬದಲಾವಣೆಗಳನ್ನೂ ಸೂಚಿಸುತ್ತದೆ. ಈ ಮುಂದಿನ ಪಟ್ಟಿಗಳಲ್ಲಿ ವಯೋಗುಂಪಿಗೆ ಅನುಗುಣವಾಗಿ ಜನರ ವೈವಾಹಿಕ ಸ್ಥಿತಿಯನ್ನು ಗ್ರಾಮಾಂತರ, ನಗರ ಹಾಗೂ ಒಟ್ಟು ಜನಸಂಖ್ಯೆಗೆ ಕೊಡಲಾಗಿದೆ. ಇಲ್ಲಿ 0 ಯಿಂದ 9 ಗುಂಪಿನ ಜನರನ್ನು ಅವಿವಾಹಿತರೆಂದು ಪರಿಗಣಿಸಲಾಗಿದೆ.

(ವಯೋಗುಂಪು ಮತ್ತು ವೈವಾಹಿತರ ವಿವರವಾದ ಪಟ್ಟಿ ಪುಟ 138–140ರಲ್ಲಿದೆ)

**ಗ್ರಾಮೀಣ ಜನತೆ**

ಹಳ್ಳಿಗಳಲ್ಲಿ ವಾಸ ಮಾಡುವ ಜನರನ್ನು 'ಗ್ರಾಮೀಣ ಜನತೆ' ಎಂದು ಕರೆಯುತ್ತಾರೆ. ಹಳ್ಳಿಗಳಲ್ಲಿ, ತೋಟಗಳಲ್ಲಿ, ನಗರ ಪ್ರದೇಶವಲ್ಲದೆ ಇನ್ನೂ ಇತರ ಕಡೆಗಳಲ್ಲಿ ವಾಸ ಮಾಡುವವರು ಗ್ರಾಮೀಣ ಜನತೆಯ ಗುಂಪಿಗೆ ಸೇರುತ್ತಾರೆ. ಕೊಡಗು ಜಿಲ್ಲೆಯಲ್ಲಿ 1981ನೇ ಜನಗಣತಿಯ ಪ್ರಕಾರ 288 ಜನವಸತಿಯಿದ್ದ ಗ್ರಾಮಗಳಿದ್ದು ಅವುಗಳಲ್ಲಿ 3,90,225 ಜನರು ವಾಸಿಸುತ್ತಿದ್ದರು, ಕೊಡಗು ಜಿಲ್ಲೆಯಲ್ಲಿ 1901 ರಿಂದ 1991ನೇ ಜನಗಣತಿಗಳ ಪ್ರಕಾರ ವಸತಿಯಿದ್ದ ಗ್ರಾಮಗಳ ಸಂಖ್ಯೆ, ಅವುಗಳಲ್ಲಿ ವಾಸಿಸುತ್ತಿದ್ದ ಗ್ರಾಮೀಣ ಜನಸಂಖ್ಯೆ ಮತ್ತು ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆಯ ಪ್ರತಿಶತಾಂಶಗಳು ಈ ರೀತಿ ಇದ್ದವು.

| | | |
|---|---|---|
| 1901 – 479 | 1,65,358 | 91.56 ಶೇ. |
| 1911 – 493 | 1,64,995 | 94.30 ಶೇ. |
| 1921 – 377 | 1,54,997 | 94.60 ಶೇ. |
| 1931 – 378 | 1,53,500 | 93.98 ಶೇ. |
| 1941 – 301 | 1,57,508 | 93.35 ಶೇ. |
| 1951 – 297 | 2,13,150 | 92.91 ಶೇ. |
| 1961 – 277 | 2,80,140 | 86.78 ಶೇ. |
| 1971 – 291 | 3,19,600 | 84.49 ಶೇ. |
| 1981 – 288 | 3,90,225 | 84.48 ಶೇ. |
| 1991 – ತಿಳಿದಿಲ್ಲ | 4,07,322 | 83.94 ಶೇ. |

ಜಿಲ್ಲೆಯಲ್ಲಿ 1901ರಲ್ಲಿ 479 ಗ್ರಾಮಗಳಿದ್ದುದು 1981ರ ಹೊತ್ತಿಗೆ 288ಕ್ಕೆ ಕಡಿಮೆಯಾಯಿತು. ಗ್ರಾಮಾಂತರ ಜನಸಂಖ್ಯೆ 1991ರಲ್ಲೂ ಕೂಡ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ. 83.94 ಇದ್ದಿತು. ಜಿಲ್ಲೆಯು ಮೂಲತಃ ಗ್ರಾಮಾಂತರ ಜನತೆಯನ್ನು ಹೊಂದಿರುವ ಜಿಲ್ಲೆಯಾಗಿದೆ. ಇದಕ್ಕೆ ಪ್ರಧಾನವಾಗಿ ಜಿಲ್ಲೆಯ ಭೌಗೋಳಿಕ ಅಂಶಗಳಾದ ಮೇಲ್ಮೈ ಲಕ್ಷಣ, ಸ್ವಾಭಾವಿಕ ಸಸ್ಯವರ್ಗ ಹಾಗೂ ಹವಾಗುಣಗಳು ಕಾರಣ. ಜಿಲ್ಲೆಯು ಪ್ರಧಾನವಾಗಿ ಕಾಡು ಮತ್ತು ಕಾಫಿ, ಏಲಕ್ಕಿ, ಕಿತ್ತಳೆ ತೋಟಗಳನ್ನು ಹೊಂದಿದೆ.

ಗ್ರಾಮಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಗುಂಪುಗಳಾಗಿ ವಿಂಗಡಿಸುತ್ತಾರೆ. 200ಕ್ಕಿಂತ ಕಡಿಮೆ ಜನಸಂಖ್ಯೆವುಳ್ಳ ಗ್ರಾಮಗಳು, 200–499 ಜನಸಂಖ್ಯೆಯುಳ್ಳ ಗ್ರಾಮಗಳು, 500 ರಿಂದ 999ರವರೆಗೆ ಜನಸಂಖ್ಯೆಯುಳ್ಳ ಗ್ರಾಮಗಳು, 1,000 ದಿಂದ 1,999 ಜನಸಂಖ್ಯೆಯುಳ್ಳ ಗ್ರಾಮಗಳು, 2,000 ದಿಂದ 4,999 ಜನಸಂಖ್ಯೆಯುಳ್ಳ ಗ್ರಾಮಗಳು, 5,000 ದಿಂದ 9,999 ಜನಸಂಖ್ಯೆಯುಳ್ಳ ಗ್ರಾಮಗಳು ಹಾಗೂ 10,000 ಮೇಲ್ಪಟ್ಟು ಜನಸಂಖ್ಯೆಯುಳ್ಳ ಗ್ರಾಮಗಳು. 141ನೇ ಪುಟದಲ್ಲಿ ಕೊಡಗು ಜಿಲ್ಲೆಯಲ್ಲಿ 1981ರ ಜನಗಣತಿಯ ಪ್ರಕಾರ ಹಳ್ಳಿಗಳ ವರ್ಗೀಕರಣ, ಅವುಗಳಲ್ಲಿದ್ದ ಒಟ್ಟು ಜನಸಂಖ್ಯೆ ಮತ್ತು ಆ ಜನಸಂಖ್ಯೆಯ ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯ ಶತಾಂಶಗಳನ್ನು ಕೊಟ್ಟಿದೆ.

### 1981 ಜನಗಣತಿಯಂತೆ ಕೊಡಗು ಜಿಲ್ಲೆಯ ವಯೋಗುಂಪುಗಳು

| ವಯೋ ಗುಂಪುಗಳು | ಜಿಲ್ಲೆಯ ಜನಸಂಖ್ಯೆ | | | ಜಿಲ್ಲೆಯ ಒಟ್ಟು ಜನಸಂಖ್ಯೆಯ ಶತಾಂಶ | | | ರಾಜ್ಯದ ಒಟ್ಟು ಜನಸಂಖ್ಯೆಯ ರಾಜ್ಯದ ವಯೋಗುಂಪಿನ ಶತಾಂಶ | | |
|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| 0–9 | 54,518 | 52,988 | 1,07,506 | 22.78 | 23.75 | 23.26 | 26.09 | 26.79 | 26.43 |
| 10–14 | 28,468 | 27,870 | 56,337 | 11.87 | 12.48 | 12.17 | 12.99 | 13.29 | 13.13 |
| 15–19 | 24,854 | 26,433 | 51,287 | 10.40 | 11.86 | 11.11 | 10.12 | 9.77 | 9.95 |
| 20–24 | 24,482 | 24,422 | 48,904 | 10.25 | 10.96 | 10.59 | 8.83 | 8.85 | 8.84 |
| 25–29 | 22,296 | 20,296 | 42,592 | 9.33 | 9.11 | 9.23 | 7.62 | 8.02 | 7.84 |
| 30–34 | 15,529 | 12,984 | 28,513 | 6.54 | 5.83 | 6.18 | 6.17 | 6.26 | 6.22 |
| 35–39 | 14,236 | 13,315 | 27,551 | 5.96 | 5.97 | 5 97 | 5.75 | 5.72 | 5.73 |
| 40–44 | 11,819 | 9,526 | 21,345 | 4.95 | 4.27 | 4.62 | 5.20 | 4.76 | 4.93 |
| 45–49 | 12,348 | 9,976 | 22,224 | 5.17 | 4.43 | 4.81 | 4.49 | 3.93 | 4.29 |
| 50–54 | 8,987 | 7,039 | 16,026 | 3.76 | 3.16 | 3.47 | 3.91 | 3.69 | 3.80 |
| 55–59 | 6,564 | 5,295 | 11,859 | 2.75 | 2.38 | 2.57 | 2.37 | 2.08 | 2.22 |
| 60–64 | 6,005 | 5,010 | 11,015 | 2.15 | 2.25 | 2.39 | 2.71 | 2.79 | 2.75 |
| 65–69 | 3,756 | 3,343 | 7,099 | 1.58 | 1.49 | 1.53 | 1.38 | 1.42 | 1.40 |
| 70ಕ್ಕೆ ಮೇಲ್ಪಟ್ಟು | 5,031 | 4,598 | 9,629 | 2.14 | 2.06 | 2.09 | 2.38 | 2.59 | 2.48 |

1981ರ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯ ಗ್ರಾಮಾಂತರ ಜನತೆಯ ವಯಸ್ಸು ಹಾಗೂ ವೈವಾಹಿಕ ಸ್ಥಿತಿ.

| ವಯೋಗುಂಪುಗಳು | ಒಟ್ಟು ಜನಸಂಖ್ಯೆ | | ವೈವಾಹಿಕ ಸ್ಥಿತಿ | | | | | | | |
|---|---|---|---|---|---|---|---|---|---|---|
| | | | ವಿವಾಹವಾಗದವರು | | ವಿವಾಹವಾದವರು | | ವಿಧುರ | ವಿಧವೆಯರು | ವಿಚ್ಛೇದನ ಪಡೆದವರು | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | 2,00,865 | 1,89,360 | 1,18,957 | 96,841 | 77,302 | 75,308 | 4,094 | 15,992 | 472 | 1,173 |
| 0–9 | 46,026 | 40,823 | 46,026 | 44,823 | — | — | — | — | — | — |
| 10–14 | 24,215 | 23,482 | 24,053 | 23,223 | 127 | 213 | 30 | 25 | — | — |
| 15–19 | 20,880 | 22,011 | 20,534 | 18,378 | 321 | 3,521 | 15 | 40 | 5 | 63 |
| 20–25 | 19,895 | 20,400 | 16,478 | 8,149 | 3,863 | 11,836 | 19 | 162 | 31 | 249 |
| 25–29 | 18,274 | 17,186 | 7,860 | 1,720 | 10,261 | 14,888 | 87 | 352 | 56 | 226 |
| 30–34 | 12,698 | 10,943 | 1,977 | 288 | 10,501 | 10,089 | 128 | 460 | 87 | 166 |
| 35–39 | 11,798 | 11,496 | 705 | 89 | 10,849 | 10,402 | 187 | 862 | 56 | 143 |
| 40–44 | 9,758 | 8,329 | 365 | 51 | 9,048 | 7,180 | 295 | 1,054 | 51 | 94 |
| 45–49 | 10,610 | 8,675 | 277 | 69 | 9,871 | 6,957 | 416 | 1,544 | 46 | 105 |
| 50–54 | 7,662 | 6,158 | 249 | 25 | 6,911 | 3,993 | 466 | 2,022 | 36 | 68 |
| 55–59 | 5,868 | 4,670 | 106 | 20 | 5,332 | 2,815 | 401 | 1,810 | 29 | 25 |
| 60–64 | 5,276 | 4,343 | 112 | 5 | 4,446 | 1,730 | 663 | 2,587 | 56 | 20 |
| 65–69 | 3,296 | 2,800 | 46 | 15 | 2,794 | 957 | 446 | 1,818 | 10 | 10 |
| 70 | 4,430 | 3,947 | 69 | 5 | 3,401 | 681 | 942 | 3,256 | 8 | — |

ಎಲ್ಲಾ ವಯಸ್ಸಿನವರು ಎಂಬಲ್ಲಿ ಎಲ್ಲಾ ವಯಸ್ಸಿನ ಗುಂಪುಗಳಿಗೆ ಸೇರಿದ ಒಟ್ಟು ಜನಸಂಖ್ಯೆ ಹಾಗೂ ವಯಸ್ಸನ್ನು ಹಾಗೂ ತಮ್ಮ ವೈವಾಹಿಕ ಸ್ಥಾನಮಾನವನ್ನು ತಿಳಿಸದೇ ಇರುವವರೂ ಸೇರಿದ್ದಾರೆ.

1981 ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿ ನಗರ ಪ್ರದೇಶಗಳ ಜನಸಂಖ್ಯೆಯ ವಯಸ್ಸು ಹಾಗೂ ವೈವಾಹಿಕ ಸ್ಥಿತಿ

| ವಯೋಗುಂಪುಗಳು | ಒಟ್ಟು ಜನಸಂಖ್ಯೆ | | ವೈವಾಹಿಕ ಸ್ಥಿತಿ | | | | | | | |
|---|---|---|---|---|---|---|---|---|---|---|
| | | | ವಿವಾಹವಾಗದವರು | | ವಿವಾಹವಾದವರು | | ವಿಧುರ ವಿಧವೆಯರು | | ವಿಚ್ಛೇದನ ಪಡೆದವರು | |
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | 38,028 | 33,635 | 23,509 | 18,400 | 14,072 | 12,307 | 408 | 2,702 | 12 | 222 |
| 0–9 | 8,391 | 8,114 | 8,391 | 8,114 | — | — | — | — | — | — |
| 10–14 | 4,152 | 4,338 | 4,132 | 4,296 | 19 | 37 | — | — | — | — |
| 15–19 | 3,974 | 4,422 | 3,921 | 3,770 | 42 | 647 | — | — | — | 5 |
| 20–24 | 4,587 | 4,022 | 3,968 | 1,684 | 608 | 2,274 | 10 | 22 | — | 42 |
| 25–29 | 4,022 | 3,110 | 2,111 | 350 | 1,901 | 2,687 | 5 | 43 | — | 35 |
| 30–34 | 2,831 | 2,041 | 546 | 63 | 2,280 | 1,901 | — | 61 | — | 17 |
| 35–39 | 2,439 | 1,819 | 109 | 27 | 2,315 | 1,682 | 15 | 99 | — | 11 |
| 40–44 | 2,060 | 1,197 | 95 | 9 | 1,936 | 919 | 24 | 222 | 5 | 47 |
| 45–49 | 1,738 | 1,201 | 59 | 18 | 1,637 | 867 | 35 | 282 | 7 | 33 |
| 50–54 | 1,325 | 881 | 30 | 9 | 1,239 | 561 | 50 | 298 | — | 13 |
| 55–59 | 696 | 625 | 44 | — | 603 | 320 | 49 | 305 | — | — |
| 60–64 | 728 | 668 | 41 | 24 | 626 | 204 | 61 | 430 | — | 10 |
| 65–69 | 460 | 543 | 20 | 15 | 401 | 141 | 39 | 382 | — | 5 |
| 70 | 601 | 651 | 17 | 14 | 465 | 73 | 119 | 558 | — | 5 |

ಎಲ್ಲಾ ವಯಸ್ಸಿನವರು ಎಂಬಲ್ಲಿ ಎಲ್ಲ ವಯಸ್ಸಿನ ಗುಂಪುಗಳಿಗೆ ಸೇರಿದ ಒಟ್ಟು ಜನಸಂಖ್ಯೆ ಹಾಗೂ ವಯಸ್ಸನ್ನು ಹಾಗೂ ತಮ್ಮ ವೈವಾಹಿಕ ಸ್ಥಾನಮಾನವನ್ನು ತಿಳಿಸದೇ ಇರುವವರು ಸೇರಿದ್ದಾರೆ.

1981ರ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯ ಒಟ್ಟು ಜನಸಂಖ್ಯೆಯ ವಯಸ್ಸು ಹಾಗೂ ವೈವಾಹಿಕ ಸ್ಥಿತಿ.

| ವಯೋಗುಂಪುಗಳು | ಒಟ್ಟು ಜನಸಂಖ್ಯೆ | | ವೈವಾಹಿಕ ಸ್ಥಿತಿ: ವಿವಾಹವಾಗದವರು | | ವಿವಾಹವಾದವರು | | ವಿಧುರ | ವಿಧವೆಯರು | ವಿಚ್ಛೇದನ ಪಡೆದವರು | |
|---|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ಎಲ್ಲಾ ವಯಸ್ಸಿನವರು | 2,38,893 | 2,22,995 | 1,42,466 | 1,15,241 | 91,374 | 87,614 | 4,502 | 18,694 | 484 | 1,395 |
| 0–9 | 54,417 | 52,937 | 54,417 | 52,937 | — | — | — | — | — | — |
| 10–14 | 28,367 | 27,820 | 28,186 | 27,520 | 146 | 249 | 30 | 25 | — | — |
| 15–19 | 24,854 | 26,433 | 24,455 | 22,148 | 363 | 4,168 | 15 | 40 | 5 | 68 |
| 20–24 | 24,482 | 24,422 | 20,446 | 9,833 | 3,971 | 14,110 | 29 | 183 | 31 | 291 |
| 25–29 | 22,296 | 20,296 | 9,971 | 2,071 | 12,162 | 17,569 | 92 | 395 | 56 | 261 |
| 30–34 | 15,529 | 12,984 | 2,522 | 292 | 12,781 | 11,989 | 128 | 521 | 87 | 182 |
| 35–39 | 14,236 | 13,315 | 813 | 116 | 13,165 | 12,084 | 202 | 961 | 56 | 154 |
| 40–44 | 11,819 | 9,526 | 460 | 60 | 10,984 | 8,100 | 319 | 1,226 | 56 | 141 |
| 45–49 | 12,348 | 9,876 | 336 | 87 | 11,509 | 7,824 | 450 | 1,827 | 53 | 138 |
| 50–54 | 8,987 | 7,039 | 280 | 34 | 8,150 | 4,554 | 516 | 2,370 | 36 | 81 |
| 55–59 | 6,564 | 5,295 | 150 | 20 | 5,934 | 3,136 | 450 | 2,114 | 29 | 25 |
| 60–64 | 6,005 | 5,010 | 153 | 29 | 5,072 | 1,934 | 724 | 3,017 | 56 | 30 |
| 65–69 | 3,756 | 3,343 | 66 | 30 | 3,195 | 1,098 | 485 | 2,200 | 10 | 15 |
| 70ಕ್ಕೆ ಮೇಲ್ಪಟ್ಟು | 5,031 | 4,598 | 86 | 19 | 3,866 | 754 | 1,061 | 3,814 | 8 | 5 |

ಎಲ್ಲಾ ವಯಸ್ಸಿನವರು ಎಂಬಲ್ಲಿ ಎಲ್ಲಾ ವಯಸ್ಸಿನ ಗುಂಪುಗಳಿಗೆ ಸೇರಿದ ಒಟ್ಟು ಜನಸಂಖ್ಯೆ ಹಾಗೂ ವಯಸ್ಸನ್ನು ಹಾಗೂ ತಮ್ಮ ವೈವಾಹಿಕ ಸ್ಥಾನಮಾನವನ್ನು ತಿಳಿಸದೇ ಇರುವವರೂ ಸೇರಿದ್ದಾರೆ.

ಜನಸಂಖ್ಯೆಯಂತೆ ಜಿಲ್ಲೆಯ ಗ್ರಾಮಗಳ ವರ್ಗೀಕರಣ 1981 (ಪು. 136 ರಂತೆ)

| ಗ್ರಾಮಗಳ ಗಾತ್ರ (ಜನಸಂಖ್ಯೆಯಲ್ಲಿ) | ಗ್ರಾಮಗಳ ಸಂಖ್ಯೆ | ಜನಸಂಖ್ಯೆ ಪುರುಷರು | ಸ್ತ್ರೀಯರು | ಒಟ್ಟು | ಜಿಲ್ಲೆಯ ಒಟ್ಟು ಗ್ರಾಮೀಣ ಜನಸಂಖ್ಯೆಯ ಶತಾಂಶ |
|---|---|---|---|---|---|
| 1. 200 ಕ್ಕೂ ಕಡಿಮೆ | 09 | 390 | 349 | 739 | 0.20 |
| 2. 200–499 | 29 | 5,440 | 5,424 | 10,864 | 2.78 |
| 3. 500–999 | 87 | 33,143 | 31,624 | 64,767 | 16.60 |
| 4. 1000–1999 | 108 | 78,832 | 74,946 | 1,53,778 | 39.40 |
| 5. 2000–4999 | 54 | 80,215 | 74,611 | 1,54,826 | 39.67 |
| 6. 5000–9999 | 01 | 2,845 | 2,406 | 5,251 | 1.35 |
| 7. 10,000 ಕ್ಕೂ ಮೇಲ್ಪಟ್ಟು | — | — | — | — | — |
| 8. ಒಟ್ಟು ಮೊತ್ತ | 288 | 2,00,865 | 1,89,360 | 3,90,225 | |

ಜಿಲ್ಲೆಯಲ್ಲಿ 1981 ಜನಗಣತಿ ಪ್ರಕಾರ ಪ್ರತೀ ತಾಲೂಕಿನಲ್ಲೂ ಜನಸಂಖ್ಯೆಯ ಆಧಾರದ ಮೇಲೆ ಗ್ರಾಮಗಳ ವರ್ಗೀಕರಣ

| ಗ್ರಾಮಗಳ ಗಾತ್ರ ಜನಸಂಖ್ಯೆಯಲ್ಲಿ | ತಾಲೂಕುಗಳು ಮಡಿಕೇರಿ ತಾ : | | ಸೋಮವಾರಪೇಟೆ ತಾ : | | ವೀರರಾಜಪೇಟೆ ತಾ : | | ಜಿಲ್ಲಾ ಮೊತ್ತ | |
|---|---|---|---|---|---|---|---|---|
| | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿಗಳ ಸಂಖ್ಯೆ | ಒಟ್ಟು ಜನಸಂಖ್ಯೆ | ಹಳ್ಳಿ ಸಂಖ್ಯೆ | ಒಟ್ಟು ಜನಸಂಖ್ಯೆ |
| 200 ಕ್ಕಿಂತ ಕಡಿಮೆ | — | — | 08 | 613 | 01 | 126 | 9 | 739 |
| 200 – 499 | — | — | 27 | 10,240 | 02 | 624 | 29 | 10,864 |
| 500 – 999 | 20 | 15,218 | 41 | 28,896 | 26 | 20,653 | 87 | 64,767 |
| 1000 – 1999 | 36 | 54,514 | 32 | 46,824 | 38 | 52,440 | 108 | 1,53,778 |
| 2000 – 4999 | 9 | 23,270 | 18 | 51,754 | 27 | 79,802 | 54 | 1,54,826 |
| 5000 – 9999 | — | — | — | — | 1 | 5,251 | 1 | 5,251 |
| 10000 ಕ್ಕಿಂತ ಹೆಚ್ಚು | — | — | — | — | — | — | — | — |
| ಮೊತ್ತ | 67 | 93,002 | 126 | 1,38,327 | 95 | 1,58,896 | 288 | 3,90,225 |

ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯ ಗ್ರಾಮಗಳ ವರ್ಗೀಕರಣ ಹಾಗೂ ಆ ವರ್ಗದ ಗ್ರಾಮಗಳ ಗ್ರಾಮೀಣ ಜನಸಂಖ್ಯೆಯ ಶತಾಂಶಗಳನ್ನು 1901 ರಿಂದ 1981ರ ವರೆಗಿನ ಕೆಲವು ದಶಕಗಳಿಗೆ ಕೊಡಲಾಗಿದೆ. ಜಿಲ್ಲೆಯಲ್ಲಿ ಹೆಚ್ಚು ಹಳ್ಳಿಗಳು ಕಡಿಮೆ ಜನಸಂಖ್ಯೆಯನ್ನು ಹೊಂದಿರುವುದು ಈ ಪಟ್ಟಿಯಿಂದ ಗೊತ್ತಾಗುತ್ತದೆ.

| | ಜನಸಂಖ್ಯೆಯ ದಶಕ | 50ಕ್ಕಿಂತ ಕಡಿಮೆ ಜನ ಸಂ. | | 500–999 | | 1000–1999 | | 2000–4999 | | 5000–9999 | | 10000ಕ್ಕಿಂತ ಹೆಚ್ಚು | |
|---|---|---|---|---|---|---|---|---|---|---|---|---|---|
| | | ಎ | ಬಿ | ಎ | ಬಿ | ಎ | ಬಿ | ಎ | ಬಿ | ಎ | ಬಿ | ಎ | ಬಿ |
| 1. | 1901 | 73.73 | 37.12 | 21.28 | 37.91 | 4.13 | 15.10 | 0.61 | 6.14 | 0.21 | 3.73 | — | — |
| 2. | 1921 | 72.57 | 45.49 | 22.16 | 35.37 | 4.75 | 13.75 | 0.26 | 1.93 | 0.26 | 3.46 | — | — |
| 3. | 1951 | 39.13 | 14.84 | 40.14 | 30.08 | 17.06 | 29.74 | 30.01 | 10.25 | 0.33 | 2.68 | 0.33 | 4.41 |
| 4. | 1961 | 23.11 | 6.93 | 37.55 | 27.55 | 29.96 | 38.85 | 9.38 | 26.67 | — | — | — | — |
| 5. | 1971 | 20.62 | 5.88 | 34.36 | 23.15 | 35.05 | 44.64 | 9.62 | 24.58 | 0.35 | 1.75 | — | — |
| 6. | 1981 | 13.19 | 2.97 | 30.21 | 16.60 | 37.50 | 39.41 | 18.75 | 39.68 | 0.35 | 1.34 | — | — |

ಎ–ಒಟ್ಟು ಗ್ರಾಮಗಳ ಶತಾಂಶ ; ಬಿ–ಜಿಲ್ಲೆಯ ಒಟ್ಟು ಗ್ರಾಮೀಣ ಜನತೆಯ ಶತಾಂಶ.

ಈ ಕೆಳಗಿನ ಪಟ್ಟಿಯಲ್ಲಿ ಪ್ರತೀ ತಾಲೂಕಿಗೂ ಗ್ರಾಮಗಳ ಸಂಖ್ಯೆ ಹಾಗೂ ಜನಸಂಖ್ಯೆಯನ್ನು 1971 ಮತ್ತು 1981ನೇ ಜನಗಣತಿಯಂತೆ ಕೊಡಲಾಗಿದೆ.

| ತಾಲೂಕುಗಳು | 1971 ಜನವಸತಿಯಿರುವ ಗ್ರಾಮಗಳ ಸಂ. | 1971 ಜನವಸತಿ ಇಲ್ಲದಗ್ರಾಮಗಳ ಸಂ. | 1971 ಗ್ರಾಮೀಣ ಜನ ಸಂ. | 1981 ಜನವಸತಿಯಿರುವ ಗ್ರಾಮಗಳ ಸಂ. | 1981 ಜನವಸತಿಯಿಲ್ಲದ ಗ್ರಾಮಗಳ ಸಂ. | 1981 ಜನಸಂಖ್ಯೆ |
|---|---|---|---|---|---|---|
| ಮಡಿಕೇರಿ | 73 | 1 | 76,880 | 67 | — | 93,002 |
| ಸೋಮವಾರಪೇಟೆ | 120 | 12 | 1,15,540 | 126 | 8 | 1,38,327 |
| ವೀರರಾಜಪೇಟೆ | 98 | — | 1,27,180 | 95 | — | 1,58,896 |
| ಮೊತ್ತ | 291 | — | 3,19,600 | 288 | 8 | 3,90,225 |

### ಪಟ್ಟಣಗಳ ಜನಸಂಖ್ಯೆ

ನಗರೀಕರಣವು ಇಪ್ಪತ್ತನೇಯ ಶತಮಾನದ ಸಾಮಾಜಿಕ ಪ್ರಕ್ರಿಯೆಯಾಗಿದೆ. ಪಟ್ಟಣಗಳನ್ನು ಗ್ರಾಮೀಣ ಪ್ರದೇಶಗಳಿಂದ ಬೇರ್ಪಡಿಸಲು ಕೆಲವು ಲಕ್ಷಣಗಳನ್ನು ಸೂಚಿಸಲಾಗಿದೆ. ಕನಿಷ್ಟ ಜನಸಂಖ್ಯೆಯು ಐದುಸಾವಿರವಿದ್ದು, ಕೊನೆಯು ಪಕ್ಷ ಶೇ. 75ರಷ್ಟು ಜನ ಕೃಷಿಯಲ್ಲದ ಉದ್ಯೋಗಸ್ಥರಾಗಿರಬೇಕು. ಜನಸಾಂಧ್ರತೆಯು ಚ.ಕಿ.ಮೀ.ಗೆ 400ರಷ್ಟಾದರೂ ಇರಬೇಕು. ಸಾಮಾನ್ಯವಾಗಿ ಪುರಸಭೆ, ನಗರಸಭೆ, ದಂಡು ಪ್ರದೇಶ, ಮಂಡಲಿ ಅಥವಾ ಘೋಷಿಸಲ್ಪಟ್ಟ ಪಟ್ಟಣ ಪ್ರದೇಶಗಳು ಪಟ್ಟಣ ವ್ಯಾಪ್ತಿಯಲ್ಲಿ ಬರುತ್ತವೆ. 1981ನೇ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿ 10 ಪಟ್ಟಣ ಪ್ರದೇಶಗಳನ್ನು ಗುರುತಿಸಲಾಗಿತ್ತು. ಅವುಗಳು ಯಾವುವೆಂದರೆ ಮಡಿಕೇರಿ, ವೀರರಾಜಪೇಟೆ, ಸೋಮವಾರಪೇಟೆ, ಕುಶಾಲನಗರ, ಗೋಣಿಕೊಪ್ಪಲು, ಕೊಡ್ಲಿಪೇಟೆ, ಕೊಡಮಂಗಳೂರು, ಪೊನ್ನಂಪೇಟೆ, ಶನಿವಾರಸಂತೆ ಮತ್ತು ಸುಂಟಿಕೊಪ್ಪ. ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯ ಪಟ್ಟಣ ಪ್ರದೇಶಗಳ ಜನಸಂಖ್ಯೆಯನ್ನು 1881 ರಿಂದ 1991ರವರೆವಿಗೂ ಕೊಡಲಾಗಿದೆ. ಜೊತೆಗೆ ದಶಕದ ಒಟ್ಟು ಜನಸಂಖ್ಯೆಯ ವ್ಯತ್ಯಾಸ, ಜಿಲ್ಲೆಯ ಒಟ್ಟು ಜನಸಂಖ್ಯೆಯ ಶತಾಂಶ, ನಗರ ಜನಸಂಖ್ಯೆಯ ದಶಕದ ಬೆಳವಣಿಗೆಯ ಶತಾಂಶಗಳನ್ನು ಕೊಡಲಾಗಿದೆ.

| ದಶಕಗಳು | ಜಿಲ್ಲೆಯ ಪಟ್ಟಣಗಳ ಒಟ್ಟು ಜನ ಸಂಖ್ಯೆ | ಜಿಲ್ಲೆಯ ಒಟ್ಟು ಜನ ಸಂಖ್ಯೆಯ ಶತಾಂಶ | ಪಟ್ಟಣಗಳ ಜನಸಂಖ್ಯೆಯ ದಶಕದ ಬೆಳವಣಿಗೆ | ಪಟ್ಟಣಗಳ ಜನಸಂಖ್ಯೆಯ ಬೆಳವಣಿಗೆಯ ಶತಾಂಶ |
|---|---|---|---|---|
| 1 | 2 | 3 | 4 | 5 |
| 1881 | 16,653 | 9.89 | | |
| 1891 | 15,481 | 8.68 | — 1,172 | — 7.57 |
| 1901 | 15,249 | 8.44 | — 232 | — 1.55 |
| 1911 | 9,981 | 5.70 | — 5,248 | — 34.55 |
| 1921 | 8,844 | 5.40 | — 1,140 | — 11.42 |
| 1931 | 9,827 | 6.02 | + 986 | + 11.15 |

| 1 | 2 | 3 | 4 | 5 |
|---|---|---|---|---|
| 1941 | 12,218 | 7.24 | + 2,391 | + 24.33 |
| 1951 | 16,255 | 7.09 | + 4,037 | + 33.04 |
| 1961 | 40,366 | 12.50 | +24,111 | +148.33 |
| 1971 | 52,003 | 13.75 | +11,637 | + 28.83 |
| 1981 | 71,663 | 15.72 | +19,660 | + 37.81 |
| 1991 | 77,907 | 16.06 | + 6,244 | + 8.71 |

ಜಿಲ್ಲೆಯ ಪಟ್ಟಣಗಳ ಜನಸಂಖ್ಯೆಯು 1881ರಲ್ಲಿ 16,653 ಇದ್ದುದು 1921ರ ವರೆವಿಗೆ ಕ್ರಮೇಣ ಕಡಿಮೆಯಾಗುತ್ತಾ ಬಂದು ನಂತರ ಹೆಚ್ಚುತ್ತಾ ಬಂತು. ಮಡಿಕೇರಿ, ವೀರರಾಜಪೇಟೆ, ಕುಶಾಲನಗರ, ಕೊಡ್ಲಿಪೇಟೆ ಮತ್ತು ಸೋಮವಾರಪೇಟೆಗಳನ್ನು 1881 ರಿಂದ 1901ರ ವರೆವಿಗೆ ಪಟ್ಟಣಗಳ ಗುಂಪಿಗೆ ಸೇರಿಸಲಾಗಿತ್ತು. ಆದರೆ 1911 ರಿಂದ 1951ರ ತನಕ ಸೋಮವಾರಪೇಟೆ, ಕೊಡ್ಲಿಪೇಟೆ ಮತ್ತು ಕುಶಾಲನಗರಗಳನ್ನು ಪಟ್ಟಣಗಳ ಪಟ್ಟಿಯಿಂದ ತೆಗೆದುಹಾಕಲಾಯಿತು. ಪುನಃ 1961ರ ಜನಗಣತಿಯಲ್ಲಿ ಬಿಟ್ಟಿದ್ದ ಪಟ್ಟಣಗಳ ಜೊತೆಗೆ ಗೋಣಿಕೊಪ್ಪಲು, ಕೊಡಮಂಗಳೂರು, ಪೊನ್ನಂಪೇಟೆ, ಶನಿವಾರಸಂತೆ ಮತ್ತು ಸುಂಟಿಕೊಪ್ಪಗಳನ್ನು ಪಟ್ಟಣಗಳ ಗುಂಪಿಗೆ ಸೇರಿಸಲಾಯಿತು. ಆದರಿಂದಾಗಿ ಪಟ್ಟಣಗಳ ಜನಸಂಖ್ಯೆ ಆ ದಶಕದಲ್ಲಿ 148.33 ರಷ್ಟು ಹೆಚ್ಚಾಯಿತು. ಹೆಬ್ಬಾಲೆ ಮತ್ತು ಉಲುಗಲಿಗಳನ್ನು 1971 ರ ಜನಗಣತಿಯಲ್ಲಿ ಪಟ್ಟಣಗಳ ಪಟ್ಟಿಗೆ ಸೇರಿಸಲಾಗಿತ್ತು. ಆದರೆ 1981ರ ಜನಗಣತಿಯಲ್ಲಿ ಅವುಗಳನ್ನು ಪಟ್ಟಿಯಿಂದ ತೆಗೆದುಹಾಕಿ ಕೊಡಮಂಗಳೂರನ್ನು ಹೊಸದಾಗಿ ಸೇರಿಸಲಾಯಿತು. ಜಿಲ್ಲೆಯಲ್ಲಿ 1981ರಲ್ಲಿ ಹತ್ತು ಪಟ್ಟಣ ಪ್ರದೇಶಗಳಿದ್ದು ಅವುಗಳಲ್ಲಿ 71,663 ಜನರಿದ್ದರು, ಜಿಲ್ಲೆಯ, ಪಟ್ಟಣಗಳ ಜನಸಂಖ್ಯೆಯು 1971–1981 ರ ದಶಕದಲ್ಲಿ ಶೇ. 37.81 ರಷ್ಟು ಹೆಚ್ಚಿತು. ಇದೇ ಅವಧಿಯಲ್ಲಿ ಜಿಲ್ಲೆಯ ಜನಸಂಖ್ಯಾ ಬೆಳವಣಿಗೆ ಶೇ. 22.10 ರಷ್ಟಿತ್ತು. ಅಂದರೆ ಪಟ್ಟಣ ಪ್ರದೇಶಗಳಿಗೆ ಈ ದಶಕದಲ್ಲಿ ಸುಮಾರು 15.71 ರಷ್ಟು ಜನರು ವಲಸೆ ಬಂದಿರಬಹುದೆಂಬುದು ವ್ಯಕ್ತವಾಗುತ್ತದೆ. ಪುಟ 145ರ ಪಟ್ಟಿಯಲ್ಲಿ ಜಿಲ್ಲೆಯ ಪಟ್ಟಣಗಳ ಬೆಳವಣಿಗೆಯನ್ನು 1901 ರಿಂದ ಕೊಡಲಾಗಿದೆ.

### ಅಂಗವಿಕಲರು

ಅಂಗವಿಕಲರ ಜನಗಣತಿಯನ್ನು 1941 ಜನಗಣತಿಯಿಂದ ನಿಲ್ಲಿಸಲಾಯಿತು. ಇದಕ್ಕೆ ಮುಂಚಿನ ಜನಗಣತಿಗಳಲ್ಲಿ ಕುರುಡುರು, ಕಿವುಡರು, ಮೂಗರನ್ನು ಜನಗಣತಿ ಮಾಡಲಾಗುತ್ತಿತ್ತು. 1981 ನೇ ಜನಗಣತಿಯಿಂದ ಪುನಃ ಅಂಗವಿಕಲರ ಜನಗಣತಿಯನ್ನು ತೆಗೆದುಕೊಳ್ಳಲಾಗಿದೆ. ವಾಸದ ಮನೆಗಳ ಜನಗಣತಿಯನ್ನು ಮಾಡುವಾಗ ಕುರುಡರು ಕಿವುಡರು ಹಾಗೂ ಕುಂಟರನ್ನು ಬೇರೆ ಬೇರೆಯಾಗಿ ಜನಗಣತಿ ಮಾಡಲಾಗಿದೆ. ಇದು ನೈಜ ಚಿತ್ರವನ್ನು ಸ್ಪಷ್ಟವಾಗಿ ಕೊಡಲಾರದೆಂಬ ಭಾವನೆಯೂ ಇದೆ. ಏಕೆಂದರೆ ಬಹುಮಂದಿ ಅಂಗವಿಕಲರು ವಸತಿ ವಿಹೀನರಾಗಿರುವ ಭಿಕ್ಷುಕರ ಸಮುದಾಯದಲ್ಲಿದ್ದು ಮನೆಗಳ ಜನಗಣತಿ ಸಮಯದಲ್ಲಿ ಅವರು ಲೆಕ್ಕಕ್ಕೆ ಸಿಕ್ಕದೇ ಹೋಗುವ ಸಂಭವವೇ ಹೆಚ್ಚು. ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯಲ್ಲಿಯ ಅಂಗವಿಕಲರ ಸಂಖ್ಯೆಯನ್ನು 1891 ರಿಂದ 1981ರ ವರೆವಿಗೆ ಕೊಡಲಾಗಿದೆ. ಅದರ ಮುಂದಿನ ಪಟ್ಟಿಯಲ್ಲಿ ತಾಲೂಕುಗಳ ಅಂಗವಿಕಲರ ಪಟ್ಟಿಯನ್ನು 1981 ಜನಗಣತಿಯಲ್ಲಿದ್ದಂತೆ ಕೊಡಲಾಗಿದೆ (ಅಂಗವಿಕಲರ ಅಭಿವೃದ್ಧಿ ಕಾರ್ಯಗಳಿಗೆ 16 ನೇ ಅಧ್ಯಾಯ ನೋಡಿ).

| ದಶಕಗಳು | ಕಿವುಡ, ಮೂಗರು | ಕುರುಡರು |
|---|---|---|
| 1891 | 126 | 86 |
| 1901 | 104 | 96 |
| 1911 | 87 | 81 |
| 1921 | 20 | 93 |
| 1931 | 101 | 100 |
| 1981 | 147 | 78 |

1981ರಲ್ಲಿ ಮಾತ್ರ ಕೈ ಕಾಲುಗಳಿಂದ ವಿಕಲರಾದವರ ಸಂಖ್ಯೆ ದೊರೆತಿದ್ದು ಅದು 140 ಆಗಿದೆ.

ಜಿಲ್ಲೆಯ ಪಟ್ಟಣಗಳ ಬೆಳವಣಿಗೆ 1901–1981

| | ಪಟ್ಟಣಗಳು | 1901 | 1911 | 1921 | 1931 | 1941 | 1951 | 1961 | 1971 | 1981 |
|---|---|---|---|---|---|---|---|---|---|---|
| 1. | ಮಡಿಕೇರಿ | 6,732 | 6,269 | 5,675 | 5,995 | 7,112 | 10,117 | 14,455 | 19,357 | 24,724 |
| 2. | ವೀರರಾಜಪೇಟೆ | 4,283 | 3,712 | 3,166 | 3,832 | 4,106 | 6,138 | 8,138 | 9,782 | 11,676 |
| 3. | ಸೋಮವಾರಪೇಟೆ | 1,745 | | | | | | 5,137 | 6,281 | 6,936 |
| 4. | ಕುಶಾಲನಗರ | 1,600 | | | | | | 2,902 | 5,000 | 6,936 |
| 5. | ಕೊಡ್ಲಿಪೇಟೆ | | | | | | | 1,667 | 2,059 | 2,254 |
| 6. | ಪೊನ್ನಂಪೇಟೆ | | | | | | | 2,621 | 3,265 | 4,367 |
| 7. | ಗೋಣಿಕೊಪ್ಪಲು | | | | | | | 2,749 | 2,757 | 5,391 |
| 8. | ಶನಿವಾರಸಂತೆ | | | | | | | 1,391 | 2,003 | 2,691 |
| 9. | ಸುಂಟಿಕೊಪ್ಪ | | | | | | | 1,306 | 1,499 | 2,166 |
| 10. | ಕೊಡವಮಂಗಳೂರು | | | | | | | | | 4,522 |

ಮಡಿಕೇರಿ, ವೀರರಾಜಪೇಟೆ, ಸೋಮವಾರಪೇಟೆ, ಕುಶಾಲನಗರ ಮತ್ತು ಕೊಡ್ಲಿಪೇಟೆಗಳನ್ನು 1881ರಲ್ಲಿ ಪಟ್ಟಣಗಳೆಂದು ಗುರ್ತಿಸಲಾಗಿದ್ದು 1881 ಮತ್ತು 1891ರಲ್ಲಿ ಅವುಗಳ ಜನಸಂಖ್ಯೆಯನ್ನು ಇಲ್ಲಿ ಕೊಡಲಾಗಿದೆ.

| | ಮಡಿಕೇರಿ | ವೀರರಾಜಪೇಟೆ | ಸೋಮವಾರಪೇಟೆ | ಕುಶಾಲನಗರ | ಕೊಡ್ಲಿಪೇಟೆ |
|---|---|---|---|---|---|
| 1881 | 8,383 | 4,576 | 1,528 | 1,310 | 856 |
| 1891 | 7,034 | 4,417 | 1,510 | 1,710 | 810 |

ಈ ಕೆಳಗಿನ ಪಟ್ಟಿಯಲ್ಲಿ 1981ನೇ ಜನಗಣತಿ ಪ್ರಕಾರ ತಾಲೂಕುಗಳ ವಿಭಾಗವಾಗಿ ಕುರುಡರ, ಕಿವುಡರ ಹಾಗೂ ಕೈಕಾಲು ವಿಹೀನರ ಸಂಖ್ಯೆಗಳನ್ನು ಕೊಟ್ಟಿದೆ.

| ತಾಲೂಕುಗಳು | ಕಿವುಡರು | | ಕುರುಡರು | | ಕೈಕಾಲು ವಿಹೀನರು | |
|---|---|---|---|---|---|---|
| | ಗ್ರಾಮಾಂತರ | ಪಟ್ಟಣ | ಗ್ರಾಮಾಂತರ | ಪಟ್ಟಣ | ಗ್ರಾಮಾಂತರ | ಪಟ್ಟಣ |
| ಮಡಿಕೇರಿ | 51 | 9 | 26 | 4 | 40 | 7 |
| ಸೋಮವಾರಪೇಟೆ | 53 | 6 | 22 | 2 | 42 | 7 |
| ವೀರರಾಜಪೇಟೆ | 25 | 3 | 23 | 1 | 44 | — |
| ಜಿಲ್ಲೆಯ ಮೊತ್ತ | 129 | 18 | 71 | 7 | 126 | 14 |

ಆಧಾರ : 1981 ರ ಜನಗಣತಿ ವರದಿ.

## ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳು

ಭಾರತದ ರಾಜ್ಯಾಂಗದ 341ನೇ ವಿಧಿಯಲ್ಲಿ ಸೂಚಿಸಿರುವಂತೆ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿಗಳನ್ನು ಜನಾಂಗಗಳನ್ನು ಅಥವಾ ಅವುಗಳ ಭಾಗಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯುತ್ತಾರೆ. ಭಾರತ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ 1976ರಲ್ಲಿ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ವರ್ಗ (ಬುಡಕಟ್ಟು) ಗಳ ಆಜ್ಞೆಗೆ ತಿದ್ದುಪಡಿಯನ್ನು ಮಾಡಿದೆ. ಕೊಡಗು ಜಿಲ್ಲೆಯಲ್ಲಿ 1971 ಜನಗಣತಿಯಂತೆ 36,971 ಜನ ಪರಿಶಿಷ್ಟ ಜಾತಿಗೆ ಸೇರಿದ ಜನರಿದ್ದರು. ಅವರ ಸಂಖ್ಯೆ 1981 ರಲ್ಲಿ 48,752ಕ್ಕೆ ಏರಿತ್ತು. ಪರಿಶಿಷ್ಟ ಜಾತಿಗಳ ಜನರಲ್ಲಿ ಬಹುಮಂದಿ ಗ್ರಾಮೀಣ ವಾಸಿಗಳಾಗಿದ್ದು 1981ರಲ್ಲಿ 43,224 ಜನರು ಜಿಲ್ಲೆಯ ಗ್ರಾಮಗಳಲ್ಲೂ, ಕೇವಲ 5,528 ಜನರು ಮಾತ್ರ ನಗರ, ಪಟ್ಟಣಗಳಲ್ಲೂ ವಾಸಿಸುತ್ತಿದ್ದರು. ಜಿಲ್ಲೆಯಲ್ಲಿ 1981ನೇ ಜನಗಣತಿ ಪ್ರಕಾರ ವಿವಿಧ ಜಾತಿಗಳಿಗೆ ಸೇರಿದ ಪರಿಶಿಷ್ಟ ಜಾತಿಗಳ ಜನಸಂಖ್ಯೆ ಈ ರೀತಿ ಇತ್ತು. ಆದಿ ಆಂಧ್ರ–125; ಆದಿದ್ರಾವಿಡ–1,029; ಆದಿ ಕರ್ನಾಟಕ–18,639; ಆಡಿಯಾ–866: ಅಗೇರ-17; ಅಜಿಲ–72; ಅರೆಮಾಲಾ–13; ಅರುಂತತಿಯರ್–30; ಆಶ್ವಮಾಲಾ–1; ಬೈರ–1,814; ಬಾಕುಡ–15: ಬಕುಡಿ–50; ಬಲಗೈ–4,371; ಬಂಡಿ–6; ಬಂಜಾರ–226; ಬೇಡ ಜಂಗಮ/ಬುರುಡಜಂಗಮು–3; ಬೆಲ್ಲಾರ–56; ಭಂಗಿ–41; ಭಾಂಬಿ–422; ಬೋವಿ–1,017; ಬ್ಯಾಗಾರ–1; ಚಕ್ಕಲ್ಲಿಯನ್–16; ಚಂಡಾಲ-1 ಚನ್ನದಾಸರಿ/ಹೊಲೆಯದಾಸರಿ-1; ಡೋರ-1; ಕಕ್ಕಯ್ಯ-1; ಕಂಕಯ್ಯ-10; ಘಂಟ ಚೋರ-1; ಗೋಸಂಗಿ-13; ಹಳ್ಳೀರ್-9; ಹಲ್ಸರ್/ಹಸ್ಲರ್/ಹುಲಸವಾರ, / ಹಲಸ್ವಾರ-1; ಹಂದಿಜೋಗಿ-7; ಹೊಲೆಯ/ಹೊಲೇರ/ಹೊಲೆಯರ-6,322; ಹೊಲೆಯ ದಾಸರಿ-46; ಜಗ್ಗಲೀ-1, ಜಾಂಬವಲು-112; ಕಡಯನ್-4; ಕಲ್ಲಾಡಿ-5; ಕೋಲುಪುಲ್‌ವಾಂಡ್ಲು-6; ಕೊರಚ-12; ಕೊರಮ-235; ಕೋಟೆಗಾರ/ಮೇತ್ರಿ-5; ಕುರುಂಬನ್-7; ಕುರವನ್-5; ಲಿಂಗದೇರ-1; ಮಾದರಿ-1; ಮಾದಿಗ-1,631; ಮಹರ್/ಕರಲ್/ದೇಗುಮೇಗು-5; ಮೈಲಾ-10; ಮಾಲಾ-6; ಮಾಂಗ್/ಮತಂಗ/ಮಿನಿಮಾದಿಗ್-2; ಮೊಗೇರ್-192; ಮುಕ್ರಿ-2; ಮುಂಡಾಲ-175; ನಡಿಯ/ಹಡಿ-5; ನಾಲ್‌ಕದಾಯ-14; ನಲಿಕೆಯವ-98; ನಾಯಡಿ-43; ಪಾಲೇ-10,260;ಪುಲ್ಲನ್-158; ಪಂಚಮ-31; ಪಣ್ಣಯಂಡಿ-17; ಪರಯನ್/ಪರಯ-293;ಪರವನ್-83; ರಾಣೆಯರ್-480; ಸಮಗಾರ-34; ಸಿಳ್ಳೇಕ್ಯಾತ-20; ವಲ್ಲುವನ್-5,245. ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ. 10.55 ರಷ್ಟಿದ್ದು ಜಿಲ್ಲೆಯಲ್ಲಿ ಕೊಡವರನ್ನು ಬಿಟ್ಟರೆ ಎರಡನೇ ದೊಡ್ಡ ಗುಂಪು ಇವರದಾಗಿದೆ.

ಈ ಕೆಳಗಿನ ಪಟ್ಟಿಯಲ್ಲಿ 1971 ಮತ್ತು 1981ನೇ ಜನಗಣತಿಯ ಪ್ರಕಾರ, ಕೊಡಗು ಜಿಲ್ಲೆಯಲ್ಲಿದ್ದ ಪರಿಶಿಷ್ಟ ಜಾತಿಗಳ ಜನರನ್ನು ಪುರುಷ, ಸ್ತ್ರೀ ವಿಭಾಗವಾಗಿ ಪ್ರತಿಯೊಂದು ತಾಲೂಕಿಗೂ ಪ್ರತ್ಯೇಕವಾಗಿ ಕೊಟ್ಟಿದೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿರುವವರನ್ನು ವರ್ಗೀಕರಿಸಲಾಗಿದೆ.

| ತಾಲೂಕುಗಳು | 1971 | | | 1981 | | |
|---|---|---|---|---|---|---|
| | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು |
| ಮಡಿಕೇರಿ ತಾ|| | | | | | | |
| ಗ್ರಾಮಾಂತರ | 3,464 | 2,982 | 6,446 | 4,707 | 4,025 | 8,732 |
| ನಗರ | 523 | 515 | 1,038 | 870 | 825 | 1,695 |
| ಒಟ್ಟು | 3,987 | 3,497 | 7,484 | 5,577 | 4,850 | 10,427 |
| ಸೋಮವಾರಪೇಟೆ ತಾ|| | | | | | | |
| ಗ್ರಾಮಾಂತರ | 8,345 | 7,648 | 15,993 | 10,606 | 10,200 | 20,806 |
| ನಗರ | 1,248 | 1,271 | 2,519 | 1,228 | 1,118 | 2,346 |
| ಒಟ್ಟು | 9,593 | 8,919 | 18,512 | 11,834 | 11,318 | 23,152 |
| ವೀರರಾಜಪೇಟೆ ತಾ|| | | | | | | |
| ಗ್ರಾಮಾಂತರ | 5,167 | 4,861 | 10,028 | 6,997 | 6,689 | 13,686 |
| ನಗರ | 500 | 447 | 947 | 769 | 718 | 1,487 |
| ಒಟ್ಟು | 5,667 | 5,308 | 10,975 | 7,766 | 7,407 | 15,173 |
| ಜಿಲ್ಲೆಯ ಒಟ್ಟು ಜನಸಂಖ್ಯೆ | | | | | | |
| ಗ್ರಾಮಾಂತರ | 16,976 | 15,491 | 32,467 | 22,310 | 20,914 | 43,224 |
| ನಗರ | 2,271 | 2,233 | 4,504 | 2,867 | 2,661 | 5,528 |
| ಒಟ್ಟು | 19,247 | 17,724 | 36,971 | 25,177 | 23,575 | 48,752 |

## ಪರಿಶಿಷ್ಟ ವರ್ಗಗಳು

ಭಾರತದ ರಾಜ್ಯಾಂಗದ 342ನೇ ವಿಧಿಯಲ್ಲಿ ಸೂಚಿಸಿರುವಂತೆ ನಿರ್ದಿಷ್ಟಗೊಳಿಸಿರುವ ಎಲ್ಲಾ ಜಾತಿಗಳೂ, ಜಾತಿಯ ಭಾಗಗಳೂ, ಬುಡಕಟ್ಟುಗಳನ್ನು ಪರಿಶಿಷ್ಟ ವರ್ಗಗಳೆಂದು ಕರೆಯುತ್ತಾರೆ. ಕೊಡಗು ಜಿಲ್ಲೆಯಲ್ಲಿ 1971ನೇ ಜನಗಣತಿಯ ಪ್ರಕಾರ 26,596 ಜನರು ಪರಿಶಿಷ್ಟ ಬುಡಕಟ್ಟಿಗೆ ಸೇರಿದವರಾಗಿದ್ದು, ಅವರ ಸಂಖ್ಯೆ 1981ನೇ ಜನಗಣತಿಯ ವೇಳೆಗೆ 36,877ಕ್ಕೆ ಏರಿತ್ತು. ಬೇರೆ ಬೇರೆ ಜಾತಿ ಬುಡಕಟ್ಟುಗಳಿಗೆ ಸೇರಿದವರ ಸಂಖ್ಯೆ ಈ ರೀತಿ ಇತ್ತು (1981ನೇ ಜನಗಣತಿ ಪ್ರಕಾರ) : ಆಡಿಯನ್ 1; ಬವಚ/ಬಾಚ-1; ಭಿಲ್-90; ಚೋಧರ-4; ಗಾಮಿಟ್-7; ಗೋಂಡಲಿ-6; ಗೌಡಲು-46; ಹಕ್ಕಿಪಿಕ್ಕಿ-16; ಹಸಳರು-3; ಯಿರುಳರು-8; ಜೇನುಕುರುಬ-6,421; ಕಾಡುಕುರುಬ-498; ಕಥೋಡಿ-3 ಕಟ್ಟುನಾಯಕನ-5; ಕೊಂಡಕಾಪು-1; ಕೋಟ-3; ಕೋಯ/ಬಿನ್‌ಕೋಯ/ರಾಜಕೋಯ-21; ಕುಡಿಯ/ ಮಲೆಕುಡಿ 1,415 ಕುರುಬ (ಕೊಡಗಿನಲ್ಲಿ ಮಾತ್ರ) 4,595; ಕುರುಮರು-12; ಮಲೈಕುಡಿ—127; ಮಲಯಕಂಡಿ-1; ಮಾಲೇರು-39; ಮರಾಠಾ-1,844; ಮೇದ-601; ನಾಯಕ್ಡ-1,728; ಪಲ್ಲಿಯನ್-28; ಪಣಿಯರು 178; ಶೋಲಗ – 231; ಸೋಲಿಗರು – 421; ಕೋಡ – 49; ವರ್ಲಿ – 5; ವಿಟೋಲಿಯಾಕೊಟವಾಲಿಯ/ಬರೋಡಿಯಾ-4; ಯೆರವಾ-17,939; ವರ್ಗೀಕರಿಸದವರು-526. ಬಹುತೇಕ ಮಂದಿ ಪರಿಶಿಷ್ಟ ಬುಡ

ಕಟ್ಟಿಗೆ ಸೇರಿದವರು ಹಳ್ಳಿಗಳಲ್ಲಿ ಹಾಗೂ ಕಾಡುಗಳಲ್ಲಿ ವಾಸಿಸುತ್ತಿದ್ದು ಇತ್ತೀಚೆಗೆ ಅವರಿಗೆ ಸರ್ಕಾರದವರು ಕಾಲೋನಿಗಳನ್ನು ನಿರ್ಮಿಸಿ ಅವರ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ಈ ಮುಂದಿನ ಪಟ್ಟಿಯಲ್ಲಿ 1971 ಮತ್ತು 1981ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಕಂಡು ಬಂದ ಪರಿಶಿಷ್ಟ ಬುಡಕಟ್ಟಿನ ಜನಸಂಖ್ಯೆಯನ್ನು ಪ್ರತೀಯೊಂದು ತಾಲೂಕಿಗೂ ಗ್ರಾಮಾಂತರ, ನಗರ ವಾಸಿಗಳನ್ನು ಹಾಗೂ ಸ್ತ್ರೀಪುರುಷರನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

| ತಾಲೂಕುಗಳು | 1971 | | | 1981 | | |
|---|---|---|---|---|---|---|
| | ಪುರುಷರು | ಸ್ತ್ರೀಯರು | ಒಟ್ಟು | ಪುರುಷರು | ಸ್ತ್ರೀಯರು | ಒಟ್ಟು |
| ಮಡಿಕೇರಿ ತಾ\|\| | | | | | | |
| ಗ್ರಾಮಾಂತರ | 1,575 | 1,246 | 2,821 | 2,288 | 1,983 | 4,271 |
| ನಗರ | 23 | 9 | 32 | 181 | 183 | 364 |
| ಒಟ್ಟು | 1,598 | 1,255 | 2,853 | 2,463 | 2,166 | 4,635 |
| ಸೋಮವಾರಪೇಟೆ ತಾ\|\| | | | | | | |
| ಗ್ರಾಮಾಂತರ | 1,764 | 1,645 | 3,409 | 2,408 | 2,314 | 4,722 |
| ನಗರ | 77 | 61 | 138 | 165 | 175 | 340 |
| ಒಟ್ಟು | 1,841 | 1,706 | 3,547 | 2,573 | 2,489 | 5,062 |
| ವೀರರಾಜಪೇಟೆ ತಾ\|\| | | | | | | |
| ಗ್ರಾಮಾಂತರ | 10,352 | 9,734 | 20,086 | 13,672 | 12,979 | 26,651 |
| ನಗರ | 50 | 60 | 110 | 264 | 265 | 529 |
| ಒಟ್ಟು | 10,402 | 9,794 | 20,196 | 13,936 | 13,244 | 27,180 |
| ಜಿಲ್ಲೆಯ ಒಟ್ಟು ಜನಸಂಖ್ಯೆ | | | | | | |
| ಗ್ರಾಮಾಂತರ | 13,691 | 12,625 | 26,316 | 18,368 | 17,276 | 35,644 |
| ನಗರ | 150 | 130 | 280 | 610 | 623 | 1,233 |
| ಒಟ್ಟು | 13,841 | 12,755 | 26,596 | 18,978 | 17,899 | 36,877 |

ಜಿಲ್ಲೆಯಲ್ಲಿರುವ ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದ ಜನರು 1981 ರಲ್ಲಿ ಜಿಲ್ಲೆಯ ಜನಸಂಖ್ಯೆಯ ಶೇ. 7.98 ರಷ್ಟಿದ್ದು ಪರಿಶಿಷ್ಟ ಬುಡಕಟ್ಟಿನ ಜನರು ಹೆಚ್ಚಾಗಿ ಇರುವ ಜಿಲ್ಲೆಗಳಲ್ಲಿ ಇದು ಒಂದಾಗಿದೆ. ಆದರಲ್ಲೂ ವೀರರಾಜಪೇಟೆ ತಾಲೂಕಿನಲ್ಲಿ ಹೆಚ್ಚು ಜನ ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರಿದ್ದಾರೆ.

### ಭಾಷೆಗಳು

ಕೊಡಗು ಜಿಲ್ಲೆಯಲ್ಲಿ 1981 ಜನಗಣತಿ ಪ್ರಕಾರ 4,61,888 ಜನರಿದ್ದು. ಅವರಲ್ಲಿ 1,65,345 ಜನ ಅಂದರೆ ಶೇ. 35.80 ರಷ್ಟು ಮನೆಯಲ್ಲಿ ಕನ್ನಡ ಮಾತನಾಡುತ್ತಿದ್ದರು. ಶೇ. 22.59ರಷ್ಟು ಅಂದರೆ 1,04,344 ಜನರು ಮಲೆಯಾಳಿಯನ್ನು ಮಾತನಾಡುತ್ತಿದ್ದರು. 81,564 ಮಂದಿ (ಶೇ. 17.66) ಕೊಡವ ಭಾಷಯನ್ನೂ, 39,814 ಜನ (ಶೇ. 8.62) ತುಳುಭಾಷೆಯನ್ನೂ 32,930 ಜನ (ಶೇ. 7.13) ತಮಿಳನ್ನೂ 12,031 ಮಂದಿ (ಶೇ. 2.60) ಉರ್ದುಭಾಷೆಯನ್ನೂ ಮಾತನಾಡುತ್ತಿದ್ದರು. ಜಿಲ್ಲೆಗೆ ಹೊಂದಿಕೊಂಡು ಕೇರಳರಾಜ್ಯ, ದಕ್ಷಿಣಕನ್ನಡ ಜಿಲ್ಲೆಗಳಿರುವುದರಿಂದ ಕೊಡಗಿನಲ್ಲಿ ಮಲೆಯಾಳಿ, ತುಳು, ಕೊಂಕಣಿ ಮಾತನಾಡುವವರು ಸಾಕಷ್ಟು

ಪ್ರಮಾಣದಲ್ಲಿ ಕಂಡುಬರುತ್ತಾರೆ. ಮಲೆಯಾಳಿ ಭಾಷೆ ಮಾತನಾಡುವವರು ಹೆಚ್ಚಾಗಿ ವೀರರಾಜಪೇಟೆ ತಾಲೂಕಿನಲ್ಲಿ ಕಂಡುಬಂದರೂ ಉಳಿದ ಎರಡು ತಾಲೂಕುಗಳಲ್ಲಿ ಅವರ ಸಂಖ್ಯೆ ಗಣನೀಯವಾಗಿದೆ. ತುಳು ಮಾತನಾಡುವವರು ಸೋಮವಾರಪೇಟೆ ಮತ್ತು ಮಡಿಕೇರಿ ತಾಲೂಕುಗಳಲ್ಲಿ ಕಂಡುಬರುತ್ತಾರೆ. ತಮಿಳು ಮಾತನಾಡುವವರು ವೀರರಾಜಪೇಟೆ ಮತ್ತು ಮಡಿಕೇರಿ ತಾಲೂಕುಗಳಲ್ಲಿ ಕಂಡುಬರುತ್ತಾರೆ. ಉರ್ದು ಮಾತನಾಡುವವರು ಎಲ್ಲಾ ತಾಲೂಕುಗಳಲ್ಲಿಯೂ ಸಮನಾಗಿ ಹಂಚಿಹೋಗಿದ್ದಾರೆ. ಕೊಡವ ಭಾಷೆಯು ಕೊಡವರ ಮನೆ ಮಾತಾಗಿದ್ದು ವೀರರಾಜಪೇಟೆ ತಾಲೂಕಿನಲ್ಲಿ ಹೆಚ್ಚಾಗಿಯೂ, ಮಡಿಕೇರಿ ತಾಲೂಕಿನಲ್ಲಿ ಸಾಮಾನ್ಯವಾಗಿಯೂ ಸೋಮವಾರಪೇಟೆ ತಾಲೂಕಿನಲ್ಲಿ ಅಲ್ಪವಾಗಿಯೂ ಕಂಡು ಬರುತ್ತಾರೆ. ಕೊಡವ ಭಾಷೆಯು ಈ ಜಿಲ್ಲೆಯ ವಿಶಿಷ್ಟ ಭಾಷೆಯಾಗಿದೆ. ಈ ಭಾಷೆಯಲ್ಲಿ ಹಳೆಗನ್ನಡ, ಮಲೆಯಾಳಿ ಮತ್ತು ತಮಿಳು ಭಾಷೆಗಳ ಪದಗಳು ಬೆರೆಕೆಯಾಗಿವೆ. ಕೊಡವ ಭಾಷೆಗೆ ಲಿಪಿಯಿಲ್ಲ ; ಕನ್ನಡ ಲಿಪಿಯಲ್ಲಿಯೇ ಬರೆಯುತ್ತಾರೆ. ದಕ್ಷಿಣ ಕೊಡಗಿನ ಭಾಗವು ಕೇರಳಕ್ಕೆ ಹೊಂದಿಕೊಂಡಿದ್ದು, ಆ ರಾಜ್ಯದ ಸಾಂಸ್ಕೃತಿಕ ಹಾಗೂ ಭಾಷಾ ಪ್ರಭಾವ, ಆ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. (ವಿವಿಧ ಭಾಷೆಗಳನ್ನು ಮಾತನಾಡುವವರ ಪಟ್ಟಿಗೆ ಪು. 150 ನೋಡಿ)

## ಧರ್ಮಗಳು

ಇಂದು ಜಿಲ್ಲೆಯಲ್ಲಿ ಕಂಡು ಬರುವ ಧರ್ಮಗಳಲ್ಲಿ ಮುಖ್ಯವಾದವು ಹಿಂದೂ ಧರ್ಮ, ಇಸ್ಲಾಂ ಹಾಗೂ ಕ್ರೈಸ್ತ ಧರ್ಮ. ಜೈನ ಧರ್ಮವು ಒಂದು ಕಾಲಕ್ಕೆ ಜಿಲ್ಲೆಯ ಮುಖ್ಯ ಧರ್ಮವಾಗಿತ್ತು. 1981 ನೇ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ 3,83,277 ಜನ ಹಿಂದೂಗಳೂ 61,649 ಜನ ಮುಸಲ್ಮಾನರೂ, 16,397 ಜನ ಕ್ರೈಸ್ತರೂ ಇದ್ದರು. ಉಳಿದವರಲ್ಲಿ 36 ಜನ ಬೌದ್ಧರೂ, 190 ಜನ ಜೈನರೂ 21 ಜನ ಶೀಖರೂ, 295 ಜನರು ಉಳಿದ ಧರ್ಮಗಳಿಗೆ ಸೇರಿದವರಾಗಿದ್ದರು ಮತ್ತು 23 ಜನರು ಯಾವ ಧರ್ಮವನ್ನು ಅವಲಂಬಿಸಿದ್ದಾರೆಂಬುದನ್ನು ಸೂಚಿಸಿರಲಿಲ್ಲ. ಕ್ರೈಸ್ತರು ಸೋಮವಾರಪೇಟೆ ಮತ್ತು ವೀರರಾಜಪೇಟೆ ತಾಲೂಕುಗಳಲ್ಲಿ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ, ಹಾಗೂ ನಗರಗಳಿಗಿಂತ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಮುಸ್ಲಿಮರು ವೀರರಾಜಪೇಟೆ ತಾಲೂಕಿನಲ್ಲಿ ಸ್ವಲ್ಪ ಹೆಚ್ಚಾಗಿರುವುದು ಕಂಡು ಬರುತ್ತದೆ. ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯಲ್ಲಿ 1981 ರಲ್ಲಿ ಕಂಡುಬಂದ ವಿವಿಧ ಧರ್ಮೀಯರ ಸಂಖ್ಯೆಯನ್ನು ನಗರ – ಗ್ರಾಮಾಂತರ ವಿಭಜನೆಯೊಂದಿಗೆ ಪ್ರತಿ ಶತಾಂಶದಲ್ಲಿಯೂ ಕೊಡಲಾಗಿದೆ.

| ಧರ್ಮಗಳು | ಗ್ರಾಮಾಂತರ ಜನಸಂಖ್ಯೆ | ಧರ್ಮೀಯರಲ್ಲಿ ಪ್ರತಿ ಶತ | ನಗರ ಜನಸಂಖ್ಯೆ | ಧರ್ಮೀಯರಲ್ಲಿ ಶತಾಂಶ | ಒಟ್ಟು ಜನಸಂಖ್ಯೆ | ಜಿಲ್ಲಾ ಒಟ್ಟು ಜನಸಂಖ್ಯೆ ಶತಾಂಶ |
|---|---|---|---|---|---|---|
| ಬೌದ್ಧರು | 5 | 13.89 | 31 | 86.11 | 36 | 0.008 |
| ಕ್ರೈಸ್ತರು | 12,167 | 72.20 | 4,230 | 25.80 | 16,397 | 3.55 |
| ಹಿಂದೂಗಳು | 3,31,917 | 86.60 | 51,360 | 13.40 | 3,83,277 | 82.98 |
| ಜೈನರು | 62 | 32.63 | 128 | 67.37 | 190 | 0.04 |
| ಮುಸಲ್ಮಾನರು | 45,810 | 74.31 | 15,839 | 25.69 | 61,649 | 13.35 |
| ಶೀಖರು | 8 | 38.10 | 13 | 61.9 | 21 | 0.005 |
| ಬೇರೆ ಬೇರೆ ಧರ್ಮೀಯರು | 245 | 83.05 | 50 | 16.95 | 295 | 0.06 |
| ಧರ್ಮವನ್ನು ಸೂಚಿಸದವರು | 11 | 47.83 | 12 | 52.17 | 23 | 0.005 |
| ಒಟ್ಟು : | 3,90,225 | 84.48 | 71,663 | 15.52 | 4,61,888 | 100.0 |

ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯ ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರ ಸಂಖ್ಯೆಯನ್ನು 1981ರಲ್ಲಿ ಇದ್ದಂತೆ ಪ್ರತಿಯೊಂದು ತಾಲೂಕಿಗೂ ಕೊಡಲಾಗಿದೆ.

| ತಾಲೂಕುಗಳು | ಕನ್ನಡ | ಕೊಡವ | ಮಲಯಾಳಿ | ತಮಿಳು | ತೆಲುಗು | ತುಳು | ಉರ್ದು | ಕೊಂಕಣಿ |
|---|---|---|---|---|---|---|---|---|
| **ಮಡಿಕೇರಿ ತಾಲೂಕು** | | | | | | | | |
| ಗ್ರಾಮಾಂತರ | 30,655 | 22,821 | 18,397 | 3,688 | 612 | 13,030 | 994 | 564 |
| ನಗರ | 6,803 | 3,471 | 3,712 | 1,062 | 1,685 | 1,793 | 2,402 | 989 |
| ಒಟ್ಟು | 37,458 | 26,292 | 22,109 | 4,750 | 2,297 | 14,823 | 3,396 | 1,553 |
| **ಸೋಮವಾರಪೇಟೆ ತಾಲೂಕು** | | | | | | | | |
| ಗ್ರಾಮಾಂತರ | 78,621 | 6,047 | 23,315 | 10,448 | 1,695 | 14,032 | 1,210 | 1,594 |
| ನಗರ | 13,766 | 772 | 2,252 | 1,792 | 1,178 | 945 | 2,912 | 430 |
| ಒಟ್ಟು | 92,387 | 6,819 | 25,567 | 12,240 | 2,873 | 14,977 | 4,122 | 2,024 |
| ವೀರರಾಜಪೇಟೆ ತಾಲೂಕು | | | | | | | | |
| ಗ್ರಾಮಾಂತರ | 31,758 | 45,386 | 50,108 | 14,513 | 1,806 | 9,259 | 1,711 | 1,889 |
| ನಗರ | 3,742 | 3,067 | 6,560 | 1,427 | 733 | 755 | 2,802 | 881 |
| ಒಟ್ಟು | 35,500 | 48,453 | 56,668 | 15,940 | 2,539 | 10,014 | 4,513 | 2,770 |
| ಜಿಲ್ಲೆಯ ಮೊತ್ತ | | | | | | | | |
| ಗ್ರಾಮಾಂತರ | 1,41,034 | 74,254 | 91,820 | 28,649 | 4,113 | 36,321 | 3,915 | 4,047 |
| ನಗರ | 24,311 | 7,310 | 12,524 | 4,281 | 3,596 | 3,493 | 8,116 | 2,300 |
| ಒಟ್ಟು | 1,65,345 | 81,564 | 10,4,344 | 32,930 | 7,709 | 39,814 | 12,031 | 6,342 |

ಮೇಲೆ ಪಟ್ಟಿಯಲ್ಲಿ ಕೊಟ್ಟಿರುವ ಭಾಷೆಗಳನ್ನು ಮಾತನಾಡುವವರಲ್ಲದೆ ಜಿಲ್ಲೆಯಲ್ಲಿ 1,333 ಜನ ಹಿಂದಿಯನ್ನೂ, ಒಬ್ಬ ಅಸ್ಸಾಮಿ ಭಾಷೆಯನ್ನೂ, 3,109 ಜನ ಮರಾಠಿಯನ್ನೂ, 22 ಜನ ಪಂಜಾಬಿಯನ್ನೂ, 127 ಜನ ಅರಬ್ಬೀ ಭಾಷೆಯನ್ನೂ, 36 ಜನ ನೇಪಾಲಿಯನ್ನೂ ಮಾತನಾಡುವವರಿದ್ದರು.

ಈ ಕೆಳಗಿನ ಪಟ್ಟಿಯಲ್ಲಿ 1981ನೇ ಜನಗಣತಿ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಕಂಡುಬರುವ ವಿವಿಧ ಧರ್ಮೀಯರ ಜನಸಂಖ್ಯೆಯನ್ನು ಪ್ರತೀ ತಾಲೂಕಿಗೂ ಬೇರೆ ಬೇರೆಯಾಗಿ ಗ್ರಾಮಾಂತರ ಮತ್ತು ನಗರ ವಾಸಿಗಳಾಗಿ ವರ್ಗೀಕರಿಸಿ ಕೊಡಲಾಗಿದೆ.

| ತಾಲೂಕುಗಳು | ಬೌದ್ಧರು | ಕ್ರೈಸ್ತರು | ಹಿಂದೂಗಳು | ಜೈನರು | ಮುಸಲ್ಮಾನರು | ಶೀಖರು | ಇವರಲ್ಲದೆ ಬೇರೆ ಧರ್ಮೀಯರು | ಧರ್ಮವನ್ನು ತಿಳಿಸದವರು | ಒಟ್ಟು ಜನ ಸಂಖ್ಯೆ |
|---|---|---|---|---|---|---|---|---|---|
| **ಮಡಿಕೇರಿ ತಾಲೂಕು** | | | | | | | | | |
| ಗ್ರಾಮಾಂತರ | — | 1,835 | 77,908 | — | 13,228 | 2 | 29 | — | 93,002 |
| ನಗರ | 03 | 1,800 | 17,753 | 18 | 5,150 | — | — | — | 24,724 |
| ಒಟ್ಟು | 03 | 3,635 | 95,661 | 18 | 18,378 | 2 | 29 | — | 1,17,726 |
| **ಸೋಮವಾರಪೇಟೆ ತಾಲೂಕು** | | | | | | | | | |
| ಗ್ರಾಮಾಂತರ | 05 | 4,562 | 1,20,886 | 39 | 12,666 | 6 | 152 | 11 | 1,38,327 |
| ನಗರ | 28 | 980 | 20,084 | 16 | 4,336 | 6 | 46 | 9 | 25,505 |
| ಒಟ್ಟು | 33 | 5,542 | 1,40,970 | 55 | 17,002 | 12 | 198 | 20 | 1,63,832 |
| **ವೀರರಾಜಪೇಟೆ ತಾಲೂಕು** | | | | | | | | | |
| ಗ್ರಾಮಾಂತರ | — | 5,770 | 1,33,123 | 23 | 19,916 | — | 64 | 30 | 1,58,896 |
| ನಗರ | — | 1,450 | 13,523 | 94 | 6,353 | 7 | 4 | 3 | 21,434 |
| ಒಟ್ಟು | — | 7,220 | 1,46,646 | 117 | 26,269 | 7 | 68 | 33 | 1,80,330 |
| **ಜಿಲ್ಲೆಯ ಒಟ್ಟು ಮೊತ್ತ** | | | | | | | | | |
| ಗ್ರಾಮಾಂತರ | 5 | 12,167 | 3,31,917 | 62 | 45,810 | 8 | 245 | 41 | 3,90,225 |
| ನಗರ | 31 | 4,230 | 51,360 | 128 | 15,839 | 13 | 50 | 12 | 71,663 |
| ಒಟ್ಟು | 36 | 16,397 | 3,83,277 | 190 | 61,649 | 21 | 295 | 53 | 4,61,888 |

ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯ ವಿವಿಧ ಧರ್ಮಗಳನ್ನು ಅವಲಂಬಿಸಿದವರ ಒಟ್ಟು ಜನಸಂಖ್ಯೆಯ ಪ್ರತಿ ಶತಾಂಶಗಳನ್ನು ಕೆಲವು ಜನಗಣತಿ ವರ್ಷಗಳಿಗೆ ಕೊಡಲಾಗಿದೆ.

| ಧರ್ಮಗಳು | ಜನಗಣತಿ ವರ್ಷ | | | | | |
|---|---|---|---|---|---|---|
| | 1911 | 1931 | 1951 | 1961 | 1971 | 1981 |
| ಹಿಂದೂಗಳು | 89.39 | 89.40 | 86.95 | 85.87 | 84.57 | 82.98 |
| ಮುಸಲ್ಮಾನರು | 7.51 | 8.43 | 10.05 | 10.81 | 12.00 | 13.35 |
| ಕ್ರೈಸ್ತರು | 2.03 | 2.10 | 2.96 | 3,28 | 3.89 | 3.55 |
| ಜೈನರು | 0.06 | 0.05 | 0.02 | 0.03 | 0.02 | 0.04 |
| ಬೌದ್ಧರು | — | — | 0.01 | 0.01 | 0.01 | 0.01 |
| ಶೀಖರು | — | — | — | — | 0.01 | 0.01 |
| ಬೇರೆ ಧರ್ಮೀಯರು ಮತ್ತು ಧರ್ಮವನ್ನು ತಿಳಿಸದವರು | | | | | | 0.06 |

ಭಾರತದ ಜನಗಣತಿ ; 1981 ಸೀರೀಸ್ 14 – ಮೈಸೂರ್ ಪಾರ್ಟ್ 1 'ಎ' – ಸಂಪುಟ 2 – ಜನರಲ್ ರಿಪೋರ್ಟ್.

**ಹಿಂದೂಗಳು**

1981ರ ಜನಗಣತಿಯ ಪ್ರಕಾರ ಹಿಂದೂಗಳು ಜಿಲ್ಲೆಯ ಜನಸಂಖ್ಯೆಯ ಶೇ. 82.98 ರಷ್ಟಿದ್ದಾರೆ. ಇವರಲ್ಲಿ ಶೇ. 86.60 ರಷ್ಟು ಜನರು ಗ್ರಾಮಾಂತರ ಪ್ರದೇಶಗಳಲ್ಲೂ ಉಳಿದವರು ಪಟ್ಟಣ ಪ್ರದೇಶಗಳಲ್ಲೂ ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಒಟ್ಟು ಹಿಂದೂಗಳ ಸಂಖ್ಯೆ 1981ರ ಜನಗಣತಿಯ ಪ್ರಕಾರ 3,83,277 ಆಗಿದ್ದು ಅದರಲ್ಲಿ 95,661 ಜನರು ಮಡಿಕೇರಿ ತಾಲೂಕಿನಲ್ಲೂ, 1,40,970 ಜನರು ಸೋಮವಾರಪೇಟೆ ತಾಲೂಕಿನಲ್ಲೂ ಉಳಿದ 1,46,646 ಜನರು ವೀರರಾಜಪೇಟೆ ತಾಲೂಕಿನಲ್ಲೂ ಇದ್ದರು. ಈ ಶತಮಾನದ ಹಲವಾರು ದಶಕಗಳ ಜನಸಂಖ್ಯೆಯನ್ನು ಪರಿಶೀಲಿಸಿದರೆ ಜಿಲ್ಲೆಯಲ್ಲಿ ಹಿಂದೂಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಹಿಂದೂಗಳ ಸಂಖ್ಯೆ 1911ರಲ್ಲಿ ಜಿಲ್ಲೆಯಲ್ಲಿ ಶೇ.89.39 ಇದ್ದುದು 1981ರ ವೇಳೆಗೆ ಶೇ.82.98 ಇಳಿದಿರುವುದು ಕಂಡುಬರುತ್ತದೆ. ಹಿಂದೂಗಳಲ್ಲಿ ಅನೇಕ ಜಾತಿ, ಉಪಜಾತಿ, ಪಂಥಗಳು ಕಂಡುಬಂದರೂ ಅವರ ಜೀವನ ಮೌಲ್ಯಗಳು, ನಂಬಿಕೆಗಳೂ ಪವಿತ್ರ ಗ್ರಂಥಗಳೂ ಒಂದೇ ಆಗಿದ್ದು ಅವರನ್ನು ಒಗ್ಗೂಡಿಸುವ ಶಕ್ತಿಗಳಾಗಿವೆ. ವೇದಗಳು, ಉಪನಿಷತ್ತುಗಳು, ಪುರಾಣಗಳು ಹಾಗೂ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ಹಿಂದೂಗಳ ಪವಿತ್ರ ಗ್ರಂಥಗಳು. ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಅವರ ಅವತಾರಗಳನ್ನು ಪರಿವಾರದೇವ–ದೇವತೆಗಳನ್ನು ಹಿಂದೂಗಳು ಪೂಜಿಸುತ್ತಾರೆ. ಜೊತೆಗೆ ಆದಿಶಕ್ತಿ ಹಾಗೂ ಆಕೆಯ ವಿವಿಧ ರೂಪಗಳನ್ನು ಆರಾಧಿಸುತ್ತಾರೆ. ಅನೇಕ ಬುಡಕಟ್ಟು ಜನಾಂಗಗಳ ಸ್ಥಳೀಯವಾದ ದೇವರುಗಳನ್ನು ವೈದಿಕ ದೇವರುಗಳ ಜೊತೆ ಏಕೀಕರಿಸಿ ಗುರುತಿಸಲಾಗಿದೆ. ಹಿಂದೂಗಳ ಪೂಜಾಕ್ರಮವನ್ನು ಷೋಡಶೋಪಚಾರ ಕ್ರಮವೆಂದು ಕರೆಯುತ್ತಾರೆ. ಹಿಂದೂ ದೇವಾಲಯಗಳಲ್ಲಿ ಸಾಂಪ್ರದಾಯಿಕವಾಗಿ ಪೂಜೆ ಮಾಡುವಾಗ ಅರ್ಚಕರು ಸಂಸ್ಕೃತ ಶ್ಲೋಕಗಳನ್ನೂ ವೇದ ಮಂತ್ರಗಳನ್ನೂ ಪಠಿಸುತ್ತಾರೆ. ನಾಗ (ನಾತ), ಪೊವೆದಿ (ಪಾರ್ವತಿ ಅಥವಾ ಭಗವತಿ), ಪೂತ (ಭೂತ; ಶಿವಗಣಗಳೆಂದು ವರ್ಣಿಸಲಾಗುತ್ತದೆ) – ಇವರ ಸ್ಥಾನಗಳು ಕೊಡಗಿನ ಪ್ರತೀ ಹಳ್ಳಿಯಲ್ಲಿಯೂ ಕಂಡು ಬರುತ್ತವೆ. ಹಿಂದೂಗಳ ತಾತ್ತ್ವಿಕ ಚಿಂತನೆಯಲ್ಲಿ ಬಸವಣ್ಣನವರ ಶಕ್ತಿವಿಶಿಷ್ಟಾದ್ವೈತ, ಶಂಕರಾಚಾರ್ಯರ ಅದ್ವೈತ, ರಾಮಾನುಜರ ವಿಶಿಷ್ಟಾದ್ವೈತ, ಮಧ್ವಾಚಾರ್ಯರ ದ್ವೈತ ಸಿದ್ಧಾಂತಗಳು ಮುಖ್ಯವಾದವುಗಳು. ಪೂರ್ವಜರನ್ನು ದೈವೀಕರಿಸಿ ಪೂಜಿಸುವುದು ಕೊಡಗಿನಲ್ಲಿ ವಿಶೇಷ.

ಶಕ್ತಿದೇವತಾ ಪೂಜೆ, ಭೂಮಿ ದೇವತಾ ಪೂಜೆಗಳು ಇತರ ದೇವತಾ ಪೂಜೆಗಳಿಗಿಂತ ಪ್ರಾಚೀನವಾದವುಗಳು. ಕೊಡಗು ಜಿಲ್ಲೆಯಲ್ಲಿ ಶಕ್ತಿ ದೇವತೆಯನ್ನು ಮಾರಮ್ಮ, ದುರ್ಗಿ, ಚಾಮುಂಡಿ, ಭದ್ರಕಾಳಿ, ಭಗವತಿ ಮೊದಲಾದ ಹೆಸರುಗಳಿಂದ

ಪೂಜಿಸುತ್ತಾರೆ. ಬಹಳ ಹಿಂದೆ ಕೆಲವು ಭಗವತಿ ದೇವಸ್ಥಾನಗಳಲ್ಲಿ ನರಬಲಿ ಕೊಡುತ್ತಿದ್ದರೆಂದು ರೈಸ್ ತಿಳಿಸುತ್ತಾರೆ. ಕಿರಿಂದಾಡು ಮತ್ತು ಕೊಣಂಜಗೇರಿ (ಮಡಿಕೇರಿ ತಾಲೂಕು) ಗ್ರಾಮಗಳಲ್ಲಿ ಬಹಳ ಹಿಂದೆ ಮೂರು ವರ್ಷಕೊಮ್ಮೆ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಭದ್ರಕಾಳಿಗೆ ನರಬಲಿ ಕೊಡಲಾಗುತ್ತಿತ್ತಂತೆ. ಅದೇ ರೀತಿ ಕಿಗ್ಗಟ್ಟುನಾಡಿನ ಕಾವಲಗೇರಿ ಮತ್ತು ಮೂರ್ನಾಡಿನ ಬೆಳ್ಳೂರುಗಳಲ್ಲಿಯೂ ವರ್ಷಕ್ಕೊಮ್ಮೆ ನರಬಲಿ ಕೊಡಲಾಗುತ್ತಿತ್ತೆಂದು ರೈಸ್ ತಿಳಿಸುತ್ತಾರೆ. ಬಲಿಗೆ ಸಂಬಂಧವಾಗಿ ದೇವಾಲಯದ ಸುತ್ತಲೂ ಕೊಂಬಾಟ ನಡೆಯುತ್ತಿತ್ತು. ಹಿಂದೆ ಕೊಡಗಿನಲ್ಲಿ ಕಂಡುಬರುತ್ತಿದ್ದ 'ಮರನಾಡ ಬಲಿ' ಎಂಬುದು ನರಬಲಿಯ ರೂಪಾಂತರವಿರಬೇಕೆಂದು ರೈಸ್ ತಿಳಿಸುತ್ತಾರೆ.* ಈ ಪದ್ಧತಿಯಲ್ಲಿ ಮನೆಯೊಳಗೆ, ಅಥವಾ ಹೊರಗೆ ಅಥವಾ ಹೊಲದಲ್ಲಿ ಗುಂಡಿ ತೆಗೆದು ಅದರೊಳಗೆ ಒಬ್ಬನನ್ನು ಇಳಿಸಿ ಮೇಲೆ ಮರಗಳನ್ನು ಹಾಕಿ ಮಣ್ಣು ಮುಚ್ಚಿ ಹಲಸಿನ ಸೌದೆಯಿಂದ ಬೆಂಕಿ ಹಾಕಿ, ಪಣಿಕನೊಬ್ಬನು ಹೊರಗಡೆ ಇದ್ದು, ಒಳಗಿದ್ದ ಇನ್ನೊಬ್ಬನೊಡನೆ ರಾತ್ರಿಯಿಡೀ ಹಾಡುತ್ತಿದ್ದರೆಂದೂ, ಬೆಳಿಗ್ಗೆ ಬೆಂಕಿ ತೆಗೆದು ಗುಂಡಿಯ ಮೇಲ್ಭಾಗವನ್ನು ತೆಗೆದಾಗ ಒಳಗಿದ್ದವನು ಹೊರಗೆ ಬರುತ್ತಿದ್ದನೆಂದೂ ಹೇಳುತ್ತಾರೆ. ಒಮ್ಮೊಮ್ಮೆ ಅವನ ಜೊತೆಗೆ ಒಂದು ಕೋಳಿಯನ್ನು ಕೂಡಿ ಹಾಕಿ ನಂತರ ಅದನ್ನು ಬಲಿ ಕೊಡುತ್ತಿದ್ದರಂತೆ. ಹಿಂದೆ ದನಕರುಗಳಿಗೆ, ಜನರಿಗೆ ಸಾಂಕ್ರಾಮಿಕ ರೋಗದಿಂದ ಸಾವುನೋವುಗಳುಂಟಾದಾಗ ಗ್ರಾಮಸ್ಥರು ಅವುಗಳು ದುಷ್ಟಶಕ್ತಿ ದೇವತೆಗಳಿಂದ ಉಂಟಾದುವೆಂದು ಅವುಗಳ ಉಪಶಮನಕ್ಕಾಗಿ ಬಲಿಕೊಡುತ್ತಿದ್ದರಂತೆ ಹಾಗೂ ಆ ಶಕ್ತಿಗಳನ್ನು ಕುರಿಗಳಲ್ಲಿ ಕೂಡಿಹಾಕಿ ಕುರಿಗಳ ಮಂದೆಯನ್ನು ನಾಡಿನಿಂದ ನಾಡಿಗೆ ಅಟ್ಟಿಸಿಕೊಂಡು ಹೋಗಿ ಕಡೆಗೆ ದೇಶದಿಂದ ಹೊರಕ್ಕೆ ಹಾಕುತ್ತಿದ್ದರಂತೆ.

ಜಿಲ್ಲೆಯ ಶಕ್ತಿದೇವತೆಗಳಲ್ಲಿ ಕುಟ್ಟದಮ್ಮ ಪ್ರಸಿದ್ಧವಾದ ದೇವತೆ. ಕುಟ್ಟದಮ್ಮನನ್ನು ಕರಿಕಾಳಿ, ಕರಿಂಗಾಳಿ ಎಂದೂ ಕರೆಯುತ್ತಾರೆ. ಆಕೆಗೆ ಒಂದು ಉತ್ತಮವಾದ ಗುಡಿಯಿಲ್ಲ. ಆಕೆಯನ್ನು ಒಂದು ಕಲ್ಲಿನ ರೂಪದಲ್ಲಿ ಗುರ್ತಿಸಲಾಗುತ್ತದೆ. ಈ ದೇವತೆಗೆ ಹೆಚ್ಚಾಗಿ ಗಿರಿಜನರು ನಡೆದುಕೊಳ್ಳುತ್ತಾರೆ. ಜಾತ್ರೆಗೆ ಸಾವಿರಾರು ಜನರು ಸೇರುತ್ತಾರೆ. ಕಾಯಿಲೆ, ಕಸಾಲೆಗಳಿಂದ ನರಳುವವರ ಪರವಾಗಿ, ಸತ್ತವರ ಪರವಾಗಿ ಹರಕೆ ಕಾಣಿಕೆಗಳನ್ನು ಹೊರುತ್ತಾರೆ. ಪ್ರತಿ ಗ್ರಾಮದಲ್ಲಿಯೂ ಸಾಮಾನ್ಯವಾಗಿ ಒಂದು ಶಕ್ತಿದೇವತೆ (ಭಗವತಿ)ಯ ಗುಡಿ ಇದ್ದೇ ಇರುತ್ತದೆ. ಕಿಗ್ಗಟ್ಟುನಾಡಿನ ಕಡೆ ಮಾರಮ್ಮನು ಕ್ಷಾಮ, ಅಂಟುರೋಗಗಳನ್ನು ತರುವಳೆಂಬ ಭೀತಿಯಿದೆ. ಆಕೆ ಮನೆಯಲ್ಲಿ ಮೂಲೆಗಳಲ್ಲಿ ಅವಿತಿಟ್ಟುಕೊಂಡಿರುತ್ತಾಳೆಂಬ ನಂಬಿಕೆ ಇದ್ದು, ಅವಳನ್ನು ಹಳ್ಳಿಯಿಂದ ಓಡಿಸಲು ಒಂದು ನಿಶ್ಚಿತ ದಿನ ಎಲ್ಲರೂ ಸೇರಿ ಊರಲ್ಲೆಲ್ಲಾ ತಮಟೆ ಬಡಿದುಕೊಂಡು ಬರುತ್ತಾರೆ. ಮನೆಗಳನ್ನು ಗುಡಿಸಿ ಕಸವನ್ನು ಬುಟ್ಟಿಯಲ್ಲಿ ತುಂಬಿ, ಅದರ ಜೊತೆಗೆ, ರೊಟ್ಟಿ ಆಹಾರ ಪದಾರ್ಥಗಳನ್ನು ಕೊಡುತ್ತಾರೆ. ಊರಿನ ಜನರೆಲ್ಲಾ ನದಿಯ ದಂಡೆಯ ಮೇಲೆ ಸೇರಿ ಒಂದು ಕೂಟವನ್ನು ಏರ್ಪಡಿಸಿ ನಂತರ ಸದ್ದಿಲ್ಲದೆ ಊರಿಗೆ ಹಿಂತಿರುಗುತ್ತಾರೆ. ಜಿಲ್ಲೆಯಲ್ಲಿ ಅಲ್ಲಲ್ಲೆ 'ಬೊಟ್ಲ ಅಯ್ಯಪ್ಪ' ಎಂದು ಕರೆಯುವ ಅಯ್ಯಪ್ಪ ಸ್ಥಾನಗಳಿವೆ. ವರ್ಷಕೊಮ್ಮೆ ಬೆಳೆಯಾದ ನಂತರ 'ಕಳಿಪೊರಡು' ಹಬ್ಬವನ್ನು ಎಲ್ಲಾ ಜಾತಿಯವರು ಸೇರಿ ಆಚರಿಸುತ್ತಾರೆ. ಚಂಬೆಬೆಳ್ಳೂರಿನ ಭಗವತಿ ದೇವಸ್ಥಾನದ ಹಬ್ಬವು ವಿಶೇಷವಾದುದು. ಈ ಸಂದರ್ಭದಲ್ಲಿ ಜನರು ವಿವಿಧ ವೇಷಗಳೊಡನೆ ಮನೆಮನೆಗೆ ಹೋಗಿ ಅಶ್ಲೀಲವಾಗಿ ಬೈದು ಹಣ, ಧಾನ್ಯಗಳನ್ನು ಸಂಗ್ರಹಿಸಿ ದೇವಸ್ಥಾನಗಳಿಗೆ ತರುತ್ತಾರೆ.

ಗ್ರಾಮದೇವತೆಗಳು ಮೈಮೇಲೆ ಬರುವ ರೂಢಿಯಿದೆ. ಆಗ ಅವು ಮಾತನಾಡುವುದು ಮಲೆಯಾಳದಲ್ಲಿ. ಈ ದೇವತೆಗಳು ಬಣ್ಣರು, ಮಲಯರು ಹಾಗೂ ಪಣಿಯರ ಮೈಮೇಲೆ ಬರುತ್ತವೆ. ಇವರ ಮನೆ ಮಾತು ಮಲಯಾಳೀ. ವಿಷ್ಣುಮೂರ್ತಿ, ಚಾಮುಂಡಿ, ಕುಟ್ಟಿಚಾತ, ಮೊದಲಾದ ದೇವತೆ (ಭೂತ)ಗಳಿಗೆ ಕೊಡವರು ಹಾಗೂ ಇತರರು ಕೋಲ ಕಟ್ಟಿಸಿ ಪೂಜಿಸುತ್ತಾರೆ ; ವೇಷ ಕಟ್ಟಿಸುತ್ತಾರೆ.

ಕೊಡವರ ನಂಬಿಕೆಯಂತೆ ವಿಶ್ವದ ಮೂಲದೇವ, ತಡಿಯಂಬೀರ ಇವನ ಸಂಗಾತಿ ತಡಿಯಂಬಿರಾತಿ; ಇವರನ್ನು ತಂಬಿರಾನ್ ಮತ್ತು ತಂಬಿರಾತಿ ಎಂದೂ ಕರೆಯುತ್ತಾರೆ. ತಂಬಿರಾನನ ಅಧೀನದಲ್ಲಿ ನೇರಾತಿ (ಚಂದ್ರ), ಓಣತವ್ವ (ಭೂದೇವಿ), ಬಾಣತವ್ವ (ಬಾಣೇವಿ), ಪಸ್ಯತವ್ವ (ಸಸ್ಯದೇವಿ)ಯರಿದ್ದಾರೆ. ನೀರ್ ಮುತ್ತಾಚಿ (ಜಲದೇವತೆ), ಕಾತ್‌ಮುತ್ತಾಚಿ (ಗಾಳಿ ದೇವತೆ) ಮತ್ತು ತೀಮುತ್ತಾಚಿ (ಬೆಂಕಿ ದೇವತೆ)ಗಳು ಮೂಲ ದೇವರ ಅಧೀನದಲ್ಲಿರುವ ದೇವಿತ್ರಯರು. ಪೂತೆಚಿ (ಹುಟ್ಟಿನ ದೇವತೆ), ನಾತ್ (ನಾಗ್; ಫಲವಂತಿಕೆಯ ದೇವತೆ) ಮತ್ತು ಚಾತ (ಮೃತ್ಯುದೇವತೆ) ಜೀವನಕ್ಕೆ ಅಥವಾ ಬದುಕಿಗೆ ಸಂಬಂಧಪಟ್ಟ ದೇವತೆಗಳು. ಗ್ರಾಮಗಳಲ್ಲಿ ಏಳು ಗ್ರಾಮ

* ರೈಸ್, ಬಿ.ಎಲ್., ಪು. 265.

ದೇವತೆಗಳನ್ನು ಹೆಸರಿಸುತ್ತಾರೆ. ಅವರುಗಳು ಚೊಡಲೆ (ಸಿಡುಬು ಮಾರಿ ದೊಡ್ಡಮ್ಮ), ಕರಿಚೊಡಲೆ (ಸರ್ಪಸುತ್ತಿನಮ್ಮ), ಬೊಕ್ಕೆ ಚೊಡಲೆ (ಗಣಜಿಲೆಯಮ್ಮ), ನೀಪಾಳಿ (ಸಿತಾಳ ಸಿಡುಬಿನಮ್ಮ, ಸಣ್ಣಮ್ಮ), ಅಂಗರೆ (ವಡಾರದಮ್ಮ), ಅಯ್ನಚೊಡಲೆ (ಪ್ಲೇಗಮ್ಮ), ಎಣೆ ಚೊಡಲೆ (ಕಾಲರದಮ್ಮ). ಈ ಗ್ರಾಮದೇವತೆಗಳ ಸೇವಕಿ ಯರನ್ನು ಚಾವುಂಡಿಯರು ಅಥವಾ ಚೌಂಡಿಯರು ಎಂದು ಕರೆ ಯುತ್ತಾರೆ. ಈ ಏಳುದೇವತೆಗಳನ್ನು 'ಎವ್ವ ದುಬೊ' ಎಂದು ಕರೆದು ದೇವರಬನದಲ್ಲಿ ಪೂಜಿಸುತ್ತಾರೆ. ಇವರುಗಳ ಸಂಕೇತ ಧೂಪದಮರ, ಬೇವಿನಮರ, ಹೆಬ್ಬಲಸಿನಮರ, ಲೊಕ್ಕಿಗಿಡ, ಕರಿಬೆತ್ತದ ಹಂಬು, ನೆಲ್ಲಿಮರಗಳು. ಈ ಮರಗಳ ಸಮು ಚ್ಚಯದ ಸುತ್ತ ಕಟ್ಟೆ ಕಟ್ಟಿ ಮಣ್ಣು ಹಣತೆಯಿಟ್ಟು ಪೂಜಿಸುವರು.1

ಕೊಡವರ ಜಾನಪದ ನಂಬಿಕೆಗಳ ಪ್ರಕಾರ ನಾಗ ಹಾವುಗಳು ಒಂದು ಸಾವಿರ ವರ್ಷಗಳು ಬದುಕುತ್ತವೆ. ಅರ್ಧ ಆಯುಸ್ಸು ಕಳೆದ ಮೇಲೆ ಕ್ಷೀಣಿಸುತ್ತಾ ಬೆಳ್ಳಿಯಂತೆ ಹೊಳೆಯ ತೊಡಗು ತ್ತವೆ. ಆಗ ಅದರ ಉದ್ದ ಸುಮಾರು ಮೂರು ಅಡಿಗಳಿರು ತ್ತದೆ. ನಂತರ 600–700 ವರ್ಷಗಳು ಕಳೆದ ಮೇಲೆ ಚಿನ್ನದಂತೆ ಮೆರಗುತ್ತಾ ಅದರ ಉದ್ದ ಒಂದು ಅಡಿಗೆ ಕುಗ್ಗು ತ್ತದೆ. ಕಡೆಗೆ ಒಂದು ಬೆರಳಿನ ಗಾತ್ರಕ್ಕೆ ಕುಗ್ಗಿ ಒಂದು ದಿನ ಗಗನಕ್ಕೆ ಹಾರಿ ಸತ್ತು ಭೂಮಿಗೆ ಬಿದ್ದು ಮಾಯವಾಗುತ್ತದೆ. ಅದು ಬಿದ್ದ ಜಾಗವನ್ನು ನಾತ ಎಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ಪ್ರತೀ ವರ್ಷ ಕಾರ್ತಿಕದಲ್ಲಿ ದೀಪಹಚ್ಚಿ, ತೆಂಗಿನ ಕಾಯಿ ಒಡೆದು ಪೂಜಿಸುತ್ತಾರೆ.2 ಕೊಡವರ ಜಾನಪದ ಗೀತೆ ಗಳಲ್ಲಿ ಹೇಳಿದ ಪ್ರಕಾರ ದೇಶಕ್ಕೆ ಕಾವೇರಿ, ನಾಡಿಗೆ ಒಂದು ಮಹಾದೇವ ಆಲಯ, ಊರಿಗೆ ಪೊವೆದಿ, ಕೇರಿಗೆ ಅಯ್ಯಪ್ಪ, ಕುಟುಂಬಕ್ಕೆ ಕಾರೋಣ (ಮೂಲಪುರುಷ), ಒಡೆಗೆ (ಮನೆಗಳ ಸಮುದಾಯ) ನಾತ (ನಾಗ), ಓಣಿಗೆ ಪೂದ (ಭೂತ) ಹೀಗೆ ವ್ಯವಸ್ಥೆಗಳು ನಡೆದುಕೊಂಡು ಬಂದಿವೆ.

ಕೊಡಗರ ಬೇಟೆಯ ದೇವರು ಅಯ್ಯಪ್ಪ. ಈತನನ್ನು ಅಯ್ನದೇವ ಎಂದೂ ಕರೆಯುತ್ತಾರೆ. ಮಕರ ಮಾಸದ ಹುಣ್ಣಿಮೆಯಲ್ಲಿ (ಬೇಟೆ ಹುಣ್ಣಿಮೆ) ಈ ದೇವರ ಉತ್ಸವ ಮಾಡುತ್ತಾರೆ. ಇವನ ನೆಲೆದಾಣ ದೇವರಕಾಡು. ಹಾಲು (ಸೊನೆ) ಬರುವ ಮರದಡಿಯಲ್ಲಿ ಈ ದೇವರ ಸ್ಥಾಪನೆ. ಇವನಿಗೆ ಕಬ್ಬಿಣವನ್ನು, ಲೋಹದ ಬಿಲ್ಲುಬಾಣ, ಮಣ್ಣಿನಿಂದ ಮಾಡಿದ ನಾಯಿ, ಕುದುರೆ ಮತ್ತಿತರ ಬೇಟೆಗೆ ಉಪಯುಕ್ತ ಪ್ರಾಣಿಗಳ ವಿಗ್ರಹಗಳನ್ನು ಕಾಣಿಕೆಯಾಗಿ ಅರ್ಪಿಸುತ್ತಾರೆ. ಈತನು ಬುಧವಾರ ಮತ್ತು ಶನಿವಾರಗಳಲ್ಲಿ ಕೆನ್ನಾಯಿಗಳೊಡನೆ ಬೇಟೆಯಾಡುವನೆಂಬ ನಂಬಿಕೆಯಿದೆ. ಈತನು ಜೀವವನ್ನು ಕೊಡುವ ಹಾಗೂ ತೆಗೆದುಕೊಳ್ಳುವ ದೇವರು. ಇವನು ತಂಬಿರಾನನ ನೇರ ಹತೋಟಿಯಲ್ಲಿರುತ್ತಾನೆ. ಇವನ ಸಹಚರ ನಾಯಿ. ಬೇಟೆ ಹುಣ್ಣಿಮೆಯ ದಿವಸ ಹರಕೆ ಹೊತ್ತವರು ನಾಯಿಯ ಮಣ್ಣಿನ ಮೂರ್ತಿಯನ್ನು ಈತನಿಗೆ ಕಾಣಿಕೆಯಾಗಿ ಕೊಡುತ್ತಾರೆ. ಬೇಟೆ ಹುಣ್ಣಿಮೆಯ ದಿನ ಯುವಕರು ಬಿಲ್ಲು ಬಾಣಗಳಿಂದ ಬೇಟೆಯನ್ನು ಪ್ರಾರಂಭಿಸುತ್ತಾರೆ. ಈ ಬಿಲ್ಲು ಬಾಣಗಳನ್ನು ಬೇಟೆಯಾಡಿದ್ದ ವ್ಯಕ್ತಿ ಸತ್ತಾಗ ಅವನ ಜೊತೆ ಯಲ್ಲಿ ಮುರಿದು ಹೂಳುತ್ತಿದ್ದರು. ಹಿಂದೆ ಬೇಟೆ ಹುಣ್ಣಿಮೆಯ ನಂತರ ಮಂಗಳವಾರ ಅಥವಾ ಶುಕ್ರವಾರ ಬೇಟೆಯನ್ನು ಆರಂಭಿಸುತ್ತಿದ್ದರು.

ಜಿಲ್ಲೆಯಲ್ಲಿ ಸ್ಥಳೀಯವಾಗಿ ಪೂಜಿಸುವ ಶಕ್ತಿದೇವತೆಗಳಲ್ಲಿ ಗುಳಿಗ(ಗುಳಿಕ) ಒಂದು ಮುಖ್ಯವಾದ ಶಕ್ತಿದೇವತೆ. ಈತನನ್ನು ಕೊಡವ ಭಾಷೆಯಲ್ಲಿ 'ಕುಳಿಯ' ಎಂದು ಕರೆಯುತ್ತಾರೆ. ಈತನು ಶನಿದೇವರ ಮಗನೆಂದು ಪ್ರತೀತಿ. ಹಾಲು ಬರುವ ಹಲಸಿನ ಮರದ ಬುಡದಲ್ಲಿ ಒಂದು ಕಲ್ಲಿನ ರೂಪದಲ್ಲಿ ಇವ ನನ್ನು ಪೂಜಿಸುತ್ತಾರೆ. ಈತನು ದನಕರುಗಳನ್ನು ರಕ್ಷಿಸುತ್ತಾ ನೆಂಬ ನಂಬಿಕೆಯಿದೆ. ಪ್ರತಿವರ್ಷವೂ ಈತನಿಗೆ ಕೋಳಿಯನ್ನು ಮಾತ್ರ ಬಲಿ ಕೊಡುತ್ತಾರೆ. ಪಾಲೆಯರು (ಅಜ್ಜಲಪಾಲೆಯರು) ಕೋಲ ಕಟ್ಟುತ್ತಾರೆ. ಆವೇಶ ಬಂದಾಗ ಹೆಂಡ, ತೆಂಗಿನ ಕಾಯಿಗಳನ್ನು ಕೊಡುತ್ತಾರೆ, ತಿನ್ನಲು ಬತ್ತದ ಅರಳು ಕೊಡು ತ್ತಾರೆ. ಜನರು ಹರಕೆಗಳನ್ನು ಕಟ್ಟುತ್ತಾರೆ. ಮನೆಯಲ್ಲಿ ಹೆಚ್ಚು ಸಾವು ನೋವುಗಳಾದಾಗ 'ಮೃತ್ಯುಗುಳಿಕಾ' ಎಂಬ ಇನ್ನೊಂದು ದೇವತೆಯನ್ನು ಪೂಜಿಸುತ್ತಾರೆ. ಜನರು ಹೆದರುವ ಇನ್ನೊಂದು ದೈವವೆಂದರೆ 'ಪಾಷಾಣಮೂರ್ತಿ'. ಈತನನ್ನು ಸರಿ ಯಾಗಿ ಪ್ರಸನ್ನಗೊಳಿಸದಿದ್ದರೆ ಸಾವುನೋವುಗಳನ್ನು ತರುತ್ತಾ ನೆಂದು ನಂಬಿಕೆ. ಈತನಿಗೆ ಕೋಳಿ, ಹಂದಿಗಳನ್ನು ಬಲಿಕೊಟ್ಟು ತೃಪ್ತಿಪಡಿಸುತ್ತಾರೆ. ಪಾಲೆಯರ ಮೈಮೇಲೆ ಆವೇಶ ಬಂದಾಗ ಭವಿಷ್ಯ ಹೇಳುವುದುಂಟು. ವಿಶೇಷ ವೇಷಗಳೊಂದಿಗೆ ಮದ್ಯ

1. ಕೊಡಗಿನ ಸಂಶೋಧಕಿ ಶ್ರೀಮತಿ ತುಳಸೀದೇವಿಯವರು ಕೊಟ್ಟ ಮಾಹಿತಿ
2. ರೈಸ್, ಬಿ. ಎಲ್, ಪು. 263

ಸೇವಿಸಿ ಪಾಲೆಯರು ರಾತ್ರಿಯೆಲ್ಲಾ ಕುಣಿಯುತ್ತಾರೆ. ವಿಷ್ಣುಮೂರ್ತಿ ಇನ್ನೊಂದು ದೈವ. ವಿಷ್ಣುಮೂರ್ತಿ, ಚೌಂಡಿಯರಿಗೆ ಹಳ್ಳಿಗಳಲ್ಲಿ ಕೋಲ ಕಟ್ಟುತ್ತಾರೆ. ಆವೇಶ ಬಂದಾಗ ತಿನ್ನಲಿಕ್ಕೆ ಬತ್ತದ ಅರಳು, ಕುಡಿಯಲು ಸೇಂದಿ ಹಾಗೂ ಕುರ್ದಿ ನೀರು (ಅರಿಶಿನ, ಸುಣ್ಣ ಹಾಕಿದ ನೀರು) ಕೊಡುತ್ತಾರೆ. ಕೋಲ ಕಟ್ಟುವ, ಕೊಂಡ ಹಾಯುವ ಪದ್ಧತಿಯೂ ಇದೆ.

ಸ್ಥಳೀಯ ದೈವಗಳಲ್ಲದೆ ಭೂತ ಪೂಜೆ, ಕುಣಿತಗಳೂ ಕಂಡುಬರುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಭೂತಗಳಲ್ಲದೆ ಕೊಡಗಿನ ಅಚ್ಚಪ್ಪ ಮತ್ತು ಅಚ್ಚನಾಯಕನ ಭೂತಗಳನ್ನು ಪೂಜಿಸುತ್ತಾರೆ. ಕಲ್ಲಿಚಂಡ ಪೊನ್ನಪ್ಪ ಅಥವಾ ಅಚ್ಚಪ್ಪ ಹಲವು ತಲೆಮಾರುಗಳ ಹಿಂದೆ ಮಲಬಾರಿನಿಂದ ಬಂದು ನಾಲ್ಕು ನಾಡಿನಲ್ಲಿ ನೆಲೆಸಿ, ಕೊಡವ ಸ್ತ್ರೀಯನ್ನು ಮದುವೆಯಾಗಿ ಯಂತ್ರ ಮಂತ್ರ ಮಾಡುತ್ತಿದ್ದನು. ಕಡೆಗೆ ನಾಲ್ಕು ನಾಡಿನ ತಾಲೂಕು ಕಛೇರಿ ಬಳಿ ಗುಂಡಿನಿಂದ ಹೊಡೆದು ಸಾಯಿಸಲ್ಪಟ್ಟನು. ಈತನ ಆತ್ಮವು, ಅವನಂತೆ ಯಂತ್ರ ತಂತ್ರ ಮಾಡುತ್ತಿದ್ದವರ ಮೇಲೆ ಬರುತ್ತಿತ್ತೆಂದು ಪ್ರತೀತಿ. ಅಚ್ಚನಾಯಕನು ಕಿಗ್ಗಟ್ಟುನಾಡಿನ ಚಿಕ್ಕಮಂದೂರಿಗೆ ಸೇರಿದವನು.* ಪ್ರತಿಯೊಂದು ಬಾಣೆಯೂ ತನ್ನ ಅಧಿಷ್ಠಾನದೇವತೆಯನ್ನು ಹೊಂದಿದ್ದು ಪ್ರತಿವರ್ಷವೂ ಬಲಿಯನ್ನು ತೆಗೆದುಕೊಳ್ಳುತ್ತದೆ. ಹಾಗೆ ಬಲಿ ಸಿಗದಿದ್ದಲ್ಲಿ ಕಾಡಿನ ದೇವರು ತನ್ನ ಅನುಗ್ರಹವನ್ನು ಹಿಂತೆಗೆದುಕೊಂಡು ದನಕರುಗಳಿಗೆ ತೊಂದರೆಯಾಗಿ, ರೋಗ ರುಜಿನಗಳು ಬರುತ್ತವೆಯೆಂದು ನಂಬಿಕೆ ಜನರಲ್ಲಿತ್ತು. ಜಿಲ್ಲೆಯಲ್ಲಿ ಅಲ್ಲಲ್ಲೆ ದೇವರ ಕಾಡುಗಳಿವೆ. ಇಗ್ಗುತಪ್ಪದೇವರ ಕಾಡು, ಪಾಡಿನಾಲ್ಕು ನಾಡಿನ ಚೋಮಮಲೆ, ಕುಯಿಂಗೇರಿ ನಾಡಿನ 'ಇರುಳಿಬಾನ್', ಕೋತೂರ ದೇವರ ಕಾಡು ಮೊದಲಾದವು ಇಂತಹ ಕಾಡುಗಳು. ಹಿಂದೆ ಈ ದೇವರ ಕಾಡುಗಳಲ್ಲಿ ಬೇಟೆ ನಿಷಿದ್ಧವಾಗಿತ್ತು.

ಕೊಡಗಿನ ದೈವ ದೇವಸ್ಥಾನಗಳಲ್ಲಿ ಅರ್ಚಕರಾಗಿ ವೈಷ್ಣವರಾದ ಶಿವಳ್ಳಿ ಬ್ರಾಹ್ಮಣರಿದ್ದರೂ ಕೂಡ ವೈಷ್ಣವ ಧರ್ಮದ ಪ್ರಚಾರ ಕಡಿಮೆ. ಹಾಗೆಯೇ ವೈಷ್ಣವ ದೇವಸ್ಥಾನಗಳೂ ಕಡಿಮೆ. ದಾಸರು, ನಾಮಧಾರಿ ಗೌಡರು ಮೊದಲಾದವರು ವೈಷ್ಣವ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಸೋಮವಾರಪೇಟೆ ತಾ|| ಶ್ರೀರಂಗಪಟ್ಟಣದಲ್ಲಿ ಹೊಯ್ಸಳರ ಕಾಲದ ಶ್ರೀರಂಗನಾಥನ ದೇವಾಲಯ ಇದ್ದಿರಬೇಕು. ಭಾಗಮಂಡಲದಲ್ಲಿ ಭಗಂಡೇಶ್ವರನ ಪರಿಸರದಲ್ಲಿ ವಿಷ್ಣು ಮಂದಿರವಿವೆ. ಅಯ್ಯಂಗೇರಿಯಲ್ಲಿ ಕೃಷ್ಣನ ದೇವಾಲಯವೊಂದಿದೆ.

ಕೊಡಗಿನ ಶೈವ ಕ್ಷೇತ್ರಗಳಲ್ಲಿ ಇರ್ಪು, ಹಾಗೂ ರಾಮಸ್ವಾಮಿ ಕಣಿವೆ, ಬಲಮುರಿಗಳ, ರಾಮೇಶ್ವರ, ರಾಮಲಿಂಗೇಶ್ವರ, ಅಗಸ್ತ್ಯೇಶ್ವರ ದೇವಸ್ಥಾನಗಳು, ಮಡಿಕೇರಿಯ ಓಂಕಾರೇಶ್ವರ ದೇವಸ್ಥಾನ, ಭಾಗಮಂಡಲದ ಭಗಂಡೇಶ್ವರ ದೇವಸ್ಥಾನ, ತಲಕಾವೇರಿಯಲ್ಲಿ ಕಾವೇರಿಯ ಉಗಮ ಸ್ಥಳ ಮುಖ್ಯವಾದವುಗಳು. ಇರ್ಪುವಿನ ರಾಮೇಶ್ವರ ಹಾಗೂ ಭಾಗಮಂಡಲದ ಭಗಂಡೇಶ್ವರ ದೇವಸ್ಥಾನಗಳು ಯಾತ್ರಾಸ್ಥಳಗಳೂ ಆಗಿವೆ. ಸಿರಹ (ಸಿರಿಉರ)ದಲ್ಲಿ ಹೊಯ್ಸಳರ ಕಾಲದ ಮಲ್ಲಿಕಾರ್ಜುನ ದೇವಾಲಯವಿತ್ತು (ಈಗ ಇಲ್ಲ). ಪ್ರಾಚೀನ ಕೊಡಗಿನ ಪ್ರತಿಯೊಂದು ನಾಡಿಗೂ ಒಂದೊಂದರಂತೆ ನಾಡ ದೇವಾಲಯಗಳು ಇದ್ದುವೆಂದು ಪ್ರತೀತಿ. ಭಗಂಡೇಶ್ವರ ಗಂಗ–ಚೋಳರ ಕಾಲದಷ್ಟು ಹಳೆಯದಿರಬೇಕು. ಮಹಾಶಿವರಾತ್ರಿಯ ನಂತರ ಎರಡನೆಯ ದಿನ ಯೆರವರು ಇರ್ಪುವಿನ ರಾಮೇಶ್ವರ ದೇವಸ್ಥಾನದಲ್ಲಿ ತಮ್ಮ ಹರಕೆಗಳನ್ನು ತೀರಿಸುತ್ತಾರೆ. ವೀರಶೈವ ಸಂಪ್ರದಾಯವು ಕೊಡಗಿಗೆ ಚಂಗಾಳ್ವರ ಕಾಲದಿಂದಲೇ ಬಂತು. 14–15 ನೇಯ ಶತಮಾನದಲ್ಲಿ ವಿಶೇಷವಾಗಿ ಉತ್ತರ ಕೊಡಗಿನಲ್ಲಿ ಅದು ನೆಲೆಯೂರಿದ್ದು ಕೊಡಗಿನ ಒಡೆಯರ ಕಾಲದಲ್ಲಿ ವ್ಯಾಪಕ ಜನಪ್ರಿಯತೆ ಪಡೆಯಿತು. ಮಡಿಕೇರಿ, ನಂಜರಾಯಪಟ್ಟಣ ಮುಂತಾದೆಡೆ ವೀರಭದ್ರ ದೇವಾಲಯಗಳು ಇದ್ದವು.

ನಾಲ್ಕುನಾಡಿನ (ಪಾಡಿ) ಇಗ್ಗುತಪ್ಪದೇವರು ಕೊಡವರ ಕುಲದೇವರು. ಸ್ಥಳ ಪುರಾಣದ ಪ್ರಕಾರ ಮಲಬಾರಿನಿಂದ ಐದು ಸಹೋದರರೂ, ಒಬ್ಬ ಸಹೋದರಿಯೂ ಹೊರಟು, ಅಲ್ಲಲ್ಲಿ ದೇವತೆಗಳಾಗಿ ನೆಲೆ ನಿಂತರೆಂಬ ನಂಬಿಕೆಯಿದೆ. ಇಗ್ಗುತಪ್ಪ ದೇವಸ್ಥಾನದಲ್ಲಿ ಕೊಡವರು ಹೆಚ್ಚಾಗಿ ವಿವಾಹ ಲಗ್ನ ಕಟ್ಟಿಸುತ್ತಾರೆ ಹಾಗೂ ಮಕ್ಕಳಿಗೆ ನಾಮಕರಣ ಮಾಡಿಸುತ್ತಾರೆ. ವಿಶೇಷವಾಗಿ ಅಕ್ಕಿ ತುಲಾಭಾರ ಮಾಡಿಸುತ್ತಾರೆ. ಕೆಲವು ವೇಳೆ ಗಂಧ ಮತ್ತು ತುಪ್ಪದ ತುಲಾಭಾರ ಮಾಡಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಅಕ್ಕಿಯ ಜೊತೆಗೆ ಒಂದು ಗಂಧದ ತುಂಡು, ಒಂದು ಪಾತ್ರೆಯಲ್ಲಿ ತುಪ್ಪವಿಟ್ಟು ತುಲಾಭಾರ ಮಾಡಿಸುತ್ತಾರೆ. ಜಿಲ್ಲೆಯಲ್ಲಿ ಇದೊಂದೇ ದೇವಸ್ಥಾನದಲ್ಲಿ ನಿತ್ಯ ಅನ್ನದಾನವಾಗುತ್ತದೆ. ಇಗ್ಗುತಪ್ಪದೇವರ ತಮ್ಮ ತಂಬೀರಾನ್ ಎಂಬುವನು ಕಡಿಯತ್ನಾಡಿನ ಸೋಮಮಲೆಯಲ್ಲೂ, ಇನ್ನೊಬ್ಬ ತಮ್ಮ

---

* ರೈಸ್, ಪು. 262

ಪಾಲೂರಪ್ಪನು ಕುಯ್ಯಂಗೇರಿ ನಾಡಿನಲ್ಲಿರುವ ಪಾಲೂರಿನಲ್ಲೂ ಪ್ರತಿಷ್ಠಾಪಿಸಲ್ಪಟ್ಟಿರುವರು. ಇವರ ಹಿರಿಯಣ್ಣನು (ಪೆರುಮ; ಪೆಮ್ಮ) ಉತ್ತರ ಮಲಬಾರಿನ ಬೈತೂರಿನಲ್ಲೂ, ಕಡೆಯ ತಮ್ಮನು ಕುಟ್ಟ–ಮಾನಂದವಾಡಿ ರಸ್ತೆಯಲ್ಲಿ ವೈನಾಡಿನ ತಿರುನೆಲ್ಲಿಯಲ್ಲಿಯೂ ಇರುವರು. ಇವರ ಸಹೋದರಿಯು ಜಾತಿಭ್ರಷ್ಟಳಾಗಿ ಪಾಡಿನಾಲ್ಕು ನಾಡಿನ ಯವಕಪಾಡಿಯಲ್ಲಿ ಪನ್ನಂಗಾಲತಮ್ಮೆ ಎಂಬ ಹೆಸರಿನಿಂದ ಹೊಲೆಯರೆನ್ನಲಾಗುತ್ತಿದ್ದ ಪರಿಶಿಷ್ಟ ವರ್ಗದವರಿಂದ ಪೂಜಿಸಲ್ಪಡುತ್ತಿದ್ದಾಳೆ.* ಯವಕಪಾಡಿಯ ದೇವಸ್ಥಾನದಲ್ಲಿ ಪನ್ನಂಗಾಲತಮ್ಮೆಯನ್ನು ಒಂದು ಪೆಟ್ಟಿಗೆಯಲ್ಲಿ ಮೇಲ್ಭಾಗದಲ್ಲಿಟ್ಟು ಅಲ್ಲಿಗೆ ಹತ್ತಲು ಮರದ ದಿಮ್ಮಿಯೊಂದರಿಂದ ಏಣಿ ಮಾಡಿದ್ದಾರೆ. ಇಗ್ಗುತಪ್ಪದೇವರು ತನ್ನ ತಂಗಿಯನ್ನು ಯಾವಾಗಲೂ ನೋಡುತ್ತಿರಬೇಕೆಂದು ಪೆಟ್ಟಿಗೆಯ ಮೇಲ್ಭಾಗದ ಛಾವಣಿಯಲ್ಲಿ ಒಂದು ಕಿಂಡಿಯನ್ನು ಮಾಡಿದ್ದಾರೆ. ಈಕೆಗೆ ತಿಂಗಳಿಗೊಮ್ಮೆ ಪೂಜೆ ; ಏಪ್ರಿಲ್ ತಿಂಗಳಿನಲ್ಲಿ ಜಾತ್ರೆ ನಡೆಯುತ್ತದೆ. ಬೈತೂರಿನ ದೇವರಿಗೆ ಹಲವು ಕೊಡವ ಕುಟುಂಬಗಳು ನಡೆದುಕೊಳ್ಳುತ್ತವೆ. ಪ್ರತೀ ವರ್ಷವೂ ಉತ್ಸವದಲ್ಲಿ ಈ ಕುಟುಂಬಗಳವರು ಅಕ್ಕಿಯನ್ನು ಎತ್ತುಗಳ ಮೇಲೆ ಹೇರಿಕೊಂಡು ಹೋಗಿ ಈ ದೇವರಿಗೆ ಅರ್ಪಿಸುತ್ತಾರೆ. ಇಗ್ಗುತಪ್ಪದೇವರನ್ನು ಸುಬ್ರಹ್ಮಣ್ಯನ ಜೊತೆ ಏಕೀಕರಿಸಲಾಗಿದೆ.

### ಜೈನಮತ

ಕೊಡಗಿನಲ್ಲಿ ಸುಮಾರು 4ನೇ ಶತಮಾನದಿಂದ 11ನೇ ಶತಮಾನದವರೆಗೆ ಜೈನರಾಜರು ಅಲ್ಲಲ್ಲಿ ಆಳುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಕಿಗ್ಗಟ್ಟುನಾಡಿನ ಬೀಳೂರು, ಶನಿವಾರ ಸಂತೆ ಹೋಬಳಿ ಹಾರುವನಹಳ್ಳಿ, ಆರಕನಹಳ್ಳಿ ಮತ್ತು ನಿಡ್ತ ಗ್ರಾಮಗಳಲ್ಲಿ ಜೈನಬಸದಿಗಳಿಗೆ, ಗುರುಗಳಿಗೆ ಭೂಮಿಗಳನ್ನು ಅರಸರು ಕೊಟ್ಟಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಆ ಕಾಲದಲ್ಲಿ ತಲಕಾವೇರಿಯಿಂದ ಹನಸೋಗೆಯವರೆಗೆ ಜೈನ ಬಸದಿಗಳ ಮೇಲೆ ಹನಸೋಗೆಯ ಜೈನಗುರುಗಳು ಅಧಿಕಾರವನ್ನು ಹೊಂದಿದ್ದರೆಂದು ಕಂಡು ಬರುತ್ತದೆ. ಆರಂಭದಲ್ಲಿ ಜೈನರಾಗಿದ್ದ ಚೆಂಗಾಳ್ವರ ಕಾಲದಲ್ಲಿ ಹೊತ್ತಗೆಗಚ್ಛ ಮಠದ ಜೈನಗುರುಗಳು ತಲಕಾವೇರಿಯವರೆಗಿನ ಜೈನಬಸದಿಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು. ಸುಂಟಿಕೊಪ್ಪನಾಡಿನ ಬೆಟಗೇರಿ ಗ್ರಾಮದ ಅಂಜನಗಿರಿಯಲ್ಲಿ ಒಂದು ಜೈನ ಬಸದಿಯು 1544ರಲ್ಲಿ ಕಟ್ಟಲ್ಪಟ್ಟಿತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಈ ಬಸದಿಯ ಕಟ್ಟಡವು ಇಂದಿಗೂ ಭದ್ರವಾಗಿದೆ. ಇದಕ್ಕೆ ಸಮೀಪದ ತಾತಂಗಿ ಎಂಬ ಊರಿನಲ್ಲೂ 12ನೇ ಶತಮಾನದಲ್ಲಿ ಕಟ್ಟಿದ ಜೈನಬಸದಿ ಇತ್ತು. ಇದು ಹಾರಂಗಿಯ ದಂಡೆಯಲ್ಲಿ ಇದ್ದು ಪ್ರವಾಹ ಬಂದಾಗ ಮುಳುಗಿತು. ಆ ಊರ ವ್ಯಾಪಾರಿಗಳು ಜೈನರಾಗಿದ್ದರು. ಕೊಂಗಾಳ್ವರು ಮುಳ್ಳೂರಿನಿಂದ ಆಳುತ್ತಿದ್ದು, ಜೈನರಾಗಿದ್ದ ಇವರ ಕಾಲದಲ್ಲಿ ಮುಳ್ಳೂರಿನ (ಸೋಮವಾರ ಪೇಟೆ ತಾ||) ಬಸದಿಗಳು ಕಟ್ಟಲ್ಪಟ್ಟವು (ನೋಡಿ : ಅಧ್ಯಾಯ 2). ನಂದಿಸಂಘದ ಗುಣಸೇನ ಪಂಡಿತನೆಂಬ ವಿದ್ವಾಂಸನು ಮುಳ್ಳೂರಿನಲ್ಲಿ ಇರುತ್ತಿದ್ದನು. ಈತ ಜೈನ ಮುನಿಯಾಗಿದ್ದನು. ಸೋಮವಾರಪೇಟೆ ಬಳಿಯ ಕಲ್ಕಂದೂರಲ್ಲೂ ಒಂದು ಬಸದಿ ಇದೆ.

ಈ ಜಿಲ್ಲೆಯ ಜೈನರು ದಿಗಂಬರ ಪಂಥದವರು. ವೀರರಾಜಪೇಟೆ, ಮುಳ್ಳೂರು, ಕಲ್ಕಂದೂರು, ವೀರರಾಜಪೇಟೆ ತಾಲೂಕಿನ ದೇವಣಗೇರಿಯಲ್ಲಿ ಜೈನರಿದ್ದಾರೆ. ವೀರರಾಜಪೇಟೆಯಲ್ಲಿ ಜೈನರ ಒಂದು ಬೀದಿಯಿದೆ. ಅಂಜನಗಿರಿಯು ಒಂದು ಪ್ರಾಚೀನ ಜೈನಸ್ಥಳ. ವೀರರಾಜಪೇಟೆಯಿಂದ ಹಲವಾರು ಮಂದಿ ಮಂಡ್ಯಕ್ಕೆ ವಲಸೆ ಹೋದರು. ಹಿಂದೆ ಜೈನರಾಗಿದ್ದ ಗೌಡಜನಾಂಗದ ಜನ ಇಂದಿಗೂ ಕಲ್ಕಂದೂರು ಬಸದಿಗೆ ಕಾಣಿಕೆ, ಗೌರವ ಸಲ್ಲಿಸುತ್ತಾರೆ. ಅನೇಕ ಜೈನರು ವೀರಶೈವರೂ ಆಗಿರಬೇಕು. ಜಿಲ್ಲೆಯ ಜೈನರ ಮುಖ್ಯ ಉದ್ಯೋಗ ಈಗ ವ್ಯಾಪಾರ ; ಜಿಲ್ಲೆಯಲ್ಲಿ 1981 ಜನಗಣತಿ ಪ್ರಕಾರ 190 ಮಂದಿ ಜೈನರಿದ್ದರು. ಅವರಲ್ಲಿ 62 ಮಂದಿ ಗ್ರಾಮಾಂತರ ಪ್ರದೇಶದಲ್ಲೂ, 128 ಮಂದಿ ನಗರಗಳಲ್ಲೂ ಇದ್ದರು. ಮಡಿಕೇರಿ ತಾಲೂಕಿನಲ್ಲಿ 18 ಮಂದಿ, ಸೋಮವಾರಪೇಟೆ ತಾಲೂಕಿನಲ್ಲಿ 55 ಮಂದಿ ಮತ್ತು ವೀರರಾಜಪೇಟೆ ತಾಲೂಕಿನಲ್ಲಿ 117 ಮಂದಿ ವಾಸಿಸುತ್ತಿದ್ದರು.

### ಮಠಗಳು

ಕೊಡಗು ಜಿಲ್ಲೆಯಲ್ಲಿ ವೀರಶೈವ ಮಠಗಳೇ ಹೆಚ್ಚು. 1866ರ ಸಮಯಕ್ಕೆ ಜಿಲ್ಲೆಯಲ್ಲಿ 57 ಜಂಗಮ ಮಠಗಳಿದ್ದುವೆಂದು ರೈಸ್‌ರವರು ತಿಳಿಸುತ್ತಾರೆ. ಈ 57 ಮಠಗಳಿಗೆ 31,457 ಬಟ್ಟಿಯಷ್ಟು ಜಮೀನಿದ್ದು ಅದರಿಂದ ವಾರ್ಷಿಕ ಆದಾಯ ಅಂದಿನ ಕಾಲಕ್ಕೆ ಸುಮಾರು 3,360 ರೂ.ಗಳಷ್ಟಿತ್ತು. ಅವುಗಳಲ್ಲಿ ಹೆಚ್ಚು ದತ್ತಿಯನ್ನು ಪಡೆಯುತ್ತಿದ್ದ ಮಠಗಳೆಂದರೆ ಯೆಡವನಾಡಿನ ಬಸವನಹಳ್ಳಿಮಠ, (4,105 ಬಟ್ಟಿಗಳು), ಅಬ್ಬಿಮಠ (4,005 ಬಟ್ಟಿ), ಗಣನಾಡಿನ ಮಾದಾಪುರ ಮಠ ($2,643\frac{1}{2}$ಬಟ್ಟಿ) ಚರದರಹಳ್ಳಿ ಮಠ (1,430 ಬಟ್ಟಿ),

* ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ, ಪುಟ 618–619

ಅಮ್ಮತ್ನಾಡಿನ ತನದಿಮಠ (1,485 ಬಟ್ಟಿ), ಹೆರೂರು ಮೂರೊಕ್ಕಲ್ನಾಡಿನ ಸಿದ್ಧಾಪುರ ಮಠ (2,372½ ಬಟ್ಟಿ) ಯೆಡೆನಾಲ್ಕ್ನಾಡಿನ ಚಪ್ಪದ ಕಟ್ಟೆ ಮಠ (1,188½ಬಟ್ಟಿ) ಮತ್ತು ಗಡಿನಾಡಿನ ತೊರೆನೂರು ಮಠ (1,100 ಬಟ್ಟಿ). ಈಗ ಜಿಲ್ಲೆಯಲ್ಲಿ 64 ಮಠಗಳಿವೆಯೆಂದು ಹೇಳುತ್ತಾರೆ. ಅವುಗಳಲ್ಲಿ ಕೆಲವು ಮಠಗಳು ಕಂಡು ಬರುತ್ತಿಲ್ಲ. ಕೆಲವು ಮಠಗಳು ಪಟ್ಟದ ಮಠಗಳು, ಉಳಿದವು ಜಂಗಮ ಮಠಗಳು. ಸೋಮವಾರಪೇಟೆಯಲ್ಲಿರುವ ವಿರಕ್ತಮಠವು ಜಿಲ್ಲಾ ಮಠಗಳಲ್ಲಿ ಹೆಚ್ಚು ಅಭಿವೃದ್ಧಿಗೆ ಬರುತ್ತಿರುವ ಮಠ. ಈಗಿರುವ ಸ್ವಾಮಿಗಳು ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ವಿಶ್ವೇಶ್ವರ ಸ್ವಾಮಿಗಳು. ಇವರಿಗೆ 1983ರಲ್ಲಿ ಪಟ್ಟಾಭಿಷೇಕವಾಯಿತು. ಇವರ ಹಿಂದಿನ ಸ್ವಾಮಿಗಳಾದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಗುರುಸಿದ್ಧ ಸ್ವಾಮಿಗಳು ಮಠದ ಏಳಿಗೆಗೆ ಶ್ರಮಿಸಿದ ಸ್ವಾಮಿಗಳಲ್ಲೊಬ್ಬರು. ಈ ಮಠವು ಈಗ ಒಂದು ಬಾಲಕಿಯರ ಪ್ರೌಢಶಾಲೆಯನ್ನು ನಡೆಸುತ್ತಿದೆ. 1937 ರಿಂದ 1966 ರವರೆಗೆ ಒಂದು ವಿದ್ಯಾರ್ಥಿನಿಲಯವನ್ನು ನಡೆಸುತ್ತಿತ್ತು. ಪ್ರತೀವರ್ಷವು ಗುರುಗಳ ಆರಾಧನಾ ಸಂದರ್ಭದಲ್ಲಿ ಕಲಾವಿದರಿಗೆ ಹಾಗೂ ಗಣ್ಯ ವ್ಯಕ್ತಿಗಳಿಗೆ ಸನ್ಮಾನ ಮಾಡುತ್ತಾರೆ. ಇದೇ ರೀತಿ ವೀರರಾಜಪೇಟೆಯ ಬಳಿಯಿರುವ ಶಾಂತವೀರ ಸ್ವಾಮಿಗಳ ಮಠವೂ ಪ್ರವರ್ಧಮಾನಕ್ಕೆ ಬರುತ್ತಿದೆ. ಹಿಂದೆ ಕೊಡಗಿನಲ್ಲಿದ್ದ 64 ವೀರಶೈವ ಮಠಗಳ ಪಟ್ಟಿಯನ್ನು ಈ ಮುಂದೆ ಕೊಡಲಾಗಿದೆ :

ಕೊಡ್ಲಿ ಕಲ್ಲು ಮಠ (ಕೊಡ್ಲಿಪೇಟೆ), ಕಲ್ಲಳ್ಳಿ ಮಠ (ಕೊಡ್ಲಿಪೇಟೆ), ಚಂಗಡಹಳ್ಳಿ ಮಠ (ಶನಿವಾರಸಂತೆ), ಅಬ್ಬಿಮಠ (ಯೆಡೂರು, ಸೋಮವಾರಪೇಟೆ ತಾ||), ವಿರಕ್ತಮಠ (ಸೋಮವಾರಪೇಟೆ), ಚೇಳೂರು ಮಠ (ಸೋಮವಾರಪೇಟೆ), ಮಾದಾಪುರದ ಮಠ (ಮಾದಾಪುರ), ತೊರೇನೂರು ಮಠ (ಸುಂಟಿಕೊಪ್ಪ), ವೀರರಾಜಪೇಟೆ ದೊಡ್ಡ ಮಠ, ವೀರರಾಜಪೇಟೆ ಚಿಕ್ಕಮಠ, ಆರಮೇರಿ ಮಠ, (ಎಲ್ಲಾ ವೀರರಾಜಪೇಟೆ) ಮುಪ್ಪಿನಮಠ (ಮುಡಕಬೀಡು), ಗುತ್ತಿಮಠ (ಸುಂಟಿಕೊಪ್ಪ), ಹರಗದ ಮಠ (ಹರಗ) (ಇವೆಲ್ಲ ವಿರಕ್ತ ಮಠಗಳು).

ಹೆಬ್ಬುಲಸೆ ಮಠ (ಶನಿವಾರಸಂತೆ), ಕಿಬ್ಬೆಟ್ಟದ ಮಠ (ಸೋಮವಾರಪೇಟೆ), ಚೌಡ್ಲು ನಿರಂಜಯ್ಯನ ಮಠ (ಸೋಮವಾರಪೇಟೆ), ತಲ್ತರೆಮಠ (ಸೋಮವಾರಪೇಟೆ), ಗುಡಗೂರು ಮಠ (ಸೋಮವಾರಪೇಟೆ), ಐಗೂರು ಮಠ (ಸೋಮವಾರಪೇಟೆ), ಕೆಲಕೋಟೆಮಠ (ಮಾದಾಪುರ), ತಾಂಮ್ರುಳ್ಳಿಮಠ (ಮಾದಾಪುರ), ಚಿಕ್ಕರ್ಜಿಮಠ, (ಮಾದಾಪುರ), ಉದ್ದೀಬಾಣ ಮಠ (ಸುಂಟಿಕೊಪ್ಪ), ಬೈಚನಹಳ್ಳಿಮಠ (ಸುಂಟಿಕೊಪ್ಪ), ಕಲ್ಲೂರುಮಠ (ಸುಂಟಿಕೊಪ್ಪ), ರಂಗಸಮುದ್ರಮಠ (ಕುಶಾಲನಗರ), ಓಣಿಪುರದ ಮಠ (ಮಡಿಕೇರಿ), ನೂರಂಬಾಡಿ ಮಠ (ನಾಪೋಕ್ಲು), ಕಾವೇರಿ ಎಡದ (ಭಾಗಮಂಡಲ), ಕುಳ್ಳಂಗೂಡು ಮಠ (ಅಮ್ಮತ್ತಿ), ಜಪದಕಟ್ಟೆ ಮಠ (ಮಾಯಮುಡಿ), ಬೇಮತ್ತಿಮಠ (ಮಾಯಮುಡಿ), ಇವೆಲ್ಲ ಗೃಹಸ್ಥ ಮಠಗಳು.

ಊರುಮಠ (ಕೊಡ್ಲಿಪೇಟೆ), ಕಿರುಕೊಡ್ಲಿಮಠ (ಕೊಡ್ಲಿಪೇಟೆ), ಚಿಲುಮೆಮಠ (ಬ್ಯಾಡಗೊಟ್ಟ), ಮುದ್ದಿನ ಕಟ್ಟೆ ಮಠ (ಶನಿವಾರಸಂತೆ), ಹೆಗ್ಗಡಹಳ್ಳಿ ಮಠ (ಶನಿವಾರಸಂತೆ), ಶಿಡಗಳಲೆ ಮಠ (ಶನಿವಾರಸಂತೆ), ಮಸಗೋಡುಮಠ (ಸೋಮವಾರಪೇಟೆ), ನೆಗಳ್ಳಿಮಠ (ಸೋಮವಾರಪೇಟೆ), ಬರಗಳಲೆ ಮಠ(ಸೋಮವಾರಪೇಟೆ), ಯಯಕನೂರುಮಠ (ಸೋಮವಾರಪೇಟೆ), ಶೇರಂಗಾಲಮಠ(ತೇನೂರು), ರಾಮಸ್ವಾಮಿ ಕಣಿವೆಮಠ (ಸುಂಟಿಕೊಪ್ಪ), ಅಳಿವಾರಮಠ (ಸುಂಟಿಕೊಪ್ಪ), ಕೊಡ್ಲೂರು ಮಠ (ಸುಂಟಿಕೊಪ್ಪ), ಮಾದಾಪಟ್ಟಣ ಮಠ (ಕುಶಾಲನಗರ), ಗುತ್ತಿಮಠ (ಕುಶಾಲನಗರ), ಶಿವಾನಂದಸ್ವಾಮಿ ಮಠ (ನಂಜರಾಯಪಟ್ಟಣ), ಚಡಗಾನಳ್ಳಿ ಮಠ, ಹಾಲೇರಿ ಮಠ, ಸಿದ್ಧಾಪುರ ಮಠ (ಮಡಿಕೇರಿ), ಕಾರ್ಕಾನೆ ಮಠ (ಮಡಿಕೇರಿ), ಮದೇನಾಡು ಮಠ (ಮಡಿಕೇರಿ) ಸಿದ್ಧಾಪುರಮಠ (ಸಿದ್ಧಾಪುರ), ಕನ್ನಡಮಠ (ಅಮ್ಮತ್ತಿ), ಕುಟ್ಟದ ಮಠ (ಕುಟ್ಟ), ಚಿನಿವಾರ ಕೋಟೆಮಠ (ತಿತಿಮತಿ), ಎಡಮನಮಠ (ಗೋಣಿಕೊಪ್ಪಲು), ಚಿಲುಮೆ ಮಠ (ವೀರರಾಜಪೇಟೆ), ತಣ್ಣೀರು ಹಳ್ಳದ ಮಠ (ಸೋಮವಾರಪೇಟೆ), ಇವೆಲ್ಲ ಮಠಗಳು ಪರಾಧೀನವಾಗಿವೆ.

ಹಾರಂಗಿಮಠ (ಸೋಮವಾರಪೇಟೆ) ಮತ್ತು ಕಮರಳ್ಳಿಮಠ (ಸೋಮವಾರಪೇಟೆ), ಇವೆರಡೂ ಮುಳುಗಡೆಯಾಗಿವೆ. (ಈ ವೀರಶೈವ ಮಠಗಳ ಪಟ್ಟಿಯನ್ನು ಸೋಮವಾರಪೇಟೆಯ ವಿರಕ್ತಮಠದವರು ಒದಗಿಸಿದ್ದಾರೆ).

ಆಧುನಿಕ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಚಳುವಳಿಯು ಜಿಲ್ಲೆಯಲ್ಲಿ ಹೆಚ್ಚಾಗಿಬೀಸದಿದ್ದರೂ ಕೂಡ ರಾಮಕೃಷ್ಣಾಶ್ರಮ, ಸಿದ್ಧಾರೂಢಸ್ವಾಮಿಗಳು, ಸತ್ಯಸಾಯಿ ಸಂಸ್ಥೆ ಹಾಗೂ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯಗಳು ಜಿಲ್ಲೆಯಲ್ಲಿ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕಾರ್ಯಪ್ರವೃತ್ತವಾಗಿವೆ.

### ಶ್ರೀರಾಮಕೃಷ್ಣ ಶಾರದಾಶ್ರಮ

ಶ್ರೀರಾಮಕೃಷ್ಣ ಶಾರದಾಶ್ರಮವು ಪೊನ್ನಂಪೇಟೆಯಲ್ಲಿ ಶ್ರೀ ಸ್ವಾಮಿ ನಿರ್ಮಲಾನಂದಜೀಯವರಿಂದ 1927ನೇ ಇಸವಿ ಫೆಬ್ರವರಿ 7 ರಂದು ಪ್ರಾರಂಭವಾಯಿತು. ಹಿನ್ನೆಲೆಯಾಗಿ ಅಚಿಯಂಡ ಕಾಳಮ್ಮಯ್ಯ, ಕೆ. ಜಿ. ಚಂಗಪ್ಪ ಮತ್ತು

ಡಾ. ಎ. ಎಂ. ಮುತ್ತಪ್ಪ—ಇವರುಗಳು ಆಶ್ರಮದ ಸ್ಥಾಪನೆಗೆ ಕಾರಣರಾದ ಅಗ್ರಗಣ್ಯರು, ಶ್ರೀ ಕಾಳಮ್ಮಯ್ಯನವರು ತಮ್ಮ ಮೂರು ಎಕರೆ ಭೂಮಿಯನ್ನು ಆಶ್ರಮ ಸ್ಥಾಪನೆಗೆ ದಾನವಾಗಿ ಕೊಟ್ಟು, ಮುಂದೆ ಕಾಶೀಕ್ಷೇತ್ರಕ್ಕೆ ತೆರಳಿ ಸನ್ಯಾಸಾಶ್ರಮ ಸ್ವೀಕರಿಸಿ, ಸ್ವಾಮಿ ಶುಭೋದಯಾನಂದ ಎಂಬ ಹೆಸರನ್ನು ಸ್ವೀಕರಿಸಿದರು. ಸ್ವಾಮಿ ನಿರ್ಮಲಾನಂದಜಿಯವರ ಶಿಷ್ಯರಾದ ಕೊಡಗಿನವರೇ ಆದ ಸ್ವಾಮಿ ಶಂಭವಾನಂದಜಿಯವರು ಮೊದಲನೇ ಅಧ್ಯಕ್ಷರಾಗಿ ನೇಮಕಗೊಂಡರು. ಆಶ್ರಮವು ವೀರರಾಜಪೇಟೆಯಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ನಂತರ ಅದನ್ನು ಒಂದು ವಿಶ್ವಸ್ಥಸಂಸ್ಥೆಗೆ ವಹಿಸಿ ಕೊಟ್ಟಿತು. ಸ್ವಾಮೀಜೀಯವರು ಜಿಲ್ಲೆಯಲ್ಲಿ ಸಂಚಾರ ಮಾಡಿ ಮಲೇರಿಯಾ ನಿವಾರಣೆಗೆ ಕ್ರಾಂತಿಕಾರಕ ಸುಧಾರಣೆಗಳನ್ನು ತಂದರು. ಜೇನುಕೃಷಿಯಲ್ಲಿ ಆಸಕ್ತಿಯಿದ್ದ ಇವರು ಆಶ್ರಮದಲ್ಲಿ ಆಧುನಿಕ ರೀತಿಯಲ್ಲಿ ಜೇನುಕೃಷಿ ಪ್ರಾಯೋಗಿಕ ಕೇಂದ್ರವನ್ನು ಆರಂಭಿಸಿದರು. ವೀರರಾಜಪೇಟೆಯಲ್ಲಿ 1936ರಲ್ಲಿ ಜೇನು ಮತ್ತು ಮೇಣ ಉತ್ಪಾದಕರ ಸಂಘವನ್ನು ಸ್ಥಾಪಿಸಿದರು. ನಂತರ 1940ರಲ್ಲಿ ಸ್ವಾಮಿ ಪ್ರಣವೇಶಾನಂದರು ಆಶ್ರಮದ ಅಧ್ಯಕ್ಷರಾದರು. ಇವರು 1942ರಲ್ಲಿ ಒಂದು ಹೋಮಿಯೋಪತಿ ಚಿಕಿತ್ಸಾಲಯವನ್ನು ಸ್ಥಾಪಿಸಿದರು. ಸ್ವಾಮಿ ವಿಶ್ವಂಭರಾನಂದಜಿಯವರು 1943ರಲ್ಲಿ ಅಧ್ಯಕ್ಷರಾಗಿ ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರ ದಿವ್ಯಸಂದೇಶಗಳನ್ನು ಸಾರಿದರು. ಇವರು 1947ರಲ್ಲಿ ಒಂದು ಅಲೋಪತಿ ಚಿಕಿತ್ಸಾಲಯವನ್ನು ಆರಂಭಿಸಿದರು. ಮುಂದೆ ಇದು ಒಳ ಮತ್ತು ಹೊರ ರೋಗಿಗಳ ಆಸ್ಪತ್ರೆಯಾಗಿ 1958ರಲ್ಲಿ ಶ್ರೀರಾಮಕೃಷ್ಣ ಸೇವಾಶ್ರಮ ಆಸ್ಪತ್ರೆಯಾಯಿತು. ಅದೇ ವರ್ಷ ಆಶ್ರಮದಲ್ಲಿ ಒಂದು ಗ್ರಂಥಭಂಡಾರವೂ ಪ್ರಾರಂಭವಾಯಿತು. ಮುಂದೆ ಆಶ್ರಮಕ್ಕೆ ಪಾಕಶಾಲೆ, ಸಿಬ್ಬಂದಿಗಳ ವಸತಿಗೃಹ ಮೊದಲಾದವುಗಳು ಒಂದೊಂದಾಗಿ ಸೇರಿಕೊಂಡವು. ಸ್ವಾಮಿ ಶ್ರೀದಾನಂದಜಿಯವರು 1970ರಲ್ಲೂ, ಸ್ವಾಮಿ ವಿಮೋಹಾನಂದಜಿಯವರು 1976ರಲ್ಲೂ ಅಧ್ಯಕ್ಷರಾದರು. ಈಗ ಸುಮಾರು ಒಂದೂವರೆ ವರ್ಷಗಳಿಂದ ಶ್ರೀ ಶಕ್ತಾನಂದಸ್ವಾಮೀಜಿಯವರು ಅಧ್ಯಕ್ಷರಾಗಿರುತ್ತಾರೆ. ಆಶ್ರಮದಲ್ಲಿ ನಿಂತುಹೋಗಿದ್ದ ವಿದ್ಯಾರ್ಥಿಗಳ ವಸತಿ ವ್ಯವಸ್ಥೆಯನ್ನು ಪುನಃ ಪ್ರಾರಂಭಿಸಲಾಗಿದೆ.

**ಕಾವೇರಿ ಆಶ್ರಮ, ವೀರರಾಜಪೇಟೆ**

ಶ್ರೀ ಸದ್ಗುರು ಅಪ್ಪಯ್ಯನವರು ಸರ್ಕಾರಿ ಹುದ್ದೆಯಿಂದ 1939ರಲ್ಲಿ ನಿವೃತ್ತಿ ಹೊಂದಿ, ಅದೇ ವರ್ಷ ಏಪ್ರಿಲ್ ತಿಂಗಳಿನಲ್ಲಿ ಶ್ರೀರಾಮನವಮಿಯಂದು ಶ್ರೀ ಕಾವೇರಿ ಆಶ್ರಮವನ್ನು ವೀರರಾಜಪೇಟೆಯಲ್ಲಿ ಉದ್ಘಾಟಿಸಿದರು. ಆಗ ಇದನ್ನು ಶ್ರೀ ಕಾವೇರಿ ಭಕ್ತ ಜನ ಸಂಘವೆಂದು ಕರೆದರು. ಕಟ್ಟಡದ ಶಂಕುಸ್ಥಾಪನೆಯು 1940ರಲ್ಲಿ ನೆರವೇರಿಸಲ್ಪಟ್ಟಿತು. ಮುಂದೆ ಒಂದು ವರ್ಷದಲ್ಲಿ ಆಶ್ರಮದ ಕಟ್ಟಡವು ಪೂರ್ಣವಾಯಿತು. ಶ್ರೀ ಅಪ್ಪಯ್ಯಸ್ವಾಮಿಗಳು ಕುಶಾಲನಗರದ ಹತ್ತಿರ, ಹಾರಂಗಿ ಹೊಳೆಯ ಸಮೀಪದಲ್ಲಿ ಶ್ರೀಕೃಷ್ಣಾಶ್ರಮವೆಂಬ ಇನ್ನೊಂದು ಆಶ್ರಮವನ್ನು ಸ್ಥಾಪಿಸಿದರು. ಈ ಆಶ್ರಮದ ಸ್ಥಾಪನೆಗೆ ಶ್ರೀಮತಿ ಐಚೆಟ್ಟಿರ ಸೀತಮ್ಮನವರು ಉದಾರವಾಗಿ ಧನ ಸಹಾಯ ಮಾಡಿದರು. ವೀರರಾಜಪೇಟೆಯಲ್ಲಿ 1943ರಲ್ಲಿ ವಿದ್ಯಾರ್ಥಿ ಭವನವೊಂದು ತೆರೆಯಲ್ಪಟ್ಟಿತು. ಈಗ ಈ ಆಶ್ರಮದ ಶಾಖಾಮಠವೊಂದು ತಲಕಾವೇರಿಯಲ್ಲಿದೆ. ಆಶ್ರಮವು, ಉತ್ಸವಗಳು, ಮಹಾತ್ಮರ ಜನ್ಮೋತ್ಸವಗಳು, ಪುರಾಣ ಪ್ರವಚನ, ಭಜನೆ, ಹರಿಕಥೆ ಮೊದಲಾದ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ವೀರರಾಜಪೇಟೆಯ ಆಶ್ರಮದಲ್ಲಿ ವಿದ್ಯಾರ್ಥಿಗಳನ್ನೊಳಗೊಂಡಂತೆ 100 ಜನ ಇದ್ದಾರೆ. ಕುಶಾಲನಗರದ ಬಳಿಯಿರುವ ಶ್ರೀಕೃಷ್ಣಾಶ್ರಮವು ಒಂದು ಪ್ರೌಢಶಾಲೆಯನ್ನು ನಡೆಸುತ್ತಿದೆ.

**ಪ್ರಶಾಂತ ನಿಲಯ**

ಪ್ರಶಾಂತ ನಿಲಯವು ಪೊನ್ನಂಪೇಟೆಯ ಸಮೀಪ ಶ್ರೀ ಸದ್ಗುರು ಸಾಯಿಶಂಕರರಿಂದ 1971ರಲ್ಲಿ ಸ್ಥಾಪಿತವಾಯಿತು. ಶ್ರೀ ಸಾಯಿಶಂಕರರ ಮೊದಲ ಹೆಸರು ಎ. ಕೆ. ಕಾರಿಯಪ್ಪ, ಇವರು ಕೊಡಗಿನಲ್ಲಿ ಕ್ರಿ.ಶ. 1935 ರಲ್ಲಿ ಹುಟ್ಟಿ, ಎಸ್.ಎಸ್.ಎಲ್.ಸಿ.ಯವರೆವಿಗೂ ಓದಿ, 1962ರಲ್ಲಿ ವಿವಾಹವಾಗಿ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಇವರದು ಮೊದಲಿನಿಂದಲೂ ಸಾತ್ವಿಕ ಪ್ರವೃತ್ತಿ. 18–9–1967 ರಿಂದ ಇವರು ಸಾಯಿ ಶಂಕರ ಎಂಬ ಹೆಸರನ್ನು ಪಡೆದು, ಮುಂದೆ 1971 ರಲ್ಲಿ ಪ್ರಶಾಂತ ನಿಲಯವನ್ನು ಸ್ಥಾಪಿಸಿದರು. ಸದ್ಗುರು ಸಾಯಿಶಂಕರ ಟ್ರಸ್ಟ್ 1977ರಲ್ಲಿ ನೋಂದಣಿಯಾಗಿ ಪ್ರಶಾಂತಿ ನಿಲಯದ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿದೆ. ಇದೊಂದು ಜಾತ್ಯಾತೀತ ಸಂಸ್ಥೆಯಾಗಿದ್ದು ಸನಾತನ ತತ್ವ ಪ್ರಸಾರ, ಯೋಗ ತರಬೇತಿ, ದಲಿತರ ಉದ್ಧಾರ, ಸಮಾಜ ಸೇವೆ, ಗ್ರಾಮೀಣ ಜನರಿಗೆ ಶಿಕ್ಷಣ, ವೈದ್ಯಕೀಯ ಸೇವೆ ಮೊದಲಾದ ಹಲವಾರು ಕಾರ್ಯಕ್ರಮಗಳನ್ನು ಹೊಂದಿವೆ. ಸಾಯಿ ಶಂಕರರು 1986ರಲ್ಲಿ ಸಮಾಧಿ ಹೊಂದಿದ ಮೇಲೆ ನಾಲ್ಕೇರಿಗ್ರಾಮದ ಪಿ.ಜಿ. ಕುಟ್ಟಪ್ಪನವರು ಗುರುಸ್ವಾಮಿಯಾಗಿ ನಿಲಯದ ಎಲ್ಲಾ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ಇವರು ಕೃಷಿಯಲ್ಲಿ ಎಮ್. ಎಸ್. ಸಿ. ಪದವೀಧರರಾಗಿದ್ದು, ತಮ್ಮ

ಉದ್ಯೋಗವನ್ನು ಬಿಟ್ಟು ಸಾಯಿಶಂಕರರ ಶಿಷ್ಯರಾಗಿ 1971 ರಿಂದಲೂ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದಾರೆ. ನಿಲಯದಲ್ಲಿ ಈಗ 127 ಸೇವಾ ಕಾರ್ಯಕರ್ತರಿದ್ದು, ಅವರ ಮಕ್ಕಳ ಶಿಕ್ಷಣ ಜವಾಬ್ದಾರಿಯನ್ನು ನಿಲಯವೇ ಹೊತ್ತಿದೆ. ಪ್ರತಿನಿತ್ಯವೂ ಬೆಳಗಿನ ಜಾವ ನಾಲ್ಕುವರೆ ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆವಿಗೂ ಸುಪ್ರಭಾತದಿಂದ ಮೊದಲುಗೊಂಡು ಭಜನೆ, ಅಭಿಷೇಕ ಮೊದಲಾದ ಕಾರ್ಯಕ್ರಮಗಳು ನಿಲಯದಲ್ಲಿ ನಡೆಯುತ್ತವೆ. ಪ್ರತೀವರ್ಷವೂ ಶಿವರಾತ್ರಿ, ಕ್ರಿಸ್ಮಸ್, ಸಾಯಿಶಂಕರರ ಜನ್ಮದಿನೋತ್ಸವ, ಪುಣ್ಯತಿಥಿ ಮೊದಲಾದವನ್ನು ಆಚರಿಸಲಾಗುತ್ತದೆ. ಸಮಾಜ ಸೇವೆಯಲ್ಲಿ ಅನೇಕ ಕಾರ್ಯಕ್ರಮಗಳಿದ್ದು ಶ್ರೀಮಂಗಲ, ಟಿ. ಶೆಟ್ಟಿಗೇರಿ, ಪಿರಿಯಾಪಟ್ಟಣ ತಾಲೂಕಿನ ಕೊಕ್ರೆಹೊಸಳ್ಳಿ, ಅಳಲೂರು, ಮುದ್ದನಹಳ್ಳಿ, ಉತ್ತೇನಹಳ್ಳಿ, ಭದ್ರಗೋಳ ಮೊದಲಾದ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನ ಜನರಿಗೆ ಊಟ, ಬಟ್ಟೆ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿರುವುದಲ್ಲದೆ ದೈನಂದಿನ ಶುಚಿತ್ವ ಆಧ್ಯಾತ್ಮಿಕತೆ, ಮೊದಲಾದವುಗಳಲ್ಲೂ ಕೂಡ ಜಾಗೃತಿಯನ್ನು ನಿಲಯದ ಕಾರ್ಯಕರ್ತರು ಉಂಟು ಮಾಡುತ್ತಿದ್ದಾರೆ. ಮೂವತ್ತು ಹಾಸಿಗೆಗಳುಳ್ಳ ಒಂದು ಆಸ್ಪತ್ರೆಯನ್ನು ನಿಲಯದ ಆವರಣದಲ್ಲಿ ತೆರೆಯಲಾಗಿದೆ. ನಿಲಯದೊಳಗೆ ಪ್ರಾರ್ಥನಾಮಂದಿರ, ಗೋಶಾಲೆ, ಪುಸ್ತಕ ಭಂಡಾರ, ಗಣೇಶ ಮತ್ತು ವಿಷ್ಣುವಿನ ಗುಡಿಗಳಿರುವುದರ ಜೊತೆಗೆ ಕಾರ್ಯಕರ್ತರ ಕುಟುಂಬಗಳಿಗೆ ವಸತಿ ಗೃಹಗಳಿವೆ. ನಿಲಯದ ಶಾಖಾ ಕೇಂದ್ರಗಳು ಹಾಲೆಂಡ್, ಬೆಲ್ಜಿಯಂ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿವೆ. ದೇಶ ವಿದೇಶಗಳಿಂದ ಬರುವ ಕಾಣಿಕೆಯ ಹಣವೇ ಪ್ರಧಾನವಾದ ಆದಾಯ.

ಜಿಲ್ಲೆಯ ಇತರ ಆಧ್ಯಾತ್ಮಿಕ ಸಂಸ್ಥೆಗಳಲ್ಲಿ ಮಡಿಕೇರಿಯಲ್ಲಿರುವ ವೇದಾಂತ ಸಂಘವೂ ಒಂದು. ಇದು 1917ರಲ್ಲಿ ಸ್ಥಾಪಿತವಾಗಿದ್ದು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದೆ. ಸಿದ್ಧಾರೂಢಶ್ರಮವು ಜಿಲ್ಲೆಯ ಚೇರಂಬಾಣೆ ಹಾಗೂ ಟಿ.ಶೆಟ್ಟಿಗೇರಿಯಲ್ಲಿ ಎರಡು ಶಾಖೆಗಳನ್ನು ಸ್ಥಾಪಿಸಿದೆ. ಹೈಸೊಡ್ಲೂರಿನಲ್ಲಿ ಶಿರಡಿ ಸಾಯಿ ಬಾಬಾರವರ ಸಂಸ್ಥೆಯೊಂದಿದೆ. ಪೊನ್ನಂಪೇಟೆಯಲ್ಲಿ ಶ್ರೀ ಸಾಯಿ ಶಂಕರಾಶ್ರಮವು ಫಣಿಯವರ ಪುರೋಗಮನದ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದೆ. ವೀರರಾಜಪೇಟೆ, ಮಡಿಕೇರಿ, ಗೋಣಿಕೊಪ್ಪಲು, ಕುಶಾಲನಗರ, ಸೋಮವಾರಪೇಟೆಗಳಲ್ಲಿ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದ ಕೇಂದ್ರಗಳಿವೆ. ಈ ಕೇಂದ್ರಗಳಲ್ಲಿ ಸುಮಾರು 200 ಜನರು ಭಾಗವಹಿಸುತ್ತಾರೆ. ಮೊದಲನೆ ಕೇಂದ್ರವು ಗೋಣಿಕೊಪ್ಪಲಿನಲ್ಲಿ 1976 ರಲ್ಲಿ ಪ್ರಾರಂಭವಾಯಿತು. ಸ್ನೇಹಮಿಲನ, ಪ್ರದರ್ಶಿನಿ, ಭಾಷಣಗಳ ಮೂಲಕ ಆಧ್ಯಾತ್ಮಿಕತೆಯನ್ನು ಜನರಲ್ಲಿ ಮೂಡಿಸುವ ಕಾರ್ಯಕ್ರಮವನ್ನು ಈ ಸಂಸ್ಥೆಯು ಹೊಂದಿದೆ. ಅಲ್ಲಲ್ಲಿ ಅಯ್ಯಪ್ಪಸ್ವಾಮಿ ಭಜನಾ ಕೇಂದ್ರಗಳಿವೆ. ತಲಕಾವೇರಿಯಲ್ಲಿ ಬೆಂಗಳೂರಿನ ಕೆಂಚೇನಹಳ್ಳಿಯ ಕೈಲಾಸಾಶ್ರಮದ ಒಂದು ಶಾಖೆ ಇದೆ. ಭಾಗಮಂಡಲದಲ್ಲಿ ಗೌಡ ಸಾರಸ್ವತರ ಕಾಶೀ ಮಠದ ಒಂದು ಶಾಖೆ ಇದೆ.

### ಇಸ್ಲಾಂ

ಇಸ್ಲಾಂ ಧರ್ಮವು ಹೈದರ್ಅಲಿ, ಟಿಪ್ಪುಸುಲ್ತಾನರ ಕಾಲದಲ್ಲಿ ಕೊಡಗಿಗೆ ಹೆಚ್ಚಾಗಿ ಹಬ್ಬಿತು. ಮೂರನೇಯ ಮೈಸೂರು ಯುದ್ಧದ ಸಮಯದಲ್ಲಿ ಟಿಪ್ಪುಸುಲ್ತಾನನು ಸಾವಿರಾರು ಕೊಡವರನ್ನು ಶ್ರೀರಂಗಪಟ್ಟಣಕ್ಕೆ ಬಂಧಿಸಿಕೊಂಡು ಹೋಗಿ ಮತಾಂತರಗೊಳಿಸಿದ್ದ. ಈ ಮುಸಲ್ಮಾನರಲ್ಲಿ ಕೆಲವರು ತಮ್ಮ ಸ್ವಂತ ಸ್ಥಳಗಳಿಗೆ ಓಡಿ ಬಂದರು. ಅಂತಹವರಿಗೆ ವೀರರಾಜೇಂದ್ರನು ಪಾಳುಬಿದ್ದಿದ್ದ ಭೂಮಿಯನ್ನು ಕೊಟ್ಟು ಗುಂಪುಗುಂಪಾಗಿ ನೆಲೆಗೊಳಿಸಿದನು. ಈ ರೀತಿ ಸುಮಾರು 12 ಸಾವಿರ ಜನರು ಹಿಂದಿರುಗಿದರೆಂದು 'ರಾಜೇಂದ್ರನಾಮೆ' ಹೇಳುತ್ತದೆ. ಕೊಡಗಿನಲ್ಲಿ ಇವರು ನೆಲೆಸಿದ ಮೇಲೆ ತಮ್ಮ ಮತಾಚರಣೆಗೆ ಮೊದಲೇ ಸಂಪರ್ಕ ಹೊಂದಿದ್ದ ಮಲಬಾರಿನ ಮಾಪಿಳ್ಳೆಗಳ ಸಹಾಯ ಪಡೆದರು. ಇವರನ್ನು 'ಜಮ್ಮಾಮಾಪಿಳ್ಳೆ'ಗಳೆಂದು ಕೊಡಗಿನ ಇತರ ಜನರು ಕರೆಯತೊಡಗಿದರು. ಇವರು ಹೆಚ್ಚಾಗಿ ನಾಲ್ಕುನಾಡಿನ ನೆಲಜಿ, ಎಮ್ಮೆಮಾಡು, ಕುಂಜಿಲ, ಕೊಳಕೇರಿ, ಕಡಿಯತ್ನಾಡು, ಬೆಪ್ಪುನಾಡು, ನರಿಯಂದಡ, ಕೊಟ್ಟೋಳಿ, ಮೈತಾಡಿಗಳಲ್ಲಿಯೂ, ಎಡೆನಾಲ್ಕುನಾಡಿನ ಐಮಂಗಲ, ಹಾಲುಗುಂದಗಳಲ್ಲಿಯೂ ಅಮ್ಮತ್ತಿ ನಾಡಿನ ನಲವತ್ತೊಕ್ಲು ಗ್ರಾಮದಲ್ಲಿಯೂ, ಶ್ರೀಮಂಗಲನಾಡಿನ ಬೇಗೂರು ಗ್ರಾಮದಲ್ಲಿಯೂ ಕಂಡುಬರುತ್ತಾರೆ. ಇವರು ಕೊಡವರೇ ಆಗಿದ್ದರೆಂಬುದಕ್ಕೆ ನಿದರ್ಶನವಾಗಿ ಈಗಲೂ ಕೂಡ ಕೊಡವರ ಮನೆತನದ ಹೆಸರುಗಳನ್ನೇ ಮುಂದುವರೆಸಿಕೊಂಡು ಬಂದಿದ್ದಾರೆ.

ಇವರ ಕೆಲವು ಮನೆತನಗಳ ಹೆಸರುಗಳು ಈ ರೀತಿ ಇವೆ. ಚೆಂಬಾರಂಡ, ಚಕ್ಕಾರ, ಸಣ್ಣ ಚೆಂಬಾರಂಡ, ಕಾಳೆರ, ಕುಂಡಂಡ, ಚೆರುಮಣಿ, ಕರಂಡ, ಕುವೆಲರ, ಪುದಿಯಂಡ, ಇತ್ಯಾದಿ. ಈ ಜಮ್ಮಾ ಮಾಪಿಳ್ಳೆಗಳು ಕೊಡವರಂತೆಯೇ ಸಾಮಾಜಿಕ ಜೀವನ ನಡೆಸುತ್ತಿದ್ದಾರೆ.* ಕೊಡವರೂ ಕೂಡ

* ಕೃಷ್ಣಯ್ಯ ಡಿ. ಎನ್, ಕೊಡಗಿನ ಇತಿಹಾಸ, ಪು. 228-31

ಅವರ ಪಳ್ಳಿಗಳನ್ನು (ಮಸೀದಿಗಳನ್ನು) ಕಟ್ಟಲು ನೆರವಾಗಿದ್ದರೆಂದು ಡಿ. ಎನ್. ಕೃಷ್ಣಯ್ಯನವರು ತಿಳಿಸುತ್ತಾರೆ. ಹುತ್ರಿ ಹಬ್ಬದ ಸಮಯದಲ್ಲಿ ಜಮ್ಮಾಮಾಪಿಳ್ಳೆಗಳೂ ತಾವೂ ಕುಪ್ಪಸ ಧರಿಸಿ ವಾದ್ಯದುಡಿಗಳ ಸಹಿತ ನಾಡುಮಂದುಗಳಿಗೆ ಬರುತ್ತಿದ್ದರೆಂದೂ ಆಗ ಕೊಡವರು ಅವರಿಗೆ ಮರ್ಯಾದೆ ಮಾಡುತ್ತಿದ್ದರೆಂದೂ, ಈ ಸಂಪ್ರದಾಯವು ನಾಲ್ಕುನಾಡು ಮಂದುಗಳಲ್ಲಿ, ಕಡಿಯತ್ನಾಡಿನ ಬೇಲಿಯಾಣಿ ಮಂದು ಮತ್ತು ಬೆಪ್ಪುನಾಡಿನ ನಾಡುಮಂದುಗಳಲ್ಲಿ ಈಗ್ಗೆ ಸುಮಾರು 75–80 ವರ್ಷಗಳ ಹಿಂದೆ ಕಂಡುಬರುತ್ತಿತ್ತೆಂದು, ಈಗ ಸಂಪೂರ್ಣವಾಗಿ ನಿಂತು ಹೋಗಿದೆಯೆಂದೂ ಡಿ. ಎನ್. ಕೃಷ್ಣಯ್ಯನವರು ತಿಳಿಸುತ್ತಾರೆ. ಜಮ್ಮಾಮಾಪಿಳ್ಳೆಗಳ ವಿವಾಹದಲ್ಲಿ ಸಾಮಾಜಿಕ ಪದ್ಧತಿಗಳು ಕೊಡವರ ಪದ್ಧತಿಗಳನ್ನು ಹೋಲುತ್ತವೆಂದೂ, ಈ ಶತಮಾನದ ಪ್ರಾರಂಭದವರೆಗೆ ಕೊಡವರಂತೆ ಕುಪ್ಪಸಗಳನ್ನು ತೊಡುತ್ತಿದ್ದರೆಂದೂ ಅವರು ತಿಳಿಸುತ್ತಾರೆ.

ಮುಸಲ್ಮಾನರಲ್ಲಿ ಇನ್ನೊಂದು ವರ್ಗವೆಂದರೆ ವೀರರಾಜಪೇಟೆಗೆ ಕಣ್ಣಾನೂರಿನಿಂದ ಬಂದು ನೆಲೆಸಿದ ಮುಸಲ್ಮಾನರು. ಇವರು ಮೂಲತಃ ಬಂಗಾಳಿಗಳೆಂದೂ, ಪ್ಲಾಸಿ ಕದನದ ನಂತರ ಹಲವರು ದಕ್ಷಿಣದ ಕಡೆಗೆ ಬಂದು ಅವರಲ್ಲಿ ಕೆಲವರು ಪಶ್ಚಿಮ ಕರಾವಳಿಯ ಕೊಚ್ಚಿ, ಕಣ್ಣಾನೂರಿಗೆ ಬಂದಿದ್ದು, ವೀರರಾಜಪೇಟೆ ಕಟ್ಟಿದ (1792) ನಂತರ ಅವರಲ್ಲಿ ಕೆಲವರು ಕಣ್ಣಾನೂರಿನಿಂದ ವೀರರಾಜಪೇಟೆಗೆ ಬಂದು ಈಗಿನ ಬಂಗಾಳೀ ಬೀದಿಯಿರುವ ಕಡೆ ಕಾಡು ಕಡಿದು ಮನೆಗಳನ್ನು ಕಟ್ಟಿಕೊಂಡು ನೆಲೆಸಿದರೆಂದೂ ಹೇಳಿಕೆಯಿದೆ.* ಇವರಲ್ಲದೆ ಉರ್ದು ಮಾತನಾಡುವ ದಖಣಿ ಮುಸಲ್ಮಾನರೂ, ಮಲೆಯಾಳೀ ಮಾತನಾಡುವ ಕೇರಳದ ಮಾಪಿಳ್ಳೆಗಳೂ, ತಮಿಳು ಮಾತನಾಡುವ ಲಬ್ಬೆಗಳು, ಕೊಂಕಣಿ ಮಾತನಾಡುವ ಉತ್ತರ ಕನ್ನಡದ ನವಾಯತರೂ, ತುಳು, ಕನ್ನಡ ಮಲೆಯಾಳ ಮಿಶ್ರ (ಬ್ಯಾರಿ) ಭಾಷೆಯನ್ನು ಮಾತನಾಡುವ ದಕ್ಷಿಣಕನ್ನಡದ ಬ್ಯಾರಿಗಳೂ ಜಿಲ್ಲೆಯಲ್ಲಿದ್ದಾರೆ. ದಖಣಿ ಮುಸಲ್ಮಾನರು ಮುಖ್ಯವಾಗಿ ಮಡಿಕೇರಿ, ವೀರರಾಜಪೇಟೆಗಳಲ್ಲಿ ಇದ್ದಾರೆ. ಮಾಪಿಳ್ಳೆಗಳು ವೀರರಾಜಪೇಟೆ ತಾಲೂಕಿನಲ್ಲಿ ಹೆಚ್ಚಾಗಿ ಇದ್ದಾರೆ. ದಖಣಿಗಳು ಹನಫಿಪಂಥದವರಾದರೆ ಮಾಪಿಳ್ಳೆಗಳೂ ನವಾಯತರೂ ಷಾಫಿ ಪಂಥದವರು. ಜಿಲ್ಲೆಯಲ್ಲಿ 1981 ಜನಗಣತಿಯಂತೆ 61,649 ಜನ ಮುಸಲ್ಮಾನರಿದ್ದರು. ಇವರ ಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ. 13.35 ರಷ್ಟಿತ್ತು. ಇವರಲ್ಲಿ 45,810 ಜನರು ಗ್ರಾಮಾಂತರ ಪ್ರದೇಶಗಳಲ್ಲೂ, 15,839 ಮಂದಿ ನಗರ ಪ್ರದೇಶಗಳಲ್ಲೂ, ಮಡಿಕೇರಿ ತಾ|| 18,378 ಮಂದಿ, ಸೋಮವಾರಪೇಟೆತಾ|| 17,002 ಮಂದಿ ಮತ್ತು ವೀರರಾಜಪೇಟೆ ತಾ|| 26,269 ಮಂದಿ ಇದ್ದರೆಂದು 1981ನೇ ಜನಗಣತಿ ತಿಳಿಸುತ್ತದೆ. ಕೇರಳದಿಂದಲೂ ಅನೇಕ ಮಂದಿ ಮುಸಲ್ಮಾನರು ವ್ಯಾಪಾರ ಮಾಡಲು ವಲಸೆ ಬಂದು ಇಲ್ಲಿಯೇ ನೆಲೆಸಿದ್ದಾರೆಂದು ಜಿಲ್ಲೆಯ ಜನರು ತಿಳಿಸುತ್ತಾರೆ. 'ಕಲೀಮಾ' (ದೇವರು ಒಬ್ಬರೇ, ಮಹಮ್ಮದರೇ ಅವರ ಪ್ರವಾದಿ, ಎಂಬ ಮಾತು), ನಮಾಜು, ಬಡವರಿಗೆ ಭಿಕ್ಷೆಹಾಕುವುದು, ರಂಜಾನ್ ತಿಂಗಳಿನಲ್ಲಿ ಉಪವಾಸ ಮಾಡುವುದು ಹಾಗೂ ಮಕ್ಕಾ ಪಟ್ಟಣಕ್ಕೆ (ಹಜ್) ಯಾತ್ರೆ ಹೋಗಿ ಬರುವುದು ಮುಸಲ್ಮಾನರ ಧಾರ್ಮಿಕ ಕರ್ತವ್ಯವಾಗಿದೆ. ಅವರ ಪೂಜಾವಿಧಾನದಲ್ಲಿ ದಿನಕ್ಕೆ ಐದು ಬಾರಿ ನಮಾಜ್ (ಪ್ರಾರ್ಥನೆಯೊಂದಿಗೆ ಬಾಗುವುದು) ಮಾಡುವುದು ಕಂಡು ಬರುತ್ತದೆ. ಮುಸಲ್ಮಾನರು ಒಬ್ಬ ದೇವನಲ್ಲಿ, ಅವನ ದೂತರಲ್ಲಿ, ಪವಿತ್ರ ಗ್ರಂಥವಾದ ಕುರಾನಿನಲ್ಲಿ, ಅಲ್ಲಾನ ಪ್ರವಾದಿಗಳಲ್ಲಿ, ಅವನ ನ್ಯಾಯದಲ್ಲಿ, ಸ್ವರ್ಗನರಕಗಳಲ್ಲಿ ಹಾಗೂ ದೈವಿಕ ವಿಧಿಗಳಲ್ಲಿ ನಂಬಿಕೆಯಿಟ್ಟಿದ್ದಾರೆ. (ಮಸೀದಿಗಳ ಬಗ್ಗೆ ವಿವರಗಳಿಗೆ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ). ಕೊಡಗಿನ ಮುಸಲ್ಮಾನರು ಹೆಚ್ಚು ಕಡಿಮೆ ಎಲ್ಲರೂ ಸುನ್ನಿಗಳು. ಇವರಲ್ಲಿ ಹನಫಿ ಹಾಗೂ ಷಾಫಿಗಳು ಇರುವುದು ಕಾಣಬರುತ್ತದೆ.

## ಕ್ರೈಸ್ತಧರ್ಮ

ಕೊಂಕಣಿ ಕ್ಯಾಥೋಲಿಕ್ ಕ್ರೈಸ್ತರು ಮೊದಲು ವೀರರಾಜಪೇಟೆಯಲ್ಲಿ ನೆಲೆಸಿದ ಇನ್ನೊಂದು ಮುಖ್ಯ ಧರ್ಮದವರು. ಮೂರನೇ ಮೈಸೂರು ಯುದ್ಧದ ಸಮಯದಲ್ಲಿ ಶ್ರೀರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನನು ಸೆರೆಹಿಡಿದು ತಂದ ದಕ್ಷಿಣ ಕನ್ನಡದ ಕ್ಯಾಥೋಲಿಕ್ ಕ್ರೈಸ್ತರಲ್ಲಿ ಅನೇಕ ಮಂದಿ ತಪ್ಪಿಸಿಕೊಂಡು ಕೊಡಗಿನ ಮೂಲಕ ಹಿಂತಿರುಗುತ್ತಿದ್ದರು. ಆಗ ಕೊಡಗಿನ ರಾಜ ವೀರರಾಜೇಂದ್ರನು ಅವರನ್ನು ವೀರರಾಜಪೇಟೆಯಲ್ಲಿ ನೆಲೆಸುವಂತೆ ಪ್ರೋತ್ಸಾಹಿಸಿ ಅವರಿಗೋಸ್ಕರ ಗೋವೆಯಿಂದ ಜಾನ್ ಡಿ ಕೋಸ್ಟಾ ಎಂಬ ಮತ ಗುರುವನ್ನು ಕರೆಸಿದನು. ಅವರಿಗೆ ಸಾಗುವಳಿ ನಿರೂಪವನ್ನು ಕೊಟ್ಟನು. ರಾಜನು ಅವರಿಗೆ ಮನೆಕಟ್ಟಲು ಜಾಗ, ಕೃಷಿಗೆ ಭೂಮಿ, ಬಿತ್ತನೆಬೀಜ, ದವಸಧಾನ್ಯಗಳನ್ನು ಕೊಡಿಸಿದನು. ವ್ಯಾಪಾರಕ್ಕೆ ಮುಂಗಡ ಹಣವನ್ನು ಕೊಡಿಸಿ ಮೂರು ವರ್ಷಗಳ ಕಾಲ ಸುಂಕವನ್ನು ಮನ್ನಾ ಮಾಡಿದನು. ಒಂದು ಚರ್ಚನ್ನು 1792ರಲ್ಲಿ ಕಟ್ಟಿಸಿ ಅದಕ್ಕೆ ದೀಪದ ಖರ್ಚನ್ನು ಕೊಟ್ಟನು.

* ಕೃಷ್ಣಯ್ಯ ಡಿ.ಎನ್. ಕೊಡಗಿನ ಇತಿಹಾಸ, ಪುಟ. 249.

ಚರ್ಚು ತುಂಬಾ ಚಿಕ್ಕದಾಗಿದ್ದಿತು. ಪಾದ್ರಿಯ ಊಟದ ಖರ್ಚಿಗೆ ವರ್ಷಕ್ಕೆ 84 ಬಟ್ಟಿ ಬತ್ತ, ಪೂಜೆಯ ದೀಪಕ್ಕೆ ಎಣ್ಣೆ, ಮೇಣದ ಬತ್ತಿಗಳನ್ನು ಅರಮನೆಯಿಂದ ಕೊಡುವ ಏರ್ಪಾಡು ಮಾಡಿದನು. ಚರ್ಚಿಗೆ ಒಂದು ಕಂಚಿನ ದೇವ ದೀಪವನ್ನು ಒಂದು ಸಣ್ಣ ಹಿತ್ತಾಳೆ ಪೆಟ್ಟಿಗೆಯನ್ನೂ ಏಸುಕ್ರಿಸ್ತನ ಪ್ರತಿಮೆಗೆ ಒಂದು ಚಿನ್ನದ ಕಿರೀಟವನ್ನು ಕೊಡಿಸಿದನು.[1] ಮುಂದೆ ಆ ಜಾಗದಲ್ಲಿದ್ದ ಹಳೇ ಚರ್ಚನ್ನು ಒಡೆದು ಹೊಸ ಚರ್ಚನ್ನು ಕಟ್ಟಿದ್ದಾರೆ. ಮಡಿಕೇರಿಯ ಚರ್ಚು ವೀರರಾಜಪೇಟೆಯ ಚರ್ಚಿಗಿಂತ ಹಳೆಯದು. ಇದನ್ನು ಹೈದರ್‌ಅಲಿಯ ಕಾಲದಲ್ಲಿ ಆತನ ಸ್ನೇಹಿತನಾಗಿದ್ದ ಫಾದರ್ ಜೋಕಿಂ ಮಿರಾಂಡ ಮಡಿಕೇರಿಯಲ್ಲಿ ಹೈದರ್ ಅಲಿಯ ಸೈನ್ಯದಲ್ಲಿದ್ದ ಕ್ರೈಸ್ತರಿಗಾಗಿ 1768ರಲ್ಲಿ ಕಟ್ಟಿಸಿದನು. ಹೈದರ್ ಅಲಿಯ ನಂತರ ಬಂದ ಟಿಪ್ಪು ಸುಲ್ತಾನನು (ಎರಡನೇಯ ಆಂಗ್ಲೋ ಮೈಸೂರು ಯುದ್ಧದ ಕಾಲದಲ್ಲಿ ಕರಾವಳಿಯ ಕ್ರೈಸ್ತರು ಇಂಗ್ಲೀಷರಿಗೆ ನೆರವಾದರೆಂಬ ನೆಪದಿಂದ) ತನ್ನ ರಾಜ್ಯದಲ್ಲಿದ್ದ ಇತರ ಚರ್ಚ್‌ಗಳನ್ನು ಒಡೆದಂತೆ ಮಡಿಕೇರಿಯ ಚರ್ಚನ್ನು 1784ರಲ್ಲಿ ನೆಲಸಮ ಮಾಡಿದಾಗ ಅಲ್ಲಿದ್ದ ಕ್ರಿಶ್ಚಿಯನ್ನರಲ್ಲಿ ಕೆಲವರು ಸೆರೆ ಸಿಕ್ಕರು, ಇನ್ನು ಕೆಲವರು ಓಡಿ ಹೋದರು, ಎಂದು ಕ್ರೈಸ್ತರ ವಶವಿರುವ ದಾಖಲೆಗಳು ತಿಳಿಸುತ್ತವೆ.[2] ಇವಲ್ಲದೆ ಪೊಲ್ಲಿಬೆಟ್ಟ ಸಿದ್ದಾಪುರ, ಅಮ್ಮತ್ತಿ, ಸೋಮವಾರಪೇಟೆ, ಗೋಪಾಲಪುರ (ಶನಿವಾರಸಂತೆ), ಸುಂಟಿಕೊಪ್ಪ, ಕುಶಾಲನಗರ, ಮುಳ್ಳೂರು, ಕುಟ್ಟಗಳಲ್ಲೂ ಕ್ಯಾಥೋಲಿಕ್ ಕ್ರೈಸ್ತರ ಚರ್ಚ್‌ಗಳಿವೆ. ಈ ಚರ್ಚ್‌ಗಳಿಂದ ನರ್ಸರಿಶಾಲೆ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಾನ್ವೆಂಟುಗಳು ಹಾಗೂ ವಿದ್ಯಾರ್ಥಿ ನಿಲಯಗಳನ್ನು ಮಡಿಕೇರಿ ಪೊಲ್ಲಿಬೆಟ್ಟ, ಸಿದ್ದಾಪುರ, ಅಮ್ಮತ್ತಿ, ಸೋಮವಾರಪೇಟೆ, ಸುಂಟಿಕೊಪ್ಪ, ಕುಶಾಲನಗರ, ಕುಟ್ಟ, ಕೆದಮುಳ್ಳೂರು ಮತ್ತು ವೀರರಾಜಪೇಟೆಗಳಲ್ಲಿ ನಡೆಸಲಾಗುತ್ತಿದೆ.

ಜಿಲ್ಲೆಯ ಕ್ಯಾಥೊಲಿಕ್ ಕ್ರೈಸ್ತರು ಕೊಂಕಣಿ, ತಮಿಳು, ತುಳು, ಮಲೆಯಾಳಿ ಭಾಷೆಗಳನ್ನು ಮಾತನಾಡುತ್ತಾರೆ. ಕೊಂಕಣಿ ಮಾತನಾಡುವವರು ಈಗಾಗಲೇ ತಿಳಿಸಿರುವಂತೆ ರಾಜರ ಕಾಲದಲ್ಲಿ ಬಂದವರು; ತಮಿಳು ಮಾತನಾಡುವವರು ಬ್ರಿಟಿಷರ ಕಾಲದಲ್ಲಿ ಬಂದವರು, ಮಲೆಯಾಳಿ ಮಾತನಾಡುವ ಕೇರಳದ ಸಿರಿಯನ್ ಕ್ರೈಸ್ತರು ಈ ಶತಮಾನದ 30–50 ರ ದಶಕದಲ್ಲಿ ಬಂದವರು ; ತುಳು ಭಾಷಿಕರು ತೋಟದ ಕೆಲಸಕ್ಕೆ ದಕ್ಷಿಣ ಕನ್ನಡದಿಂದ ಬಂದವರು.

ಜಿಲ್ಲೆಯಲ್ಲಿ ಪ್ರಾಟೆಸ್ಟೆಂಟ್ ಕ್ರೈಸ್ತರ ಚಟುವಟಿಕೆಗಳ 1834 ರಷ್ಟು ಹಿಂದಕ್ಕೆ ಹೋಗುತ್ತವೆ. ಆ ವರ್ಷ ಮಂಗಳೂರಿನಲ್ಲಿದ್ದ ಬಾಸೆಲ್ ಮಿಶನರಿ ಸೊಸೈಟಿಯು ಕೊಡಗಿನ ಆಸುಪಾಸುಗಳಲ್ಲಿ ತಮ್ಮ ಕಾರ್ಯಗಳನ್ನು ಆರಂಭ ಮಾಡಿದ್ದರು. ಆಗಾಗ್ಗೆ ವೀರರಾಜಪೇಟೆ, ಮಡಿಕೇರಿಗಳನ್ನು ಸಂಪರ್ಕಿಸುತ್ತಿದ್ದರು. ಡಾ॥ ಮೋಗ್ಲಿಂಗ್ 1852 ರಲ್ಲಿ ಕಾರ್ಯ ಚಟುವಟಿಕೆ ಆರಂಭ ಮಾಡಿ 1853 ರಲ್ಲಿ ಅಳಮಂಡ ಸೋಮಯ್ಯ ಎಂಬಾತನನ್ನು ಕ್ರೈಸ್ತಧರ್ಮಕ್ಕೆ ಸೇರಿಸಿಕೊಂಡನು. ಕ್ರೈಸ್ತ ಧರ್ಮ ಸ್ವೀಕರಿಸಿದ ಕೊಡವರಲ್ಲಿ ಇವನೇ ಮೊದಲಿಗ. ನಂತರ ತನ್ನ ಹೆಂಡತಿಯನ್ನು ಆ ಧರ್ಮಕ್ಕೆ ಸೇರಿಸಿಕೊಂಡನು. ಅವನು ಕೊಟ್ಟ ಜಮೀನಿನ ಮೇಲೆ ಚರ್ಚೊಂದನ್ನು ಕಟ್ಟಲಾಯಿತು. ಕಟ್ಟಿದ ಸುಮಾರು ಆರು ವರ್ಷಗಳು ಅದರ ಖರ್ಚನ್ನೆಲ್ಲಾ ಕಟ್ಟಿದವರೇ ನೋಡಿಕೊಳ್ಳಬೇಕಾಯಿತು. ಚರ್ಚ್ ಆಫ್ ಇಂಗ್ಲೆಂಡಿನ ಚಾಪ್ಲೈನರನ್ನು ಮಂಗಳೂರಿನಿಂದ 1854 ರಲ್ಲಿ ಮಡಿಕೇರಿಗೆ ವರ್ಗಾಯಿಸಲಾಯಿತು. ಇಲ್ಲಿ ಪ್ರಾರ್ಥನಾ ಸಭೆಗಳಿಗೆ ಮಿಲಿಟರಿ ಅಧಿಕಾರಿಗಳು, ತೋಟಗಳ ಮಾಲೀಕರೂ, ತಮಿಳು ಕ್ರೈಸ್ತರು ಸುಮಾರು ನೂರು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು. ನಂತರದ ದಿನಗಳಲ್ಲಿ 130 ಪರಿಶಿಷ್ಟ ಜಾತಿಯವರನ್ನು ಕ್ರೈಸ್ತ ಮತಕ್ಕೆ ಸೇರಿಸಿಕೊಂಡು ಅವರಿಗೆ ಅಮ್ಮತ್ ನಾಡಿನಲ್ಲಿ ಸರ್ಕಾರಿ ಜಮೀನನ್ನು ಕೊಡಲಾಯಿತು. ಮುಂದೆ ಅದೇ ಆನಂದಪುರ (ಆನಂದ ಕೌಂಡಿಣ್ಯ ಎಂಬ ಪಾದ್ರಿಯಿಂದ ಬಂದ ಹೆಸರು) ವೆಂದು ಪ್ರಸಿದ್ಧವಾಯಿತು.[3] ಕಿಟ್ಟೆಲ್, ಸ್ಟೋಕ್ಸ್, ಕಾಫ್‌ಮಾನ್, ಕೌಂಡಿಣ್ಯ, ರಿಕ್ಟರ್ ಮೊದಲಾದವರು ಡಾ॥ ಮೋಗ್ಲಿಂಗನ ಕೆಲಸವನ್ನು ಮುಂದುವರೆಸಿದರು. ಸಾವಿರದ ಎಂಟುನೂರ ಎಪ್ಪತ್ತರ ಹೊತ್ತಿಗೆ ಕೇವಲ ಒಂಬತ್ತು ಜನ ಕೊಡವರು ಮಾತ್ರ ಕ್ರೈಸ್ತರಾಗಿದ್ದರು. ಕೊಡಗಿನ ಅಲ್ಪ ಸಂಖ್ಯಾತ ಪ್ರಾಟೆಸ್ಟೆಂಟ್ ಕ್ರೈಸ್ತರಲ್ಲಿ ಕಳೆದ ಶತಮಾನದಲ್ಲಿ ಆ ಮತಕ್ಕೆ ಸೇರಿದ ಕೊಡವರು ಮತ್ತು ಜಮ್ಮಾ ಹೊಲೆಯರಿದ್ದರು. ದಕ್ಷಿಣ ಕನ್ನಡದಿಂದ ಕೆಲವರು ವಲಸೆ ಬಂದಿರಬಹುದು.

ಜಿಲ್ಲೆಯ ಕ್ರೈಸ್ತರ ಜನಸಂಖ್ಯೆ 1981 ರ ಜನಗಣತಿ ಪ್ರಕಾರ 16,397. ಇವರಲ್ಲಿ 3,635 ಜನ ಮಡಿಕೇರಿ ತಾಲೂಕಿನಲ್ಲೂ, 7,220 ಜನ ವೀರರಾಜಪೇಟೆ ತಾಲೂಕಿನಲ್ಲೂ, 5,542 ಜನ ಸೋಮವಾರಪೇಟೆ ತಾಲೂಕಿನಲ್ಲೂ

1 ಕೊಡಗಿನ ಇತಿಹಾಸ, ಪುಟ 249

2 ಈ ದಾಖಲೆಗಳ ಪ್ರತಿ ಈ ಕಛೇರಿಯಲ್ಲಿ ಇದೆ.

3 ಕೊಡಗಿನ ಇತಿಹಾಸ, ಪು. 591–93 ; ಮೋಗ್ಲಿಂಗ್ ವಿವರ ನೀಡಿದ್ದಾನೆ.

ಇದ್ದರು. ಈಗ ಕ್ರೈಸ್ತರು ನಗರಗಳಿಗಿಂತ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಾಗಿದ್ದಾರೆ.

## ಜಾತಿ ಮತ್ತು ಬುಡಕಟ್ಟುಗಳು

ಬ್ರಿಟಿಷರು ಕೊಡಗನ್ನು ತಮ್ಮ ಅಧೀನಕ್ಕೆ ಪಡೆದ ಮೇಲೆ ಈ ಜಿಲ್ಲೆಯ ಜನ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ದಾಖಲೆಯಾಗುವಂತಾಯಿತು. ಈ ಜಿಲ್ಲೆಯಲ್ಲಿ ಇಂದಿಗೂ ಕಾಡಿನಲ್ಲಿಯೇ ವಾಸಮಾಡುವ ನವನಾಗರಿಕತೆಯ ಸಂಪರ್ಕವಿಲ್ಲದ ಜನಾಂಗಗಳಿದ್ದರೆ, ಅಷ್ಟೇ ನವ ನಾಗರಿಕತೆಯ ಎಲ್ಲ ಸೌಲಭ್ಯಗಳನ್ನು ಅನುಭವಿಸುವ ಜನಸಮುದಾಯದವರೂ ಇದ್ದಾರೆ. ಅನೇಕ ಬುಡಕಟ್ಟು ಜನರು, ಅವರಲ್ಲಿಯೇ ಕಾಣಬರುವ ವಿವಿಧ ಪ್ರಭೇದಗಳು, ಹೊರಗಿನಿಂದ ಬಂದು ಇಲ್ಲಿನ ಆಚಾರ ವಿಚಾರಗಳನ್ನು ಅಳವಡಿಸಿಕೊಂಡ ಜನಾಂಗಗಳು ಮತ್ತು ಹೊರಗಿನಿಂದ ಬಂದು ಇಲ್ಲಿ ನೆಲಸಿ ತಮ್ಮತನವನ್ನು ಉಳಿಸಿಕೊಂಡಿರುವ ಜನಾಂಗಗಳೆಲ್ಲವನ್ನೂ ಇಲ್ಲಿ ಕಾಣಬಹುದಾಗಿದೆ. ಕೆಲವು ಬುಡಕಟ್ಟಿನ ಜನರ ಸಂಖ್ಯೆ ಬೆರಳೆಣಿಕೆಯಲ್ಲಿ ಇದ್ದು ಇಲ್ಲಿ ಮಾತ್ರ ಅವರು ಕಾಣಸಿಗುತ್ತಾರೆ. ಒಂದೊಂದು ಬುಡಕಟ್ಟು, ಗುಂಪಿನವರು ಅವರದೇ ಆದ ಒಂದು ಭಾಷೆ, ದೇವರು ಮುಂತಾದುವನ್ನು ಹೊಂದಿದ್ದು ಕೊಡಗು ಅನೇಕ ಭಾಷೆಗಳ ಬೀಡೂ ಆಗಿದೆ. ಇಲ್ಲಿನ ಅನೇಕ ಜನರ ಸಂಪ್ರದಾಯಗಳು ಇಲ್ಲಿಗೇ ವಿಶಿಷ್ಟವಾದವು. ಸೋಮವಾರಪೇಟೆ ತಾಲೂಕನ್ನು ಬಿಟ್ಟರೆ ಉಳಿದಂತೆ ಎಲ್ಲ ವರ್ಗದವರಿಗೂ ಸಂಪರ್ಕ ಭಾಷೆ ಕೊಡವ ಭಾಷೆ. ಉಡುಗೆ ತೊಡುಗೆಗಳಲ್ಲೂ ಇತರ ಕಡೆಗಳಿಗಿಂತ ಇಲ್ಲಿ ಭಿನ್ನತೆಯನ್ನು ಕಾಣುತ್ತೇವೆ.

ಅಲ್ಲಿಯವೇ ಎಂದು ಗುರುತಿಸುವ (ಬುಡಕಟ್ಟಿನವರ) ಪಂಗಡಗಳು, ಆಚಾರ ವಿಚಾರಗಳಲ್ಲಿ ಒಂದಕ್ಕೊಂದು ಸಮೀಪವಾಗಿವೆ. ಒಡೆಯ–ಆಳು ಎಂಬ ಪ್ರಭೇದ ಎದ್ದು ಕಾಣುವಂತಿದ್ದು ಒಡೆಯನ ಅನೇಕ ಆಚಾರ ವಿಚಾರಗಳನ್ನು ಆಳುಗಳು ಅಳವಡಿಸಿಕೊಂಡಿರುವುದನ್ನು ಕಾಣುತ್ತೇವೆ. ಹೀಗಾಗಿ ಒಡೆಯರ ಪ್ರಭಾವ ಎಲ್ಲೆಡೆ ಕಾಣಬರುತ್ತದೆ. ಮೊದಲು ಕಾಡಿನಲ್ಲಿ ವಾಸವಾಗಿದ್ದು ಕಾಡನ್ನೇ ನಂಬಿದ್ದ ಬುಡಕಟ್ಟುಗಳ ಜನ ಕಾಫೀ ತೋಟಗಳ ಹೆಚ್ಚಳದಿಂದ, ಕಾಡಿನ ನಾಶದಿಂದ, ರಕ್ಷಿತ ಕಾಡುಗಳ ಕಟ್ಟುನಿಟ್ಟುಗಳಿಂದ ಬಯಲಿಗೆ ಬಂದು ತಮ್ಮ ಮೂಲ ವೃತ್ತಿಯನ್ನು, ವಾಸದ ರೀತಿಯನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಜೀವನ ರೀತಿಗೂ ಈಗಿನ ಜೀವನ ರೀತಿಗೂ ವ್ಯತ್ಯಾಸವಾಗಿದೆ. ಸರ್ಕಾರದವರು ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಅವರ ಜೀವನ ರೀತಿಯನ್ನು, ವಾಸಿಸುವ ರೀತಿಯನ್ನು ಸುಧಾರಿಸಲು ಪ್ರಯತ್ನಿಸಿರುತ್ತಾರೆ. ಮೊದಲು ವೃತ್ತಾಕಾರದಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಾ ಮನೆಯ ಮಧ್ಯಭಾಗದಲ್ಲಿ ಬೆಂಕಿಯನ್ನು ಉರಿಸಿ ರಾತ್ರಿ ವೇಳೆಯಲ್ಲಿ ಛಳಿ ಕಾಯಿಸುತ್ತಾ ಗೀತೆ ನರ್ತನಗಳೊಂದಿಗೆ, ಕಷ್ಟ ಸುಖಗಳೊಂದಿಗೆ ಕಾಲ ಕಳೆಯುತ್ತಿದ್ದ ಜನರ ಜೀವನ ವಿಧಾನ ಬದಲಾಗಿದೆ. ಸರ್ಕಾರ ಈಗ ಕಟ್ಟಿಸಿಕೊಟ್ಟಿರುವ ಸಾಲು ಮನೆಗಳಲ್ಲಿ ವಾಸಿಸುವ ಇವರಿಗೆ ಬೆಂಕಿ ಉರಿಸಲು ಉರವಲಿಲ್ಲ; ಹಿಂದಿನ ಬೇಟೆಯಾಡುತ್ತಾ ಅಡವಿಯಲ್ಲಿ ಬದುಕುವ ಅವರಲ್ಲಿನ ಮುಕ್ತ ಜೀವನ, ಸಾಮಾಜಿಕ ಐಕ್ಯ ಈಗ ಇಲ್ಲ. ಹಿಂದಿನ ಜೀವನ ವಿಧಾನ ತ್ಯಜಿಸಿ, ಹೊಸ ವಿಧದ ವೃತ್ತಿ, ಉದ್ಯೋಗಗಳಿಗೆ ತೊಡಗಿ ತಮ್ಮ ಉಡುಗೆ, ತೊಡುಗೆ, ಆಚಾರ ವಿಚಾರಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ. ಅನೇಕರು ಪಶುಪಾಲನೆಯನ್ನು ಕೈಗೊಂಡು ಸ್ವತಂತ್ರ ಜೀವನವನ್ನು ಸಾಗಿಸುತ್ತಿದ್ದಾರೆ. ತಮ್ಮ ಹಳೆಯ ಜೀವನ ವಿಧಾನ, ಆಚಾರ ವಿಚಾರಗಳನ್ನು ಸರಿಯಾಗಿ ತಿಳಿದವರು ಈಗ ತೀರ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಹಿಂದೆ ಇವರ ಬಗ್ಗೆ ಬರೆದಿರುವ ಗ್ರಂಥಗಳನ್ನು ಮಾತ್ರ ಈಗ ಅವಲಂಬಿಸಬೇಕಾಗುತ್ತದೆ. (ಆದರೆ ಕೆಲವು ಪಾಶ್ಚಾತ್ಯ ಲೇಖಕರು ತಮ್ಮ ಐರೋಪ್ಯ ಓದುಗರ ಮನ ರಂಜಿಸಲು ನೀಡಿದ್ದ ಚಿತ್ರಣ ಪೂರ್ತಿ ಸರಿಯೇ ಎಂದು ತಿಳಿಯಲು ಅನೇಕ ಸಲ ಪೂರ್ಣ ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲದಾಗಿದೆ).

ಇಲ್ಲಿನ ಬುಡಕಟ್ಟಿನ ಜನಗಳೆಲ್ಲರೂ ತಮ್ಮದೇ ಆದ ದೈವಗಳನ್ನು ಹೊಂದಿರುವವರು. ಅವು ಆಕಾರವಿಲ್ಲದ ದೈವಗಳೇ ಆಗಿರುತ್ತವೆ. ದಕ್ಷಿಣದ ಕುಟ್ಟದಲ್ಲಿನ ಕುಟ್ಟದಮ್ಮ ಪ್ರಸಿದ್ಧ ದೇವತೆ. ಈಕೆ ಮುಖ್ಯವಾಗಿ ಜೇನು, ಬೆಟ್ಟ, ಹಾಗೂ ಕಾಡು ಕುರುಬರ ಆರಾಧ್ಯದೈವ. ತಂಪಿರಾತ್ತಿ ಫಣಿಯರದ್ದು, ಉಳಿದಂತೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳದ ದೈವಗಳು ಮತ್ತು ಭೂತಗಳು ಜನಪ್ರಿಯವಾಗಿವೆ. ಕೊಡವರು ಬೆಳಗ್ಗೆ ಮತ್ತು ಸಂಜೆ 'ನೆಲ್ಲಕ್ಕಿ ನಡುಬಾಡೆ'ಯಲ್ಲಿನ ದೀಪವನ್ನೇ ಗುರುದೇವರೆಂದು ಪೂಜಿಸುತ್ತಾರೆ. ಇದರೊಂದಿಗೆ ಹಿರಿಯರ (ಮನೆತನದ ಕಾರೋಣ) ಹೆಸರಿನಲ್ಲಿ ದೀಪ ಹೊತ್ತಿಸಿ ಪೂಜಿಸುವವರಾಗಿರುತ್ತಾರೆ. ಇವರ ದೇವರಮನೆಗಳೆಂದರೆ ಈ ದೀಪದ ಗೂಡುಗಳು. ಉಳಿದಂತೆ ಕಾವೇರಿ ಮುಖ್ಯ ದೈವ, ಹೆತ್ತ ತಾಯಿಗಿಂತ ಕಾವೇರಿ ದೊಡ್ಡವಳೆಂಬುದು ಕೊಡವರ ಭಾವನೆ. ಕಾವೇರಿ ಮತ್ತು ಕನ್ನಿಕೆ ಕೂಡುವ ಸ್ಥಳದಲ್ಲಿನ ಭಾಗಮಂಡಲದ ಭಗಂಡೇಶ್ವರ ದೇವಾಲಯ, ಪಾಡಿಯ ಇಗ್ಗುತಪ್ಪ ಇವು ಕೊಡವರ ಪ್ರಮುಖ ದೇವಾಲಯಗಳು. ಕೊಡಗಿನ ದೇವಾ

ಲಯಗಳ ಪೂಜಾದಿಗಳನ್ನು ಮಂಜೇಶ್ವರದ ತಂತ್ರಿಯವರು ಶೀರ್ಮಾನಿಸುವುದರಿಂದ ಕೇರಳದ ಪ್ರಭಾವ ಹೆಚ್ಚಿಗೆ ಕಾಣ ಬರುತ್ತದೆ. ಕಾವೇರಿ ಕೊಡವರ ಬಾಳಿನಲ್ಲಿ ಭಾವನಾತ್ಮಕ ವಾಹಿನಿಯಾಗಿದೆ.

ಕೊಡವ ಭಾಷೆ ಮಾತನಾಡುವವರಲ್ಲಿ ಅಮ್ಮ ಕೊಡವ, ಅಗಸ, ಹೆಗ್ಗಡೆ, ಮೇದ, ಕುಂಬಾರ, ಕೋಯವ, ಐರಿ ಹಜಾಮ, ಗೊಲ್ಲ, ಕೆಂಬಟ್ಟಿ ಹೊಲೆಯ ಮುಂತಾದ ಗುಂಪು ಗಳಿವೆ. ಹೀಗಾಗಿ ಹೊರನೋಟಕ್ಕೆ ಕೊಡವರೆಲ್ಲಾ ಒಂದೇ ಎಂಬಂತೆ ಕಂಡು ಬಂದರೂ ಇವರಲ್ಲಿ ಹಲವು ಪ್ರಭೇದಗಳು ಕಾಣಬರುತ್ತವೆ. ಈ ಪ್ರಭೇದಗಳು ಇಂದಿಗೂ ಉಳಿದು ಬಂದಿವೆ. ಊಟ, ಉಡುಗೆ–ತೊಡುಗೆಗಳು ಒಂದೇ. ಈ ಇತರ ಜಾತಿಗಳಿಗೂ ಜಮ್ಮ ಭೂಮಿಯ ಒಡೆತನ ಉಂಟು. ಆದರೂ ಸಾಮಾಜಿಕವಾಗಿ ಕೊಡವ ಒಕ್ಕಲತನದವರಿಗೂ ಇವರಿಗೂ ಅಲ್ಪ ಸ್ವಲ್ಪ ವ್ಯತ್ಯಾಸಗಳುಂಟು. ಕೊಡವರು ಈ ಉಪ ಗುಂಪಿನವರನ್ನು ಸಾಮಾಜಿಕವಾಗಿ ಸಮಾನ ಅಂತಸ್ಥಿನವ ರೆಂದು ಪರಿಗಣಿಸುವುದಿಲ್ಲ, ಕೊಡವ ಯಜಮಾನರುಗಳ ಮನೆಯಲ್ಲಿ ಇವರನ್ನು ಕುಡಿ (ಮನೆ ಕೆಲಸ) ಗಳಾಗಿ ಕೆಲಸ ಮಾಡಲು ನೇಮಿಸಿಕೊಳ್ಳುತ್ತಾರೆ. ಇಲ್ಲವೇ ತಮ್ಮ ಕಸುಬನ್ನು ಮಾಡಿಕೊಂಡು ಹೋಗುತ್ತಾರೆ. ಕೊಡವರಲ್ಲಿ ಹಲವರು ಒಡೆಯರ (ರಾಜರ) ಕಾಲದಲ್ಲಿ ವೀರಶೈವರಾದರೂ ಒಟ್ಟಿನಲ್ಲಿ ಅವರ ಸಂಪ್ರದಾಯ ಕೊಡವರ ಮೇಲೆ ವಿಶೇಷ ಪ್ರಭಾವ ಬೀರಿಲ್ಲ.ಕೊಡವರು ವೀರರಾಜಪೇಟೆ ತಾ||ನಲ್ಲಿ ಅಧಿಕ ಸಂಖ್ಯೆ ಯಲ್ಲಿ ಇದ್ದಾರೆ.

ಹೊರಗಿನಿಂದ ರಾಜರ ಕಾಲಕ್ಕೆ ಬಂದು ಇಲ್ಲಿ ನೆಲೆಸಿದವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಡೆಯಿಂದ ಬಂದ ಗೌಡರು, ಉತ್ತರ ಕೊಡಗಿನಲ್ಲಿ ವೀರಶೈವರು ಮತ್ತು ಮೈಸೂರು ಕಡೆಯಿಂದ ಬಂದ ಒಕ್ಕಲಿಗರು ಮುಖ್ಯ ಜನವರ್ಗ. ಗೌಡರು ಭಾಗ ಮಂಡಲ ಮುಂತಾದ ಕಡೆ ಹೆಚ್ಚಾಗಿ ಕಾಣಸಿಗುತ್ತಾರೆ. ಇವರು ತಮ್ಮ ಸಂಪ್ರದಾಯಗಳನ್ನೆಲ್ಲಾ ಹೆಚ್ಚಾಗಿ ಕೊಡವರಂತೆ ಬದಲಾಯಿಸಿಕೊಂಡಿರುತ್ತಾರೆ. ಊಟ, ಐನ್‌ಮನೆ, ಉಡುಗೆ ಮುಂತಾದವುಗಳಲ್ಲಿ ಈ ಸಾಮ್ಯ ಕಾಣಬಹುದು. ಭಾಷೆಯಲ್ಲಿ ಮಾತ್ರ ವ್ಯತ್ಯಾಸ.

ಹಾಲೇರಿ ರಾಜರ ಕಾಲದಲ್ಲಿ ಕೊಡಗಿಗೆ ವಲಸೆ ಬಂದು ಕೊಡವರ ಆಚಾರ ವಿಚಾರ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ಜಮ್ಮಾ ಭೂಮಿಯನ್ನು ಪಡೆದವರಲ್ಲಿ ಹೆಗ್ಗಡೆಗಳೂ (ಕೃಷಿಕರು), ಕವಡಿಗಳೂ (ಕೃಷಿಕರು), ಕೊಲ್ಲರು (ಕಬ್ಬಿಣದ ಕೆಲಸ ಮಾಡುವವರು), ತತ್ತರು (ಚಿನ್ನದ ಕೆಲಸ ಮಾಡು ವವರ), ಕೊಲೆಯರು (ಮಣ್ಣು ಗೊಡೆಗಳನ್ನು ಕಟ್ಟುವವರು), ಕೋಯರವರು, ಬಣ್ಣರು (ಭೂತ ಕಟ್ಟುವವರು), ಬಿನೆಪತ್ತೆರ್ (ಸಂಗೀತ ಹಾಡಿ ಬೇಡುವವರು), ಮಲೆಯರು ಮತ್ತು ಪಣಿಕರು (ಭೂತ ಕಟ್ಟುವವರು), ಕಣಿಯರು (ಭವಿಷ್ಯ ಹೇಳು ವವರು), ಗಾಣಿಗರು, ಗೊಲ್ಲರು ಸೇರಿದ್ದಾರೆ.

ಜಿಲ್ಲೆಯಲ್ಲಿ ಕಂಡುಬರುವ ಹಲವಾರು ಜಾತಿಗಳ ಪರಿಚಯ ವನ್ನು ಸ್ಥೂಲವಾಗಿ ಮುಂದೆ ಮಾಡಿ ಕೊಡಲಾಗಿದೆ.

**ಅಗಸ**

ಬಹುಮಂದಿ ಅಗಸರು ಕೊಡಗಿಗೆ ವಲಸೆ ಬಂದವರು. ಇವರಲ್ಲಿ ಕನ್ನಡ, ಕೊಡವ, ಮಲಯಾಳಿ ಮಾತನಾಡುವವ ರಿದ್ದು, ಅವರ ಒಟ್ಟು ಸಂಖ್ಯೆ 1972 ರಲ್ಲಿ ಮೊದಲನೇ ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ 3,622 ಹಾಗೂ ಎರಡನೇ ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ 1984ರಲ್ಲಿ 3,142 ಇದ್ದಿರಬಹುದೆಂದೂ ಅಂದಾಜು ಮಾಡಲಾಗಿದೆ. ಕೊಡವರ ವಿವಾಹದಲ್ಲಿ ಅಗಸರ ಪಾತ್ರವಿರು ವುದರಿಂದ ಅವರು ಬಹು ಹಿಂದೆಯೇ ಜಿಲ್ಲೆಗೆ ವಲಸೆ ಬಂದಿರ ಬೇಕೆಂಬ ಅಭಿಪ್ರಾಯ ಮೂಡುತ್ತದೆ. ಕೊಡವ ಭಾಷೆ ಮಾತನಾಡುವ ಕೊಡವ ಮಡಿವಾಳರಿಗೆ ಜಮ್ಮಾ ಭೂಮಿಯಿದೆ. ಇವರು ಶ್ರೀಮಂಗಲ, ಭಾಗಮಂಡಲ, ಹುದಿಕೇರಿ, ನಾಪೋಕ್ಲು ಬಲಮುರಿ, ಉದ್ದೂರು ಪಾಲೂರು, ಬೇತೂರು, ಕಣ್ಣಂಗಾಲ, ಬಿಟ್ಟಂಗಾಲ ಮುಂತಾದ ಕಡೆಗಳಲ್ಲಿ ಹೆಚ್ಚಾಗಿ ಕಂಡು ಬರು ತ್ತಾರೆ. ಮನೆಯಲ್ಲಿ ಕನ್ನಡ ಮಾತನಾಡುವ ಮಡಿವಾಳರು ಹೆಚ್ಚಾಗಿ ಪಕ್ಕದ ಜಿಲ್ಲೆಗಳಾದ ಮೈಸೂರು, ಹಾಸನ, ದಕ್ಷಿಣ ಕನ್ನಡದ ಕಡೆಯಿಂದ ವಲಸೆ ಬಂದವರು. ಇವರ ನಡೆ, ನುಡಿ, ಸಂಪ್ರದಾಯಗಳು ಆಯಾ ಜಿಲ್ಲೆಯ ಅಗಸರನ್ನೇ ಹೋಲುತ್ತವೆ. ಆದರೂ ಕೂಡ ಕೊಡವರ ಸಂಪ್ರದಾಯದ ಪ್ರಭಾವ ಅವರಲ್ಲಿ ಸಾಕಷ್ಟು ಉಂಟಾಗಿದೆ. ಮಲೆಯಾಳೀ ಮಾತನಾಡುವ ಅಗಸರ ಸಂಖ್ಯೆ ತುಂಬಾ ಕಡಿಮೆ. ಕೊಡವ ಮಡಿವಾಳರಲ್ಲಿ ಬಳಿಗಳಿದ್ದು ಒಂದೇ ಬಳಿಯಲ್ಲಿ ಕೊಟ್ಟು ತಂದು ಮಾಡುವುದಿಲ್ಲ. ಕೊಡವರಂತೆ ಅವರಲ್ಲೂ ಮನೆತನ ಗಳುಂಟು. ಇವರ ದೇವರು ಗುರುಕಾರಣ ಎಂದು ಹೇಳಿ ಕೊಳ್ಳುತ್ತಾರೆ. ಹೆಚ್ಚಾಗಿ ಹುತ್ತರಿ, ಕೈಲ್ ಪೊಳ್ದು, ಕಾವೇರಿ ಸಂಕ್ರಮಣ, ಸುಬ್ರಮಣ್ಯ ಷಷ್ಠಿ, ಬಿಸು (ವಿಷು), ಯುಗಾದಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ವಿವಾಹಗಳಲ್ಲಿ ತಾಳಿ ಕಟ್ಟುವ ಸಂಪ್ರದಾಯವಿಲ್ಲ. ಕೂಡಾವಳಿ ಇದ್ದಿರಬೇಕು. ಮುಖ್ಯ ಉದ್ಯೋಗ ಕೊಡವರ ಮನೆಗಳಲ್ಲಿ ಬಟ್ಟೆ ಒಗೆಯು

ವುದು. ಈಗೀಗ ಕೊಡವರ ಮನೆಗಳಲ್ಲಿ 'ಕುಡಿ' ಮಾಡು ತ್ತಾರೆ. ಕುಡಿ ಎಂದರೆ ಮನೆಗೆಲಸ ಮಾಡುವುದು. ಕೊಡವರ ಸಮಾರಂಭಗಳಲ್ಲಿ, ಮದುವೆಗಳಲ್ಲಿ ಬಟ್ಟೆ ಕಟ್ಟು ವುದು, ಬಟ್ಟೆ ಹಾಸುವುದು ಮುಂತಾದ ಕೆಲಸಗಳನ್ನು ಮಾಡು ತ್ತಾರೆ. ಪ್ರತಿಫಲವಾಗಿ ಹಣವನ್ನೋ, ಧಾನ್ಯವನ್ನೋ ಪಡೆಯುತ್ತಾರೆ. ಕೊಡವ ಅಗಸರ ಪದ್ಧತಿಗಳೆಲ್ಲವೂ ಕೊಡವ ರಂತೆಯೇ. ಅಗಸರು ಮಾರಿಯಮ್ಮನ ಹಬ್ಬ, ಭಗವತಿ ಜಾತ್ರೆಗಳಲ್ಲಿ ದೇವರಿಗೆ ಪಂಜು ಹಿಡಿಯುತ್ತಾರೆ. ಕೊಡವ ಅಗಸರು ಸಾಮಾನ್ಯವಾಗಿ ಶವವನ್ನು ಸುಡುತ್ತಾರೆ, ಇತರ ಅಗಸರು ಹೂಳುತ್ತಾರೆ.

### ಅಡಿಯರು

ಅಡಿಯರು ಜಿಲ್ಲೆಯ ಮಡಿಕೇರಿ ತಾಲೂಕಿನ ಭಾಗ ಮಂಡಲದ ಸುತ್ತಮುತ್ತ ಕಂಡು ಬರುತ್ತಾರೆ. ಕೆಲವು ಕಡೆ ಇವರನ್ನು 'ಎರವ' ಎಂದು ಕರೆಯುತ್ತಾರೆಂದು ಎ.ಎ. ಡಿ. ಲೂಯಿಸ್ ತಿಳಿಸುತ್ತಾರೆ. ಇವರು ತುಳು, ಮಲೆಯಾಳಿ, ಶಬ್ದಗಳಿಂದ ಕೂಡಿದ ಕನ್ನಡದ ಒಂದು ಉಪಭಾಷೆಯನ್ನು ಮಾತನಾಡುತ್ತಾರೆ. ಒಂದು ದಂತ ಕತೆಯ ಪ್ರಕಾರ ಶಿವದ್ವಿಜ ಹಾಗೂ ಬ್ರಾಹ್ಮಣ ಕನ್ಯೆಯ ಪ್ರತಿಲೋಮ ವಿವಾಹದಿಂದ ಈ ಈ ಜಾತಿವುಂಟಾಯಿತೆನ್ನುತ್ತಾರೆ. ಇವರ ಪೂರ್ವಜರು ಭದ್ರ ಕಾಳಿ ದೇವಸ್ಥಾನಗಳಲ್ಲಿ ಅರ್ಚಕರಾಗಿದ್ದಾರೆಂದು ಹೇಳಿಕೊಳ್ಳು ತ್ತಾರೆ. ವಾಸಿಸುವ ಸ್ಥಳದ ಆಧಾರದ ಮೇಲೆ ಮಂದಗಳೆಂಬ ಒಳಗುಂಪುಗಳನ್ನು ಮಾಡಿಕೊಂಡಿದ್ದಾರೆ.

ಇವರು ತಾವು ಕೆಲಸ ಮಾಡುವ ತೋಟಗಳ ಸಮೀಪ ಜೋಪಡಿಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ. ಮನೆಯಲ್ಲಿ ಮಡಿಕೆ, ಕುಡಿಕೆಗಳನ್ನು ಉಪಯೋಗಿಸುತ್ತಿದ್ದರು. ಇವರು ಕೃಷಿ ಕಾರ್ಮಿಕರು, ಕೆಲವರು ಕಾಡಿನಲ್ಲಿ ಜೇನು ಸಂಗ್ರಹಿಸು ತ್ತಾರೆ. ವಾಟೆಯಿಂದ ಕುಕ್ಕೆ, ಗೊರಗ ಮೊದಲಾದವುಗಳನ್ನು ಮಾಡುತ್ತಾರೆ. ಹಿಂದೆ ವಿವಾಹಗಳಲ್ಲಿ, ಸತ್ತಾಗ ಓಲಗ ಊದು ತ್ತಿದ್ದರು. ಇವರ ಹೆಂಗಸರು ಹಣೆಗಳ ಮೇಲೆ ಹಚ್ಚೆ ಹಾಕಿಸಿ ಕೊಳ್ಳುತ್ತಾರೆ. ಸೀರೆ ಉಡುವಾಗ ಬಲತೋಳಿನ ಮೇಲೆ ಒಂದು ಗಂಟು ಹಾಕುತ್ತಾರೆ. ಇದನ್ನು ಸಿಂಧಕಟ್ಟು ಎನ್ನುತ್ತಾರೆ. ಹಿಂದೆ ಸಾಮಾನ್ಯವಾಗಿ ರವಿಕೆ ತೊಡುತ್ತಿರಲಿಲ್ಲ. ಹೆಣ್ಣುಮಕ್ಕ ಳಿಗೆ ಮೈನೆರೆದ ನಂತರ ವಿವಾಹ. ವಿವಾಹದಲ್ಲಿ ಬ್ರಾಹ್ಮಣರ ಅಥವಾ ಗ್ರಾಮದೇವತೆಗಳ ಪೂಜಾರಿಗಳ ನೆರವು ಕೋರುತ್ತಾರೆ. ತಾಳಿ ಕಟ್ಟುವಿಕೆ ವಿವಾಹದ ಮುಖ್ಯ ಅಂಗ. ತೆರ (ಕನ್ಯಾ ಶುಲ್ಕ) ರೂಢಿಗತ. ತಾಯಿಯ ಸಹೋದರನ ಮಗಳು ಅಥವಾ ತಂದೆಯ ಸಹೋದರಿಯ ಮಗಳನ್ನು ವಿವಾಹವಾಗುವುದು ಸಾಮಾನ್ಯ. ವಿವಾಹ ವಿಚ್ಛೇದನ ಮಾನ್ಯ. ವಿಧವೆಯರೂ, ವಿವಾಹ ವಿಚ್ಛೇದ ಪಡೆದವರೂ ಪುನಃ ವಿವಾಹವಾಗಬಹುದು. ಇವರಲ್ಲಿ ಊರಿಗೊಬ್ಬ ಪೆರುಮನ್ ಎಂಬ ಯಜಮಾನನಿರು ತ್ತಾನೆ. ವಿವಾಹ, ಶವಸಂಸ್ಕಾರ ಮುಂತಾದ ಕಾರ್ಯಗಳನ್ನು ಇವನು ನಡೆಸಿ ಕೊಡುತ್ತಾನೆ. ಅಡಿಯರು ಹಿಂದೂ ಹಬ್ಬ ಗಳನ್ನು ಆಚರಿಸುತ್ತಾರೆ. ಕೊಟ್ಟಲಿ ಕುರುಮನ್, ಮುಂಡ್ ದೈವ, ಯಲ್ಲಮ್ಮ ಮೊದಲಾದ ದೇವತೆಗಳನ್ನು ಪೂಜಿಸುತ್ತಾರೆ, ಪಿತೃಪೂಜೆಯೂ ರೂಢಿಯಲ್ಲಿದೆ. ಇವರು ಶಕುನಗಳಿಗೆ ಬೆಲೆ ಕೊಡುತ್ತಾರೆ; ಕಣಿ ಕೇಳುತ್ತಾರೆ. ಸತ್ತವರನ್ನು ಹೂಳುತ್ತಾರೆ. ಸುಡುವ ಸಂಪ್ರದಾಯವೂ ಇದೆ. ಕೊಡವ ಸಂಪ್ರದಾಯ ಗಳನ್ನೂ ಅನುಸರಿಸುತ್ತಾರೆ.

### ಅಮ್ಮ ಕೊಡವರು

ಅಮ್ಮ ಕೊಡವರು ಕೊಡಗಿನ ಮೂಲ ಅರ್ಚಕರೆನ್ನುವ ಅಭಿಪ್ರಾಯವಿದೆ. ಇವರು ತಮ್ಮ ಹೆಸರಿನ ಕೊನೆಯಲ್ಲಿ 'ಅಮ್ಮ' ಅಥವಾ ಅಮ್ಮಯ್ಯ ಎಂದು ಸೇರಿಸಿಕೊಳ್ಳುತ್ತಾರೆ. ಇವರು ಹೆಚ್ಚಾಗಿ ದಕ್ಷಿಣ ಕೊಡಗಿನ ಭಾಗಗಳಾದ ಪೊನ್ನಂಪೇಟೆ, ಕಾನೂರು, ಕೊತೂರು, ಮತ್ತೂರು, ಗಳಿಗಟ್ಟ, ಮಾಯಿಮುಡು, ನಾಪೋಕ್ಲು, ಚೇರಂಬಾಣೆ, ಕಂಬಿಬಾಣೆ ಮೊದಲಾದ ಕಡೆ ಕಂಡುಬರುತ್ತಾರೆ. ಈಗ ಇವರ ಸಂಖ್ಯೆ ಜಿಲ್ಲೆಯಲ್ಲಿ ಸುಮಾರು ಐದು ಸಾವಿರವಿರಬಹುದೆಂದು ಸ್ಥಳೀಕರು ಹೇಳುತ್ತಾರೆ. ಅಮ್ಮ ಕೊಡವರು ಮಲಬಾರಿನಿಂದ ಬಂದವರೆಂದು ರೈಸ್‌ರವರು ತಿಳಿಸುತ್ತಾರೆ. ದಂತ ಕಥೆ ಯೊಂದರ ಪ್ರಕಾರ ಇವರು ಬ್ರಾಹ್ಮಣ ಸ್ತ್ರೀ ಮತ್ತು ಕೊಡವ ಪುರುಷನ ಸಂತತಿಯವರೆಂಬ ಅಭಿಪ್ರಾಯವಿದೆ. ವೈನಾಡಿನ ತಂಬಿಕಟ್‌ತಂಬಿರಾನ್ ಎಂಬುವನು ತನ್ನ ಮಗಳಿಗೆ ಋತು ಮತಿಯಾಗುವುದಕ್ಕೆ ಮುಂಚೆ ಮದುವೆ ಮಾಡಲು ಸಾಧ್ಯವಿಲ್ಲ ದಾಗಿ, ಆ ಹುಡುಗಿಯನ್ನು ಕಾಡಿಗಟ್ಟಲು ಅವಳು ಕೊಡವ ಯುವಕನೊಬ್ಬನಿಗೆ ಸಿಕ್ಕಿ, ಮದುವೆಯಾಗಲು ಅವರ ಸಂತತಿ ಯವರು ಮುಂದೆ ಅಮ್ಮ ಕೊಡವರೆನಿಸಿಕೊಂಡರು ಎಂದೂ ಹೇಳುತ್ತಾರೆ. ಕೊಡಗಿನ ಕೊನೆಯ ರಾಜನ ಕಾಲದಲ್ಲಿ ಇವರನ್ನು ಕಾವೇರಿ ಬ್ರಾಹ್ಮಣರೆಂದು ಕರೆಯುತ್ತಿದ್ದರು. ಇವರ ಉಡಿಗೆ ತೊಡಿಗೆಗಳು ಕೊಡವರದಂತೆಯೇ ಇದ್ದು, ಕೊಡವರ ಹಬ್ಬ ಹರಿದಿನಗಳನ್ನು ಕೊಡವರಂತೆಯೇ ಆಚರಿಸು ತ್ತಾರೆ (ಕೈಲ್‌ಪೊಳದ್‌ನ್ನು ಹೊರತುಪಡಿಸಿ). ಹೆಂಗಸರು ಸೀರೆ ನೆರಿಗೆಯನ್ನು ಮಾತ್ರ ಮುಂದುಗಡೆ ಬಿಟ್ಟು ಉಡು ತ್ತಾರೆ. ವಿವಾಹದಲ್ಲಿ ತಾಳಿಕಟ್ಟುವ ಪದ್ಧತಿವುಂಟು. ರಾಜನ ಕೋಶಾಧಿಕಾರಿಯಾಗಿದ್ದ ಕರಣಿಕ ತಿಮ್ಮಪ್ಪಯ್ಯನೆಂಬುವರು

1834ರಲ್ಲಿ ಅಮ್ಮ ಕೊಡವರಿಗೆ ಬಲಮುರಿಯಲ್ಲಿ ಯಜ್ಞೋಪವೀತವನ್ನು ಹಾಕಿಸಿದರು. ಇವರು ಶಿವಮೊಗ್ಗ ಜಿಲ್ಲೆಯ ರಾಮಚಂದ್ರಾಪುರ ಮಠದ ಶಿಷ್ಯವರ್ಗಕ್ಕೆ ಸೇರಿದ್ದಾರೆ. ಸ್ವಲ್ಪ ಕಾಲದ ನಂತರ ಉಡುಪಿಯ ಮಠದವರಿಂದ ಕಿಗ್ಗಟ್ಟುನಾಡಿನ ಅಮ್ಮ ಕೊಡವರಿಗೆ ಇರ್ಪು ದೇವಸ್ಥಾನದಲ್ಲಿ ಯಜ್ಞೋಪವೀತವನ್ನು ಹಾಕಲಾಯಿತು. ಇವೆರಡೂ ಗುಂಪುಗಳಿಗೆ ಸೇರದೆ ಬೇರೆಯಿದ್ದವರು ನಂತರದ ದಿನಗಳಲ್ಲಿ ಸುಬ್ರಹ್ಮಣ್ಯಮಠದ ಶಿಷ್ಯವರ್ಗಕ್ಕೆ ಸೇರಿದರು. ಅಮ್ಮ ಕೊಡವರ ಸಂಖ್ಯೆ 1931 ರಲ್ಲಿ ಕೇವಲ 666 ಇದ್ದಿತು. ಸಾಂಪ್ರದಾಯಿಕವಾಗಿ ಇವರು ಮದ್ಯ ಮಾಂಸ ಸೇವಿಸುವುದಿಲ್ಲ. ಅಮ್ಮ ಕೊಡವರ ಅರ್ಚಕ ವೃತ್ತಿ ಯಾವಾಗ ತಪ್ಪಿಹೋಯಿತೆಂಬುದನ್ನು ಸರಿಯಾಗಿ ತಿಳಿಸಲು ಸಾಧ್ಯವಿಲ್ಲ. ಅಮ್ಮ ಕೊಡವರಲ್ಲಿ ಭಾರದ್ವಾಜ ಮತ್ತು ವಿಶ್ವಾಮಿತ್ರ ಗೋತ್ರಗಳಿವೆ. ಇವರಲ್ಲಿ ಉಪನಯನವುಂಟು. ಅಧ್ಯಯನ, ದಾನ, ಯಜನ ಈ ತ್ರಿಕರ್ಮಗಳ ಅಧಿಕಾರವಿದೆಯೆನ್ನುತ್ತಾರೆ. ವೆಂಕಟರಮಣನಿಗೆ ಹರಿಸೇವೆ ಮಾಡುವ ಪದ್ಧತಿಯಿದೆ. ಪ್ರತೀದಿನ ಕಾರುಣನಿಗೆ ನೈವೇದ್ಯ ಮಾಡುತ್ತಾರೆ. ವಿವಾಹದಲ್ಲಿ ಗಂಡಿನ ಕಡೆಯವರು ಹೆಣ್ಣನ್ನು ಅರಸಿ ಹೋಗುತ್ತಾರೆ. ಮಾಂಗಲ್ಯಧಾರಣೆ, ಧಾರೆ ಮೊದಲಾದ ಸಂಪ್ರದಾಯಗಳಿವೆ. ಕೊಡವರಂತೆ ಐನ್‌ಮನೆಗಳಿವೆ. ಪುತ್ತಾಮನೆ, ಅಯ್ಯೆಚಂಡ, ಬಾನಂದ, ಗುಂಬೀರ, ಮನ್ನಿಕ ಮನೆ, ಹೆಮ್ಮಚ್ಚಿ ಮನೆ ಮುಂತಾದ ಮನೆತನಗಳಿವೆ. ಮುಖ್ಯ ಉದ್ಯೋಗ ಕೃಷಿ. ಸತ್ತವರನ್ನು ಸುಡುತ್ತಾರೆ. ಇವರಲ್ಲಿ ಮಾಸಿಕ ಹಾಗೂ ವಾರ್ಷಿಕ ಶ್ರಾದ್ಧಗಳುಂಟು.

**ಈಡಿಗರು**

ಈಡಿಗರ ಮುಖ್ಯ ವೃತ್ತಿ ಬಗನಿ, ಈಚಲ ಮೊದಲಾದ ಮರಗಳಲ್ಲಿ ಹೆಂಡ ಇಳಿಸುವುದಾಗಿತ್ತು. ಜಿಲ್ಲೆಯಲ್ಲಿ ಇವರ ಸಂಖ್ಯೆ 1984 ರಲ್ಲಿ 25,405 ಎಂದು ಎರಡನೇಯ ಹಿಂದುಳಿದ ವರ್ಗಗಳ ಆಯೋಗ ಅಂದಾಜು ಮಾಡಿದೆ. ಕೊಡಗಿನಲ್ಲಿರುವ ಇವರಲ್ಲಿ ಮೈಸೂರು ಕಡೆಯ ಈಡಿಗರು, ಕೇರಳದ ಕಡೆಯ ತೀಯರು, ದಕ್ಷಿಣ ಕನ್ನಡದ ಬಿಲ್ಲವರೂ ಮತ್ತು ತಮಿಳುನಾಡಿನ ನಾಡಾರುಗಳೂ ಸೇರಿದ್ದಾರೆ. ಈಡಿಗರು ಕುಶಾಲನಗರ, ಕೊಡಿಗೆ, ಸೋಮವಾರಪೇಟೆ ಮತ್ತು ಅವುಗಳ ಸುತ್ತಮುತ್ತ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಕನ್ನಡ ಈಡಿಗರ ಸಂಖ್ಯೆ ಬಹಳ ಕಡಮೆಯಿದ್ದು ಸುಮಾರು 50 ಕುಟುಂಬಗಳಿವೆಯೆಂದು ಅಂದಾಜು ಮಾಡಬಹುದು. ಮೈಸೂರಿನ ಕಡೆಯ ಈಡಿಗರಲ್ಲಿ ಮಡ್ಡಿ ಈಡಿಗ (ಸಾಚಾ ಈಡಿಗ), ಬೆಲ್ಲದ ಈಡಿಗ, ಏಣಿ ಈಡಿಗ ಮೊದಲಾದ ಒಳಗುಂಪುಗಳಿವೆ. ಸಾಚಾ ಈಡಿಗರಲ್ಲಿ ಕಾರುಣ್ಯ, ವಾತ್ಸಲ್ಯ, ಕೌಂಡಿನ್ಯ ಮತ್ತು ಕಮಂಡಲ ಎಂಬ ಗೋತ್ರಗಳೂ ಹಾಗೂ ಸಂಸ್ಥೆಯವರೂ ಮತ್ತು ಬೊಡ್ಡೆಯವರೂ ಎಂಬ ಎರಡು ಗುಂಪುಗಳು ಇವೆ.

ಈಡಿಗರು ಕಟಮೇಶ್ವರ, ಯಲ್ಲಮ್ಮ ಸುರಭಾಂಡೇಶ್ವರಿ, ಮಾತಂಗಿ ಮೊದಲಾದ ದೇವದೇವತೆಗಳನ್ನು ಪೂಜಿಸುತ್ತಾರೆ. ಈಡಿಗರ ಮನೆ ಮಾತು ಕನ್ನಡ. ಜಿಲ್ಲೆಯಲ್ಲಿ ಸೋಮವಾರ ಪೇಟೆಯ ಉತ್ತರ ಭಾಗ ಬಿಟ್ಟು ಉಳಿದೆಲ್ಲ ಕಡೆ ತೀಯರು ಮತ್ತು ಬಿಲ್ಲವರು ಕಂಡುಬರುತ್ತಾರೆ. ನಾಡಾರುಗಳ ಸಂಖ್ಯೆ ಕಡಮೆ. ಇವರು ಕುಶಾಲನಗರದ ಸುತ್ತಮುತ್ತ ಕಂಡುಬರುತ್ತಾರೆ. ಈಡಿಗರು, ತೀಯರು, ಬಿಲ್ಲವರು ಮತ್ತು ನಾಡಾರುಗಳು ಇನ್ನೂ ತಮ್ಮ ತಮ್ಮಲ್ಲೇ ವಿವಾಹ ಸಂಬಂಧವನ್ನು ಜಿಲ್ಲೆಯಲ್ಲಿ ಬೆಳೆಸುತ್ತಿಲ್ಲ. ಈಡಿಗರು ಸತ್ತವರನ್ನು ಹೂಳುತ್ತಾರೆ.

**ಉಪ್ಪಾರರು**

ಉಪ್ಪಾರರನ್ನು ಮೇಲು ಸಕ್ಕರೆಯವರೆಂದೂ, ಸಗರವಂಶದವರೆಂದೂ, ಭರತನ ವಂಶದವರೆಂದೂ, ಕರೆಬಂಡಿಯವರೆಂದೂ ಕರೆಯುತ್ತಾರೆ. ಇವರ ಮನೆ ಮಾತು ಕನ್ನಡ. ಇವರ ಮೊದಲ ವೃತ್ತಿ ಉಪ್ಪನ್ನು ತಯಾರು ಮಾಡುವುದಾಗಿತ್ತು. ಬ್ರಿಟಿಷರ ಕಾಲದಲ್ಲಿ ಅದರ ಮೇಲೆ ನಿರ್ಬಂಧ ವಿಧಿಸಿದಾಗ ಇವರು ಕಲ್ಲು ಕೆಲಸ, ವ್ಯವಸಾಯ, ಗಾರೆ ಕೆಲಸ, ಸುಣ್ಣ ಸುಡುವುದು ಮೊದಲಾದ ಇತರ ವೃತ್ತಿಗಳನ್ನು ಹಿಡಿಯಬೇಕಾಯಿತು. ವೃತ್ತಿಗಳ ಆಧಾರದ ಮೇಲೆ ಗಾರೆ ಉಪ್ಪಾರರು, ಸುಣ್ಣ ಉಪ್ಪಾರರು, ಕಲ್ಲುಕುಟಿಗ ಉಪ್ಪಾರರು ಮೊದಲಾದ ಉಪಜಾತಿಗಳೂ, ಅಜಿಲ, ಆನೆ, ಆಲೆ, ಅರಸ ಮೊದಲಾದ ಕುಲಗಳು ಇವರಲ್ಲಿವೆ. ಅಂಕಮ್ಮ, ವೆಂಕಟರಮಣ, ಹಾರುಕತೇಶ್ವರಿ ಮೊದಲಾದ ದೇವದೇವತೆಗಳನ್ನು ಪೂಜಿಸುತ್ತಾರೆ. ಜಾತೀಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಇವರಲ್ಲಿ ಕಟ್ಟೆ ಮನೆಗಳಿವೆ. ಜಿಲ್ಲೆಯಲ್ಲಿ 1984 ರಲ್ಲಿ 834 ಜನ ಇದ್ದಿರಬಹುದೆಂದು ಎರಡನೇಯ ಹಿಂದುಳಿದ ವರ್ಗಗಳ ಆಯೋಗ ಅಂದಾಜು ಮಾಡಿದೆ. ಜಿಲ್ಲೆಯಲ್ಲಿ ಕುಶಾಲನಗರ (ಬೈಚನಹಳ್ಳಿ), ಬೀರುಗ, ಸೋಮವಾರಪೇಟೆ, ಪೊನ್ನಂಪೇಟೆ ಮುಂತಾದ ಕಡೆಗಳಲ್ಲಿ ಕಂಡುಬರುತ್ತಾರೆ. ಬೀರುಗದಲ್ಲಿ ಕೆಲವರು ತೋಟದ ಮಾಲೀಕರಿದ್ದಾರೆ. ಉಳಿದ ಜನ ಹೆಚ್ಚಾಗಿ ಕೂಲಿ ಇಲ್ಲವೆ ಹೂವು ಕಟ್ಟಿ ಮಾರುವ ವೃತ್ತಿಯಲ್ಲಿ ತೊಡಗಿದ್ದಾರೆ. ಇವರು ಮೈಸೂರು, ಹಾಸನ ಜಿಲ್ಲೆಗಳಲ್ಲಿ [illegible] ಸಂಬಂಧ ಬೆಳೆಸುತ್ತಾರೆ. ಇವರು ಸತ್ತವರನ್ನು ಹೂಳುತ್ತಾರೆ.

## ಐರಿಗಳು

ಐರಿಗಳು ಕೊಡವರಂತೆ ಕೊಡಗಿನ ಮೂಲನಿವಾಸಿಗಳು. ಇವರ ಪದ್ಧತಿಗಳು ಜನಜೀವನ, ಸಂಸ್ಕೃತಿಯೆಲ್ಲವೂ ಕೊಡವರನ್ನೇ ಹೋಲುತ್ತವೆ. ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಅರಸರ ಕಾಲದಲ್ಲಿ ಅರಮನೆಯಲ್ಲಿ ಕುಶಲಕರ್ಮಿಗಳಾಗಿ ಕೆಲಸ ಮಾಡುತ್ತಿದ್ದರಂತೆ. ಇವರಿಗೂ ಜಮ್ಮಾ ಭೂಮಿಯಿದೆ. ಇವರು ಮೊದಲಿಗೆ ಚಿನ್ನ, ಬೆಳ್ಳಿ ಕೆಲಸ ಮಾಡುತ್ತಿದ್ದರು. ಹೆಚ್ಚಾಗಿ ದಕ್ಷಿಣ ಕೊಡಗಿನಲ್ಲಿ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ ಸುಮಾರು 4–5 ಸಾವಿರವಿರಬಹುದೆನ್ನುತ್ತಾರೆ. ಇವರು ಕೊಡವರು ಉಪಯೋಗಿಸುವ ಪೀಚೆ ಕತ್ತಿಗಳಿಗೆ ಚಿನ್ನ, ಬೆಳ್ಳಿ, ಮುತ್ತುಗಳನ್ನು ಸೇರಿಸುತ್ತಿದ್ದರು. ಈಗ ಹೆಚ್ಚಾಗಿ ಮರಗೆಲಸ ಮಾಡುತ್ತಿದ್ದಾರೆ. ಕೆಲವರು ಕಬ್ಬಿಣ ಕೆಲಸಗಳನ್ನು ಮಾಡುತ್ತಾರೆ. ಮನೆದೇವರು ಕಾವೇರಿ ಮತ್ತು ಇಗ್ಗುತಪ್ಪ. ಈಗ ಮಾಂಸಾಹಾರವನ್ನು ಸೇವಿಸುತ್ತಾರೆ. ಹಿಂದೆ ಇವರು ಸಸ್ಯಾಹಾರಿಗಳಾಗಿದ್ದು ಯಜ್ಞೋಪವೀತ ಧರಿಸುತ್ತಿದ್ದರೆಂಬ ಅಭಿಪ್ರಾಯವಿದೆ. ಇವರಲ್ಲಿ ಕೊಡವರಂತೆ ಮನೆತನಗಳಿವೆ. ಕಮೇಯಂಡ, ದುಗ್ಗಂಡ, ಅನ್ನಂಬಿರಿ, ಇಕೋಳಂಡ, ಅಮ್ಮನಂಡ, ಅಪ್ಪಚ್ಚಂಡ, ಆಜೆನಿರ, ಬಬ್ಬರ, ಪೊನ್ನಿರ ಮುಂತಾದ ಮನೆತನಗಳನ್ನು ಹೆಸರಿಸಬಹುದು.

## ಕಣಿಯರು

ಜಿಲ್ಲೆಯಲ್ಲಿರುವ ಕಣಿಯರು ಮಲಬಾರಿನಿಂದ ಬಂದವರೆನ್ನುತ್ತಾರೆ. ಇವರ ಮೂಲ ವೃತ್ತಿ ಕಣಿ (ಜ್ಯೋತಿಷ್ಯ) ಹೇಳುವುದು. ಜಿಲ್ಲೆಯಲ್ಲಿ ಹೆಚ್ಚಾಗಿ ಪೊನ್ನಂಪೇಟೆ, ವೀರರಾಜಪೇಟೆ, ಕುಂಜಿಲಗಳಲ್ಲಿ ಕಂಡುಬರುತ್ತಾರಾದರೂ ದಕ್ಷಿಣ ಕೊಡಗಿನಲ್ಲಿ ಎಲ್ಲಾ ಕಡೆಯೂ ಇದ್ದಾರೆ. ಇವರು ಮೂಲತಃ ಮಲಯಾಳ ಮಾತನಾಡುವವರಾದರೂ ಕೊಡಗಿನಲ್ಲಿ ಕೊಡವ ಭಾಷೆಯನ್ನು ಮಾತನಾಡುತ್ತಾರೆ, ಇಗ್ಗುತಪ್ಪ, ಕಾವೇರಿ ಮಾತೆಯನ್ನು ಪೂಜಿಸುತ್ತಾರೆ. ಕೊಡವರ ಮನೆಯ ದೇವತಾ ಕಾರ್ಯಗಳನ್ನು, ಶುಭ ಕಾರ್ಯಗಳಿಗೆ ಒಳ್ಳೆಯ ದಿನಗಳನ್ನು ನಿಶ್ಚಯಿಸಿ ಕೊಡುತ್ತಿದ್ದರು ಹಾಗೂ ಮನೆಗಳಲ್ಲಿ ಗೌರವಿಸಲ್ಪಡುತ್ತಿದ್ದರು. ಕಣಿಯರು ವರ್ಷಕ್ಕೊಮ್ಮೆ ಛತ್ತವನ್ನು (ಪೂಮೆ) ತಮ್ಮ ಸೇವೆಗೆ ಪ್ರತಿಫಲವಾಗಿ ಪಡೆಯುತ್ತಾರೆ. ತಲಚೇರಿ, ಕಣ್ಣಾನೂರುಗಳ ಕಡೆ ಸಂಬಂಧವನ್ನು ಬೆಳೆಸುತ್ತಾರೆ. ಹಾಗೆ ಆಕಡೆಯಿಂದ ಬಂದವರು ಕೊಡವ ಭಾಷೆಯನ್ನು ಕಲಿಯುತ್ತಾರೆ. ಈಗ ಇವರು ಕಣಿ ಹೇಳುವುದರ ಜೊತೆಗೆ ಕೃಷಿಯಲ್ಲೂ ತೊಡಗಿದ್ದಾರಲ್ಲದೆ, ಅಡಿಗೆ ಪರಿಚಾರಕರೂ ಆಗಿದ್ದಾರೆ.

## ಕಾಪಳರು

ಕಾಪಳರು ಕೊಡಗಿನಲ್ಲಿ ರಾಜರ ಆಳ್ವಿಕೆಯ ಸಮಯದಲ್ಲಿ ನಾಲ್ಕು ನಾಡು ಅರಮನೆಯಲ್ಲಿ ರಾಜರ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದರು. ಈಗ ಯವಕಪಾಡಿಯಲ್ಲಿ ಮಾತ್ರ ಕಂಡುಬರುತ್ತಾರೆ. ಈಗ ಇವರ ಸಂಖ್ಯೆ ಸುಮಾರು 160 ಮಾತ್ರವಿದೆ. ಕಾಪಳರು ಮಲಬಾರಿನಿಂದ ವಲಸೆ ಬಂದವರೆಂದು ಹೇಳುತ್ತಾರೆ. ಬೈಡಮಲೆ ಭೂತನಿಗೆ ಹೆದರಿ ಓಡಿಹೋಗಿ ಚೋಳೆ ಸೋಮೇಶ್ವರನ ಖಜಾನೆಯನ್ನು ಕಾಯುತ್ತಿದ್ದರಿಂದ (ಕಾವಲ್ಕಾರರು) ಕಾಪಳರೆಂಬ ಹೆಸರು ಬಂದಿದೆಯೆಂದು ಹೇಳುತ್ತಾರೆ. ಕೊಡಗಿಗೆ ಇವರ ವಲಸೆ ಸುಮಾರು 17ನೇ ಶತಮಾನದ ಕಡೇಭಾಗವೆಂದು ಅಭಿಪ್ರಾಯವಿದೆ. ದೊಡ್ಡವೀರ ರಾಜನು ನಾಲ್ಕುನಾಡಿನಲ್ಲಿ ಅರಮನೆಯನ್ನು ಕಟ್ಟುವಾಗ ಇವರನ್ನು ಕೂಲಿಗಳಾಗಿ ನೇಮಿಸಿಕೊಂಡು, ನಂತರ ಜಮೀನು ಕೊಟ್ಟು ಇಟ್ಟುಕೊಂಡನು. ಇವರು ಅವನಿಗೆ ಅಂಗರಕ್ಷಕರಾಗಿದ್ದರಲ್ಲದೆ ಮರಣದಂಡನೆ ನೀಡಿದವರಿಗೆ ಶಿರಚ್ಛೇದಕರಾಗಿ ಕೆಲಸ ಮಾಡುತ್ತಿದ್ದರು. ಕಾಪಳರೆಂಬ ಹೆಸರು ಅವರ ಮೂಲ ವೃತ್ತಿಯಾದ ಕಾವಲು ಕಾಯುವುದರಿಂದ ಬಂದಿರಬಹುದೆಂಬ ಅಭಿಪ್ರಾಯವಿದೆ. ಕೊಡವ ಭಾಷೆಯಲ್ಲಿ ಕಾವಲು ಕಾಯುವವರಿಗೆ ಕಾವಲ್‌ಕಾರ್ ಎನ್ನುತ್ತಾರೆ. ಅವರ ದೇವತೆಯಾದ ಗಣಪತಿಯನ್ನು ಕೊಡವ ಭಾಷೆಯಲ್ಲಿ ಕಾಪಾಲಿನ್ ಎನ್ನುತ್ತಾರೆ. ಇದರಿಂದಲೂ ಕಾಪಳರು ಎಂಬ ಹೆಸರು ಬಂದಿರಬಹುದೆಂದು ಅಭಿಪ್ರಾಯವಿದೆ. ನೀಲಗಿರಿ ಬೆಟ್ಟದ ಗುಡಲೂರು ತಾಲೂಕಿನ ಚೇರಂಗೋಡಿನ ಹಟ್ಟಿಯಾದ 'ಕಪ್ಪಲ' ಅವರ ಮೊದಲಿನ ಊರಾಗಿದ್ದು ಕೊಡಗಿಗೆ ಅಲ್ಲಿಂದ ವಲಸೆ ಬಂದವರಾದುದರಿಂದ 'ಕಾಪಲ' ಎಂಬ ಹೆಸರು ಬಂದಿರಬಹುದೆಂಬ ಅಭಿಪ್ರಾಯವೂ ಇದೆ. ಕಾಪಳರಲ್ಲಿ ಕುಡಿ ಅಥವಾ ಗುಂಪುಗಳಿವೆ. ಕೆಲವುಗಳು ಈ ರೀತಿ ಇವೆ. ಬೊಲ್ಲದದ, ಅರಂಗಡ್, ಮುತ್ತು ಕೊಲೆಕುಟ್ಟಿ ಇತ್ಯಾದಿ. ಅವರು ತಮ್ಮ ಕುಡಿಯನ್ನು ಬಿಟ್ಟು ತಮ್ಮತಮ್ಮಲ್ಲೇ ವಿವಾಹವಾಗುತ್ತಾರೆ. ಇವರು ವಿವಾಹ ಸಂಪ್ರದಾಯಗಳು ಮೊದಲಾದವುಗಳಲ್ಲಿ ಹೊಲೆಯರನ್ನು ಹೋಲುತ್ತಾರೆ. ಕಾಪಳರು ಭೂತ ಪೂಜೆಯನ್ನು ಮಾಡುತ್ತಾರೆ. ಅರಂಗಡರು ಪರಿಂದ್ರ, ಕೋಲಪ್ಪ ಮತ್ತು ಸೋಮೇಶ್ವರನನ್ನು ಪೂಜಿಸಿದರೆ, ಬೊಲ್ಲದರು ಚೋಳೆ, ಪೋವದಿಯನ್ನು ಮತ್ತು ಕೊಲೆಕುಟ್ಟಿಗಳು ಕರಿಂಗಾಳಿ, ಪೋವದಿ ಮತ್ತು ಚಾಮುಂಡಿಯನ್ನು ಪೂಜಿಸುತ್ತಾರೆ.

ಇವರು ಸಾಮಾನ್ಯ ನಿಲುವಿನವರು ; ಬಣ್ಣ ಕಪ್ಪು. ಹಿಂದೆ ಮರದ ಸೊಪ್ಪು ತೊಗಟೆಯಿಂದ ಮೈಮುಚ್ಚಿಕೊಳ್ಳುತ್ತಿದ್ದ

ರೆಂದು ಪ್ರತೀತಿ. ಇವರನ್ನು ಅಸ್ಪೃಶ್ಯರೆಂದು ಪರಿಗಣಿಸಿರಲಿಲ್ಲ. ಆದರೆ ಅದೇ ಅಂತಸ್ತಿಗೆ ಸೇರಿದವರಾಗಿದ್ದರು. ಇವರ ಭಾಷೆ ತಮಿಳು ಪದಗಳಿಂದ ಕೂಡಿದ ಮಲೆಯಾಳಂ. ಹಳೇ ಕೊಡಗು ಪ್ರಾಂತದಲ್ಲಿ ಇವರನ್ನು ಪರಿಶಿಷ್ಟ ಬುಡಕಟ್ಟಿಗೆ ಸೇರಿಸಲಾಗಿತ್ತು. ಇವರು ತಮ್ಮ ದೇವತೆಗಳಿಗೆ ಹರಕೆ ತೀರಿಸಲು ಕೇರಳಕ್ಕೆ ಹೋಗಿ ಬರುತ್ತಿರುತ್ತಾರೆ. ಅತಿ ಬಡವರಾಗಿದ್ದು ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಕೃಷಿಕಾರ್ಮಿಕರಾಗಿರುವ ಇವರಲ್ಲಿ ಹಿಂದೆ ಗುಂಪಿನ ಯಜಮಾನನೊಬ್ಬನಿದ್ದಿರಬಹುದಾದರೂ ಈಗ ಆ ಸಂಸ್ಥೆ ಉಳಿದು ಬಂದಿಲ್ಲ. ಬಾಲ್ಯ ವಿವಾಹ ರೂಢಿಯಲ್ಲಿಲ್ಲ. ತಮ್ಮ ಹಳೇ ವಿವಾಹ ಸಂಪ್ರದಾಯಗಳನ್ನು ಬಿಟ್ಟು ಕೊಡವರ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಾರೆ. ಬಹುಪತ್ನಿತ್ವ ರೂಢಿಯಲ್ಲಿದೆ. ವಿವಾಹವಾದ ಸ್ತ್ರೀಯನ್ನು ಕಾಲುಂಗರದಿಂದ ಗುರ್ತಿಸುತ್ತಾರೆ. ಇತ್ತೀಚೆಗೆ ಕೇರಳದಿಂದ ಬಂದ ಹುಡುಗರು, ಮರಾಟಿ ಹುಡುಗರು ಕಾಪಳ ಹುಡುಗಿಯರನ್ನು ಮದುವೆಯಾಗಿ ಅವರಲ್ಲೇ ನೆಲೆಸಿದ್ದಾರೆ. ಈಗ ಇವರಲ್ಲಿ ಪ್ರೌಢಶಾಲೆಯ ಒಂಬತ್ತನೇ ತರಗತಿಯವರೆಗೆ ಓದಿದ ಒಬ್ಬ ಹುಡುಗ, ಹುಡುಗಿ ಇದ್ದಾರೆ. ಇವರೇ ಹೆಚ್ಚಿಗೆ ಓದಿದವರು. ರಾಜರ ಕಾಲದಲ್ಲಿ ಕೊಟ್ಟ ಅಲ್ಪಸ್ವಲ್ಪ ಜಮೀನಿದೆ. ಇವರಲ್ಲಿ ಕನ್ಯೆ ಮೈನೆರೆದಾಗ ಮೊದಲ ದಿನ ಉಪವಾಸವಿರುವ ಸಂಪ್ರದಾಯವಿದೆ. ಇವರು ಹುಟ್ಟು ಸಾವುಗಳಲ್ಲಿ ಮೈಲಿಗೆ ಆಚರಿಸುತ್ತಾರೆ. ಸತ್ತವರನ್ನು ಹೂಳುತ್ತಾರೆ. ಆದರೆ ತುಂಬಾ ವಯಸ್ಸಾದವರು ಸತ್ತಾಗ ಸುಡುತ್ತಾರೆ. ದೇವರ ಹೆಸರಿನಲ್ಲಿ ಕೋಲಗಳನ್ನು ಕಟ್ಟಿಸುತ್ತಾರೆ. ಕುಲಿಯ, ಚೌಡಿಯರನ್ನು ಪೂಜಿಸುತ್ತಾರೆ. ಇವರು ಮೊದಲು ಮಾತೃಪ್ರಧಾನವಂಶೀಯರಾಗಿದ್ದದ್ದಕ್ಕೆ ಪುರಾವೆಗಳು ದೊರಕುವುದಾದರೂ ಈಗ ಪಿತೃಪ್ರಧಾನವಂಶೀಯರಾಗಿದ್ದರೆಂದು ಎ.ಎ.ಡಿ. ಲೂಯಿಸ್ ತಿಳಿಸುತ್ತಾರೆ.

**ಕುಡಿಯರು**

ಕುಡಿಯರನ್ನು ಮಲ್ಲೆ ಕುಡಿಯಾ ಎಂದು ಕರೆಯುತ್ತಾರೆ. ಇವರು ದಕ್ಷಿಣ ಕನ್ನಡದ ಸರಹದ್ದಿನಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಭಾಗಮಂಡಲ ನಾಡು, ನಾಪೋಕ್ಲು ಮತ್ತು ವೀರರಾಜಪೇಟೆ ನಾಡುಗಳಲ್ಲಿಯೂ ಕಂಡುಬರುತ್ತಾರೆ. ಇವರು ಹಿಂದೆ ಅರಣ್ಯವಾಸಿಗಳಾಗಿದ್ದರು. ಜಿಲ್ಲೆಯ ಮೂಲ ನಿವಾಸಿಗಳಲ್ಲಿ ಇವರೂ ಸೇರಿದ್ದಾರೆ. ಹಿಂದೆ ಇವರ ಮುಖ್ಯ ವೃತ್ತಿ ಬೈನೇ ಮರದಿಂದ ಹೆಂಡಯಿಳಿಸುವುದಾಗಿದ್ದಿತು. ಇವರ ಮನೆ ಮಾತು ತುಳು, ಆದರೆ ಕೊಡವ, ಕನ್ನಡ ಭಾಷೆಯನ್ನೂ ಮಾತನಾಡುತ್ತಾರೆ. ಇವರದೂ ಸಾಮಾನ್ಯ ಎತ್ತರದ ವ್ಯಕ್ತಿತ್ವ ಮೈಬಣ್ಣ ಕಪ್ಪು; ಹೆಂಗಸರು ಕೊಡವರಂತೆ ಆಭರಣ ಧರಿಸುತ್ತಾರೆ. ಇವರು ಗೋದಾವರಿ ಜಿಲ್ಲೆಯಿಂದ ಪಶ್ಚಿಮ ಘಟ್ಟಗಳಿಗೆ ವಲಸೆ ಬಂದಿರಬಹುದೆಂಬ ಅಭಿಪ್ರಾಯವೂ ಇದೆ. ಇವರನ್ನು ಅಸ್ಪಶ್ಯರಂತೆ ಕಾಣುವುದಿಲ್ಲ. ಬೊಂಬುಗಳನ್ನು ಸಿಗಿದು ತಡಿಕೆ ಮಾಡಿ ಅವುಗಳಿಗೆ ಮಣ್ಣು ಮೆತ್ತಿ ಗೋಡೆ ಕಟ್ಟಿದ ಗುಡಿಸಿಲುಗಳಲ್ಲಿ ವಾಸಿಸುತ್ತಾರೆ. ಗುಡಿಸಿಲಿನ ಪಕ್ಕಗಳಲ್ಲಿ ಹಂದಿಗಳನ್ನು ಕೂಡಲು, ಕೋಳಿಗಳನ್ನು ಸಾಕಲು ಅವಕಾಶ ಮಾಡಿಕೊಂಡಿರುತ್ತಾರೆ; ಹಾಗೂ ಸಣ್ಣ ತೋಟವನ್ನು ಮಾಡಿಕೊಂಡಿರುತ್ತಾರೆ. ಇವರು ತಮ್ಮ ಕುಲಗಳನ್ನು ತಾವು ವಾಸಿಸುವ ಸ್ಥಳಗಳಿಂದಲೋ, ಬೆಟ್ಟಗಳಿಂದಲೋ, ತಮ್ಮ ಪೂರ್ವಜರಿಂದಲೋ, ಕುಲದೇವತೆಯಿಂದಲೋ ಗುರ್ತಿಸಿಕೊಳ್ಳುತ್ತಾರೆ. ಇವರಲ್ಲಿ ಎರಡು ಒಳಪಂಗಡಗಳಿವೆ ಪನೆಕುಡಿಯ ಮತ್ತು ತೇಮೆಕುಡಿಯ. ಪನೆಕುಡಿಯರನ್ನು ಬಯ್ನೆಕುಡಿಯ, ಗೆಜ್ಜೆಕುಡಿಯ, ಬೊಳ್ಳೆಕುಡಿಯ, ಅಚ್ಚೆಕುಡಿಯ, ಪೂಮಲೆಕುಡಿಯ ನೀರಾಳಿಕುಡಿಯರೆಂದು ಕರೆಯುತ್ತಾರೆ ತೇಮೆಕುಡಿಯರನ್ನು ತೇಮೆಯ, ತೇಮೆ ತಂಡ, ತೇಮಲೆಯ, ತೇಮಲೆಕುಡಿಯ, ತೆಕ್ಕುಡಿಯ, ಮಲೆಕುಡಿಯ, ತೊರಕುಡಿಯ, ಮಲೆಪಾಳಿಯ ಎಂದು ಕರೆಯುತ್ತಾರೆ. ಪನೆಕುಡಿಯರ ಪ್ರಧಾನ ವೃತ್ತಿ ಬಯ್ನೆ (ಬಗನಿ) ಮರದಿಂದ ಹೆಂಡ ಇಳಿಸುವುದು. ಹೆಂಡ ಇಳಿಸುವವರು ಮಹಿಳೆಯರು. ಪುರುಷರು ಕೃಷಿಕರು. ತೇಮೆಕುಡಿಯರ ಪ್ರಧಾನವೃತ್ತಿ ಜೇನು ಸಂಗ್ರಹಣೆ. ಉಪವೃತ್ತಿಯಾಗಿ ಬೆತ್ತ, ಓಟೆ, ಬಿದರು ದೆಬ್ಬೆಗಳನ್ನು ಹೆಣೆಯುತ್ತಾರೆ. ಈ ಎರಡು ಪಂಗಡಗಳವರು ಒಟ್ಟಿಗೆ ಊಟ ಮಾಡುತ್ತಿರಲಿಲ್ಲ, ಪರಸ್ಪರ ವಿವಾಹ ನಿಷೇಧವಿತ್ತು.

ಕುಡಿಯರಲ್ಲಿ ಸೋದರಮಾವನ ಅಥವಾ ಸೋದರತ್ತೆಯ ಮಗಳನ್ನು ವಿವಾಹವಾಗುವುದು ರೂಢಿಯಲ್ಲಿದೆ. ಹಿಂದೆ ಎಂಟು ರೂಪಾಯಿ ತೆರ ಕೊಡುವುದು ರೂಢಿಯಲ್ಲಿತ್ತು. ಒಂದೇ ಕುಲದವರಲ್ಲಿ ವಿವಾಹ ಸಂಬಂಧ ಏರ್ಪಡುತ್ತಿರಲಿಲ್ಲ. ಇವರ ವಿವಾಹಗಳು ಕೊಡಗರ ವಿವಾಹವನ್ನು ಹೋಲುತ್ತವೆ. ವಿವಾಹದಲ್ಲಿ ಧಾರೆ ಎರೆಯುವುದು, ತಾಳಿ ಕಟ್ಟುವುದು, ತಲೆಯ ಮೇಲೆ ಅಕ್ಕಿ ಹಾಕುವುದು ಮೊದಲಾದ ಸಂಪ್ರದಾಯಗಳಿವೆ. ವಿವಾಹ ವಿಚ್ಛೇದನ, ಪುನರ್ವಿವಾಹ, ವಿಧವಾ ವಿವಾಹಗಳು ರೂಢಿಯಲ್ಲಿವೆ. ಇವರಲ್ಲಿ ಹಿಂದೆ ಬಹುಪತಿತ್ವ ರೂಢಿಯಲ್ಲಿತ್ತೆಂದೂ ಈಗ ಕಂಡುಬರುತ್ತಿಲ್ಲವೆಂದೂ ತಿಳಿದುಬಂದಿದೆ. ಹುಡುಗಿಯರಿಗೆ ಮೈನೆರೆದ ನಂತರ ವಿವಾಹ ಮಾಡುತ್ತಿದ್ದರು. ಮೈನೆರೆದಾಗ ಬೇರೆ ಒಂದು ಗುಡಿಸಿಲಿನಲ್ಲಿ 16 ದಿನಗಳವರೆಗೆ ಬಿಡುತ್ತಿದ್ದರು. ಅವಳು ಸ್ನಾನ ಮಾಡಿ ಬಂದ ಮೇಲೆ ಆ

ಗುಡಿಸಲನ್ನು ಸುಟ್ಟು ಹಾಕುತ್ತಿದ್ದರು. ತೇಮೆ ಕುಡಿಯರಲ್ಲಿ ಮೊದಲಿಗೆ ಹುಡುಗಿ ಮೈನೆರೆದಾಗ 40 ದಿನಗಳ ಸೂತಕವಿರುತ್ತಿತ್ತು. ಈಗ 16 ದಿವಸಗಳಿಗೆ ಇಳಿಸಿದ್ದಾರೆ. ಮಗು ಹುಟ್ಟಿದಾಗ ತಾಯಿಗೆ 16 ದಿನಗಳವರೆವಿಗೆ ಮೈಲಿಗೆ ಇರುತ್ತದೆ. ಮಗುವಿಗೆ 3 ಅಥವಾ 4ನೇ ತಿಂಗಳಿನಲ್ಲಿ ಹೆಸರಿಟ್ಟು ತೊಟ್ಟಿಲಿಗೆ ಹಾಕುತ್ತಾರೆ. ವಯಸ್ಸಾದವರು ಸತ್ತಾಗ ಸುಡುತ್ತಾರೆ. ಉಳಿದವರನ್ನು ಹೂಳುತ್ತಾರೆ. ಸುಟ್ಟ ಮೂರನೇಯ ದಿನ ಬೂದಿಯನ್ನು ಒಂದು ಮರದ ಕೆಳಗೆ ಗುಡ್ಡೆ ಹಾಕುತ್ತಾರೆ. ಸತ್ತಾಗ 16 ದಿವಸಗಳು ಮನೆಯವರು ಮೈಲಿಗೆಯನ್ನು ಆಚರಿಸುತ್ತಾರೆ. ಕಡೆಯ ದಿನ ತಮ್ಮ ಜನಗಳಿಗೆ ಊಟ ಹಾಕುತ್ತಾರೆ.

ಕುಡಿಯರು ತಮ್ಮ ಹಿರಿಯರನ್ನು ಪೂಜಿಸುತ್ತಾರೆ. ಕಾಡಿನ ಒಳಗಡೆ ತಮ್ಮ ದೇವಸ್ಥಾನಗಳಲ್ಲಿ ತಮ್ಮಯ್ಯ ಮತ್ತು ಮಲ ತಂಪುರನ್ ಎಂಬ ಭೂತಗಳನ್ನು ಪೂಜಿಸುತ್ತಾರೆ. ಪನೆ ಅಥವಾ ಪೂಮಲೆ ಕುಡಿಯರು ಕಾಫಿ, ಏಲಕ್ಕಿ, ತೋಟಗಳಲ್ಲಿ ಕೆಲಸ ಮಾಡುತ್ತಾರೆ. ಅನ್ನ, ರಾಗಿ ಅಂಬಲಿಯನ್ನು ಆಹಾರವಾಗಿ ತೆಗೆದುಕೊಳ್ಳುತ್ತಾರೆ. ಇವರು ಪಿತೃಪ್ರಧಾನ ವಂಶಿಗಳಾಗಿದ್ದು ಮಕ್ಕಳ ಸಂತಾನ ನಿಯಮಗಳನ್ನು ಅನುಸರಿಸುತ್ತಾರೆ. ತೇಮೆ ಕುಡಿಯರು ಕೊಳಕೆ, ಚುಮಲೆ, ನಿದ್ದೆಮಲೆ, ಪೂಂಗಮಲೆ, ಕಣದಂಡ ಮಲೆ ಮೊದಲಾದ ಬೆಟ್ಟಗಳಲ್ಲಿ ಕಂಡು ಬರುತ್ತಾರೆ. ಇವರಲ್ಲಿ ಅನೇಕ ಕುಲಗಳಿವೆ. ಕುಲಗಳಿಂದ ಹೊರಗೆ ವಿವಾಹವಾಗುತ್ತಾರೆ. ಕೆಲವು ಕುಲಗಳ ಹೆಸರುಗಳು ಈ ರೀತಿ ಇವೆ. ಯಲಮಲಕ್ಕರ್, ಯೆಡಪಲಕ್ಕರ್, ಸುಳ್ಳಿಕರ್, ಕೆಮ್ಮಾಡಿಕರ್ ಪೊಂಗಿನ್‌ಕರ್, ಇತ್ಯಾದಿ. ಇವರು ಮಾತೃ ವಂಶೀಯರು ಮತ್ತು ಆಸ್ತಿಯ ಹಕ್ಕು ಹೆಣ್ಣು ಮಕ್ಕಳಿಗೆ ಹೋಗುತ್ತದೆ.

ಕುಡಿಯರು ಕುಲದೇವತಾ ಪದ್ಧತಿ (ಟೊಟೆಮಿಸಂ)ಯಲ್ಲಿ ನಂಬಿಕೆಯುಳ್ಳವರು. ಕಾಡಿನಲ್ಲಿ ಮರ, ಕಲ್ಲಿನಿಂದ ಮಾಡಿದ ವಿಗ್ರಹಗಳೂ, ಕಬ್ಬಿಣದ ಸಲಕರಣೆಗಳನ್ನು ಇವರುದೇವಸ್ಥಾನಗಳಲ್ಲಿಟ್ಟು ಪೂಜಿಸುತ್ತಾರೆ. 'ಕಲ್ಲುರ್ಟಿ'ಯೆಂಬುದು ಕಾಳಿಯಂತೆ ಅವರು ಪೂಜಿಸುವ ಒಂದು ದೇವತೆ. ಇವರು ಕಾವೇರಿ ಮಾತೆ, ಭೈರವ, ಪಾಂಡವರು, ಪಂಜುರ್ಲಿ ಮತ್ತು ಗುಳಿಕ ಪೂಜಿಸುತ್ತಾರೆ.

### ಕುರುಬರು

ಬೆಟ್ಟಕುರುಬ, ಜೇನುಕುರುಬ ಜಾತಿಯವರಲ್ಲದ ಕುರುಬರು ಕೊಡಗಿನಲ್ಲಿದ್ದಾರೆ. ಇವರನ್ನು ಹಾಲುಮತದವರು, ಹಾಲು ಕುರುಬರೆಂದು ಕರೆಯುತ್ತಾರೆ. ಈ ಜಿಲ್ಲೆಯಲ್ಲಿ ಇವರನ್ನು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿಸಲಾಗಿದೆ. ಜಿಲ್ಲೆಯಲ್ಲಿ 1981 ಜನಗಣತಿಯ ಪ್ರಕಾರ ಇವರ ಸಂಖ್ಯೆ 4,595 ಆಗಿತ್ತು. ಇವರು ಬಹಳ ಹಿಂದೆಯೇ ಜಿಲ್ಲೆಗೆ ವಲಸೆ ಬಂದವರೆಂಬ ಅಭಿಪ್ರಾಯವಿದೆ. ಹಿಂದೆ ಇವರ ಮುಖ್ಯ ಉದ್ಯೋಗ ಕುರಿಸಾಕುವುದು ಹಾಗೂ ಕಂಬಳಿ ನೇಯುವುದಾಗಿತ್ತು. ಈಗ ಕೆಲವರು ಸಣ್ಣ ಗೇಣಿದಾರರಾಗಿದ್ದಾರೆ. ಉಳಿದವರು ಕಾಫಿ ತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಜಿಲ್ಲೆಯಲ್ಲಿ ಸೋಮವಾರಪೇಟೆ ತಾಲೂಕಿನ ತೊರೆನೂರು, ಶನಿವಾರಸಂತೆ, ಬಸವನ ಅರೆ, ಹಿತ್ತಲಗೇರಿ, ಹೆಬ್ಬಾಲೆ, ಕೊಡ್ಲಿಪೇಟೆ, ಕೂಡ್ಲೂರು, ವಾಲ್ನೂರು, ವೀರರಾಜಪೇಟೆ ತಾಲೂಕಿನ ತಿತಿಮತಿ, ಬದ್ರಗೋಳ, ಕೊಪ್ಪ (ಬದ್ರಗೋಳ ಸಮೀಪ) ಗೋಣಿಕೊಪ್ಪಲು, ಒಂಟಿಯಂಗಡಿ, ಆರ್‌ಜಿಗ್ರಾಮ, ಪೊನ್ನಂಪೇಟೆ, ಪಂಚವಳ್ಳಿ, ಅಂಕನಹಳ್ಳಿ, ಕುಟ್ಟ, ಮಾಲ್ದಾರೆ, ಮೊದಲಾದ ಕಡೆಗಳಲ್ಲಿ ಕಂಡುಬರುತ್ತಾರೆ. ಮಡಿಕೇರಿ ತಾಲೂಕಿನಲ್ಲಿ ಇವರ ಸಂಖ್ಯೆ ಕಡಿಮೆ. ಕುರುಬರಲ್ಲಿ ಹತ್ತಿ ಕಂಕಣ, ಉಣ್ಣೆಕಂಕಣ, ಅಂಡೆ ಕುರುಬ, ಜಡೆ ಕುರುಬ, ಆದಿತ್ಯವಾರದವರು, ಬೃಹಸ್ಪತಿ ವಾರದವರು, ಸೋಮವಾರದವರು ಮೊದಲಾದ ಒಳಪಂಗಡಗಳಿವೆ. ಕೊಡಗು ಜಿಲ್ಲೆಯಲ್ಲಿರುವವರು ಹೆಚ್ಚಾಗಿ ಉಣ್ಣೆಕಂಕಣದವರು ಮತ್ತು ಸೋಮವಾರದವರು. ಇವರಲ್ಲಿ ಬಾಸರಕುಲ, ಬೆಳ್ಳಿಕುಲ ಮೊದಲಾದ ಕುಲಗಳು, ಹವಿತಾ ಮೊದಲಾದ ಗೋತ್ರಗಳೂ ಇವೆಯೆಂದು ಹೇಳುತ್ತಾರೆ. ಈಗ ಜಿಲ್ಲೆಯ ಕುರುಬರು ಬೆಟ್ಟದ ತುಂಗ, ಗನ್ನಹಳ್ಳಿಗಳ ಬೀರೇದೇವರನ್ನು, ಮೈಲಾರಲಿಂಗ, ಬೈರೇದೇವರು, ಚಿಕ್ಕಯ್ಯ, ದೊಡ್ಡಯ್ಯ(ನಾಗಮಂಗಲ ತಾಲೂಕು ತುಪ್ಪದ ಮಠ), ಹೊಂಗನೂರಮ್ಮ, ಮಾತಂಗಿ, ಮಾಸಮ್ಮ ಮೊದಲಾದ ದೇವರು–ದೇವತೆಗಳನ್ನು ಪೂಜಿಸುತ್ತಾರೆ. ಕೊಡಗಿನಲ್ಲಿ ಇವರ ಗುರು ಕುಟುಂಬಗಳಾದ ಒಡೆಯರಾಗಲೀ, ಕರಡಿ ಚರ್ಮವನ್ನು ಹೊದ್ದು, ಅದರದೇ ಟೋಪಿಯನ್ನು ಹಾಕಿಕೊಂಡು ಕುಣಿಯುವ ಮೈಲಾರದೇವರ ಭಕ್ತರಾದ ಗೊರವರಾಗಲಿ ಇಲ್ಲ. ಕೊಡಗಿನಲ್ಲಿ ಡೊಳ್ಳು ಕುಣಿತವೂ ಇಲ್ಲ. ಇವರ ವಿವಾಹಗಳಿಗೆ, ಪೌರೋಹಿತ್ಯಕ್ಕೆ ಬ್ರಾಹ್ಮಣರನ್ನು ಕರೆಸುತ್ತಾರೆ. ವಿಧವಾ ವಿವಾಹ ರೂಢಿಯಲ್ಲುಂಟು. ಇವರು ಮೈಸೂರು ಕಡೆಯಿರುವ ಕುರಬರೊಂದಿಗೆ ವಿವಾಹ ಸಂಬಂಧ ಬೆಳೆಸುತ್ತಾರೆ. ಇವರಲ್ಲಿ ಸತ್ತವರನ್ನು ಹೂಳುತ್ತಾರೆ.

### ಕುಂಬಾರರು

ಕುಂಬಾರರು ಹಳ್ಳಿ ಸಮುದಾಯದ ಆಯಗಾರರಲ್ಲಿ ಒಬ್ಬರು. ಕೊಡಗಿನ ಕುಂಬಾರರಲ್ಲಿ ಮೈಸೂರು ಸೀಮೆ,

ಕೇರಳ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಬಂದವರಿದ್ದಾರೆ. ಕನ್ನಡ ಮಾತನಾಡುವ ಮೈಸೂರು ಸೀಮೆಯವರನ್ನೂ, ಮಲಯಾಳಿ ಮಾತನಾಡುವ ಕೇರಳದವರನ್ನೂ 'ಕೊಯುಯರ್‌ರಿ' ಎಂದು ಕರೆಯುತ್ತಾರೆ. ಇವರ ಇತರ ಹೆಸರುಗಳು ಕೋಯುವ, ಕುಂಡೊಳ, ಮಂಬೊಳ ಮತ್ತು ಚೋಯು. ಇವರ ಮುಖ್ಯ ಉದ್ಯೋಗ ಮಡಿಕೆ ಮತ್ತು ಇತರ ಮಣ್ಣಿನ ಪಾತ್ರೆಗಳನ್ನು ಹಾಗೂ ಹರಕೆ ಗೊಂಬೆಗಳನ್ನು ಮಾಡುವುದು. ಮೈಸೂರು ಕಡೆಯ ಕುಂಬಾರರಲ್ಲಿ ಗುಂಡಭಕ್ತರು ಮತ್ತು ಶಾಲಿವಾಹನನ ವಂಶಸ್ಥರು ಎಂಬ ಎರಡು ಗುಂಪುಗಳಿವೆ. ಗುಂಡಭಕ್ತರನ್ನು ಚಕ್ರಸಾಲೆಯವರು ಎಂದೂ ಕರೆಯುತ್ತಾರೆ. ಇವರಲ್ಲಿ ತೆಲಗು, ಕನ್ನಡ ಮಾತನಾಡುವವರೂ ಇದ್ದಾರೆ. ಕನ್ನಡ ಮಾತನಾಡುವವರಲ್ಲಿ ಕಸ್ತೂರಿ, ನಾಗರ, ಸಂಪಿಗೆ ಮೊದಲಾದ ಒಳಗುಂಪುಗಳಿವೆ. ಮೂರ್ನಾಡು, ನಾಪೋಕ್ಲು ಬಳಿ ಕೊಳಗೇರಿ, ಬೆಟ್ಟಗೇರಿ ಮೊದಲಾದ ಕಡೆಗಳಲ್ಲಿ ದಕ್ಷಿಣ ಕನ್ನಡದ ಬೆಳ್ತಂಗಡಿ, ಉಜಿರೆ, ಕಡೆಗಳಿಂದ ವಲಸೆ ಬಂದ ಕನ್ನಡ ಭಾಷಿಕ ಕುಂಬಾರರಿದ್ದಾರೆ. ಇವರು ದೊಡ್ಡವೀರ ರಾಜನ ಕಾಲದಲ್ಲಿ ವಲಸೆ ಬಂದವರೆಂದು ಹೇಳುತ್ತಾರೆ. ಇವರು ವೆಂಕಟೇಶ್ವರನನ್ನು ಪೂಜಿಸುತ್ತಾರೆ. ಇವರಲ್ಲಿ ಶ್ವೇತ ವರ್ಣದ, ನೀಲಿಕಣ್ಣುಳ್ಳ ಜನರೂ ಇದ್ದಾರೆ. ಇವರ ಹೆಂಗಸರು ಕೊಡವರಂತೆ ಬಟ್ಟೆ ಧರಿಸುತ್ತಾರೆ. 'ಮಕ್ಕಳ ಕಟ್ಟು' ರೂಢಿಯಲ್ಲಿದೆ. ಇವರ ಸಮಾಜದ ಯಜಮಾನನ್ನು 'ಪಟದಾರಿ' ಎಂದು ಕರೆಯುತ್ತಾರೆ. ಈಗಲೂ ಇವರು ದಕ್ಷಿಣ ಕನ್ನಡ ಜಿಲ್ಲೆಯವರೊಂದಿಗೆ ಸಂಬಂಧ ಮಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕುಂಬಾರರು ಕೆಂಪುಮಡಿಕೆಗಳನ್ನು ಮಾಡುತ್ತಾರೆ. ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ 1984ರಲ್ಲಿ ಜಿಲ್ಲೆಯಲ್ಲಿ 2,099 ಜನ ಕುಂಬಾರರಿದ್ದರು.

### ಕೊಡವರು

ಕೊಡಗಿನ ನಿವಾಸಿಗಳಲ್ಲಿ ಕೊಡವರು ಅತಿ ಮುಖ್ಯರಾದವರು. ಕೊಡವರ ಹೆಸರು ಮೊದಲಿಗೆ ಕ್ರಿ.ಶ. 1174 ರ ಹುಣಸೂರು ತಾ।।ನ ಶಾಸನದಲ್ಲಿ ಬರುತ್ತದೆ. ಆದುದರಿಂದ ಅದಕ್ಕೂ ಕೆಲವು ಶತಮಾನಗಳಿಗಿಂತ ಹಿಂದೆಯೇ ಅವರು ಈ ಭೂಪ್ರದೇಶದಲ್ಲಿದ್ದರೆಂಬುದು ಸ್ಪಷ್ಟವಾಗುತ್ತದೆ. ಮೊಗ್ಲಿಂಗನು 1839–40 ರಲ್ಲಿ ಜಿಲ್ಲೆಯಲ್ಲಿ 17,096 ಜನ ಕೊಡವರಿದ್ದರೆಂದೂ, 1854 ರ ಹೊತ್ತಿಗೆ ಅವರ ಸಂಖ್ಯೆ 25,000 ಆಗಿದ್ದಿರಬಹುದೆಂದು ತಿಳಿಸುತ್ತಾನೆ.

ಜಿಲ್ಲೆಯ ಕೊಡವರ ಸಂಖ್ಯೆ 1871 ಜನಗಣತಿ ಪ್ರಕಾರ 26,389 ಆಗಿದ್ದುದು 1881 ಜನಗಣತಿಯಲ್ಲಿ 27,033 ಕ್ಕೂ 1891 ರಲ್ಲಿ 32,611 ಕ್ಕೂ 1901 ರಲ್ಲಿ 36,091 ಕ್ಕೂ ಹೆಚ್ಚಿತ್ತೆಂದು ಕಂಡುಬರುತ್ತದೆ. ಒಂದನೇ ಮತ್ತು ಎರಡನೇ ಹಿಂದುಳಿದ ವರ್ಗಗಳ ಆಯೋಗಗಳ ಪ್ರಕಾರ 1972 ಹಾಗೂ 1984ರಲ್ಲಿ ಜಿಲ್ಲೆಯಲ್ಲಿ ಕೊಡವರ ಸಂಖ್ಯೆಯನ್ನು ಕ್ರಮವಾಗಿ 86,266 ಎಂದೂ 70,193 ಎಂದೂ ಅಂದಾಜು ಮಾಡಲಾಗಿದೆ.

ಕೊಡವರ ಮೂಲದ ಬಗ್ಗೆ ಅನೇಕ ಸಿದ್ಧಾಂತಗಳಿವೆ. ಡಾ।। ಹಟ್ಟನ್ ಎಂಬ ಮಾನವ ಶಾಸ್ತ್ರಜ್ಞರ ಪ್ರಕಾರ ಕೊಡವರು ಮೊಹಂಜದಾರೋ, ಹರಪ್ಪ ಸಂಸ್ಕೃತಿಗಳು ಸುಸ್ಥಿತಿಯಲ್ಲಿದ್ದಾಗಲೇ ವಾಯುವ್ಯ ಕಣಿವೆಯ ಮೂಲಕ ಸಿಂಧೂ ಕಣಿವೆಗೆ ವಲಸೆ ಬಂದು ಮುಂದೆ ಯಾವುದೋ ಕಾರಣದಿಂದಾಗಿ ಪಶ್ಚಿಮ ಕರಾವಳಿಯ ಮೂಲಕ ಕೊಡಗಿಗೆ ಬಂದರು. ಹರ್ಬರ್ಟ್ ರಿಸ್ಲೆ ಎಂಬುವರು ಕೊಡವರು ಇಂಡೋ – ಸಿಥಿಯನ್ ವರ್ಗಕ್ಕೆ ಸೇರಿದವರೆಂದೂ ತಿಳಿಸುತ್ತಾರೆ. ರೈಸ್‌ರವರು ಸಿಥೋ–ದ್ರಾವಿಡಿಯನ್ ವರ್ಗಕ್ಕೆ ಸೇರಿದವರೆಂದು ತಿಳಿಸುತ್ತಾರೆ. ಹೆನ್ರಿ ಹೆರಾಸ್‌ರವರು ಕೊಡವರು ಮೊಹೆಂಜೊದಾರೋ ಕಡೆಯಿಂದ ಕೊಡಗಿಗೆ ವಲಸೆ ಬಂದವರೆಂದು ಅಭಿಪ್ರಾಯ ಪಡುತ್ತಾರೆ. ರಿಕ್ಟರ್ ಎಂಬ ಚರಿತ್ರಕಾರರು ಕೊಡವರು ದ್ರಾವಿಡ ಬುಡಕಟ್ಟಿಗೆ ಸೇರಿದವರೆಂದು ತಿಳಿಸುತ್ತಾರೆ. ಡಾ।। ಗುರ್ಯೆ ಎಂಬುವರು ಹರ್ಬಟ್ ರಿಸ್ಲೆಯವರ ಅಭಿಪ್ರಾಯವನ್ನೇ ಸಮರ್ಥಿಸುತ್ತಾರೆ. ಬಿ. ಡಿ. ಸುಬ್ಬಯ್ಯನವರು ಕೊಡವರು ಅರಬೀ ದೇಶದಿಂದ ಓಡಿಬಂದ ಇರಾಕಿನ ಕರ್ದ್ ಜನಾಂಗದವರೆಂದು ಅಭಿಪ್ರಾಯ ಪಡುತ್ತಾರೆ. ಕ್ರಿ.ಶ. 1398 ರಲ್ಲಿ ರಚಿಸಲ್ಪಟ್ಟ ಮಂಗರಾಜನ ಕನ್ನಡ ನಿಘಂಟಿನಲ್ಲಿ ಕೊಡವರು 'ಮ್ಲೇಚ್ಛ'ರೆಂದೂ ಬೇಟೆಯಾಡುವ ಜಾತಿಯವರೆಂದೂ ವರ್ಣಿಸಲಾಗಿದೆ.* ಸಂಶೋಧಕರಲ್ಲಿ ಬಹುಜನರು ಕೊಡವರು ಉತ್ತರ ಭಾರತದ ಕಡೆಯಿಂದ ಬಂದ ಜನಾಂಗದವರಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ಸ್ಕಾಂದ ಪುರಾಣದ ಪ್ರಕಾರ ಚಂದ್ರವರ್ಮನೆಂಬ ಕ್ಷತ್ರಿಯ ರಾಜನು ಕೊಡವರ ಮೂಲ ಪುರುಷನೆಂದು ಹೇಳಲಾಗಿದೆ. ಕೊಡವರು ಕದಂಬ ವಂಶದವರೆಂದೂ, ಪಾಂಡವ ಸಂತತಿಯವರೆಂದೂ ಊಹಿಸಿದವರಿದ್ದಾರೆ.

---

* ಮಂಗರಸ : ಅಭಿದಾನ ವಸ್ತುಕೋಶ, ಸಂ।। ಎಂ. ಮರಿಯಪ್ಪಭಟ್ಟ, ಮದರಾಸು ವಿ.ವಿ. 1951, ಪು. 112, ಪದ್ಯ 4.

ಕೊಡವರ ಮೂಲ ಪುರುಷರು ಕೊಡಗಿಗೆ 5–6 ನೇ ಶತಮಾನಗಳಲ್ಲಿ ಬಂದಿರಬಹುದೆಂಬ ಅಂದಾಜಿದೆ. ನಂತರ ವೈನಾಡಿನಿಂದ ಬಂದ ಜನರು ಕೊಡವರೊಂದಿಗೆ ಬೆರೆತು ಹೋದ ಸಂದರ್ಭಗಳಿವೆ. ಡಾ| ಮೋಗ್ಲಿಂಗ್ ಮತ್ತು ರಿಕ್ಟರ್ ರವರು ಬ್ರಿಟಿಷ್ ಆಡಳಿತದ ಕಾಲದಲ್ಲಿಯೂ (19 ನೇಯ ಶತಮಾನ) ಬೇರೆ ಜಾತಿಯವರು ಕೊಡವರಲ್ಲಿ ಬೆರೆತು ಕೊಡವರೇ ಆಗುತ್ತಿದ್ದರೆಂದು ತಿಳಿಸುತ್ತಾರೆ. ಕೊಡವರಿಗೆ ತಮ್ಮ ಹಿಂದಿನ ಬುಡಕಟ್ಟು ಅಥವಾ ಮೂಲದ ವಿಷಯದ ಬಗ್ಗೆ ಯಾವ ಕಲ್ಪನೆಯೂ ಹಾಲೇರಿ ಅರಸರ ಕಾಲದಲ್ಲಿರಲಿಲ್ಲ ವೆಂದು 1817 ರಲ್ಲಿ ಲಿಂಗರಾಜೇಂದ್ರನು ತಿಳಿಸುತ್ತಾನೆಂದು ಡಿ.ಎನ್. ಕೃಷ್ಣಯ್ಯನವರು ತಮ್ಮ 'ಕೊಡಗಿನ ಇತಿಹಾಸ'ದಲ್ಲಿ ತಿಳಿಸುತ್ತಾರೆ. ಕೊಡಗು ಪ್ರಾದೇಶಿಕ ಸಂಶೋಧನಾ ಕೇಂದ್ರದ ಶ್ರೀಮತಿ ತುಳಸೀದೇವಿಯವರು ಹೇಳುವಂತೆ ಕೊಡವ ಎನ್ನುವ ಪದ 'ಕೊಡಕೆ' ಎನ್ನುವ ಪದದಿಂದ ಬಂದಿದೆ. ಕೊಡಕೆ ಎಂದರೆ ಬೇಟೆಯ ಪ್ರದೇಶ (ಕೊಡಗು). ಕೊಡಯಿ ಎಂದರೆ ಹುಟ್ಟು ಬೇಟೆಗಾರರು. ಅವರದೇ ಅಭಿಪ್ರಾಯದಂತೆ ಕೊಡವ ಮಹಿಳೆಯರ ಪ್ರಧಾನ ವೃತ್ತಿ ಬೇಸಾಯ, ಪುರುಷರ ಪ್ರಧಾನ ವೃತ್ತಿ ಬೇಟೆ. ದೊಡ್ಡವೀರರಾಜನ ಕಾಲದವರೆವಿಗೂ ಇವರು ಮಾತೃ ಪ್ರಧಾನ ಕುಟುಂಬದವರಾಗಿದ್ದರು. ನಂತರ ಪಿತೃ ಪ್ರಧಾನ ಕುಟುಂಬದವರು ವಲಸೆ ಬಂದು ಕೊಡವ ಗಿರಿ ಜನಾಂಗದವರಲ್ಲಿ ಸೇರಿ ಕೊಡವ ಗಿರಿಜನಾಂಗದವರ ಮಾತೃ ಪ್ರಧಾನ ಕುಟುಂಬಗಳು ನಶಿಸಿ ಹೋಗಿ, ಪಿತೃ ಪ್ರಧಾನ ಕುಟುಂಬಗಳಾದವು. ಹೀಗೆ ವಲಸೆ ಬಂದು ಕೊಡವರಾದವ ರಲ್ಲಿ ಕೇರಳದ ನಂಬೂದರಿಗಳೂ, ಕಾಸರಗೋಡು, ದಕ್ಷಿಣ ಕನ್ನಡ, ಮೈಸೂರು, ಹಾಸನ ಕಡೆಗಳಿಂದ ಬಂದ ಗೌಡರು, ಬಂಟರು ಲಿಂಗಾಯಿತರು ಇದ್ದಾರೆ. ಇನ್ನು ಕೆಲವರು ಕೊಡವರೊಂದಿಗೆ ಬೆರೆಯದೆ ಕೊಡವತನವನ್ನು ಅನುಸರಿಸಿ ಬಂದರು. ಅವರೇ ಅಮ್ಮ ಕೊಡವರು, ಮಡಿವಾಳರು, ಕ್ಷೌರಿಕರು, ಕುಂಬಾರರು, ಐರಿಗಳು, (ಇವೆಲ್ಲವೂ ಶ್ರೀಮತಿ ತುಳಸೀದೇವಿಯವರ ಅಭಿಪ್ರಾಯಗಳು).

ಕ್ಯಾಪ್ಟನ್ ಕೋಲ್ ಎಂಬುವರು 1871ರಲ್ಲಿ ಕೊಡವರ ಆಸ್ತಿ ಸಂಬಂಧವಾಗಿ ಕಾಯಿದೆಗಳನ್ನು ರಚಿಸುವಾಗ ಕೊಡವ ರಲ್ಲಿ ನಾಲ್ಕು ಪಂಗಡಗಳಿದ್ದವೆಂದು ತಿಳಿಸುತ್ತಾರೆ:* ಅಮ್ಮ ಕೊಡವ, ಸಣ್ಣ ಕೊಡವ, ಮಲ್ಲ ಕೊಡವ ಮತ್ತು ಜಮ್ಮ ಕೊಡವ. ಸಣ್ಣ ಕೊಡವ ಮತ್ತು ಮಲ್ಲ ಕೊಡವರು ಕ್ರಮೇಣ ಒಂದಾದರೆಂದು ಪ್ರತೀತಿ. ಕೊಡವರಲ್ಲಿ ಅವರ ಹಿರಿಯ ರಿಂದಲೋ, ಉದ್ಯೋಗದಿಂದಲೋ, ಸ್ಥಳದಿಂದಲೋ, ಅನೇಕ ಮನೆತನಗಳನ್ನು ಗುರುತಿಸಲಾಗಿದೆ. ಪ್ರತೀಯೊಂದು ಮನೆತನ ದವರೂ ಒಂದೇ ಕುಲಕ್ಕೆ ಸೇರಿದವರಾಗಿದ್ದು ಸಹೋದರಿ, ಸಹೋದರ ಸಂಬಂಧವನ್ನು ಹೊಂದಿದವರಾಗಿದ್ದು ವಿವಾಹ ಸಂಬಂಧವೇರ್ಪಡುವುದಿಲ್ಲ.ಕೆಲವು ಮನೆತನಗಳು ಒಂದೇ ಹೆಸರಿನ ವಾಗಿದ್ದು ಬೇರೆ ಬೇರೆಯವರಾಗಿರುತ್ತಾರೆ (ಉದಾ : ನಾಯ ಕಂಡ). ಹಾಗೆಯೇ ಬೇರೆ ಬೇರೆ ಹೆಸರುಳ್ಳ ಮನೆತನಗಳು ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದು ಇವರಲ್ಲಿ ವಿವಾಹ ಸಂಬಂಧವೇರ್ಪಡುವುದಿಲ್ಲ (ಕೊಡವರ ಮನೆತನದ ಹೆಸರು ಗಳನ್ನು ಗ್ರಂಥದ ಅನುಬಂಧದಲ್ಲಿ ಕೊಡಲಾಗಿದೆ). ಲಿಂಗಾಯತ ಅರಸರ ಕಾಲಕ್ಕೆ ಮುಂಚೆ ಅಮ್ಮ ಕೊಡವರಿಗೂ, ಕೊಡವರಿಗೂ ವಿವಾಹ ಸಂಬಂಧವೇರ್ಪಡುತ್ತಿತ್ತೆಂದೂ, ನಂತರದ ದಿನಗಳಲ್ಲಿ ಭೇದ ಹೆಚ್ಚಾಯಿತೆಂದೂ ಹೇಳಲಾಗುತ್ತದೆ. ಇತರರೊಂದಿಗೆ ಹೊಂದಿಕೊಂಡು ಜೀವಿಸುವ ಕಲೆ ಕೊಡವರಿಗಿದೆ. ಅವರು ಉತ್ತಮವಾದುದನ್ನು ತಮ್ಮದನ್ನಾಗಿಸಿಕೊಳ್ಳುವರು. ಕೊಡವರು ದೃಢಕಾಯ ಜನರು. ಉದ್ದವಾದ, ನೇರವಾದ ಮೂಗು, ಉತ್ತಮ ಮೈಕಟ್ಟು, ಬಹುಮಟ್ಟಿಗೆ ಶ್ವೇತವರ್ಣ ಅವರನ್ನು ಬೇರೆಯವರಿಂದ ಎತ್ತಿ ತೋರಿಸುತ್ತದೆ. ಉಡುಪಿ ನಲ್ಲಿಯೂ ಅವರು ವೈಶಿಷ್ಟ್ಯತೆಯನ್ನು ಹೊಂದಿದ್ದಾರೆ. ಗಂಡಸರ ಉಡುಪಿನಲ್ಲಿ ಠೀವಿ, ಘನತೆ, ಗಾಂಭೀರ್ಯ ವ್ಯಕ್ತ ವಾದರೆ, ಹೆಂಗಸರ ಉಡುಪಿನಲ್ಲಿ ಸೌಂದರ್ಯ, ಸಭ್ಯತೆಗಳು ಪ್ರತಿಬಿಂಬಿತವಾಗಿವೆ. ಕೊಡವರು ಆದರಾತಿಥ್ಯಗಳಿಗೆ ಹೆಸರಾದ ವರು, ಸೈನಿಕ ಪ್ರವೃತ್ತಿ ಅವರಲ್ಲಿ ರಕ್ತಗತವಾಗಿದೆ. ಇವರದು ಯೋಧ ಜನಾಂಗ.

ಹಿಂದಿನ ಕಾಲದಲ್ಲಿ ಕೊಡವರ ಮನೆಗಳಲ್ಲಿ ಹೆಂಗಸರ ಮತ್ತು ಗಂಡಸರ ಕೆಲಸ ಕಾರ್ಯಗಳಲ್ಲೂ ವಾಸಿಸುವ ಜಾಗ ದಲ್ಲೂ ವರ್ಗೀಕರಣವಿತ್ತು. ಮನೆಯ ಕೆಲವು ಭಾಗಗಳು ಹೆಂಗಸರಿಗೇ ಸೀಮಿತವಾಗಿದ್ದವು. ಇದಕ್ಕೆ ಅವಿಭಕ್ತ ಕುಟುಂಬವೇ ಕಾರಣ. ಹುಲಿಯನ್ನು ಕೊಂದ ಗಂಡಸಿಗೂ, ಹತ್ತು ಮಕ್ಕಳನ್ನು ಹೆತ್ತ ಹೆಂಗಸಿಗೂ ವಿಶೇಷ ಮದುವೆಯ ಗೌರವವಿತ್ತು. ಹಿಂದೆ ಹೆಂಗಸರೂ ಕೊಡ ಊರಿನ ಮುಂದು (ಆಟದ ಮೈದಾನ), ದೇವಸ್ಥಾನಗಳಲ್ಲಿ, ಹಬ್ಬಗಳಲ್ಲಿ ಗಂಡಸರಂತೆ ಹಾಡುವ, ಕುಣಿಯುವ ಪದ್ಧತಿಯಿತ್ತೆಂದು ಹೇಳುತ್ತಾರೆ.

ಕೊಡವ ಭಾಷೆಯಲ್ಲಿ ಕನ್ನಡ, ಮಲಯಾಳಿ ಪದಗಳ ಮಿಶ್ರಣ ವಿದೆ. ಅವರು ಕನ್ನಡಲಿಪಿಯನ್ನು ಉಪಯೋಗಿಸುತ್ತಾರೆ.

* ಕೊಡಗಿನ ಇತಿಹಾಸ, ಪುಟ 621

ಕೊಡವರ ಆಚಾರ, ವಿಚಾರ, ಪದ್ಧತಿ, ಕಟ್ಟುಕಟ್ಟಳೆ, ಹಬ್ಬ ಉತ್ಸವ, ಮದುವೆ ಮತ್ತು ಇತರ ಸಂಸ್ಕಾರಗಳ ಬಗ್ಗೆಯಿರುವ ಹಾಡುಗಳೆಲ್ಲಾ ಕೊಡವ ಭಾಷೆಯಲ್ಲಿವೆ. (ನೋಡಿ—ಅಧ್ಯಾಯ 14).

ಹಿಂದೆ ಕೊಡವರ ಕುಟುಂಬಗಳು ಅವಿಭಕ್ತ ಕುಟುಂಬ ಗಳಾಗಿದ್ದು ಒಂದೊಂದು ಮೂಲಮನೆಯನ್ನು ಹೊಂದಿದ್ದವು. ಇಂತಹ ಮೂಲ ಮನೆಯನ್ನು 'ಐನ್‌ಮನೆ' ಎಂದೂ 'ಬಲ್ಯಮನೆ' ಎಂದೂ ಕರೆಯುತ್ತಾರೆ. ಈ ಮನೆಗಳು ಸಾಮಾನ್ಯವಾಗಿ ಎತ್ತರಿಸಿದ ವೇದಿಕೆಯ ಮೇಲೆ ಚೌಕಾಕಾರ ವಾಗಿ ಕಟ್ಟಲಾಗಿರುತ್ತವೆ. ಇವುಗಳು ಗಾತ್ರದಲ್ಲಿ ದೊಡ್ಡ ವಾಗಿದ್ದು ಅನೇಕ ಕೊಠಡಿಗಳನ್ನು ಹೊಂದಿರುತ್ತವೆ. ಮುಂಭಾಗದಲ್ಲಿ ವಿಶೇಷವಾದ ಕೆತ್ತನೆ ಕೆಲಸ ಮಾಡಿರುತ್ತಾರೆ. ಐನ್‌ಮನೆಯು ಕೊಡವರ ಜೀವನದ ಆದರ್ಶ, ಸಂಸ್ಕೃತಿ, ಸಭ್ಯತೆಗಳ ಪ್ರತೀಕಗಳಾಗಿವೆ. ಸಾಮಾನ್ಯವಾಗಿ ಐನ್‌ಮನೆಗಳ ಮುಖ್ಯದ್ವಾರಗಳು ಪೂರ್ವಾಭಿಮುಖವಾಗಿರುತ್ತವೆ. ಕುಟುಂಬ ದವರ ಎಲ್ಲಾ ಶುಭ, ಅಶುಭ ಕಾರ್ಯಗಳೂ ಈ ಮನೆಯ ಲ್ಲಿಯೇ ನಡೆಯುತ್ತವೆ. (ವಿವರಗಳಿಗೆ ಮುಂದೆ ಕುಟುಂಬ ಜೀವನವನ್ನು ನೋಡಿ). ಸಾಧಾರಣವಾಗಿ ಕೊಡವರೆಲ್ಲರೂ ಭೂಮಾಲೀಕರು. ರಿಕ್ಸ್‌ರನ ಪ್ರಕಾರ ಕ್ರಿ. ಶ. 1870ರಲ್ಲಿ ಕೊಡವರ 40 ಕುಟುಂಬಗಳಿಗೆ ಮಾತ್ರ ಜಮ್ಮಾ ಭೂಮಿ ಯಿರಲಿಲ್ಲ. ಹಿಂದೆ ಕೊಡವರ ಕುಟುಂಬಗಳಲ್ಲಿ ಜಮ್ಮಾದ ಆಳುಗಳು ಇರುತ್ತಿದ್ದರು. ಇದೊಂದು ರೀತಿಯ ಗುಲಾಮ ಗಿರಿಯಾಗಿತ್ತು. ಆಳುಗಳು ಕುಟುಂಬದ ಒಂದು ಅವಿಭಾಜ್ಯ ಅಂಗವಾಗಿದ್ದರು. ಹಬ್ಬ, ಉತ್ಸವ ಮೊದಲಾದ ಸಂದರ್ಭ ಗಳಲ್ಲಿ ಇವರನ್ನು ಹೆಚ್ಚು ವಿಶ್ವಾಸದಿಂದ ನೋಡಿಕೊಂಡು ಬಟ್ಟೆಕೂಳ್ ಎಂದರೆ ವಿವಿಧ ಭಕ್ಷ್ಯಭೋಜ್ಯಗಳನ್ನು ಧಾರಾಳ ವಾಗಿ ಕೊಡುತ್ತಿದ್ದರು. ಆಳುಗಳಿಗೆ ಹೆಣ್ಣು ತಂದು ಮದುವೆ ಮಾಡುವುದೂ ಯಜಮಾನನ ಕರ್ತವ್ಯವಾಗಿತ್ತು.

ಕೊಡವರು ಪೂರ್ವದಿಕ್ಕನ್ನು ಪವಿತ್ರವೆಂದು ಭಾವಿಸುತ್ತಾರೆ. ದೀಪಾರಾಧಾನೆ ರೂಢಿಯಲ್ಲಿದೆ. ಬಿಳಿಯ ಬಣ್ಣವನ್ನು ಪವಿತ್ರ ವೆಂದೂ, ಕೆಂಪು ಬಣ್ಣವನ್ನು ಮಂಗಲಸೂಚಕವೆಂದೂ ಭಾವಿಸು ತ್ತಾರೆ. ಮದುವೆ ಮೊದಲಾದ ವಿಶೇಷ ಶುಭ ಸಮಾರಂಭಗಳಲ್ಲಿ ಕೆಂಪು ಬಣ್ಣಕ್ಕೆ ಪ್ರಾಶಸ್ತ್ಯ. ವೀಳ್ಯದೆಲೆ, ಅಡಕೆಯನ್ನು ಎಲ್ಲಾ ಶುಭ, ದೇವ ಕಾರ್ಯಗಳಲ್ಲಿ ಶುಭ ಸೂಚಕವಾಗಿ ಉಪ ಯೋಗಿಸುತ್ತಾರೆ. ಹರಕೆ ಕಟ್ಟುವ ಪದ್ಧತಿ ಇವರಲ್ಲಿದೆ. ಅದರ ಸಂಕೇತವಾಗಿ ತೆಂಗಿನಕಾಯಿ, ಅಕ್ಕಿ, ಆಭರಣಗಳನ್ನು ಹರಕೆ ಕಟ್ಟುತ್ತಾರೆ. ಪ್ರತೀಯೊಂದು ಶುಭ, ಅಶುಭ ಸಂದರ್ಭ ಗಳಲ್ಲೂ ಸನ್ನಿವೇಶಕ್ಕೆ ತಕ್ಕಂತೆ ವಾದ್ಯಘೋಷವಿರುತ್ತದೆ. ಪ್ರತೀಯೊಂದು ಸಂಪ್ರದಾಯ, ಸಮಾರಂಭಗಳಲ್ಲಿ ಅಕ್ಕಿಯ ಉಪಯೋಗವಿದೆ. ಬಿಳಿ ಅಕ್ಕಿಯನ್ನು ಶುಭದಲ್ಲೂ, ಅರಶಿನ ಪುಡಿ ಮಿಶ್ರಿತ (ಮಂಜಲಕ್ಕಿ) ಅಕ್ಕಿಯನ್ನು ಅಶುಭ ಸಮಾರಂಭ ಗಳಲ್ಲೂ ಉಪಯೋಗಿಸುತ್ತಾರೆ.

ಕೊಡವರ ಸಾಮಾಜಿಕ ಕೇಂದ್ರ ವಕ್ಕ. ಪ್ರತಿಯೊಂದು ಕುಟುಂಬಕ್ಕೂ ಒಬ್ಬ ಮೂಲ ಪುರುಷನಿದ್ದು, ಆತನನ್ನು ಕಾರಣವ (ಕಾರೋಣ) ಎಂದು ಕರೆಯುತ್ತಾರೆ. ಆತನಿಂದ ಬೆಳೆದು ಬಂದ ಸಮೂಹವು ವಕ್ಕವೆನಿಸಿಕೊಳ್ಳುತ್ತದೆ. ವಕ್ಕದವ ರೆಲ್ಲರೂ ಹಿಂದೆ ಅವಿಭಕ್ತ ಕುಟುಂಬದವರಾಗಿ ವಾಸಿಸುತ್ತಿದ್ದರು. ಕುಟುಂಬದ ಹಿರಿಯನನ್ನು ಕೊರವುಕಾರನೆನ್ನುತ್ತಾರೆ. ಆತನ ಹೆಂಡತಿ ಕೊರವುಕಾರ್ತಿ. ಇವರಿಬ್ಬರೂ ಕುಟುಂಬದ ಎಲ್ಲಾ ಆಗುಹೋಗುಗಳಿಗೂ ಜವಾಬ್ದಾರರಾಗಿರುತ್ತಿದ್ದರು. ಕುಟುಂಬದ ಇತರ ಸದಸ್ಯರನ್ನು ಕಿಕ್ಕಾರರೆಂದು ಕರೆಯು ತ್ತಾರೆ. ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳು ವಕ್ಕಗಳ ಮೂಲಕ ಅವ್ಯಾಹತವಾಗಿ ಹರಿದುಬಂದಿದೆ. ಸದಸ್ಯರೂ ಅವು ಗಳನ್ನು ರಕ್ಷಿಸಲು ಪ್ರಯತ್ನಿಸುತ್ತಾರೆ. ಹಿಂದೆ ಕೆಲವು ಅವಿಭಕ್ತ ಕುಟುಂಬಗಳಲ್ಲಿ 100 ರಿಂದ 150 ಜನರಿರುತ್ತಿದ್ದುದು ಅಪರೂಪವೇನಾಗಿರಲಿಲ್ಲ. ಆದರೆ ಈಗ ಈ ಅವಿಭಕ್ತ ಕುಟುಂಬಗಳು ಅತಿ ವಿರಳವಾಗಿವೆ. ವಕ್ಕಗಳಲ್ಲಿ ಗಂಡಸರು ಖಾಯಂ ಸದಸ್ಯರಾಗಿರುತ್ತಿದ್ದರು. ಹೆಂಗಸರು ವಿವಾಹವಾದ ಮೇಲೆ ಗಂಡನ ವಕ್ಕದ ಸದಸ್ಯರಾಗುತ್ತಿದ್ದರು. ಕೊಡವರು ಹಿರಿಯರಿಗೆ ತುಂಬಾ ಗೌರವ ಕೊಡುತ್ತಾರೆ. ಕಂಡಾಗ ಪಾದ ಮುಟ್ಟಿ ನಮಸ್ಕರಿಸುತ್ತಾರೆ. ಕುಟುಂಬಗಳಿಗೆ ಕೊರವುಕಾರ ನಿದ್ದಂತೆ ಗ್ರಾಮಕ್ಕೆ ಒಬ್ಬ ತಕ್ಕನಿರುತ್ತಾನೆ.

ಕೊಡವರ ಇನ್ನೊಂದು ವೈಶಿಷ್ಟ್ಯವೆಂದರೆ ಅರುವ ಕುಟುಂಬಗಳು. ಪ್ರತೀಯೊಂದು ಕೊಡವ ಕುಟುಂಬಕ್ಕೂ ಇನ್ನೊಂದು ಕೊಡವ ಕುಟುಂಬ ಸಂಬಂಧದಿಂದಲೋ, ಸ್ನೇಹ ದಿಂದಲೋ ಕಡ್ಡಾಯವಾಗಿ ಗೆಳೆಯ ಕುಟುಂಬವಾಗುತ್ತದೆ. ಈ ಗೆಳೆಯ ಕುಟುಂಬಗಳು ಪರಸ್ಪರ ಸಾವುನೋವು ಸುಖ ದುಃಖಗಳಲ್ಲಿ ಭಾಗಿಯಾಗುತ್ತವೆ. ಇಂತಹ ಕುಟುಂಬಗಳನ್ನು ಅರುವ ಕುಟುಂಬಗಳೆನ್ನುತ್ತಾರೆ. ಈ ಅರುವ ಕುಟುಂಬಗಳ ಸದಸ್ಯರು ವಿವಾಹ, ಸಾವು ಮೊದಲಾದ ಸಮಯಗಳಲ್ಲಿ ಮುಂದೆ ನಿಂತು ಕಾರ್ಯಗಳನ್ನು ನಡೆಸಿಕೊಡುತ್ತಾರೆ.

ಗಂಡು ಮಗು ಜನನವಾದಾಗ ಒಂದು ಗುಂಡು ಹಾರಿಸು ವುದರ ಮೂಲಕ ಸುದ್ದಿ ಪ್ರಸಾರವಾಗುತ್ತದೆ. ಕುಟುಂಬದಲ್ಲಿ ಹೆಣ್ಣುಮಗು ಜನನವಾದರೆ ಗಂಟೆ ಅಥವಾ ತಳಿಗೆಮಣೆಯ

ಶಬ್ದ ಮಾಡುತ್ತಾರೆ. ಮಗು ಹುಟ್ಟಿದಾಗ ಕುಟುಂಬದವರು 12 ದಿನ ಸೂತಕ ಆಚರಿಸುತ್ತಾರೆ. ನಾಮಕರಣವನ್ನು 12 ನೇಯ ದಿನ ಮಾಡುತ್ತಾರೆ ಮತ್ತು ತೊಟ್ಟಿಲಿಗೆ ಹಾಕುತ್ತಾರೆ. ಬಾಣಂತಿತನವನ್ನು ಎರಡು ತಿಂಗಳು ನಡೆಸುತ್ತಾರೆ.

ಕೊಡವರ ಹೆಸರುಗಳು ಅವರ ಇನ್ನೊಂದು ವೈಶಿಷ್ಟ್ಯವನ್ನು ಸೂಚಿಸುತ್ತವೆ. ಗಂಡಸರ ಹೆಸರುಗಳು ಉತ್ತಪ್ಪ, ಚಂಗಪ್ಪ, ಕರುಂಬಯ್ಯ, ಕಾರಿಯಪ್ಪ, ತಿಮ್ಮಯ್ಯ, ಸುಬ್ಬಯ್ಯ ಇತ್ಯಾದಿ ; ಹೆಂಗಸರ ಹೆಸರುಗಳು ಕಾವೇರಮ್ಮ, ಬೊಳ್ಳಮ್ಮ, ದೇಚಮ್ಮ, ಮುತ್ತಮ್ಮ, ಪಾರ್ವತಿ, ಇತ್ಯಾದಿ. ಗಂಡಸರ ಹೆಸರಿನ ಹಿಂದೆ ಅವರ ಮನೆತನವನ್ನು ಸೂಚಿಸುವ ಇನ್ನೊಂದು ಹೆಸರಿರುತ್ತದೆ. ಉದಾ : ಕೊರವಂಡ ಮಾಚಯ್ಯ, ಬಿದ್ದಂಡ ಮುತ್ತಣ್ಣ, ಮಂಡೇಪಂಡ ಸೋಮಯ್ಯ ಇತ್ಯಾದಿ. ಇತ್ತೀಚೆಗೆ ಕೊಡವ ಸಮಾಜದವರು ಹೊರಗಿನಿಂದ ಎರಡು ಕುಟುಂಬಗಳನ್ನು ತಮ್ಮ ಸಮಾಜಕ್ಕೆ ಸೇರಿಸಿಕೊಂಡು, ಎರಡು ಬೇರೆ ಮನೆತನಗಳ ಹೆಸರುಗಳನ್ನು ಕೊಟ್ಟಿದ್ದಾರೆ. ಕೊಡವರಲ್ಲಿ ಬಾಳೇಬಿರುದು ಒಂದು ವಿಶಿಷ್ಟವಾದ ಪದ್ಧತಿ. ಬಾಳೆಗಿಡವನ್ನು ಒಂದು ಗಜ ಉದ್ದಕ್ಕೆ ಕತ್ತರಿಸಿ ಗೂಟದ ಮೇಲೆ ನೆಲದಲ್ಲಿ ಭದ್ರವಾಗಿ ನಿಲ್ಲಿಸುತ್ತಾರೆ. ಮೇಲ್ಭಾಗವನ್ನು ಬಾಳೆ ಪಟ್ಟೆಯಿಂದ ಮುಚ್ಚಿ ಬಾಣಗಳನ್ನು ನಿಲ್ಲಿಸಿ ಹೂವುಗಳಿಂದ ಅಲಂಕರಿಸುತ್ತಾರೆ. ಅರ್ಹರಾದವರು ಬಂದಾಗ ಕುಟುಂಬದವರು ಅರುವನೊಡನೆ ಆ ಜಾಗಕ್ಕೆ ಬಟ್ಟೆಪಾಟ್ ಹಾಡುತ್ತಾ ವಾದ್ಯಸಮೇತ ಬರುತ್ತಾರೆ. ಹತ್ತಿರ ಚಾಪೆ, ಒಂದು ಚೆಂಬು ನೀರು, ವೀಳ್ಯದೆಲೆ ಅಡಿಕೆಯಿಟ್ಟು ಸ್ವಾಗತಿಸುತ್ತಾರೆ. ಚಾಪೆಯ ಮೇಲೆ ನೆಂಟರು ಕುಳಿತುಕೊಂಡ ಮೇಲೆ ಅರುವನು ಮೂರು ಅಥವಾ ಐದು ವಿಳ್ಯದೆಲೆಗಳನ್ನು ಅಷ್ಟೇ ಅಡಿಕೆ ಇಟ್ಟು ನೆಂಟರಿಗೆ ಕೊಡುತ್ತಾನೆ. ನೆಂಟರು ಸ್ವೀಕರಿಸಿ ಹಣವಿಟ್ಟು ಹಿಂತಿರುಗಿಸುತ್ತಾರೆ. ಅರುವನು ನೆಂಟರಿಗೆ ಒಡಿ ಕತ್ತಿಯನ್ನು ಕೊಡಬೇಕು. ನೆಂಟರು ದೇವರ ಪ್ರಾರ್ಥನೆ ಮಾಡಿ ತಲೆಯ ಮೇಲಿನ ರುಮಾಲನ್ನು ತೆಗೆದಿಟ್ಟು ಬಾಳೆಯನ್ನು ಪ್ರದಕ್ಷಿಣೆ ಮಾಡಿ ಬಾಣ ಹೂಗಳನ್ನು ಕತ್ತಿಯಿಂದ ಹಾರಿಸಿ ಬಾಳೆ ದಿಂಡುಗಳನ್ನು ಒಂದೊಂದೇ ಏಟಿನಿಂದ ಕತ್ತರಿಸುತ್ತಾರೆ. ನಂತರ ನೆಂಟರನ್ನು ವಾದ್ಯಘೋಷಗಳಿಂದ 'ದುಡಿಪಾಟ್' ಸಮೇತ ಮನೆಗೆ ಕರೆದುಕೊಂಡು ಹೋಗುವರು. ದುಡಿಪಾಟ್‌ನವರು ಬಟ್ಟೆಪಾಟ್ ಹಾಡುವರು. ಮನೆಯ ಬಳಿ ಮಡಿವಾಳನು ಬಿಳಿಬಟ್ಟೆ ಹಾಸುತ್ತಾನೆ. ಕನ್ನೆಯೊಬ್ಬಳು ನೆಂಟರ ಕಾಲು ತೊಳೆಯುತ್ತಾಳೆ. ನೆಂಟರು ಅಗಸ, ಕನ್ನೆಗೆ ಹಣಕೊಟ್ಟು ಮನೆಯ ಮೆಟ್ಟಲನ್ನು ಹತ್ತುವ ಹೊತ್ತಿಗೆ ಕನ್ನೆಯರು ಎರಡು ಕಡೆಯೂ ತಳಿಯಕ್ಕಿ ಬೊಳಿಚ (ದೀಪ) ಹಿಡಿದಿರುತ್ತಾರೆ. ಈ ಸಂಪ್ರದಾಯವನ್ನು ಬಾಳೆ ಬಿರುದು ಎನ್ನುತ್ತಾರೆ.

ಕೊಡವರ ವಿವಾಹಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು. ಕನ್ನಿಮಂಗಲ, ಕೂಡಾವಳಿ ಮಂಗಲ, ಒಕ್ಕಪರಿಜೆ ಮತ್ತು ಮಕ್ಕಪರಿಜೆ. ಒಕ್ಕಪರಿಜೆಯನ್ನು ಕತ್ತಿಕ್‌ನಿಪ್ಪದ್ ಎಂದೂ ಮಕ್ಕಪರಿಜೆಯನ್ನು ಪಚ್ಚಡಕ್ ನಡಪದ್ ಎಂದೂ ಕರೆಯುತ್ತಾರೆ. ಕನ್ನಿಮಂಗಲವೇ ಹೆಚ್ಚಾಗಿ ರೂಢಿಯಲ್ಲಿರುವ ಪದ್ಧತಿ. ಒಕ್ಕಪರಿಜೆ ಮತ್ತು ಮಕ್ಕಪರಿಜೆಗಳು ಕುಟುಂಬದಲ್ಲಿ ಗಂಡು ಸಂತಾನವಿಲ್ಲದಿದ್ದಾಗ ಅನುಸರಿಸುವ ವಿಧಾನಗಳು (ವಿವರಗಳಿಗೆ ಸಾಮಾಜಿಕ ಜೀವನದಲ್ಲಿ ವಿವಾಹವನ್ನು ನೋಡಿ). ಮದುವೆ ಸಮಯದಲ್ಲಿ ಹೆಣ್ಣಿಗೆ ದೊರೆಯುವ ಹಣ, ಉಡುಗೊರೆ, ಆಭರಣ ಮತ್ತು ಇತರ ವಸ್ತುಗಳನ್ನು ಮದುವೆಯಾದ ಮಗಳು ಮಕ್ಕಳಿಲ್ಲದೆ ಸತ್ತರೆ ತಂದೆ ತಾಯಿಗಳು ಹಿಂದಕ್ಕೆ ಪಡೆಯಬಹುದು. ವಿಧವೆಯಾದ ಹೆಂಗಸು ತಂದೆಯ ಮನೆಯಲ್ಲಿ ಬಂದಿರಬಹುದು. ಆದರೆ ಆಸ್ತಿಯಲ್ಲಿ ಹಕ್ಕಿಲ್ಲ. ಕೊಡವ ಹೆಂಗಸರು ವಿವಾಹ ಸೂಚಕವಾಗಿ ಕಾಲಿಗೆ ಉಂಗುರ ಧರಿಸುತ್ತಾರೆ. ಹಿಂದೆ ವಿವಾಹವಾಗದ ಹೆಂಗಸರಿಗೂ ವಿವಾಹವಾದವರಿಗೂ ಉಡುಪು ಶೃಂಗಾರಗಳಲ್ಲಿ ವ್ಯತ್ಯಾಸವಿತ್ತೆಂದು ತಿಳಿದುಬರುತ್ತದೆ.

ಕೊಡವರು ಎಲ್ಲಾ ಹಿಂದೂ ದೇವರುಗಳನ್ನು ಪೂಜಿಸುವರಾದರೂ ಅವರಲ್ಲಿ ಪಿತೃಪೂಜೆಯು ಬಹಳ ವಿಶೇಷವಾದದ್ದು. ಪ್ರತೀಯೊಂದು ಐನ್‌ಮನೆಯ ಬಳಿಯಲ್ಲಿ ಒಂದು ಕೈಮಡ (ಕೈಮಠ) ವಿರುತ್ತದೆ. ಇದು ಪಿತೃಗಳನ್ನು ಪೂಜಿಸುವ ಗುಡಿಯೆಂದು ಹೇಳಬಹುದು. ತಮ್ಮ ಹಿರಿಯರನ್ನು ಅಥವಾ ಕುಟುಂಬದ ಮೂಲ ಪುರುಷರನ್ನು ಕಾರೋಣ, ಗುರು ಕಾರೋಣ ಎಂದು ತುಲಾ ಮಾಸದ ಮೊದಲ ಹತ್ತು ದಿನಗಳಲ್ಲಿ ಪೂಜಿಸುತ್ತಾರೆ. ಇವು ಸಾಮಾನ್ಯವಾಗಿ ಪೂರ್ವಾಭಿಮುಖವಾಗಿರುತ್ತವೆ. ಮದುವೆ, ಹಬ್ಬ ಮುಂತಾದ ಸಂದರ್ಭಗಳಲ್ಲಿ ವಿಶೇಷ ಭಕ್ಷ್ಯಭೋಜ್ಯಗಳನ್ನು ಇಲ್ಲಿ ನೈವೇದ್ಯವಾಗಿ ಅರ್ಪಿಸುತ್ತಾರೆ. ಇದನ್ನು ಮೀದಿ ಎನ್ನುತ್ತಾರೆ. ವರ್ಷಕ್ಕೊಮ್ಮೆ ಕಾರೋಣ ಬಾರಿಣೆ ಎಂದು ಕರೆಯುವ ವಿಶೇಷ ಹಬ್ಬವನ್ನು ಆಚರಿಸಿ ಔತಣಕೂಟವನ್ನು ಏರ್ಪಡಿಸುತ್ತಾರೆ. ಕೋಲಗಳನ್ನು ಕಟ್ಟಿಸಿದರೆ ಕಾರೋಣ ಕೊಡಪ, ಕೋಲ ಎಂದೆಲ್ಲಾ ಕರೆಯುತ್ತಾರೆ. ಈ ಕೋಲಗಳಲ್ಲಿ ಪಣಿಕ, ಬಣ್ಣರ ಪಾತ್ರಗಳು ಮುಖ್ಯ. ಇವರು ಹಿರಿಯರ ಆವೇಶಗಳನ್ನು ಬರಿಸಿಕೊಳ್ಳುವವರು, ಹಿರಿಯರ ರೀತಿ ನೀತಿಗಳನ್ನು ಅನುಸರಿಸಿ, ಸರಿಯಾದ ವೇಷಗಳನ್ನು ಕಟ್ಟುತ್ತಾರೆ. ಇದನ್ನು ತೆರೆ ಎನ್ನುತ್ತಾರೆ

ಹಿರಿಯರ ಜೀವನದ ಬಗ್ಗೆ, ಪರಾಕ್ರಮದ ಬಗ್ಗೆ ಶ್ಲಾಘಿಸುತ್ತಾರೆ. ಇಲ್ಲಿ ಕೋಲ ಕಟ್ಟುವವರನ್ನು ತಿರುವಳಕಾರರೆನ್ನುತ್ತಾರೆ. ಕಾರೋಣ ಅರಾಧನೆಯಲ್ಲಿ ಹಂದಿಯನ್ನು ಅರ್ಪಿಸಿ, ವಿಶೇಷ ಔತಣ ಏರ್ಪಡಿಸುತ್ತಾರೆ. ಇಲ್ಲಿ ಪಿತೃತರ್ಪಣದ ಜೊತೆಗೆ ಕೆಲವು ವೇಳೆ ಭೂತಾರಾಧನೆಯೂ ಸೇರಿಕೊಂಡಿರುತ್ತದೆ. ಈಕಾರೋಣ ಅರಾಧನೆ, ಭೂತಾರಾಧನೆ ದ. ಕನ್ನಡ, ಕೇರಳಗಳಲ್ಲಿ ಕಂಡು ಬರುತ್ತವೆ. ನರಿಪೂದ ಕಟ್ಟುವ ಕುಟುಂಬಗಳಲ್ಲಿ ಕಾರೋಣ ಆಚರಿಸುವುದಿಲ್ಲ.

ಕೊಡವರಲ್ಲಿ ಈ ಕಾರೋಣ ಅರಾಧನೆಯಲ್ಲದೆ ಇತರ ಹಿಂದೂಗಳ ಹಬ್ಬ ಹರಿದಿನಗಳೂ ಆಚರಣೆಯಲ್ಲಿವೆ ; ಎಲ್ಲಾ ಹಿಂದೂ ದೇವತೆಗಳನ್ನು ಪೂಜಿಸುತ್ತಾರೆ, ಅದರಲ್ಲೂ ವಿಶೇಷವಾಗಿ ಈಶ್ವರ, ಗಣೇಶ, ಸುಬ್ರಮಣ್ಯ, ಇಗ್ಗುತಪ್ಪ, ಅಯ್ಯಪ್ಪ ದೇವರುಗಳನ್ನು ಕಾವೇರಿ ಮಾತೆಯನ್ನು ಪೂಜಿಸುತ್ತಾರೆ. ಕೊಡವರು ಶುಭ, ಅಶುಭ ಸಮಾರಂಭಗಳಲ್ಲಿ ಅಗ್ನಿ ಪ್ರತೀಕವಾಗಿ ದೀಪಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಇವರಲ್ಲಿರುವ ತೆಳ್‌ನೀರ್ ಪದ್ಧತಿಯು ಇದನ್ನು ಎತ್ತಿ ತೋರಿಸುತ್ತದೆ. ತೆಳ್‌ನೀರ್ ಪದ್ಧತಿಯೆಂದರೆ ಅಡಿಗೆ ಮನೆಯು ಕೆಂಡವನ್ನು ಒಂದು ತಟ್ಟೆಯಲ್ಲಿ ಹಾಕಿ, ಅದರ ಮೇಲೆ ಕೆಲವು ಅನ್ನದ ಅಗಳುಗಳನ್ನು ಹಾಕಿ ಮೇಲೆ ನೀರು ಹಾಕುತ್ತಾರೆ. ಈ ಬೂದಿ ಸೇರಿದ ನೀರ್ ತೆಳ್‌ನೀರ್. ಇದನ್ನು ಶ್ಮಶಾನದಿಂದ ಮನೆಗೆ ಬಂದವರಿಗೆ, ಮಗುವಿನೊಡನೆ ತವರು ಮನೆಯಿಂದ ಹಿಂತಿರುಗುವ ಸೊಸೆಯರಿಗೆ, ಬೇಟೆಯಾಡಿ ಮಾಂಸ ತರುವವರಿಗೆ, ಶುದ್ಧಿ ಮಾಡುವುದಕ್ಕೆ ಉಪಯೋಗಿಸುತ್ತಾರೆ. ಕೊಡವರಿಗೆ ಯಾವ ಮಠವೂ ಇಲ್ಲ. ಇತ್ತೀಚೆಗಷ್ಟೇ ವೀರರಾಜಪೇಟೆಯಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿಕೊಂಡಿದ್ದಾರೆ. ಇವರ ಧಾರ್ಮಿಕ ಪದ್ಧತಿಗಳೆಲ್ಲಾ ಇತ್ತೀಚಿನವರೆಗೂ ಬ್ರಾಹ್ಮಣರ ಆಸರೆಯಿಲ್ಲದೆ ನಡೆಯುತ್ತಿದ್ದವು. ಕೊಡವರಲ್ಲಿ ಸ್ವರ್ಗ, ನರಕ, ಪುಣ್ಯ, ಪಾಪಗಳಲ್ಲಿ ನಂಬಿಕೆಯುಂಟು.

ಶುಭ ಕಾರ್ಯಗಳಲ್ಲಿ ಮಾವಿನ ಎಲೆಯನ್ನು ಸಂಪ್ರೋಕ್ಷಣೆಗಾಗಿ ಬಳಸುತ್ತಾರೆ. ಅಶ್ವತ್ಥವೃಕ್ಷ, ನೆಲ್ಲಿಮರ ಇವರಿಗೆ ಪವಿತ್ರ. ಅಶ್ವತ್ಥ ವೃಕ್ಷವನ್ನು ಈಶ್ವರನ ಅಂಶವೆಂದೂ, ನೆಲ್ಲಿಮರವನ್ನು ಪಾರ್ವತಿಯ ಅಂಶವೆಂದೂ ಒಟ್ಟಿಗೆ ನೆಟ್ಟು ಮದುವೆ ಮಾಡುವ ಪದ್ಧತಿ ಅವರಲ್ಲಿದೆ. ಅವರಲ್ಲಿ ವೀಳ್ಯದೆಲೆಯನ್ನು ಕೊಡದೆ ಶುಭಕಾರ್ಯವಿಲ್ಲ. ಮಧ್ಯಾಹ್ನದ ಮೇಲೆ ಬಾಳೆಗೊನೆ ಕಡಿಯುವುದಿಲ್ಲ.

ಕೊಡವರ ಧಾರ್ಮಿಕ ಜೀವನದ ಮೇಲೆ ವೈದಿಕ ಧರ್ಮದ ಪ್ರಭಾವ ಹೆಚ್ಚಾಗಿ ಬಿದ್ದಿದೆ. ಜೊತೆಗೆ ಪಕ್ಕದ ರಾಜ್ಯಗಳ, ಜಿಲ್ಲೆಗಳ ಜನರ ನಂಬಿಕೆಗಳ ಪ್ರಭಾವವೂ ಸಾಕಷ್ಟಾಗಿದೆ. ಕೊಡವರ ವಿಶಿಷ್ಟ ದೇವತೆ ಕಾವೇರಿ. ಕೊಡವರು ಪ್ರತೀದಿನ ಬೆಳಗ್ಗೆ ಸಾಯಂಕಾಲ ಪ್ರಾರ್ಥನೆ ಮಾಡುತ್ತಾರೆ. ಭೂಮಿ ತಾಯನ್ನು ಕೈಯಿಂದ ಮುಟ್ಟಿ ನಮಸ್ಕರಿಸುತ್ತಾರೆ. ಕೊಡವರ ಧಾರ್ಮಿಕ ಭಾವನೆಯ ಮೇಲೆ ಮಲಬಾರಿನ ಆರಾಧ್ಯ ದೇವತೆಗಳ ಪ್ರಭಾವ, ಹಾಲೇರಿ ಅರಸರ ಕಾಲದಲ್ಲಿ ಲಿಂಗಾಯಿತರ ಪ್ರಭಾವಗಳು ಸಾಕಷ್ಟು ಬಿದ್ದಿವೆ. ಕೊಡವರು ನಾಗನನ್ನು 'ನಾತ'ನೆಂದು ಕರೆಯುತ್ತಾರೆ. 'ಬೀರ' ಎಂಬ ಶಕ್ತಿಯಲ್ಲೂ 'ಪೂದ' (ಭೂತ) 'ಕುಳಿಯ', 'ಗುಳಿಕಾ' ಎಂಬ ಶಕ್ತಿಗಳಲ್ಲೂ ನಂಬಿಕೆಯಿಟ್ಟಿದ್ದಾರೆ.

ಕೊಡವರಲ್ಲಿ ಶವವನ್ನು ಹೂಳುವ ಹಾಗೂ ಸುಡುವ ಎರಡು ಪದ್ಧತಿಗಳೂ ರೂಢಿಯಲ್ಲಿವೆ (ವಿವರಣೆಗೆ ಸಾಮಾಜಿಕ ಜೀವನವನ್ನು ನೋಡಿ). ಕುಟುಂಬದಲ್ಲಿ ಯಾರಾದರೂ ಸತ್ತರೆ ಜೋಡು ಗುಂಡುಗಳ ಮೂಲಕ ಸುದ್ದಿ ಪ್ರಸಾರವಾಗುತ್ತದೆ.

### ಕೆಂಬಟ್ಟಿ ಹೊಲೆಯರು

ಕೆಂಬಟ್ಟಿ ಹೊಲೆಯರು ಹೊಲೆಯರ ಒಂದು ಉಪಪಂಗಡ. ಇವರು ಕೊಡಗಿನಲ್ಲಿ ಮಾತ್ರ ಕಂಡುಬರುತ್ತಾರೆ. ಕೊಡಗಿನ ಮೂಲ ಜನರಲ್ಲಿ ಇವರೂ ಸೇರಿದ್ದಾರೆ. ಇವರ ಮನೆ ಮಾತು ಕೊಡವ ಭಾಷೆ. ಇವರಲ್ಲಿ ಪಡುಕುಟ್ಟಿಪಾಡ, ಬೆಟ್ಟಿಕುಟ್ಟಿಅಪ್ಪು, ಕಾಡುಕುಟ್ಟಿಕಾಳು, ಪೊನ್ನಕುಟ್ಟಿಕಾಳು, ಬೆಳ್ಳಿಕುಟ್ಟಿಅಯ್ಯ, ಕಕ್ಕಕುಟ್ಟಿಕುಟ್ಟಿ, ಭಯುಗಿಕುಟ್ಟಿಸೊಮು, ಭಾಯಿಕಟ್ಟಿಕುಟ್ಟಿ, ಕಾಳಿಕುಟ್ಟಿಕುಜ, ಪಾಚಿಕುಟ್ಟಿಥೇನು, ಚೆಂಗಿಕುಟ್ಟಿಪಂಜು, ಪೊಂಡಕುಟ್ಟಿಬಾಗು ಮತ್ತು ಗಡ್ಡಕುಟ್ಟಿಬೇಲಿ ಎಂಬ ಕುಲಗಳಿವೆ. ಒಂದೇ ಕುಲದಲ್ಲಿ ವಿವಾಹ ಸಂಬಂಧವೇರ್ಪಡುವುದಿಲ್ಲ. ಇವರು ಕೊಡವರ ಗದ್ದೆಗಳಲ್ಲಿ, ತೋಟಗಳಲ್ಲಿ ಕೃಷಿ ಕಾರ್ಮಿಕರಾಗಿದ್ದಾರೆ. ಇವರ ಅನೇಕ ಸಾಮಾಜಿಕ ಪದ್ಧತಿಗಳು ಕೊಡವರ ಪದ್ಧತಿಗಳನ್ನು ಹೋಲುತ್ತವೆ. ಇವರು ವಯಸ್ಕರಾದ ಮೇಲೆ ವಿವಾಹವಾಗುತ್ತಾರೆ. ವಿವಾಹಗಳಲ್ಲಿ ತೆರಕೊಡುವ ಪದ್ಧತಿಯಿದೆ. ವಿವಾಹಕ್ಕೆ ಏಳು ಕಂಬಗಳ ಚಪ್ಪರಗಳನ್ನು ಹಿಂದೆ ಹಾಕುತ್ತಿದ್ದರು. ಮಧ್ಯದ ಕಂಬ ಹಾಲು ಕಂಬ. ಇವರಲ್ಲಿ ಕೊಡವರಂತೆ ಬಾಳೆಕಂಬ ಕತ್ತರಿಸುವ ಪದ್ಧತಿಯಿಲ್ಲ. ಹುಡುಗಿಯು ಮೈನೆರೆದಾಗ ಏಳು ದಿನ ಬೇರೆ ಗುಡಿಸಿಲಿನಲ್ಲಿ ಮೈಲಿಗೆಯಲ್ಲಿರುತ್ತಾಳೆ. ಹೆರಿಗೆಯಾದ ಎರಡು ತಿಂಗಳ ನಂತರ ಹೆಸರಿಟ್ಟು ತೊಟ್ಟಿಲಿಗೆ ಹಾಕುತ್ತಾರೆ. ಸತ್ತವರನ್ನು ಹೂಳುವುದು, ಸುಡುವುದು ಎರಡೂ ರೂಢಿಯಲ್ಲಿವೆ. ಹುಟ್ಟಿದಾಗ, ಸತ್ತಾಗ ಹನ್ನೊಂದು ದಿನ ಮೈಲಿಗೆಯನ್ನು

ಆಚರಿಸುತ್ತಾರೆ. ಹಿಂದೆ ರಾಜರ ಕಾಲದಲ್ಲಿ ಇವರನ್ನು ಗುಲಾಮ (ಜಮ್ಮದಾಳು) ರನ್ನಾಗಿ ಮಾಡಿಕೊಂಡಿದ್ದರು. ಕೆಂಬಟ್ಟಿ ಹೊಲೆಯರು ಭೂತಗಳನ್ನು ಮಾರಮ್ಮನನ್ನು ಪೂಜಿಸುತ್ತಾರೆ. ಇವರ ಹೆಂಗಸರು ರೂಪವಂತೆಯರು.

**ಕೊಯವರು**

ಕೊಯವರು ಕೊಡಗು ಮೂಲನಿವಾಸಿಗಳಲ್ಲಿ ಒಬ್ಬರೆಂದು ಹೇಳುತ್ತಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ ಸುಮಾರು 3,700. ಇವರು ಕೊಡವರಿಗಿಂತ ಭಿನ್ನವೆಂದು ಹೇಳುತ್ತಾರೆ. ಕೊಡಗಿನ ಮೂಲನಿವಾಸಿಗಳ ಗುಂಪಿಗೆ ಸೇರಿದವರು. ಇವರ ಮನೆಮಾತು ಕೊಡವ. ಇವರಿಗೆ ಜಮ್ಮಾ ಉಂಬಳಿಯುಂಟು. ಕೊಡವರಂತೆ ಇವರಲ್ಲೂ ಮನೆತನಗಳುಂಟು. ಸುಮಾರು 34 ಮನೆತನಗಳಿರಬಹುದೆಂದು ಒಂದು ಅಂದಾಜಿದೆ, ಹಾಗೂ 34 ಐನ್‌ಮನೆಗಳಿವೆ. ಆಚಾರ, ವಿಚಾರ, ಸಂಪ್ರದಾಯಗಳಲ್ಲಿ ಇವರು ಕೊಡವರನ್ನೇ ಅನುಸರಿಸುತ್ತಾರೆ. ಇವರ ಮೂಲವೃತ್ತಿ ಈಗ ವ್ಯವಸಾಯ ಜೊತೆಗೆ ಬೊಂಬಿನಿಂದ ಗೊರಗಾ, ಬುಟ್ಟಿ ಮುಂತಾದವುಗಳನ್ನು ಹೆಣೆಯುತ್ತಾರೆ. ಮಡಿಕೇರಿ ತಾಲೂಕಿನಲ್ಲಿ ಸುಮಾರು 57 ಕುಟುಂಬಗಳೂ, ಸೋಮವಾರಪೇಟೆ ತಾಲೂಕಿನಲ್ಲಿ 13 ಕುಟುಂಬಗಳು ವೀರರಾಜಪೇಟೆ ತಾಲೂಕಿನಲ್ಲಿ 119 ಕುಟುಂಬಗಳಿವೆ ಎಂದು ಒಂದು ಅಂದಾಜಿನ ಪ್ರಕಾರ ಕಂಡು ಬಂದಿದೆ.

**ಕ್ರಿಶ್ಚಿಯನ್ನರು**

ಕ್ರೈಸ್ತಧರ್ಮವನ್ನು ನೋಡಿ.

**ಗಾಣಿಗರು**

ಗಾಣಿಗರು ಕೊಡಗು ಜಿಲ್ಲೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕಡೆಯಿಂದ ವಲಸೆ ಬಂದವರು. ಎರಡನೇ ಹಿಂದುಳಿದ ವರ್ಗಗಳ ಆಯೋಗವು ಜಿಲ್ಲೆಯಲ್ಲಿ 1984ರಲ್ಲಿ 646 ಗಾಣಿಗರಿದ್ದಿರಬಹುದೆಂದು ಅಂದಾಜು ಮಾಡಿದೆ. ಮೈಸೂರು ಕಡೆಯ ಗಾಣಿಗರಲ್ಲಿ ಹೆಗ್ಗಾಣಿಗ, ಕಿರುಗಾಣಿಗ, ಜ್ಯೋತಿಫಣ, ಮೊದಲಾದ ಪ್ರಭೇದಗಳಿವೆ. ಗಾಣಿಗರು ತಮ್ಮ ಹೆಸರಿನ ಮುಂದೆ ಸೆಟ್ಟಿ ಎಂದು ಸೇರಿಸಿಕೊಳ್ಳುತ್ತಾರೆ. ಮದುವೆಯಲ್ಲಿ ತೆರಪದ್ಧತಿ ರೂಢಿಯಲ್ಲಿದೆ. ದಾಸಯ್ಯಗಳನ್ನು ಕರೆದು ಮಣೆಸೇವೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಜಿಲ್ಲೆಯಲ್ಲಿ ಕನ್ನಡ ಮಾತನಾಡುವ ಗಾಣಿಗರು ಶನಿವಾರ ಸಂತೆ, ಸೋಮವಾರಪೇಟೆಗಳಲ್ಲಿ ಕಂಡು ಬರುತ್ತಾರೆ. ಇವರು ಶಿವಜ್ಯೋತಿ ಪಣಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ. ಇವರು ಕಿರುಗಾಣಿಗರ ಗುಂಪಿಗೆ ಸೇರಿದವರಿರಬೇಕೆಂದು ಹೇಳುತ್ತಾರೆ. ಇವರಲ್ಲಿ ಅನೇಕ ಕುಲಗಳಿದ್ದು, ಕುಲಗಳನ್ನು ತಮ್ಮ ಕುಲದೇವತೆಗಳಿಂದ ಗುರ್ತಿಸುತ್ತಾರೆ. ಒಂದೇ ಕುಲದೇವತೆಯನ್ನು ಪೂಜಿಸುವವರು ಹೆಣ್ಣುಗಂಡುಗಳನ್ನು ಕೊಟ್ಟು ತಂದು ಮಾಡುವುದಿಲ್ಲ. ಇವರು ವೆಂಕಟರಮಣ, ವೀರಭದ್ರ, ಮೊದಲಾದ ದೇವರುಗಳನ್ನು ಪೂಜಿಸುತ್ತಾರೆ. ಇವರು ಮಾಂಸಾಹಾರಿಗಳು. ಸತ್ತವರನ್ನು ಹೂಳುತ್ತಾರೆ. ಈಗ ಗಾಣಗಳಲ್ಲಿ ಎಣ್ಣೆ ತೆಗೆಯುವುದು ಕಡಿಮೆಯಾಗಿ ಕೆಲವರು ಎಣ್ಣೆ ತೆಗೆಯಲು ರೋಟರಿ ಯಂತ್ರಗಳನ್ನು ಉಪಯೋಗಿಸುತ್ತಾರೆ. ತುಳು ಮಾತನಾಡುವ ಗಾಣಿಗರು ಶನಿವಾರಸಂತೆ, ಸೋಮವಾರಪೇಟೆ, ಮಡಿಕೇರಿಗಳಲ್ಲಿ ಕಂಡುಬರುತ್ತಾರೆ. ಇವರಲ್ಲಿ ಶ್ರೀಯಣ್ಣ, ಬಂಗೇರಣ್ಣ, ಕರ್ಮೇರಣ್ಣ ಮೊದಲಾದ ಗೋತ್ರಗಳಿವೆಯೆನ್ನುತ್ತಾರೆ. ಇವರೂ ಕೂಡ ಮಾಂಸಾಹಾರಿಗಳು. ಇದುವರೆವಿಗೂ ಕನ್ನಡ ಮತ್ತು ತುಳು ಮಾತನಾಡುವ ಗಾಣಿಗರಲ್ಲಿ ವಿವಾಹ ಸಂಬಂಧವೇರ್ಪಟ್ಟಿಲ್ಲ. ಇವರು ಸತ್ತವರನ್ನು ಸುಡುತ್ತಾರೆ. ಇವರಲ್ಲಿ ಕಟ್ಟೇ ಮನೆಗಳಿಲ್ಲ. ಆದರೆ ಕನ್ನಡ ಮಾತನಾಡುವವರಲ್ಲಿ ಕಟ್ಟೇ ಮನೆಗಳಿವೆ.

**ಗೊಲ್ಲರು**

ಗೊಲ್ಲರನ್ನು ಜಿಲ್ಲೆಯಲ್ಲಿ ಗೌಳಿ, ಗವುಳಿ, ಅತ್ತಿಕಾಳಿ, ನೇಪಾಡಿ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಇವರನ್ನು ಯಾದವರೆಂದು ಕರೆಯುವುದು ವಾಡಿಕೆ. ಜಿಲ್ಲೆಗೆ ಇವರು ಮೈಸೂರು ಕಡೆಯಿಂದ ಬಂದವರೆಂದು ಹೇಳುತ್ತಾರೆ. ಮೈಸೂರು ಕಡೆ ಇವರಲ್ಲಿ ಪೈತಾಲ, ಪುನಗು, ಬೀಗಮುದ್ರೆ ಅಥವಾ ಬೊಕ್ಕಸ ಮೊದಲಾದ ಒಳಪಂಗಡಗಳಿವೆ. ಒಂಟಿ ಚಪ್ಪರದವರು, ರೊಂಡುಚಪ್ಪರದವರು ಎಂಬ ಎರಡು ಪ್ರಭೇದಗಳೂ ಇವೆ. ಕೊಡಗು ಜಿಲ್ಲೆಯಲ್ಲಿ ಗೊಲ್ಲರು ಕುಂಜಿಲ, ಬೆಟ್ಟಗೇರಿ, ಅಯ್ಯಂಗೇರಿ, ಪೆರೂರು ಚೆಟ್ಟಿಮಾನಿ, ಬೇಂಗೂರು, ಕಲ್ಲಾಳ, ಬೇತ್ರಿ, ಗಾಳಿಬೀಡು, ಮಡಿಕೇರಿ ಮುಂತಾದ ಕಡೆಗಳಲ್ಲಿ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ 1984 ರಲ್ಲಿ 1,538 ಇದ್ದಿರಬಹುದೆಂದು ಎರಡನೇಯ ಹಿಂದುಳಿದ ವರ್ಗಗಳ ಆಯೋಗವು ಅಂದಾಜು ಮಾಡಿದೆ. ಇತ್ತೀಚಿನ ಒಂದು ವರದಿ ಪ್ರಕಾರ ಜಿಲ್ಲೆಯಲ್ಲಿ 32 ಕುಟುಂಬಗಳಲ್ಲಿ 880 ಜನರಿದ್ದರೆಂದು ತಿಳಿದುಬಂದಿದೆ. ಇವರ ಮನೆ ಮಾತು ಕೊಡವಭಾಷೆ. ಕೊಡವರಂತೆ ಇವರಲ್ಲೂ 32 ಐನ್‌ಮನೆಗಳಿವೆ. ಪೊನ್ನಕಂಡ, ಅಚೀರ, ಕೈಬ್ಲೀರ, ಪತ್ತಿಯಂಡ, ಬಿದ್ದಿಯಂಡ, ಚಿಂದಂಡ ಮೊದಲಾದವು ಕೆಲವು ಮನೆತನಗಳ ಹೆಸರುಗಳು. ಇವರಲ್ಲಿ ಕೆಲವರಿಗೆ ಜಮ್ಮಾ

ಭೂಮಿಯುಂಟು. ಈಗ ಇವರಲ್ಲಿ ಪಶುಪಾಲನೆ ಇಲ್ಲ. ಬಹುತೇಕ ಮಂದಿ ಕೂಲಿ ಮತ್ತು ವ್ಯವಸಾಯ ಮಾಡುತ್ತಾರೆ. ಜಿಲ್ಲೆಯಲ್ಲಿರುವ ಗೊಲ್ಲರು ಅಯ್ಯಂಗೇರಿಯಲ್ಲಿರುವ ಶ್ರೀಕೃಷ್ಣನನ್ನು ಪೂಜಿಸುತ್ತಾರೆ. ತಿರುಪತಿ ವೆಂಕಟರಮಣನಿಗೆ ಮುಡಿಪು ಕಟ್ಟುತ್ತಾರೆ. ಕೊಡವರ ಹಬ್ಬಗಳ ಜೊತೆಗೆ ಯುಗಾದಿ, ಸುಬ್ರಹ್ಮಣ್ಯ ಷಷ್ಠಿ, ಶ್ರೀಕೃಷ್ಣ ಜನ್ಮಾಷ್ಟಮಿ, ಗೌರಿ–ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ಇವರು ಕೊಡಗಿನಲ್ಲಷ್ಟೆ ಸಂಬಂಧ ಬೆಳೆಸುತ್ತಾರೆ. ಮದುವೆಯಲ್ಲಿ ಪೌರೋಹಿತ್ಯಕ್ಕೆ ಬ್ರಾಹ್ಮಣರನ್ನು ಕರೆಯುತ್ತಾರೆ. ಮದುವೆಯಲ್ಲಿ ಗಂಡು ಹೆಣ್ಣುಗಳನ್ನು ಬಿಟ್ಟು ಉಳಿದವರು ಮಾಂಸಾಹಾರ ಸೇವಿಸುತ್ತಾರೆ. ಹುಟ್ಟಿದಾಗ, ಸತ್ತಾಗ ಕುಟುಂಬದವರು 16 ದಿನ ಸೂತಕ ಆಚರಿಸುತ್ತಾರೆ. ಇವರಲ್ಲಿ ಸತ್ತವರನ್ನು ಹೂಳುವುದೂ ಉಂಟು, ಸುಡುವುದೂ ಉಂಟು.

### ಗೌಡರು

ಗೌಡರನ್ನು ಹತ್ತು ಕುಟುಂಬದ 18ಗೋತ್ರಕ್ಕೆ ಸೇರಿದವರೆನ್ನುತ್ತಾರೆ. ಕೊಡಗಿನಲ್ಲಿ ಈ ಗೌಡರ ಸಂಖ್ಯೆ 1931ರಲ್ಲಿ 14,016 ಇದ್ದುದು 1961ರ ವೇಳೆಗೆ ಮೂವತ್ತು ಸಾವಿರಕ್ಕೆ ಏರಿದ್ದಿರಬಹುದೆಂಬ ನಂಬಿಕೆ. ಜಿಲ್ಲೆಗೆ ಇವರು ದಕ್ಷಿಣ ಕನ್ನಡದಿಂದ ವಲಸೆ ಬಂದಿದ್ದಾರೆ. ಇವರು ವಿಜಯನಗರದ ಪತನವಾದ ಮೇಲೆ ಇಕ್ಕೇರಿ ಸಂಸ್ಥಾನಕ್ಕೆ ಬಂದು ಅಲ್ಲಿಂದ ದಕ್ಷಿಣ ಕನ್ನಡದ ಮೂಲಕ ಕೊಡಗಿಗೆ ಬಂದವರೆಂಬ ಅಭಿಪ್ರಾಯವಿದೆ. ಇವರು ದಕ್ಷಿಣ ಕನ್ನಡದಲ್ಲಿ ಪುತ್ತೂರು, ಸುಳ್ಯದ ಕಡೆಯವರು. ದೊಡ್ಡವೀರರಾಜೇಂದ್ರನ ಕಾಲದಲ್ಲಿ ವಲಸೆ ಬಂದು ಹೆಚ್ಚಾಗಿ ಭಾಗಮಂಡಲನಾಡು, ನಾಪೋಕ್ಲು ನಾಡು ಮಡಿಕೇರಿ ನಾಡುಗಳಲ್ಲಿ ನೆಲೆಸಿದರು. ಇವರ ವಲಸೆಯು 1799 ರಿಂದ 1808ರವರೆಗೂ ಆಗಿದೆಯೆಂದು ಹೇಳುತ್ತಾರೆ. ದಕ್ಷಿಣ ಕನ್ನಡದಿಂದ ದೊಡ್ಡವೀರರಾಜೇಂದ್ರನು ಕರೆಸಿದನೆಂಬ ನಂಬುಗೆ ಇದೆ. ಇವರು ಮಾತನಾಡುವ ಕನ್ನಡ ಭಾಷೆಯನ್ನು ಅರೆ ಭಾಷೆಯೆನ್ನುತ್ತಾರೆ. ಮನೆ ದೇವರು ತಿರುಪತಿ ವೆಂಕಟರಮಣ, ಆದರೆ ಕೆಲವರಿಗೆ ದುರ್ಗಿ, ಸುಬ್ಬಮ್ಮ (ಶರ್ವಾಂಬೆ) ಮನೆ ದೇವತೆಗಳು. ಕೆಲವು ಕುಟುಂಬದವರು ಭೂತಾರಾಧನೆಯನ್ನು ಮಾಡುತ್ತಾರೆ. ಮಲ್ಲಯ್ಯ, ಮಲ್ಲವ್ವ, ಕಲ್ಲಪ್ಪ, ಕಲ್ಲವ್ವ, ಕಾಳಮ್ಮ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಸುಬ್ಬಮ್ಮ ದೇವರನ್ನು ವಿಶೇಷವಾಗಿ ಪೂಜಿಸುತ್ತಾರೆ. ಈ ದೇವತೆಗೆ ಮದುವೆಗಳಲ್ಲಿ ಹರಕೆ ಕಟ್ಟುತ್ತಾರೆ. ಇವರು ಹಿಂದೆ ಶಿವಾರಾಧಕರಾಗಿದ್ದು ರಾಮಾನುಜಾಚಾರ್ಯರ ಕಾಲದಲ್ಲಿ ವೈಷ್ಣವ ಸಂಪ್ರದಾಯ ಹಿಡಿದಿರಬೇಕೆಂಬ ಅಭಿಪ್ರಾಯವೂ ಇದೆ. ವೆಂಕಟರಮಣನ ಹರಿಸೇವೆಯನ್ನು ಕೆಲವು ಕುಟುಂಬದವರು ಪ್ರತಿವರ್ಷವೂ ಆಚರಿಸುತ್ತಾರೆ. ಇದು ಈ ಜಿಲ್ಲೆಯ ಗೌಡರ ಒಂದು ವೈಶಿಷ್ಟ್ಯ. ಹರಿಸೇವೆಯನ್ನು ಸಾಮಾನ್ಯವಾಗಿ ಶನಿವಾರಗಳಂದು ಆಚರಿಸುತ್ತಾರೆ. ಹರಿಸೇವೆಯಲ್ಲಿ ದಾಸರು ಹಾಗೂ ದೇವರ ಭಕ್ತರೆನಿಸಿಕೊಳ್ಳುವ ದರ್ಶನಕಾರರನ್ನು ಕರೆಸುವರು. ದರ್ಶನಕಾರರ ಮೈಮೇಲೆ ದೇವರು ಬರುವುದುಂಟು. ವೆಂಕಟರಮಣನ ದೂತನಾದ ಕೆಂಚರಾಯನ (ಭೈರವ) ಪೂಜೆಯನ್ನು ಕೆಲವರು ಮಾಡುತ್ತಾರೆ. ಹಿಂದೆ ಗೌಡರು ಭತ್ತವನ್ನು ಮಾತ್ರ ಬೆಳೆಯುತ್ತಿದ್ದರು. ಆದರೆ ಈಗ ಕಾಫಿ, ಏಲಕ್ಕಿ. ಕಿತ್ತಳೆ, ಅಡಿಕೆ, ಗೇರು ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ.

ಕೊಡಗಿನಲ್ಲಿ ಗೌಡರ ಮನೆತನಗಳು ಸುಮಾರು 350 ಇವೆ. ಕೊಡವರಂತೆ ಇವರಿಗೂ ಮನೆತನಗಳ ಹೆಸರುಂಟು. ಇವರಲ್ಲಿಯೂ ಮೂಲ ಮನೆಗಳನ್ನು ಐನ್‌ಮನೆಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಎಲ್ಲಾ ಸದಸ್ಯರಿಗೆ ಹಕ್ಕಾಗಿರುವ ಅಡಿಗೆ ಕೋಣೆಯನ್ನು ಉಂಬೊಳಗೆ ಎಂದು ಕರೆಯುತ್ತಾರೆ. ಕುಟುಂಬದ ಸಭಾಂಗಣವನ್ನು ಬೂಡ ಎಂದೂ, ಪಡಸಾಲೆಯನ್ನು ಕಯ್ಯಾಲೆ ಎಂದು ಕರೆಯುತ್ತಾರೆ. ಉಂಬೊಳಗೆಯಲ್ಲಿ ಕಾರಣರಿಗೆ ಯೆಡೆಯಿಡುತ್ತಾರೆ. ಕಯ್ಯಾಲೆಯಲ್ಲಿ ಐಮರ ಮುಖ್ಯ ಭಾಗ. ಇವರ ಮೇಲೆ ಹೆಂಗಸರು ಕುಳಿತುಕೊಳ್ಳುವಂತಿಲ್ಲ. ಕುಟುಂಬದ ಹಿರಿಯ ಪುರುಷನನ್ನು ಪಟ್ಟೆದಾರನೆಂದು ಕರೆಯುತ್ತಾರೆ. ಕೊಡಗಿನ ಗೌಡರಿಗೆ ಜಮ್ಮಾ ಭೂಮಿಯುಂಟು. ಹಿಂದೆ ಕೆಲವು ಗೌಡ ಕುಟುಂಬಗಳು ತಾವು ಬಂದು ನಿಂತ ಭೂಮಿಗಳ ಹಿಂದಿನ ಒಡೆಯರಾದ ಕೊಡವರ ಮನೆತನಗಳ ಹೆಸರುಗಳನ್ನು ಇಟ್ಟುಕೊಂಡಿದ್ದಾರೆ. ಹಿಂದೆ ರಾಜರ ಕಾಲದಲ್ಲಿ ಕೆಲವು ಗೌಡ ಕುಟುಂಬಗಳಲ್ಲಿ ಕೊಡವ ಹೆಣ್ಣುಗಳನ್ನು ಮದುವೆಯಾಗಿದ್ದುದರಿಂದ, ಆ ಕುಟುಂಬಗಳ ಸ್ತ್ರೀಯರು ಇತ್ತೀಚಿನವರೆಗೂ ಕೊಡವರಂತೆ ಸೀರೆಯುಡುತ್ತಿದ್ದರು. ಅಂತಹ ಕುಟುಂಬಗಳಲ್ಲಿ ಮನೆಯಲ್ಲಿ ಕೊಡವ ಭಾಷೆಯನ್ನಾಡುತ್ತಾರೆ. ಈಗ ಇತರರಂತೆ ಸೀರೆಯುಡುತ್ತಾರೆ. ಗೌಡರಲ್ಲಿ ಸ್ತ್ರೀಯರು ಪ್ರಾಯಕ್ಕೆ ಬಂದ ನಂತರ ವಿವಾಹವಾಗುತ್ತಾರೆ. ಇವರಲ್ಲಿ ಧಾರೆ ಮೂಹೂರ್ತ ರೂಢಿಯಲ್ಲಿವೆ. ಸ್ತ್ರೀಯರು ಮಾಂಗಲ್ಯಧಾರಣೆ ಮಾಡುತ್ತಾರೆ. ತೆರ ರೂಢಿಯಲ್ಲಿದ್ದು ಈಗ ಅದರ ಮೊತ್ತ ರೂ. 10—50. ಗಂಡಿನ ಕಡೆಯವರು ಹೆಣ್ಣನ್ನು ಅರಸಿಕೊಂಡು ಹೋಗುತ್ತಾರೆ. (ವಿವರಗಳಿಗೆ ಸಾಮಾಜಿಕ ಜೀವನ ನೋಡಿ). ಇವರು ಯುಗಾದಿ, ವಿಷುಸಂಕ್ರಮಣ, ಕೈಲ್ ಮುಹೂರ್ತ, ಕಾವೇರಿ

ಸಂಕ್ರಮಣ, ಹುತ್ತರಿ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ದೀಪಾವಳಿ ಹಬ್ಬವನ್ನು ಆಚರಿಸುವಾಗ ಸಾವು ಘಟಿಸಿದ ಮನೆಗಳಲ್ಲಿ ಅವುಲು ಹಾಕುತ್ತಾರೆ. ಫೆಬ್ರವರಿ ತಿಂಗಳಿನಲ್ಲಿ ಭತ್ತವನ್ನು ಪೂಜಿಸುವ ಕಿಡ್ಡಾಸ ಹಬ್ಬವನ್ನು ಊರಿನ ಇತರರೊಂದಿಗೆ ಸೇರಿ ಆಚರಿಸುತ್ತಾರೆ.

ಗೌಡರಲ್ಲಿ ಸತ್ತವರನ್ನು ಸುಡುತ್ತಾರೆ. ಆದರೆ ಮಕ್ಕಳನ್ನು ಸತ್ತರೆ ಹೂಳುತ್ತಾರೆ. ಮದುವೆ ವಯಸ್ಸಿನವರು ಮದುವೆಯಾಗದೆ ಸತ್ತರೆ, ಗಂಡಸರಾಗಿದ್ದರೆ ಶವದ ಕೈಗಳಿಂದ ಬಾಳೆ ಗಿಡಕ್ಕೆ ತಾಳಿ ಕಟ್ಟಿದ ಶಾಸ್ತ್ರ ಮಾಡಿಸಿ ಸಂಸ್ಕಾರ ಮಾಡುತ್ತಾರೆ. ಹೆಂಗಸರಾಗಿದ್ದರೆ ಹುಲ್ಲಿನಿಂದ ಗಂಡಸಿನಾಕೃತಿಯನ್ನು ಮಾಡಿ ಶವದ ಕೊರಳಿಗೆ ಮಾಂಗಲ್ಯ ಕಟ್ಟಿಸಿ ಸಂಸ್ಕಾರ ಮಾಡುತ್ತಾರೆ. ಶವವನ್ನು ಚಟ್ಟದ ಮೇಲೆ ಒಯ್ದು ಸಂಸ್ಕಾರ ಮಾಡುತ್ತಾರೆ. (ವಿವರಗಳಿಗೆ ಸಾಮಾಜಿಕ ಜೀವನ ನೋಡಿ). ಹಿಂದೆ ಗೌಡರಲ್ಲಿ ಎರಡು ರೀತಿಯ ಗ್ರಾಮ ಗೌಡರಿದ್ದರು. ಒಬ್ಬರು ಗ್ರಾಮಗೌಡ, ಇನ್ನೊಬ್ಬರು ಗೊತ್ತುಗೌಡ. ಗೌಡರಲ್ಲಿ ಹುಟ್ಟಿದಾಗ ಐದುದಿನ, ಸತ್ತಾಗ ಹನ್ನೊಂದು ದಿನ ಸೂತಕ ಆಚರಿಸುತ್ತಾರೆ.

**ನಾಮಧಾರಿ ಗೌಡರು :** ಶ್ರೀರಾಮಾನುಜಾಚಾರ್ಯರ ವೈಷ್ಣವ ಪಂಥದ ಸಂಪ್ರದಾಯಗಳನ್ನು ಅನುಸರಿಸುವ ಗೌಡರನ್ನು ನಾಮಧಾರಿ ಗೌಡರೆನ್ನುತ್ತಾರೆ ಎಂಬ ಅಭಿಪ್ರಾಯವಿದೆ. ನಾಮಧಾರಿ ಎಂಬ ಗುಣವಾಚಕವು ಕೇವಲ ಗೌಡರಲ್ಲಿ ಮಾತ್ರ ಕಂಡುಬರದೆ ವೈಷ್ಣವ ಸಂಪ್ರದಾಯವನ್ನು ಅನುಸರಿಸುವ ಎಲ್ಲಾ ಜಾತಿಗಳಲ್ಲೂ ಕಂಡು ಬರುತ್ತದೆ. ಇವರು ಹಣೆಯ ಮೇಲೆ ಕುಂಕುಮದ ನೇರ ಗೀಟನ್ನು (ನಾಮ) ಹಾಕಿಕೊಳ್ಳುತ್ತಾರೆ.. ಪಶ್ಚಿಮಘಟ್ಟಗಳ ಗೌಡರಲ್ಲಿ ನಾಮಧಾರಿಗಳ ಶಿಷ್ಟಾಚಾರ ಸಂಪ್ರದಾಯಗಳು ಬಹಳವಾಗಿವೆ. ಇವರಲ್ಲಿನ ಕಟ್ಟೆಮನೆಗಳು ಕುಲಾಚಾರಗಳನ್ನು ಹೆಚ್ಚು ಹೆಚ್ಚು ಅನುಸರಿಸುವಂತೆ ಕುಟುಂಬಗಳ ಮೇಲೆ ಪ್ರಭಾವ ಬೀರುತ್ತವೆ. ಓಷ್ಟಮಯ್ಯಗಳು ಶುದ್ಧಿ, ಸಂಪ್ರೋಕ್ಷಣೆ, ಪುಣ್ಯಾರ್ಚನೆ ಪಿಂಡಪ್ರದಾನಾದಿಗಳನ್ನು ಮಾಡಿಸುತ್ತಾರೆ. ಹರಿಸೇವೆ, ಕೆಂಚರಾಯನಸೇವೆ, ರಾಮನವಮಿ ಮೊದಲಾದವುಗಳನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸುತ್ತಾರೆ. ಮಲೆನಾಡಿನ ನಾಮಧಾರಿಗಳು ಶ್ರಾವಣಮಾಸದಲ್ಲಿ ಮದ್ಯ, ಮಾಂಸವನ್ನು ಸೇವಿಸುವುದಿಲ್ಲ. ಆದರೆ ಕೊಡಗಿನ ನಾಮಧಾರಿ ಗೌಡರು ಪೂರ್ಣ ಸಸ್ಯಾಹಾರಿಗಳು. ಹರಿಸೇವೆಯ ನಂತರ ಮನೆಯಿಂದ ಸ್ವಲ್ಪದೂರದಲ್ಲಿ ಭೈರವೇಶ್ವರನನ್ನು ಪೂಜಿಸಿ ಪ್ರಾರ್ಥಿಸುವ ಸಂಪ್ರದಾಯವು ಇವರಲ್ಲಿದೆ. ಇದು ಇವರು ಮೊದಲು ಭೈರವನ ಒಕ್ಕಲಾಗಿದ್ದರೆಂಬುದನ್ನು ಸೂಚಿಸಬಹುದು ಎಂಬ ಅಭಿಪ್ರಾಯವಿದೆ. ಕೊಡಗಿನ ದಕ್ಷಿಣ ಭಾಗದಲ್ಲಿ ಕಂಡು ಬರುವ ನಾಮಧಾರಿಗೌಡರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಸಂಪಾಜೆ ಕಡೆಯಿಂದ ವಲಸೆ ಬಂದವರೆಂದು ನಂಬಲಾಗಿದೆ. ನಾಮಧಾರಿ ಗೌಡರು ಜಿಲ್ಲೆಯಲ್ಲಿ ನಲ್ಲೂರು, ಶಿರಂಗಾಲ, ಹೆಬ್ಬಾಲೆ, ಕೂಡ್ಲೂರು, ಕೊಡಮಂಗಳೂರುಗಳಲ್ಲಿ ಕಂಡುಬರುತ್ತಾರೆ. ಇವರು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರನ್ನು ಕೆಲವೊಮ್ಮೆ ನಾಮಧಾರಿಗಳೆಂದೂ ಕರೆಯುತ್ತಾರೆ. ಇವರ ಮೂಲಕಸುಬು ವ್ಯವಸಾಯ. ಗಂಡಿನ ಕಡೆಯವರು ಹೆಣ್ಣನ್ನು ಅರಸುತ್ತಾರೆ. ವಿವಾಹ ಕಾರ್ಯಗಳಿಗೆ ಬ್ರಾಹ್ಮಣರನ್ನು ಕರೆಸುತ್ತಾರೆ. ಹೆಣ್ಣಿನ ಮನೆಯಲ್ಲಿ ವಿವಾಹ. ಇತ್ತೀಚೆಗೆ ಜೈನಗೌಡರೊಂದಿಗೆ ವಿವಾಹ ಸಂಬಂಧವೇರ್ಪಡುತ್ತಿದೆ. ಇವರ ಮನೆ ದೇವರುಗಳು ತಿರುಪತಿ ತಿಮ್ಮಪ್ಪ, ನಂಜನಗೂಡಿನ ನಂಜುಂಡೇಶ್ವರ, ಮೊದಲಾದವರು. ಯುಗಾದಿ, ಗೌರಿ, ಗಣೇಶ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಯುಗಾದಿಯಲ್ಲಿ ಪಿತೃಗಳಿಗೆ ಯೆಡೆಯಿಡುತ್ತಾರೆ. ಸತ್ತವರನ್ನು ಹೆಚ್ಚಾಗಿ ಹೂಳುತ್ತಾರೆ, ಕೆಲವರು ಸುಡುತ್ತಾರೆ. ಸತ್ತಾಗ ಕೆಲವರು ಐದು ದಿನ, ಕೆಲವರು ಒಂಬತ್ತು ದಿನ ಸೂತಕ ಆಚರಿಸುತ್ತಾರೆ. ವಿವಾಹ ವಿಚ್ಛೇದನವಿಲ್ಲ. ವಿಧವಾ ವಿವಾಹ ತುಂಬ ಕಡಿಮೆ. ಇವರಲ್ಲಿ ಜಾತಿ ಜಗಳಗಳನ್ನು ಬಿಡಿಸಲು, ಸಮಸ್ಯೆಗಳನ್ನು ಬಗೆಹರಿಸಲು ಕಟ್ಟೇಮನೆಗಳುಂಟು. ಜಿಲ್ಲೆಯಲ್ಲಿ ಇವರ ಸಂಖ್ಯೆ ಸುಮಾರು 8,000 ಇರಬಹುದೆಂಬ ಅಂದಾಜಿದೆ.

**ದೇವರ ಮಕ್ಕಳು :** ಕೊಡಗು ಜಿಲ್ಲೆಯಲ್ಲಿ ಗೌಡರಲ್ಲಿ ದೇವರ ಮಕ್ಕಳು ಒಂದು ಒಳಗುಂಪು. ಇವರು ಸೋಮವಾರಪೇಟೆ ತಾ॥ ದುಂಡಳ್ಳಿ, ಕಾಗೆಕೋಡಿ, ನೀರಗುಂದ, ಸಾಂತಪುರ, ಊಲುಗುತ್ತಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು ತಾಲೂಕುಗಳಲ್ಲಿಯೂ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ತಿಳಿದು ಬಂದಿದೆ. ಇವರ ಮನೆ ಮಾತು ಕನ್ನಡ. ಇವರು ಮಾಂಸಾಹಾರಿಗಳು. ಇವರ ಮುಖ್ಯ ಉದ್ಯೋಗ ವ್ಯವಸಾಯ. ವಿವಾಹದಲ್ಲಿ ವರನು ವಧುವಿಗೆ ತಾಳಿಕಟ್ಟುವ, ಧಾರೆಯೆರೆಯುವ ಸಂಪ್ರದಾಯಗಳಿವೆ. ಧಾರೆ ಸಮಯದಲ್ಲಿ ಬ್ರಾಹ್ಮಣರನ್ನು ಕರೆಸುತ್ತಾರೆ. ವೆಂಕಟರಮಣನನ್ನು ಪೂಜಿಸುತ್ತಾರೆ. ದನಕರುಗಳ ಆರೋಗ್ಯಕ್ಕೆ

'ಅಗೇಮಾರಿಹಬ್ಬ' ಎಂಬ ಹಬ್ಬವನ್ನು ಆಚರಿಸುತ್ತಾರೆ. ಆಗ ಊರಿನವರೆಲ್ಲರೂ ಊರಬಾಗಿಲಿನಲ್ಲಿ ಕರಿಕಲ್ಲಿಗೆ ಯೆಡೆಯಿಡುತ್ತಾರೆ. ಕುಟುಂಬಗಳಲ್ಲಿ ಜನನವಾದಾಗ ಹಾಗೂ ಸತ್ತಾಗ ಸೂತಕವನ್ನು ಆಚರಿಸುತ್ತಾರೆ. ಸತ್ತವರನ್ನು ಸುಡುತ್ತಾರೆ, ಮಕ್ಕಳು ಸತ್ತರೆ ಹೂಳುತ್ತಾರೆ.

### ಒಕ್ಕಲಿಗ ಗೌಡರು

ಸೋಮವಾರಪೇಟೆ ತಾಲೂಕಿನಲ್ಲಿ ಮಾದರವಳ್ಳಿ, ಶಾಂತಳ್ಳಿ ಕುಂದಳ್ಳಿ, ಕೂಲೆ, ಗೌಡಳ್ಳಿ ಮೊದಲಾದ ಕಡೆ ಒಕ್ಕಲಿಗ ಗೌಡರೆಂಬ ಇನ್ನೊಂದು ಗೌಡರ ಒಳಪಂಗಡವಿದೆ. ಇವರಿಗೂ ಗಂಗಡಿಕಾರ ಗೌಡರಿಗೂ ಹಿಂದೆ ಸಂಬಂಧವೇರ್ಪಡುತ್ತಿರಲಿಲ್ಲ. ಇವರ ಮುಖ್ಯ ಉದ್ಯೋಗ ವ್ಯವಸಾಯ. ಮನೆ ಮಾತು ಕನ್ನಡ. ಇವರು ಪ್ರತಿ ಹಬ್ಬದಲ್ಲೂ ಯೆಡೆಯಿಡುತ್ತಾರೆ. ಸಂಕ್ರಾಂತಿಯಲ್ಲಿ ನಡೆಯುವ ಸಕಲೇಶಪುರ ತಾಲೂಕಿನ ದೊಡ್ಡಯ್ಯನ ಜಾತ್ರೆಗೆ ಹೋಗುತ್ತಾರೆ. ದೊಡ್ಡಯ್ಯ, ಬೇಲೂರು ಚನ್ನಿಗರಾಯ, ಶಾಂತಳ್ಳಿ ಕುಮಾರಲಿಂಗ, ಮೊದಲಾದವು ಇವರ ಮನೆ ದೇವರುಗಳು. ಇವರು ಮಹಾಲಯ ಪಕ್ಷವನ್ನು ಆಚರಿಸುವುದಿಲ್ಲ. ಗೌರಿ ಕಳೆದ ಒಂದು ತಿಂಗಳ ನಂತರ 'ಮಾಳ'ದ ಹಬ್ಬವನ್ನು ಆಚರಿಸುತ್ತಾರೆ. ದೀಪಾವಳಿ ನಂತರ ಹನ್ನೆರಡು ದಿನಕ್ಕೆ ಮಕ್ಕಳ ಹಬ್ಬ ಮಾಡಿ ವ್ಯವಸಾಯೋಪಕರಣಗಳನ್ನು, ತಿಪ್ಪೆಯನ್ನೂ (ತಿಪ್ಪಮ್ಮ) ಪೂಜಿಸುತ್ತಾರೆ. ಈ ಹಬ್ಬವು ಸೋಮವಾರಪೇಟೆ ತಾಲೂಕಿನ ಉತ್ತರ ಭಾಗದಲ್ಲಿ ವಿಶೇಷವಾದುದು. ಇದನ್ನು ಊರಿನ ಎಲ್ಲರೂ ಆಚರಿಸುತ್ತಾರೆ. ದೀಪಾವಳಿಯ ದಿನ 'ಬೆಳಗುಂಬಳ' ಬಳ್ಳಿಯನ್ನು ತಂದು, ಸುತ್ತಿ ಉಂಗುರ ಮಾಡಿ ಗದ್ದೆಗಳಲ್ಲಿ, ದನಗಳಿಗೆ ಸುತ್ತುತ್ತಾರೆ. ವಿವಾಹದಲ್ಲಿ ಎಳೆತಾಳಿ ಮತ್ತು ಅಕ್ಕಿ ತಾಳಿ ಎಂಬ ಎರಡು ವಿಧದ ತಾಳಿ ಕಟ್ಟುತ್ತಾರೆ. ಹಿಂದೆ ಕನ್ಯಾಶುಲ್ಕ (ತೆರ) ಹನ್ನೆರಡು ಕಾಲು ರೂಪಾಯಿ ಇತ್ತಂತೆ. ಈಗ ವರದಕ್ಷಿಣೆ ರೂಢಿಗೆ ಬರುತ್ತಿದೆಯೆನ್ನುತ್ತಾರೆ. ವಿವಾಹ ವಿಚ್ಛೇದನ ತುಂಬಾ ಕಡಿಮೆ. ಕೂಡಾವಳಿ ರೂಢಿಯಲ್ಲಿದೆ. ಸತ್ತವರನ್ನು ಹೂಳುತ್ತಾರೆ.

ಗೋಣಿಕೊಪ್ಪಲಿನ ಕಡೆ ಕಂಡುಬರುವ ಗಂಗಡಿಕಾರ ಗೌಡರು ಮೈಸೂರು, ಹಾಸನ, ಚಿಕ್ಕಮಗಳೂರು ಕಡೆಯಿಂದ ವಲಸೆ ಬಂದವರು. ಇವರಿಗೂ ಜಿಲ್ಲೆಯಲ್ಲಿ ಕಂಡುಬರುವ ದಕ್ಷಿಣಕನ್ನಡ ಜಿಲ್ಲೆಯಿಂದ ಬಂದಿರುವ ಗೌಡರಿಗೂ, ಸೋಮವಾರಪೇಟೆ ತಾಲೂಕಿನಲ್ಲಿರುವ ದೇವರ ಮಕ್ಕಳು ಮತ್ತು ಒಕ್ಕಲಿಗ ಗೌಡರಿಗೂ, ಹಿಂದೆ ವಿವಾಹ ಸಂಬಂಧವೇರ್ಪಡುತ್ತಿರಲಿಲ್ಲ. ಗಂಗಡಿಕಾರ ಒಕ್ಕಲಿಗರಲ್ಲಿ ಪೆಟ್ಟಿಗೆಯವರು ಮತ್ತು ಬುಜ್ಜಣಿಗೆಯವರು ಎಂಬ ಎರಡು ಒಳಗುಂಪುಗಳಿರುವುದರ ಜೊತೆಗೆ ಆನೆ, ಅವಿ, ಬೆಳ್ಳಿ, ಚಂದ್ರ, ಚಿನ್ನ ಮೊದಲಾದ ಕುಲಗಳಿವೆ. ಇವರ ಮನೆ ಮಾತು ಕನ್ನಡ. ಇವರು ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುವುದರ ಜೊತೆಗೆ ಕೊಡವರ ಹಬ್ಬಗಳನ್ನೂ ಆಚರಿಸುತ್ತಾರೆ. ಇವರ ಇತರ ಸಂಪ್ರದಾಯಗಳೂ, ಸಂಸ್ಕಾರಗಳೂ ಪಕ್ಕದ ಜಿಲ್ಲೆಗಳಲ್ಲಿ ಕಂಡು ಬರುವ ಇತರ ಗಂಗಡಿಕಾರರ ಸಂಪ್ರದಾಯ ಸಂಸ್ಕಾರಗಳಂತೆಯೇ ಇವೆ. ಎಲ್ಲಾ ಒಕ್ಕಲಿಗ ಗೌಡರ ಸಂಖ್ಯೆ ಜಿಲ್ಲೆಯಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ 1984 ರಲ್ಲಿ 77,855 ಎಂದು ಅಂದಾಜು ಮಾಡಲಾಗಿದೆ.

### ಜೇನು ಕುರುಬರು

ಜೇನುಕುರುಬರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಪೊನ್ನಂಪೇಟೆ, ಶ್ರೀಮಂಗಲ, ಅಮ್ಮತ್ತಿನಾಡು, ಸೋಮವಾರಪೇಟೆ ನಾಡುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರ ಮುಖ್ಯ ಕಸುಬು ಮರಗಳ ಮೇಲೆ ಹಾಗೂ ಪೊಟರೆಗಳಲ್ಲಿ ಜೇನು ಸಂಗ್ರಹಿಸುವುದು. ಇವರನ್ನು ಆನೆಕುರಬ, ಕಾವಾಡಿ, ಪೊಮೆಕುರುಬ ಎಂದೂ ಕರೆಯುತ್ತಾರೆ. ರಾಜರ ಕಾಲದಲ್ಲಿ ಇವರು ಆನೆಗಳನ್ನು ಪಳಗಿಸುತ್ತಿದ್ದರಲ್ಲದೆ, ಅವುಗಳ ಮೇಲ್ವಿಚಾರಣೆಯನ್ನೂ ನೋಡಿಕೊಳ್ಳುತ್ತಿದ್ದರು. ಕುರು, ಎಂದರೆ ಬೆಟ್ಟ, ಕುರುಬ ಎಂದರೆ ಬೆಟ್ಟದಲ್ಲಿ ವಾಸಿಸುವನು ಎಂದು ಲೂಯಿಸ್‌ರವರು ತಿಳಿಸುತ್ತಾರೆ. ಪಕ್ಕದ ಕೇರಳ, ತಮಿಳು ನಾಡುಗಳಲ್ಲಿ ವಾಸಿಸುವ ಇವರನ್ನು ಕಟ್ಟನಾಯಕರು, ಶೋಲ ನಾಯಕರು, ತೇನ್‌ಕುರುಮ, ಜೇನುಕೊಯ, ಕುರುವ ಎಂದೆಲ್ಲಾ ಕರೆಯುತ್ತಾರೆ. ಕನ್ನಡದ 'ಕುರುಬ', ತಮಿಳಿನ 'ಕುರುಂಬ' ಕೇರಳದ 'ಕುರುಮನ್' ಹೆಸರುಗಳು ಒಂದೇ ಬುಡಕಟ್ಟನ್ನು ಸೂಚಿಸುತ್ತವೆಯೆಂದು 1891ನೇ ಜನಗಣತಿಯಲ್ಲಿ ಹೇಳಿದೆ. ಇವರ ಮೈಬಣ್ಣ ಕಪ್ಪು. ಗಂಡಸರೂ, ಹೆಂಗಸರೂ ತಲೆ ಕೂದಲನ್ನು ಉದ್ದವಾಗಿ ಬಿಟ್ಟು ಹಿಂದೆ ಗಂಟುಹಾಕುತ್ತಾರೆ. ಇತ್ತೀಚೆಗೆ ಗಂಡಸರು ಕ್ರಾಪು ಕತ್ತರಿಸಿಕೊಳ್ಳುತ್ತಾರೆ. ಮಾತನಾಡುವ ಭಾಷೆ ಕನ್ನಡದ ಒಂದು ಉಪಭಾಷೆಯಾಗಿದೆ.

ಮದರಾಸಿನ 1891 ನೇ ಜನಗಣತಿ ಪ್ರಕಾರ ಜೇನು ಕುರುಬರು ಮೂಲನಿವಾಸಿಗಳಾದ ಕುರುಬರ (ಪಲ್ಲವರ) ವಂಶಸ್ಥರೆಂದೂ, ಸುಮಾರು 8ನೇ ಶತಮಾನದ ಆದಿಯಲ್ಲಿ ಚೋಳ, ಕೊಂಗ, ಚಾಳುಕ್ಯ ರಾಜರು ಇವರನ್ನು ಕಾಡಿಗೆ

ಅಟ್ಟಿದರೆಂದೂ ಐತಿಹ್ಯವನ್ನು ಉಲ್ಲೇಖಿಸಿದೆ. ಕಾಮಕೋಟಿ ರಾಯ ದೇವತೆಯ ವಂಶಸ್ಥರೆಂದು ತಮಿಳುನಾಡಿನ ಒಂದು ಜನಪದ ಕತೆ ತಿಳಿಸುತ್ತದೆ. ಜೇನುಕುರುಬರಲ್ಲಿ ಭೂಪ್ರದೇಶದ ಆಧಾರದ ಮೇಲೆ ಅನೇಕ ಒಳ ಹಾಗೂ ಹೊರ ಪಂಗಡಗಳು ಉಂಟಾಗಿವೆ. ಇತ್ತೀಚಿನವರೆವಿಗೂ ಇವರು ಅಲೆಮಾರಿಗಳಾಗಿದ್ದು, ಒಂದೆಡೆ ನೆಲೆ ನಿಂತು ಜೀವನ ನಡೆಸುತ್ತಿರಲಿಲ್ಲ. ಇವರ ಗುಡಿಸಲುಗಳು ಉದ್ದವಾಗಿ ಚಿಕ್ಕದಾಗಿರುತ್ತವೆ. ಕೆಲವೊಮ್ಮೆ ಹಗಲೆಲ್ಲಾ ಕಾಡಿನಲ್ಲಿ ಅಲೆಯುತ್ತಿದ್ದು ರಾತ್ರಿ ವೇಳೆ ಬೆಂಕಿ ಮುಂದೆ ಕುಳಿತು ಕಾಲ ಕಳೆಯುತ್ತಿದ್ದರು. ಮೂರು ನಾಲ್ಕು ಕಂಬಗಳನ್ನು ನೆಟ್ಟು ಅವುಗಳ ಮೇಲೆ ಅಡ್ಡಡ್ಡ ಮರದ ತೊಲೆಗಳನ್ನಿಟ್ಟು ಬೊಂಬುಗಳನ್ನು ಇಳಿಬಿಟ್ಟು ನೊಜೆಜಾತಿಯ ಹುಲ್ಲನ್ನೋ, ಮರದ ಸೊಪ್ಪನ್ನೋ ಹಾಕಿ ಗುಡಿಸಲು ಕಟ್ಟಿಕೊಳ್ಳುತ್ತಿದ್ದರು.

ಜೇನು ಕೀಳುವುದು ಇವರ ಮೂಲ ವೃತ್ತಿಯಾದರೂ ಇತರ ವೃತ್ತಿಗಳನ್ನು ಕೈಗೊಂಡಿದ್ದಾರೆ. ಬೊಂಬುಗಳನ್ನು, ಹುಲ್ಲನ್ನು ಕಾಡಿನಲ್ಲಿ ಸಂಗ್ರಹಿಸುತ್ತಾರೆ. ನಾಯಿಗಳೊಂದಿಗೆ ಬೇಟೆಯಾಡುತ್ತಾರೆ. ಗೆಡ್ಡೆಗೆಣಸುಗಳನ್ನು ತಿಂದು ಜೀವಿಸುತ್ತಾರೆ. ಕಾಡಿನಲ್ಲಿ ಸಿಕ್ಕುವ ಕೊಳಿಕೆ, ಕಾಗೆ ಮೊದಲಾದ ಸೊಪ್ಪುಗಳನ್ನು ತಂದು ಬೇಯಿಸಿ ತಿನ್ನುತ್ತಾರೆ. ಅನ್ನವನ್ನು ಕಾಳು ಮೆಣಸಿನೊಂದಿಗೆ ಬೆರೆಸಿಕೊಂಡು ತಿನ್ನುತ್ತಾರೆ. ರಾಗಿಯಿಂದ ಮುದ್ದೆ, ರೊಟ್ಟಿ ಮಾಡಿ ತಿನ್ನುತ್ತಾರೆ. ಕುಂಬಳ ಕಾಯನ್ನು ದೊಡ್ಡ ದೊಡ್ಡದಾಗಿ ಸೀಳಿ ಉಪ್ಪು ಹಚ್ಚಿ ತಿನ್ನುತ್ತಾರೆ. ಪ್ರಾಣಿಗಳ ಜಾಡು ಹಿಡಿಯುವುದರಲ್ಲಿ ಇವರು ಪ್ರವೀಣರು. ಹಿಂದಿನ ಕಾಲದಲ್ಲಿ ವಧುವನ್ನು ಸೆರೆಹಿಡಿದು ತಂದು ವಿವಾಹವಾಗುವ ಪದ್ಧತಿ ರೂಢಿಯಲ್ಲಿತ್ತು. ಮೈನೆರೆದ ನಂತರವೇ ವಿವಾಹವಾಗುವುದು ಸಾಮಾನ್ಯ. ವಿಶೇಷವಾಗಿ ಸೋದರತ್ತೆ, ಸೋದರಮಾವನ ಮಗಳನ್ನು ವಿವಾಹವಾಗುತ್ತಾರೆ. ತೆರ ಕೊಡುವುದು ರೂಢಿಯಲ್ಲಿದೆ. ಸೋಲಿಗರಂತೆ ಕಾಡಿಗೆ ಓಡಿಹೋಗಿ ವಿವಾಹವಾಗುವುದೂ ಉಂಟು. ಎಲೆಅಡಿಕೆಗಳನ್ನು ಬದಲಾಯಿಸುವುದು ವಿವಾಹದ ಮುಖ್ಯ ಅಂಶಗಳಲ್ಲೊಂದು. ಇತ್ತೀಚಿನ ದಿನಗಳಲ್ಲಿ ನಾಡಿನ ಜನಗಳಂತೆ ಕಂಬಗಳನ್ನು ನೆಟ್ಟು ಚಪ್ಪರ ಹಾಕಿ ಧಾರೆಯೆರೆದು ವಿವಾಹವಾಗುವುದು, ಕಂಕಣ ಕಟ್ಟುವುದು, ತಾಳಿ ಕಟ್ಟುವುದು ಮೊದಲಾದ ಪದ್ಧತಿಗಳು ರೂಢಿಗೆ ಬರುತ್ತಿವೆ. ವಿವಾಹ ವಿಚ್ಛೇದನ, ಪುನರ್ವಿವಾಹ, ವಿಧವಾವಿವಾಹಗಳು ರೂಢಿಯಲ್ಲಿವೆ. ಜೇನು ಕುರುಬರು ಕುಲದೇವತಾ ಪದ್ಧತಿ (ಟೊಟೆಮಿಸಂ) ಅನುಸರಿಸುತ್ತಾರೆ. ಭೂತ ಪೂಜೆಯಲ್ಲಿ ಬೆಟ್ಟ ಕುರುಬರಿಗಿಂತ ಇವರು ಕಡಿಮೆ ಒಲವುಳ್ಳವರು. ಸಿದ್ದರಾಮ, ಸೂರ್ಯ, ಚಂದ್ರ, ಭೈರವನನ್ನು ಪೂಜಿಸುತ್ತಾರೆ. ಮಾಟ, ಮಂತ್ರ, ಯಂತ್ರ, ತಂತ್ರಗಳಲ್ಲಿ ನಂಬಿಕೆಯಿಟ್ಟು ತಮ್ಮ ಆದಾಯದ ಬಹುಭಾಗವನ್ನು ಅವುಗಳಿಗಾಗಿ ವ್ಯಯಮಾಡುತ್ತಾರೆ. ಹಳ್ಳಿ, ನಗರಗಳ ಸಂಪರ್ಕವುಳ್ಳವರು ದಸರಾ, ದೀಪಾವಳಿಗಳನ್ನು ಆಚರಿಸುತ್ತಾರೆ. ಸೋಮವಾರ, ಶುಕ್ರವಾರಗಳನ್ನು ಶುಭ ದಿನಗಳೆಂದು ಭಾವಿಸುತ್ತಾರೆ. ಬಂಡೆ ಹಬ್ಬ ಇವರಿಗೆ ವಿಶೇಷವಾದ ಹಬ್ಬ. ಅಂದು ಅವರು ಯಾರನ್ನು ಬೇಕಾದರೂ ಬೈಯುತ್ತಾರೆ. ವೇಷವನ್ನು ಹಾಕಿಕೊಂಡು ಗುಂಪು ಗುಂಪಾಗಿ ಮನೆ ಮನೆಗೆ ಹೋಗಿ, ಅಕ್ಕಿ, ಬಟ್ಟೆ ಮೊದಲಾದವುಗಳನ್ನು ಸಂಗ್ರಹಿಸುತ್ತಾರೆ. ಕೋಲಾಟ ಇವರ ಒಂದು ಮುಖ್ಯವಾದ ಕಲೆ. ಕಷ್ಟ, ಕಾಯಿಲೆ, ಕಸಾಲೆಗಳು ಬಂದರೆ ಇವರು ಬರಗುವ ಎಂಬ ದೇವರನ್ನೂ, ಕುಟ್ಟದಲ್ಲಿರುವ ಒಡಿತೆರೆ ಎಂಬ ದೇವತೆಯನ್ನು ಮೊರೆ ಹೋಗುತ್ತಾರೆ.

ಸತ್ತವರನ್ನು ತಮ್ಮ ಗುಡಿಸಿಲಿನ ಪಕ್ಕದಲ್ಲಿ ಹೂಳುತ್ತಾರೆ. ನಂತರ ಗುಡಿಸಿಲನ್ನು ಸುಟ್ಟು ಹಾಕುತ್ತಾರೆ. ಬೇರೆಡೆಗೆ ವಾಸ ಹೋಗುತ್ತಾರೆ. ತುಂಬಾ ಹಿಂದುಳಿದವರು ಸತ್ತವರನ್ನು ಚಾಪೆಯಲ್ಲಿ ಸುತ್ತಿ ಮರ, ಬಂಡೆಗಳ ಮೇಲೆಯಿಟ್ಟು ಹಕ್ಕಿ, ಪಕ್ಷಿಗಳು ತಿನ್ನಲು ಬಿಡುತ್ತಿದ್ದರು. ಸತ್ತಾಗ, ಹುಟ್ಟಿದಾಗ ಮೈಲಿಗೆ ಆಚರಿಸುತ್ತಾರೆ.

### ಜೋಗಿಗಳು

ಜಿಲ್ಲೆಯಲ್ಲಿ ಜೋಗಿಗಳು ಭಾಗಮಂಡಲ, ಕುಶಾಲನಗರ ಮತ್ತು ಸೋಮವಾರಪೇಟೆಗಳಲ್ಲಿದ್ದಾರೆ. ಇವರ ಪೂರ್ವ ವೃತ್ತಿ ಭಿಕ್ಷೆ ಬೇಡುವುದು. ಇವರು ನಾಥಪಂಥೀಯರು. ಈಗ ಉದ್ಯೋಗವನ್ನು ಕೈಬಿಟ್ಟಿದ್ದಾರೆ. ಇವರ ಮನೆ ದೇವರು ಕಾಶಿಯ ಕಾಳಭೈರವನಾಗಿದ್ದು, ಮಂಗಳೂರಿನ ಕದರಿ ಮಠಕ್ಕೆ ನಡೆದುಕೊಳ್ಳುತ್ತಾರೆ. ವಿವಾಹ ಹಾಗೂ ಇತರ ಸಮಾರಂಭಗಳಲ್ಲಿ ಬ್ರಾಹ್ಮಣರನ್ನು ಕರೆಸುವುದಿಲ್ಲ. ಇವರಲ್ಲಿ ಗೋತ್ರವಾಗಲೀ, ಕುಲವಾಗಲೀ ಇಲ್ಲವೆನ್ನುತ್ತಾರೆ. ಸತ್ತಾಗ, ಹುಟ್ಟಿದಾಗ ಮೈಲಿಗೆಯನ್ನು ಆಚರಿಸುತ್ತಾರೆ, ಸತ್ತವರನ್ನು ಹೂಳುತ್ತಾರೆ. ಇವರು ಮಾಂಸಾಹಾರಿಗಳು, ಹಿಂದೆ ಇವರಿಗೆ ಕೊತ್ವಾಲರೆಂಬ ಜಾತಿಯ ಮುಖ್ಯಸ್ಥರಿದ್ದರು. ಈಗ ಜಾತಿಯ ಮುಖ್ಯಸ್ಥರಿಲ್ಲ. ಈಗ ಇವರ ಮುಖ್ಯ ಉದ್ಯೋಗ ವ್ಯವಸಾಯ. ಕೆಲವು ಜೋಗಿಗಳಿಗೆ ಜಿಲ್ಲೆಯಲ್ಲಿ ಜಮ್ಮಾ ಭೂಮಿಯಿದೆ. ಎರಡನೇ ಹಿಂದುಳಿದ ಆಯೋಗದ ವರದಿಯ ಪ್ರಕಾರ ಜಿಲ್ಲೆಯಲ್ಲಿ 1984ರಲ್ಲಿ 125 ಜನ ಜೋಗಿಗಳಿದ್ದರೆಂದು ಅಂದಾಜು ಮಾಡಲಾಗಿದೆ.

ಜೈನರು : ಜೈನಧರ್ಮವನ್ನು ನೋಡಿ.

**ದರ್ಜಿಗಳು**

ದರ್ಜಿ ಎಂಬ ಪದವು ಹೊಲಿಗೆ ಉದ್ಯೋಗವನ್ನು ಮಾಡು ವವರನ್ನು ಸೂಚಿಸುತ್ತದೆ. ಈ ಗುಂಪಿನಲ್ಲಿ ಭಾವಸಾರ ಕ್ಷತ್ರಿಯರು, ಶಿಂಪಿಗಳು, ರಂಗಾರೇ, ಚಿಪ್ಪಿಗ, ನಾಮದೇವ ಶಿಂಪಿ ಮೊದಲಾದ ಜಾತಿಗಳೆಲ್ಲವೂ ಸೇರಿವೆ. ಕೊಡಗು ಜಿಲ್ಲೆ ಯಲ್ಲಿ 1984ರಲ್ಲಿ 279 ಜನರು ಈ ಜಾತಿಗಳಿಗೆ ಸೇರಿದ್ದ ರೆಂದು ಅಂದಾಜು ಮಾಡಲಾಗಿದೆ. ಆದರೆ ಇವರ ಸಂಖ್ಯೆ ಇನ್ನೂ ಹೆಚ್ಚಿರಬಹುದೆಂದು ಜಿಲ್ಲೆಯ ಈ ಜಾತಿಯ ಜನರು ಹೇಳುತ್ತಾರೆ. ನಾಮದೇವ ಸಿಂಪಿಗಳು ಮಡಿಕೇರಿ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆಗಳಲ್ಲಿ ಕಂಡು ಬರುತ್ತಾರೆ. ಭಾವಸಾರ ಕ್ಷತ್ರಿಯರು ವೀರರಾಜಪೇಟೆಯಲ್ಲಿ ದ್ದಾರೆ. ಇವರು ಯಜ್ಞೋಪವೀತವನ್ನು ಧರಿಸುತ್ತಾರೆ. ಜಿಲ್ಲೆ ಯಲ್ಲಿ ಬಹುತೇಕ ಮಂದಿ ಹೊಲಿಗೆ ಉದ್ಯೋಗ ಮಾಡು ತ್ತಾರೆ. ಸ್ವಲ್ಪ ಜನ ಸಂತೇ ವ್ಯಾಪಾರಿಗಳು. ಕೊಡ್ಲಿಪೇಟೆಯಲ್ಲಿ ಒಂದು ಪಾಂಡುರಂಗ ದೇವಾಲಯವನ್ನು ಕಟ್ಟಿದ್ದಾರೆ. ಇವ ರಲ್ಲಿ ರಂಗಾರೇ, ಮೊದಲಾದವರು ನೂಲಿಗೆ ಬಣ್ಣ ಹಾಕುವ ವರು. ಭಾವಸಾರ ಕ್ಷತ್ರಿಯ, ನಾಮದೇವ ಶಿಂಪಿಗಳು ಮನೆ ಯಲ್ಲಿ ಮರಾಠಿ ಮಾತನಾಡುತ್ತಾರೆ. ಇವರು ವಿಠೋಬ, ಜ್ಯೋತೀಬಾ, ಖಂಡೋಬಾ, ಅಂಬಾಭವಾನಿ, ಯೆಲ್ಲಮ್ಮ ಮೊದಲಾದ ದೇವದೇವತೆಗಳನ್ನು ಪೂಜಿಸುತ್ತಾರೆ. ಇವರಲ್ಲಿ ಕೋಳೇಕರ, ಕೊರಡೆ, ಜತ್ನ, ಶೇರ್‌ಕರ್, ಮೊದಲಾದ ಗೋತ್ರಗಳಿವೆ. ಇವರ ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣರು ನಡೆಸಿಕೊಡುತ್ತಾರೆ. ಮದುವೆ, ಗೃಹಪ್ರವೇಶ ಮೊದಲಾದ ಸಂದರ್ಭಗಳಲ್ಲಿ ಭವಾನಿಗೆ ಗೋಂದಲ ಪೂಜೆಯನ್ನು ಹಾಕಿಸುತ್ತಾರೆ. ಆದರೆ ಕೊಡಗು ಜಿಲ್ಲೆಯಲ್ಲಿ ಗೋಂದಲ ಪೂಜೆ ರೂಢಿಯಲ್ಲಿಲ್ಲ. ವೈದಿಕ ಆಚರಣೆಗಳನ್ನು ಅನುಸರಿಸು ತ್ತಾರೆ. ಪಂಢರಪುರಕ್ಕೆ ಆಷಾಢ ಮಾಸದಲ್ಲಿ ಯಾತ್ರೆ ಹೋಗುತ್ತಾರೆ. ಇವರು ಸತ್ತವರನ್ನು ಸುಡುತ್ತಾರೆ. ಮಾಂಸಾಹಾರವನ್ನು ಸೇವಿಸುತ್ತಾರೆ. ದರ್ಜಿ ಕೆಲಸ ಮಾಡುವ ಇತರ ಜಾತಿಗಳಿಗೆ, ಧರ್ಮಗಳಿಗೆ ಸೇರಿದವರು ಈ ಜಾತಿಯಲ್ಲಿ ಬರುವುದಿಲ್ಲ. ಇತ್ತೀಚೆಗೆ, ನಾಮದೇವ ಸಿಂಪಿ, ಭಾವಸಾರ ಕ್ಷತ್ರಿಯವರಲ್ಲಿ ವಿವಾಹ ಸಂಬಂಧ ಏರ್ಪಡುತ್ತಿದೆ.

**ದೇವಾಂಗ**

ದೇವಾಂಗದವರು ಕೊಡಗಿಗೆ ಹಾಲೇರಿ ಅರಸರ ಕಾಲದಲ್ಲಿ ಬಂದವರು. ಇವರ ಮುಖ್ಯ ಉದ್ಯೋಗ ಬಟ್ಟೆ ನೇಯು ವುದು. ಇವರು ಹೆಚ್ಚಾಗಿ ಮೈಸೂರು ಜಿಲ್ಲೆಗೆ ಹೊಂದಿ ಕೊಂಡಿರುವ ಸೋಮವಾರಪೇಟೆ ತಾಲೂಕಿನಲ್ಲಿದ್ದಾರೆ. ಮಡಿಕೇರಿ, ಕೊಡ್ಲಿಪೇಟೆ, ಶನಿವಾರಸಂತೆ, ಶಿರಂಗಾಲ, ಗೋಪಾಲಪುರ, ಕುಶಾಲನಗರ, ತೊರೆನೂರು, ಹುದಿಕೇರಿ ಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಭಾಷೆಯ ಆಧಾರದ ಮೇಲೆ ದೇವಾಂಗದವರು ಕನ್ನಡದೇವಾಂಗ, ತೆಲುಗುದೇವಾಂಗ ಎಂದು ಎರಡು ಗುಂಪುಗಳಾಗಿದ್ದಾರೆ. ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯಂತೆ 1984ರಲ್ಲಿ 3,071 ಜನ ದೇವಾಂಗದವರಿದ್ದರೆಂದು ತಿಳಿದುಬರುತ್ತದೆ. ಕನ್ನಡ ದೇವಾಂಗದವರಲ್ಲಿ ಹದಿನೆಂಟು ಮನೆಯವರು ಮತ್ತು ಸಿರ್ಕ ದವರು ಎಂಬ ಎರಡು ಒಳಗುಂಪುಗಳಿವೆ. ಅಲ್ಲದೆ ಅಂಬಲೆ, ಆರಿವಿನ, ಬಣ್ಣ, ಬಳೆ, ಬೆಳ್ಳಿ, ಮಂದೆ, ಮಚ್ಚೆ ಮೊದಲಾದ ಕುಲಗಳಿವೆ. ತೆಲುಗು ಮಾತನಾಡುವವರಲ್ಲಿ ಬಂಡಿ, ಬಂತ, ಒಂಟೆ, ಉದ್ದೂ, ಗೋದುನ ಮೊದಲಾದ ಕುಲಗಳಿವೆ. ದೇವಾಂಗದವರು ಜನಿವಾರವನ್ನು ಹಾಕಿಕೊಳ್ಳುತ್ತಾರೆ. ರಾಮ ಲಿಂಗ, ಚೌಡೇಶ್ವರಿ (ವೀರರಾಜಪೇಟೆಯಲ್ಲಿ ಒಂದು ದೇವಾಲಯ ಇದೆ) ಮತ್ತು ಬನಶಂಕರಿ ಇವು ದೇವಾಂಗದವರ ಮನೆದೇವರು ದೇವತೆಗಳು. ಜಾತಿಯ ಒಳಜಗಳಗಳನ್ನು ಪರಿಹರಿಸಿಕೊಳ್ಳಲು ಕಟ್ಟೇಮನೆಗಳಿವೆ. ಕೊಡಗು ಜಿಲ್ಲೆಯಲ್ಲಿರುವ ದೇವಾಂಗ ದವರೆಲ್ಲಾ ಕನ್ನಡ ದೇವಾಂಗದವರು. ಇವರಲ್ಲಿ 108 ಗೋತ್ರಗಳಿವೆಯೆಂದು ಹೇಳುತ್ತಾರೆ. ಶಿರಂಗಾಲದಲ್ಲಿರುವವರು ಹೆಚ್ಚಾಗಿ ನೇಯ್ಗೆ ಕೆಲಸ ಮಾಡುತ್ತಾರೆ. ತೊರೆನೂರಿನವರ ಉದ್ಯೋಗ ವ್ಯವಸಾಯ. ಕುಶಾಲನಗರದವರು ಹೆಚ್ಚಾಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತಾರೆ. ಕೊಡ್ಲಿಪೇಟೆ, ಗೋಪಾಲ ಪುರದ ಕಡೆಗಳಲ್ಲಿ ಕೃಷಿ ಮತ್ತು ತೋಟದ ಕೂಲಿ ಕೆಲಸ ಮಾಡುತ್ತಾರೆ. ದೇವಾಂಗದವರು ಸತ್ತವರನ್ನು ಹೂಳುತ್ತಾರೆ.

**ನಾಯಿಂದ**

ಕೊಡಗು ಜಿಲ್ಲೆಯಲ್ಲಿ ನಾಯಿಂದ ಜಾತಿಗೆ ಸೇರಿದವರ ಸಂಖ್ಯೆ 1972 ರಲ್ಲಿ 1,757 ಇತ್ತೆಂದು ಮೊದಲನೇ ಹಿಂದುಳಿದ ಆಯೋಗದ ಸರ್ವೇಕ್ಷಣದಿಂದ ತಿಳಿದು ಬಂದಿದೆ. ಎರಡನೇ ಆಯೋಗದ ಪ್ರಕಾರ ಜಿಲ್ಲೆಯಲ್ಲಿ 1,995 ಜನರಿದ್ದರೆಂದು ಅಂದಾಜು ಮಾಡಲಾಗಿದೆ. ಸಾಮಾನ್ಯವಾಗಿ ಇವರನ್ನು ಜಿಲ್ಲೆಯಲ್ಲಿ ಹಜಾಮರೆಂದು ಕರೆಯುತ್ತಾರೆ. ಕೊಡಗಿನಲ್ಲಿ ಕೊಡವ ಮಾತನಾಡುವವರ ಜೊತೆಗೆ ತೆಲುಗು ಮತ್ತು ಕನ್ನಡ ಮಾತನಾಡುವವರೂ ಇದ್ದಾರೆ. ಜಿಲ್ಲೆಯಲ್ಲಿ ಕೊಡವ ಮಾತನಾಡುವವರು ಕೈಕೇರಿ, ಈಚೂರು, ಬೇಗೂರು, ಬಿ- ಶೆಟ್ಟಿಗೇರಿ, ನಡಕೇರಿ, ಮೈತಾಡಿ, ಗೋಣಿಕೊಪ್ಪಲು, ಇತ್ಯಾದಿ ಕಡೆಗಳಲ್ಲಿ ಕಂಡುಬರುತ್ತಾರೆ. ಇತ್ತೀಚೆಗೆ ತುಳು, ಮಲೆಯಾಳಿ ಮತ್ತು ತಮಿಳು ಮಾತನಾಡುವವರೂ ವಲಸೆ

ಬಂದು ಅಂಗಡಿಯಿಟ್ಟಿದ್ದಾರೆ. ಇವರ ಮುಖ್ಯ ಉದ್ಯೋಗ ಕ್ಷೌರ ಮಾಡುವುದು. ಜಮೀನಿದ್ದವರು ಕೃಷಿ ಮಾಡುತ್ತಾರೆ. ಕನ್ನಡ ಮಾತನಾಡುವ ಕ್ಷೌರಿಕರು ದೇವಸ್ಥಾನಗಳಲ್ಲಿ ವಾದ್ಯಗಳನ್ನೂ ಬಾರಿಸುತ್ತಾರೆ. ಕೊಡವ ಮಾತನಾಡುವವರಿಗೆ ಜಮ್ಮ ಭೂಮಿಯಿದೆ. ಕೊಡವರಲ್ಲಿದ್ದಂತೆ ಕೊಡವ ಭಾಷೆ ಮಾತನಾಡುವ ಹಜಾಮರಲ್ಲಿ ಮನೆತನಗಳಿವೆ. ಸುಮಾರು ಏಳು ಮನೆತನಗಳಿರಬಹುದು. ಇವರ ಸೇವೆಗೆ ಗ್ರಾಮಗಳಲ್ಲಿ ಹಣವನ್ನು ಕೊಡುವುದಕ್ಕೆ ಬದಲಾಗಿ ವರ್ಷಕ್ಕೊಮ್ಮೆ ಧಾನ್ಯದ ರೂಪದಲ್ಲಿ ಕೂಲಿಯನ್ನು ಕೊಡುವುದು ವಾಡಿಕೆಯಿದೆ. ಇದನ್ನು ಆಡಿಕೆ ಎಂದು ಕರೆಯುತ್ತಾರೆ. ಮೊದಲಿಗೆ ನಾಲ್ಕು ಹೊರೆ ಬತ್ತ ಕೊಟ್ಟು ಹಬ್ಬಹರಿದಿನಗಳಲ್ಲಿ ಅಕ್ಕಿ ಕೊಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ 25 ಕೆ.ಜಿ. ಬತ್ತ ಕೊಡುತ್ತಾರೆ. ಇವರ ಮನೆ ದೇವರುಗಳು ಕಾವೇರಿ ಮಾತೆ ಹಾಗೂ ವೆಂಕಟರಮಣ. ಕೊಡವರಂತೆ ಗುರುಕಾರಣರನ್ನು ಪೂಜಿಸುತ್ತಾರೆ. ಇವರಲ್ಲಿ ಐನ್ ಮನೆಗಳೂ, ಕೈಮಡಗಳೂ ಇವೆ. ಕೊಡವ ಹಜಾಮರಲ್ಲಿ ಮೂರು ಐನ್ ಮನೆಗಳಿವೆ. ವಿವಾಹ, ವೇಷ, ಭೂಷಣ, ಊಟ, ರೂಢಿ ಮೊದಲಾದವುಗಳಲ್ಲಿ ಕೊಡವರ ಸಂಪ್ರದಾಯಗಳನ್ನೇ ಇವರು ಅನುಸರಿಸುತ್ತಾರೆ. ಕೋಲಕಟ್ಟುವುದೂ, ಗುರುಕಾರಣರ ಪೂಜೆ, ಶ್ರಾದ್ಧ, ಪಿಂಡ ಪ್ರಧಾನ ಮೊದಲಾದ ಸಂಪ್ರದಾಯಗಳಲ್ಲಿ ಕೊಡವರನ್ನೇ ಅನುಸರಿಸುತ್ತಾರೆ. ಕೊಡವರ ಮನೆಗಳಲ್ಲಿ ವಿವಾಹ, ಶವ ಸಂಸ್ಕಾರಗಳಲ್ಲಿ ನಾಯಿಂದನ ಪಾತ್ರ ಮುಖ್ಯವಾದುದು. ಕೊಡಗಿನಲ್ಲಿ 1986ಕ್ಕೆ ಮೊದಲು ಕೈಕೇರಿ ಹಜಾಮರ ಸಂಘ ಅಸ್ತಿತ್ವದಲ್ಲಿತ್ತು. ಈಗ ಅದು ಕರ್ನಾಟಕ ಸವಿತಾ ಸಮಾಜಕ್ಕೆ ವಿಲೀನವಾಗಿದೆ. ಜಿಲ್ಲೆಗೆ ಹೊರಗಿನಿಂದ ಬಂದವರು ಸಾಮಾನ್ಯವಾಗಿ ಅವರ ಮೂಲ ಸ್ಥಳಗಳ ಸಂಪ್ರದಾಯಗಳನ್ನೇ ಅನುಸರಿಸುತ್ತಾರೆ. ಇತ್ತೀಚಿಗೆ ಈ ವೃತ್ತಿಯ ಬೇರೆ ಬೇರೆ ವರ್ಗದ ಜನ ತಮ್ಮ ತಮ್ಮಲ್ಲೇ ಬೆರೆಯತೊಡಗಿದ್ದಾರೆ.

### ನೇಯ್ಗೆಯವರು

ನೇಕಾರರನ್ನು ನೇಯ್ಗೆಯವರೆಂದೂ, ಸಾಲೆಗಳೆಂದೂ ಕರೆಯುತ್ತಾರೆ. ಇವರಲ್ಲಿ ಪದ್ಮಸಾಲಿ, ಸ್ವಕುಲಸಾಲಿ, ಪಟ್ಟುಸಾಲಿ ಕುರುಹಿನಶೆಟ್ಟಿ ಅಥವಾ ಬಿಳಿಮಗ್ಗ ಮೊದಲಾದ ಜಾತಿಗಳಿವೆ. ಇವರೆಲ್ಲರ ಮುಖ್ಯ ಉದ್ಯೋಗ ಬಟ್ಟೆ ನೇಯುವುದು. ಪದ್ಮಸಾಲಿಗಳು ತೆಲುಗು ಮಾತನಾಡುತ್ತಾರೆ. ಸ್ವಕುಲಸಾಲಿಗಳು ಮರಾಠಿಯನ್ನೂ ಪಟ್ಟುಸಾಲಿಗಳು ಕನ್ನಡವನ್ನೂ ಮಾತನಾಡುತ್ತಾರೆ. ಭಾವನಾ ಋಷಿಯು ಈ ಜಾತಿಗಳ ಮೂಲಪುರುಷನೆಂದು ಹೇಳುತ್ತಾರೆ. ಇವರಲ್ಲಿ ಅನೇಕ ಕುಲಗಳಿವೆ. ಧಾರ್ಮಿಕ ಕಾರ್ಯಗಳನ್ನು ಬ್ರಾಹ್ಮಣರು ನಡೆಸಿಕೊಡುತ್ತಾರೆ. ಕುರುಹಿನ ಶೆಟ್ಟಿ ಅಥವಾ ಬಿಳಿ ಮಗ್ಗದವರು ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ಹೆಚ್ಚಾಗಿ, ಮಡಿಕೇರಿ ತಾಲೂಕಿನಲ್ಲಿ ತಕ್ಕಮಟ್ಟಿಗೆ ಕಂಡುಬರುತ್ತಾರೆ. ವೀರರಾಜಪೇಟೆಯಲ್ಲಿ ಕೆಲವರಿದ್ದಾರೆ. ಹಿಂದೆ ಇವರು ಬಿಳಿಬಟ್ಟೆಯನ್ನು ನೇಯುತ್ತಿದುದರಿಂದ ಬಿಳಿ ಮಗ್ಗದವರೆಂದು ಹೆಸರು ಬಂದಿದೆಯೆಂದು ಒಂದು ಅಭಿಪ್ರಾಯವಿದೆ. ಇವರು ವೀರಶೈವ ಸಂಪ್ರದಾಯಗಳನ್ನು ಅನುಸರಿಸುವರಿದ್ದು ಅರವತ್ತು ಗೋತ್ರಗಳನ್ನು ಎರಡು ಸಮುಗುಂಪುಗಳನ್ನಾಗಿ ಮಾಡಿ ಶಿವ, ಪಾರ್ವತಿ ಎಂದು ಕರೆಯುತ್ತಾರೆ. ಧಾರ್ಮಿಕ ಕಾರ್ಯಗಳಿಗೆ ಜಂಗಮರನ್ನು ಕರೆಯುತ್ತಾರೆ. ಸತ್ತವರನ್ನು ಹೂಳುತ್ತಾರೆ. ಇವರಲ್ಲಿ ಹಲವರು ಕಾಫಿ, ಏಲಕ್ಕಿ, ಮೊದಲಾದ ತೋಟಗಳ ಒಡೆಯರಾಗಿದ್ದಾರೆ. ಕೆಲವರು ವ್ಯಾಪಾರ ಮಾಡುತ್ತಾರೆ. ಜಿಲ್ಲೆಯಲ್ಲಿ ನೇಯ್ಗೆಯವರ ಸಂಖ್ಯೆ 1984ರ ಎರಡನೇಯ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ **4,564** ಎಂದು ಅಂದಾಜು ಮಾಡಲಾಗಿದೆ.

**ಹಣಿಕರು :** ಬಣ್ಣರನ್ನು ನೋಡಿ.

### ಪಾಲೆಯರು

ಒಂದು ಅಂದಾಜಿನ ಪ್ರಕಾರ ಜಿಲ್ಲೆಯಲ್ಲಿ ಪಾಲೆಯರು ಹತ್ತು ಸಾವಿರಕ್ಕೂ ಹೆಚ್ಚು ಇದ್ದಾರೆ. ಮಡಿಕೇರಿ ತಾಲೂಕಿನಲ್ಲಿ ಹೆಚ್ಚಾಗಿದ್ದಾರೆ. ಇವರಲ್ಲಿ ಕೆಲವರಿಗೆ ಜಮ್ಮಾ ಭೂಮಿ ಇದೆ. ಕೊಡವರ ತೋಟಗಳಲ್ಲಿ ಕೆಲಸ ಮಾಡುತ್ತಾರೆ. ತುಳು ಪಾಲೆಯರು ತಲೆಯ ಮೇಲೆ ಅಡಿಕೆಪಟ್ಟೆಯ ಟೋಪಿ (ಮುಟ್ಟಾಳೆ) ಹಾಕಿಕೊಳ್ಳುತ್ತಾರೆ. ಇವರಲ್ಲಿ ಮೈಲ, ಕರಿ, ಅರಮನೆ, ಬಾಕುಡ, ಮತ್ತು ಅಜ್ಜಲ ಎಂಬ ಒಳಗುಂಪುಗಳಿವೆ. ಇವರು ವಿವಾಹಗಳಲ್ಲಿ ಚಪ್ಪರ ಹಾಕುವುದಿಲ್ಲ. ವಿವಾಹ ಪದ್ಧತಿ ಕೊಡವರಂತೆಯೇ ಇದೆ. ವಿಧವೆಯರನ್ನು ಸರಳವಿಧಿಯಿಂದ ವಿವಾಹವಾಗುತ್ತಾರೆ. ಇವರು ಕೊಡವ, ಗೌಡ ಮೊದಲಾದ ಜಾತಿಯವರಲ್ಲಿ ಕೋಲ ಕಟ್ಟುತ್ತಾರೆ. ಅಜ್ಜಲ ಪಾಲೆಯರು ಭೂತಗಳ ಕುಣಿತದಲ್ಲಿ ಭಾಗವಹಿಸುತ್ತಾರೆ ಹಾಗೂ ಪೂಜಾರಿಗಳಾಗಿಯೂ ಕಾರ್ಯನಿರ್ವಹಿಸುತ್ತಾರೆ. ಪಾಷಾಣಮೂರ್ತಿಯ ಹಬ್ಬಗಳಲ್ಲಿ ಪಾಲೆಯರು ಕಣಿಯನ್ನು ಅಥವಾ ದಿವ್ಯವಾಣಿಯನ್ನು ಹೇಳುತ್ತಾರೆ. ಮೈಮೇಲೆ ದೇವರು ಬಂದಾಗ, ವಿಶಿಷ್ಟವಾದ ಉಡುಪಿನಿಂದ ರಾತ್ರಿಯೆಲ್ಲಾ ನರ್ತಿಸುತ್ತಾರೆ. ಹಾಗೆ ನರ್ತಿಸುವ ಕಾಲದಲ್ಲಿ ವಿಶೇಷವಾಗಿ ಮದ್ಯಪಾನ ಮಾಡಿರುತ್ತಾರೆ. ಪಾಲೆಯರು

ತುಳು ಭಾಷೆಯನ್ನು ಮಾತನಾಡುತ್ತಾರೆ. ಇವರು ಜಿಲ್ಲೆಗೆ ದಕ್ಷಿಣ ಕನ್ನಡದ ಕಡೆಯಿಂದ ವಲಸೆ ಬಂದವರು.

**ಹೆಗ್ಗಡೆಗಳು**

ಕೊಡಗಿನಲ್ಲಿ ಇವರನ್ನು ಹೆಗ್ಗಡೆಗಳೆಂದೂ ಕರೆಯುತ್ತಾರೆ. ಇವರು ಬಹುಹಿಂದೆ ಮಲಬಾರಿನಿಂದ ವಲಸೆ ಬಂದವರೆಂದು ಪ್ರತೀತಿ. ಇವರ ಮನೆ ಮಾತು ಕೊಡವ ಭಾಷೆ. ಇವರು ಪೊನ್ನಂಪೇಟೆ, ಮತ್ತೂರು, ಕಿರಗೂರು, ಮೈತಾಡಿ (ವೀರರಾಜಪೇಟೆ ತಾಲೂಕು), ಹಾಲ್ಗುಂದ, ಬೆಟ್ಟಗೇರಿ (ಕುಯ್ಯಂಗೇರಿ), ಕಾರುಗುಂದ (ಮಡಿಕೇರಿ ತಾಲೂಕು) ಗಳಲ್ಲಿಯೂ ಕಂಡುಬರುತ್ತಾರೆ. ಒಂದು ಅಂದಾಜಿನ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಹೆಗ್ಗಡೆಗಳ ಸಂಖ್ಯೆ 1990ರಲ್ಲಿ 5,954 ಇತ್ತು. ಇವರ ಮೂಲವೃತ್ತಿ ವ್ಯವಸಾಯ. ಇವರಲ್ಲಿ ಈಗ 64 ಮನೆತನಗಳಿವೆಯೆಂದು ಗುರ್ತಿಸುತ್ತಾರೆ. ಇವರ ಆಚಾರ, ವಿಚಾರ ಸಾಮಾಜಿಕ ಸಂಪ್ರದಾಯಗಳೆಲ್ಲವೂ ಕೊಡವರ ಆಚಾರ, ವಿಚಾರ ಸಂಪ್ರದಾಯಗಳಂತೆಯೇ ಇವೆ. ಆದರೆ ಕೊಡವರಿಗೂ ಹೆಗ್ಗಡೆಗಳಿಗೂ ವಿವಾಹ ಸಂಬಂಧವೇರ್ಪಡುವುದಿಲ್ಲ. ಕೊಡವರು ಹೆಗ್ಗಡೆಗಳನ್ನು ತಮಗಿಂತ ಕೆಳಅಂತಸ್ತಿನವರಂತೆ ಕಾಣುತ್ತಾರೆ. ಇವರ ಮನೆದೇವರಲ್ಲಿ ಭಗವತಿ, ವಿಷ್ಣುಮೂರ್ತಿ ಸೇರಿವೆ. ಇವರು ಮದುವೆಗೆ ಮುಂಚೆ ಹೆಣ್ಣು ಮಕ್ಕಳನ್ನು ಅಮ್ಮ ಎಂದು ಕರೆಯುತ್ತಾರೆ. ಮದುವೆಯಾದ ನಂತರ ಮಾವನ ಮನೆಯಲ್ಲಿ ಅವ್ವ ಎಂದು ಹೆಸರಿನ ಮುಂದೆ ಸೇರಿಸುತ್ತಾರೆ. ಇವರಲ್ಲಿ ಕೆಲವರು ಸಣ್ಣ ಹಿಡುವಳಿದಾರರಿದ್ದಾರೆ. ಹಿಂದೆ ಹೆಗ್ಗಡೆಗಳು ತಮ್ಮ ಹೆಸರಿನ ಮುಂದೆ 'ಡೆ' ಸೇರಿಸುತ್ತಿದ್ದರು. ಈಗ ಅದು ತಪ್ಪಿಹೋಗಿದೆ. ಹೆಗ್ಗಡೆಗಳಲ್ಲಿ ಕಂಡುಬರುವ ಮನೆತನದ ಹೆಸರುಗಳು ಕೊಡವರಲ್ಲಿಲ್ಲ. ಬಹುತೇಕ ಮನೆತನಗಳು'ರ'ದಿಂದ ಕೊನೆಗೊಳ್ಳುತ್ತವೆ. ಇವರಿಗೆ ಜಮ್ಮಾ ಭೂಮಿ ಇದೆ.

**ಬಣಜಿಗರು**

ಬಣಜಿಗರನ್ನು ಬಲಿಜ ಎಂದೂ ಕರೆಯುತ್ತಾರೆ. ಇವರ ಸಾಂಪ್ರದಾಯಿಕ ಕಸುಬು ಮಂಗಳದ್ರವ್ಯ, ಬಳೆ ಮೊದಲಾದವುಗಳ ವ್ಯಾಪಾರ. ಈಗ ಅನೇಕ ಮಂದಿ ಬೇರೆ ಬೇರೆ ಉದ್ಯೋಗಗಳನ್ನು ಮಾಡುತ್ತಾರೆ. ಕೊಡಗು ಜಿಲ್ಲೆಯಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ 1984 ರಲ್ಲಿ 2,809 ಮಂದಿ ಈ ಜಾತಿಗೆ ಸೇರಿದವರಿದ್ದಾರೆಂದು ಅಭಿಪ್ರಾಯಪಡಲಾಗಿದೆ. ಇವರಲ್ಲಿ ಕನ್ನಡ ಮಾತನಾಡುವವರೂ ತೆಲುಗು ಮಾತನಾಡುವವರೂ ಇದ್ದಾರೆ. ಎಲೆ ಬಣಜಿಗ, ದಾಸ ಬಣಜಿಗ, ಸೆಟ್ಟಿ ಬಣಜಿಗ, ದುಡಿ ಬಣಜಿಗ, ಪುನವಲು ಬಣಜಿಗ, ಗಂದೂಡಿ ಬಣಜಿಗ, ನಾಯ್ಡುಗಳು, ಬಳೆ ಬಣಜಿಗ ಮೊದಲಾದ ಒಳಗುಂಪುಗಳಿವೆ. ಎಲೆ ಬಣಜಿಗರು ವೀಳ್ಯದೆಲೆ ವ್ಯವಸಾಯ, ವ್ಯಾಪಾರವನ್ನು ಮಾಡುತ್ತಾರೆ. ಬಳೆ ಬಣಜಿಗರು ಬಳೆ ವ್ಯಾಪಾರ ಮಾಡುತ್ತಾರೆ. ಬಳೆ ಬಣಜಿಗರನ್ನು ತೆಲುಗು ಬಣಜಿಗರೆಂದೂ ಕೆಲವು ಕಡೆ ಕರೆಯುತ್ತಾರೆ. ಸಾದು ಬಣಜಿಗರು ಹಿಂದೆ ಜೈನರಾಗಿದ್ದರೆಂದೂ ಹೊಯ್ಸಳ ಬಿಟ್ಟಿದೇವನ ಕಾಲದಲ್ಲಿ ವೈಷ್ಣವರಾದರೆಂದೂ ಹೇಳುತ್ತಾರೆ. ಇವರನ್ನು ಜೈನ ಕ್ಷತ್ರಿಯ ರಾಮಾನುಜದಾಸ ವಣಿಯರೆಂದು ಕರೆಯುತ್ತಾರೆ. ಬಣಜಿಗರಲ್ಲಿ ಅನೇಕ ಕುಲಗಳೂ ಗೊತ್ರಗಳೂ ಇವೆ. ಇವರಲ್ಲಿ ದಾಸ ಬಣಜಿಗರಂತೆ ಕೆಲವರು ಸತ್ತವರನ್ನು ಸುಡುತ್ತಾರೆ. ಆದರೆ ಬಹುತೇಕ ಮಂದಿ ಹೂಳುತ್ತಾರೆ. ವೈಷ್ಣವ ದೇವರುಗಳನ್ನು ಪೂಜಿಸುತ್ತಾರೆ. ವೀರರಾಜಪೇಟೆಯಲ್ಲಿರುವವರು ತಾವು ಸಾದುಶೆಟ್ಟರೆಂದು ಹೇಳಿಕೊಳ್ಳುತ್ತಾರೆ. ಕಿರಾಣಿ, ವೀಳ್ಯದೆಲೆ ಮೊದಲಾದವುಗಳ ವ್ಯಾಪಾರ ಮಾಡುತ್ತಾರೆ. ಮಾರಮ್ಮ, ಅಂಗಾಳ ಪರಮೇಶ್ವರಿ, ವೆಂಕಟರಮಣ ಮೊದಲಾದ ದೇವರುಗಳನ್ನು ಪೂಜಿಸುತ್ತಾರೆ. ಇವರಲ್ಲಿ ಮದ್ಯ, ಗುರವೆ ಮೊದಲಾದ 24 ಗೋತ್ರಗಳಿವೆ. ಮನೆಮಾತು ತಮಿಳು ಮಿಶ್ರಿತ ತೆಲುಗು. ದೊಡ್ಡ ವೀರರಾಜನ ಕಾಲದಲ್ಲಿ ಕೊಯಮತ್ತೂರಿನ ಕಡೆಯಿಂದ ಬಂದು ವೀರರಾಜಪೇಟೆ, ಚನ್ನಯ್ಯನ ಕೋಟೆಗಳಲ್ಲಿ ಇವರ ಪೂರ್ವಜರು ನೆಲೆಸಿದರೆಂದು ಹೇಳುತ್ತಾರೆ. ಲಗ್ನಪತ್ರಿಕೆಗಳಲ್ಲಿ 'ತೆಲುಗು 24 ದೇಸಾಯಿಗಳ ಚೆಟ್ಟಿಯಾರ ಮನೆಯರು' ಎಂದು ಬರೆಯುತ್ತಾರೆ.

**ಬೆಟ್ಟಕುರುಬರು**

ಬೆಟ್ಟ ಕುರುಬರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಕಂಡುಬರುತ್ತಾರೆ. ಆದರೆ ವೀರರಾಜಪೇಟೆ ತಾಲೂಕಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪೊನ್ನಂಪೇಟೆ, ಶ್ರೀಮಂಗಲ ನಾಡುಗಳಲ್ಲಿರುವವರು ಹೆಚ್ಚು ಬದಲಾವಣೆಗೊಳಗಾಗದೆ ಇನ್ನೂ ಮೂಲ ಸ್ವರೂಪದಲ್ಲಿದ್ದಾರೆ. ಕುರು ಎಂದರೆ ಬೆಟ್ಟ ಎಂಬ ಅರ್ಥದಿಂದ ಬೆಟ್ಟ ಕುರುಬ ಪದ ಬಂದಿರಬೇಕೆಂದು ಲೂಯಿಸ್‌ರವರು ಅಭಿಪ್ರಾಯ ಪಟ್ಟಿದ್ದಾರೆ. ಇವರನ್ನು ಬೆಟ್ಟ ಕುರುಬ, ಬೆಟ್ಟು ಕುರುಬ, ಬೆಟ್ಟಿ ಕುರುಬ, ಬೊಟ್ಲು ಕುರುಬ, ಬೊಟ್ಟ ಕುರುಬ, ಬೆತ್ತ ಕುರುಬ, ಬೊಟ್ಲಾಡಿ, ಕಾಟೂಳಿ, ಕಾಟ್‌ಕುರುಬ, ಕಾಡುಕುರುಬ, ಮುಳ್ಳು ಕುರುಬ, ಮುಳ ಕುರುಬ, ಪುಂಡೆ ಕುರುಬ ಎಂದೆಲ್ಲಾ ಕರೆಯುತ್ತಾರೆ. ಬೆತ್ತ, ವಾಟೆ, ಬಿದಿರನ್ನು ಹೆಣಿಕೆಗೆ ಸಿದ್ಧಪಡಿಸುವುದಕ್ಕೆ ಕೊಡವ ಭಾಷೆಯಲ್ಲಿ ಬೊಟ್ಲ ಇಡುವೋ ಎನ್ನುವರು. ಇದನ್ನೇ

ಮುಖ್ಯ ಕಸುಬನ್ನು ಮಾಡಿಕೊಂಡವರು ಬೆಟ್ಟ ಕುರುಬರು. ಇವರು ಹೆಚ್ಚು ಜಿದ್ದುಗಾರರು. ಇವರು ಮಾಟ ಮಂತ್ರ ಮಾಡುತ್ತಿದ್ದರೆಂದು ಹೇಳುತ್ತಾರೆ. ಹಿಂದೆ ಬಡಗರು ಬೆಟ್ಟ ಕುರುಬರನ್ನು ಕಾಡಿನಲ್ಲಿ ಒಂಟಿಯಾಗಿ ಭೇಟಿಯಾಗಲು ಹೆದರುತ್ತಿದ್ದರಂತೆ. ಕೇರಳ ತಮಿಳುನಾಡುಗಳಲ್ಲಿ ಕಂಡು ಬರುವ ಉರಲಿ ಕುರುಮನ್ ಮತ್ತು ಉರುಳಿ ಕುರುಂಬನ್‌ಗಳೂ ಬೆಟ್ಟ ಕುರುಬರೂ ಒಂದೇ ಎಂದು ಹೇಳುತ್ತಾರೆ. ಜೇನು ಕುರುಬರಂತೆ ಇವರೂ ಕೂಡ ಕೊಂಗ, ಚೋಳ ಮತ್ತು ಚಾಳುಕ್ಯ ರಾಜರುಗಳಿಂದ ಕಾಡಿಗೆ ಅಟ್ಟಲ್ಪಟ್ಟ ಪಲ್ಲವರ ಮೂಲದವರೆಂದು ಹೇಳುತ್ತಾರೆ. ಇವರು ಆಕಾರದಲ್ಲಿ ಗಿಡ್ಡ. ಕಪ್ಪು ಮೈಬಣ್ಣ, ಉದ್ದವಾದ ತಲೆ, ಉಬ್ಬಿದ ಕೆನ್ನೆಯ ಮೂಳೆಗಳು, ಚಪ್ಪಟೆಯಾದ ಮೂಗು ಕಂಡುಬರುತ್ತವೆ. ಇವರು ವಾಸ ಮಾಡುವ ಸ್ಥಳಗಳನ್ನು ಹಾಡಿಗಳೆಂದು ಕರೆಯುತ್ತಾರೆ. ಹಾಡಿಯ ಮಧ್ಯದಲ್ಲಿ ಚಾವಡಿಯಿರುತ್ತದೆ. ಇದನ್ನು ಅಂಬಾಲ ಎಂದು ಕರೆಯುತ್ತಾರೆ. ಇದು ಬೆಟ್ಟ ಕುರುಬರ ಪವಿತ್ರ ಸ್ಥಳ. ಅಂಬಾಲದ ಮಧ್ಯದಲ್ಲಿ ಬೆಂಕಿ ಯಾವಾಗಲೂ ಉರಿಯುತ್ತಿರುತ್ತದೆ. ಸುತ್ತಲೂ ಸಿಗಿದು ಹೆಣೆದ ಬೊಂಬುಗಳಿಗೆ ಕಲಸಿದ ಮಣ್ಣನ್ನು ಸವರಿ ಮಾಡಿದ ಗೋಡೆಗಳ ಜೋಪಡಿಗಳಿರುತ್ತವೆ. ಜೋಪಡಿಗಳಿಗೆ ಹುಲ್ಲಿನ ಮೇಲ್ಛಾವಣಿಯಿರುತ್ತದೆ. ಹೆಂಗಸರು ಮೈಗೆ ಎದೆಯವರೆಗೆ ಬಣ್ಣದ ಬಟ್ಟೆಯನ್ನು ಕಟ್ಟಿಕೊಳ್ಳುತ್ತಾರೆ. ಮೇಲ್ಭಾಗಕ್ಕೆ ಬಿಳಿ ಬಟ್ಟೆಯನ್ನು ಹೊದ್ದುಕೊಳ್ಳುತ್ತಾರೆ. ಇವರನ್ನು ಈ ಬಟ್ಟೆಯಿಂದಲೇ ಗುರ್ತಿಸಬಹುದು. ಬೆಟ್ಟ ಕುರುಬರಲ್ಲಿ 'ಮೊಂಡಪಡಿ' (ಮೂರು ಗುಡಿಸಲುಗಳು) ಮತ್ತು 'ಏಳಪಡಿ' ಎಂಬ ಎರಡು ಗುಂಪುಗಳಿವೆ. ಇವರು ಬಹು ಚುರುಕಾಗಿ ಓಡಾಡುತ್ತಾರೆ. ಬೇಗ ಆಯಾಸಗೊಳ್ಳುವುದಿಲ್ಲ. ಪ್ರಾಣಿಗಳನ್ನೂ ಅವುಗಳ ಜಾಡುಗಳನ್ನೂ ಸುಲಭವಾಗಿ ಗುರ್ತಿಸಬಲ್ಲರು. ಹಿಂದೆ ಇವರು ಅಲೆಮಾರಿಗಳಾಗಿದ್ದು ಬೇಟೆಯಾಡಿಕೊಂಡು ಜೀವಿಸುತ್ತಿದ್ದರು. ಈಗ ಅಲ್ಲಲ್ಲಿ ಒಂದೆಡೆ ನೆಲೆಸಿ ತೋಟಗಳಲ್ಲಿ, ಅರಣ್ಯ ಇಲಾಖೆಯಲ್ಲಿ ಕಾರ್ಮಿಕರಾಗಿದ್ದಾರೆ. ಹಿಂದೆ ಇವರು ಕಾಡುಗಳಲ್ಲಿ ಕುಮ್ರಿ ವ್ಯವಸಾಯ ಮಾಡುತ್ತಿದ್ದರು. ಬೊಂಬಿನಿಂದ ಬುಟ್ಟಿ, ಕುಕ್ಕೆ ಮೊದಲಾದವುಗಳನ್ನು ಹೆಣೆಯುತ್ತಾರೆ. ಈವರು ಭೂತಾರಾಧಕರು. ಅಜ್ಜ, ಕುಡ ಮತ್ತು ಕುತ್ತನ್ ಎನ್ನುವ ಭೂತಗಳು ಪ್ರಸಿದ್ಧವಾದವುಗಳು. ಇವರಲ್ಲಿ ಕುಲದೇವತಾ ಪದ್ಧತಿ ('ಟೊಟೆಮಿಸಂ') ಉಂಟು. ಮದುವೆಯಾಗದೆ ಸತ್ತವರು ಭೂತಗಳಾಗಿ ತೊಂದರೆ ಕೊಡದಿರಲೆಂದು ಕೆಂಪು ಬಟ್ಟೆಯಲ್ಲಿ ತಿನಸುಗಳನ್ನು ಕೊಡುತ್ತಾರೆ. ಬೆಟ್ಟದ ಚಿಕ್ಕಮ್ಮ, ಭೈರವರನ್ನು ಪೂಜಿಸುತ್ತಾರೆ. ವರ್ಷಕ್ಕೆ ಅಥವಾ ಮೂರು ವರ್ಷಕ್ಕೊಮ್ಮೆ ಕುಟ್ಟದ ಕರಿಂಗಾಳಿಯಮ್ಮನನ್ನು ಪೂಜಿಸುತ್ತಾರೆ. ಪೂಜೆ ಮಾಡಲು ಅವರಲ್ಲೇ ಪೂಜಾರಿಗಳಿದ್ದಾರೆ.

ಹುಡುಗಿಯರು ಮೈನೆರೆದ ನಂತರ ವಿವಾಹ ಮಾಡುತ್ತಾರೆ. ವಿವಾಹದಲ್ಲಿ ಐದು ರೂಪಾಯಿ ತೆರ ಉಂಟು. ಹಾಡಿಯ ಯಜಮಾನನು ವಿವಾಹವನ್ನು ನೆರವೇರಿಸುತ್ತಾನೆ. ತಾಳಿ ಕಟ್ಟುವ ಪದ್ಧತಿಯೂ ರೂಢಿಯಲ್ಲಿದೆ. ಮೈನೆರೆದಾಗ ಹುಡುಗಿಗೆ ಒಂದು ಬೇರೆ ಗುಡಿಸಿಲನ್ನು ಕಟ್ಟಿ, ಅದರಲ್ಲಿಡುತ್ತಾರೆ. ಹಾಗೆಯೇ ಮಗು ಹುಟ್ಟಿದಾಗಲೂ ತಾಯಿಯನ್ನು ಬೇರೆ ಗುಡಿಸಿಲಲ್ಲಿ ಇಡುತ್ತಾರೆ. ವಿವಾಹ ವಿಚ್ಛೇದನ ಸಾಮಾನ್ಯ. ವಿಧವೆಯರೂ, ವಿವಾಹ ವಿಚ್ಛೇದನವಾದವರೂ ಪುನಃ ವಿವಾಹವಾಗಬಹುದು.

ಸತ್ತವರನ್ನು ಹೂಳುತ್ತಾರೆ; ಕೆಲವೊಮ್ಮೆ ಸುಡುವುದೂ ಉಂಟು. ಮೊದಲಿಗೆ ಸತ್ತವನ ಜೊತೆಯಲ್ಲಿ ಅವನು ಉಪಯೋಗಿಸುತ್ತಿದ್ದ ಸಾಮಾನುಗಳನ್ನು ಹೂಳುತ್ತಿದ್ದರು. ಈಗಲೂ ಆ ಪದ್ಧತಿ ಕಂಡು ಬರುತ್ತಿದೆಯಾದರೂ ಕಡಿಮೆಯಾಗುತ್ತಿದೆ. ಒಳ್ಳೆಯವನು ಸತ್ತರೆ ಒಳ್ಳೆಯ ದೇವತೆಗಳಾಗುತ್ತಾರೆಂದೂ ಕೆಟ್ಟವರು ಸತ್ತರೆ ಹಾಗೂ ಮದುವೆಯಾಗದೆ ಸತ್ತರೆ ಕೆಟ್ಟ ದೇವತೆಗಳಾಗುತ್ತಾರೆಂಬ ನಂಬಿಕೆಯಿದೆ. ಇವರು ಕೃಷಿ ಕಾರ್ಮಿಕರು. ಹೆಂಗಸರು ಮನೆಗೆಲಸಗಳನ್ನು ಮಾಡುವುದರ ಜೊತೆಗೆ ಅರಣ್ಯ ಇಲಾಖೆಯಲ್ಲೂ ದುಡಿಯುತ್ತಾರೆ. ಗಂಡಸರು ಹೆಚ್ಚಾಗಿ ಅರಣ್ಯ ಇಲಾಖೆಯಲ್ಲಿ ದಿನಗೂಲಿಗಳಾಗಿದ್ದಾರೆ.

## ಬೆಸ್ತರು

ಬೆಸ್ತರನ್ನು ಗಂಗಾಕುಲದವರೆಂದೂ ಕರೆಯುತ್ತಾರೆ. ಇವರ ಮುಖ್ಯ ಕಸುಬು ಹಿಂದೆ ಮೀನು ಹಿಡಿದು ಮಾರುವುದಾಗಿತ್ತು. ಮೈಸೂರು ಕಡೆ ಇವರನ್ನು ಪರಿವಾರದವರೆಂದೂ, ತಮಿಳುನಾಡಿನಲ್ಲಿ ತೊರೆಯರೆಂದೂ ಕರೆಯುತ್ತಾರೆ. ಜಿಲ್ಲೆಯಲ್ಲಿ ಬೆಸ್ತರ ಸಂಖ್ಯೆ 1984ರಲ್ಲಿ 1,475 ಇದ್ದಿರಬಹುದೆಂದು ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿ ತಿಳಿಸುತ್ತದೆ. ಜಿಲ್ಲೆಯಲ್ಲಿರುವ ಬೆಸ್ತರಲ್ಲಿ ತುಳು ನಾಡಿನಿಂದ ಬಂದ ಮೊಗೇರರೂ ಕೇರಳ, ತಮಿಳುನಾಡಿನಿಂದ ಬಂದ ತೊರೆಯರು, ಮುಕ್ಕವರೂ ಇದ್ದಾರೆ. ಇವರ ಒಳಪಂಗಡವಾದ ಬೋಯಿಗಳನ್ನು ಪಾತೊರೆಯ, ಪಾರತೊರೆಯ, ಅಂದೋಳಿಯ ಎಂದೆಲ್ಲಾ ಕರೆಯುತ್ತಾರೆ. ಇವರು ರಾಜರ ಕಾಲದಲ್ಲಿ ಮೇನೆಗಳನ್ನು ಹೊರುತ್ತಿದ್ದರು. ಮೇನೆ ಹೊರು

ತ್ತಿದ್ದ ಬೋವಿಗಳು ಇಬ್ಬಣವಳವಾಡಿಯಲ್ಲಿ ಮಾತ್ರ ಕಂಡು ಬರುತ್ತಾರೆ. ಈಗ ಬಹುತೇಕ ಮಂದಿ ಕೃಷಿಕರು.

**ಬಂಟರು**

ಬಂಟರು ಕೊಡಗು ಜಿಲ್ಲೆಗೆ ದಕ್ಷಿಣ ಕನ್ನಡ, ಕಾಸರ ಗೋಡು ಕಡೆಗಳಿಂದ ವಲಸೆ ಬಂದವರೆಂದು ಹೇಳುತ್ತಾರೆ. ಹಾಲೇರಿ ರಾಜರ ಕಾಲದಲ್ಲಿ ಬಂಟರನ್ನು ಮಂಜೇಶ್ವರ, ಕುಂಬ್ಳೆ, ಬಂಟವಾಳ, ಪುತ್ತೂರು ಕಡೆಗಳಿಂದ ಕರೆಸಿಕೊಳ್ಳ ಲಾಯಿತು. ಕೊಡಗಿನ ಬಂಟರಲ್ಲಿ ಮಾಸದಿಕ ಬಂಟರು ಮತ್ತು ಪರಿವಾರ ಬಂಟರೆಂದು ಎರಡು ವಿಧ. ಇವರ ಮನೆಮಾತು ತುಳು. ಬಂಟರಲ್ಲಿ ಕೈಧಾರೆ, ಬುದರೇ ಎಂದು ಎರಡು ರೀತಿಯ ವಿವಾಹ ಕ್ರಮಗಳಿವೆ. ಕೈಧಾರೆ ಕ್ರಮದಲ್ಲಿ ಕನ್ಯೆ ಹಾಗೂ ಬ್ರಹ್ಮಚಾರಿಗಳ ವಿವಾಹವನ್ನು ಧಾರೆಯೆರೆದು ಮಾಡುತ್ತಾರೆ. ವಿಧುರ, ವಿಧವೆಯರು ಕೈಗಳನ್ನು ಮಾತ್ರ ಹಿಡಿದು ವಿವಾಹ ವಾಗುವುದಕ್ಕೆ ಬುದರೇ ಕ್ರಮವೆಂದು ಕರೆಯುತ್ತಾರೆ. ಮಾಸ ದಿಕ ಬಂಟರು ಮಾತೃಪ್ರಧಾನ ಕುಟುಂಬದವರು, ಪರಿವಾರ ಬಂಟರು ಪಿತೃಪ್ರಧಾನ ಕುಟುಂಬದವರು. ಜಿಲ್ಲೆಯಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ 1984 ರಲ್ಲಿ4,409 ಜನ ಬಂಟರಿದ್ದರೆಂದು ಅಂದಾಜು ಮಾಡಲಾಗಿದೆ. ಬಂಟರಲ್ಲಿ ಸತ್ತವರನ್ನು ಹೂಳುತ್ತಾರೆ.

**ಬೈರರು**

ಬೈರರನ್ನು ಹನ್ನೆರಡು ಬಣ್ಣದ ಬಲಗೈರಾಣಿ ಕುಲದವರು (ರಾಣಿಯರು) ಎಂದು ಕರೆಯುತ್ತಾರೆಂದು ಹೇಳಿಕೊಳ್ಳುತ್ತಾರೆ. ಸುಮಾರು ಇನ್ನೂರು ವರ್ಷಗಳ ಹಿಂದೆ ದಕ್ಷಿಣ ಕನ್ನಡದ ಕಡೆ ಯಿಂದ ಬಂದವರೆಂದು ಹೇಳುತ್ತಾರೆ. ಈ ಜಿಲ್ಲೆಯಲ್ಲಿ ಇವರ ಮನೆ ಮಾತು ಕನ್ನಡ. ಇವರು ಚಿರಂಗಾಲ, ಚೆಟ್ಟಿಮನೆ ಕಾರುಗುಂದ, ಬೆಟ್ಟಗೇರಿ, ಸಿದ್ದಾಪುರ, ಮೂರ್ನಾಡು, ಮಡಿಕೇರಿ, ಸುಂಟಿಕೊಪ್ಪ, ಭಾಗಮಂಡಲಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರು ಈಗಲೂ ಊಟಕ್ಕೆ ಕುಸುಬಲಕ್ಕಿ ಗಂಜಿಯನ್ನು ತೆಗೆದುಕೊಳ್ಳುತ್ತಾರೆ. ಗುಳಿಗಾ, ಕಲ್ಲುರ್ಟಿ, ಕರಿಚೌಡಿ, ಬೈರೇ ದೇವರುಗಳನ್ನು ಪೂಜಿಸುತ್ತಾರೆ. ಗುರು ಕಾರುಣ ಪೂಜೆಯನ್ನು ಮಾಡುತ್ತಾರೆ. ನವರಾತ್ರಿ, ತುಲಾ ಸಂಕ್ರಮಣ, ಹುತ್ತರಿ ಮೊದಲಾದ ಹಬ್ಬಗಳನ್ನು ಆಚರಿಸು ತ್ತಾರೆ. ಗಂಡಿನ ಕಡೆಯವರು ಹೆಣ್ಣನ್ನು ಅರಸಿ ಹೋಗು ತ್ತಾರೆ. ವಿವಾಹದಲ್ಲಿ 12 ಕಂಬದ ಚಪ್ಪರ ಹಾಕುವ ಪದ್ಧತಿ ಯಿದೆ. ತೆರ ಹದಿನಾಲ್ಕುವರೆ ರೂಪಾಯಿ ಕೊಡುತ್ತಾರೆ. ವಿವಾಹದಲ್ಲಿ ವರನು ವಧುವಿಗೆ ತಾಳಿಕಟ್ಟುತ್ತಾನೆ. ದಂಪತಿ ಮುಹೂರ್ತ ಇವರಲ್ಲಿದೆ. ಹುಡುಗ, ಹುಡುಗಿಯರ ಸೋದರ ಮಾವಂದಿರು ವಿವಾಹವನ್ನು ನಡೆಸಿಕೊಡುತ್ತಾರೆ. ಹಿಂದೆ ವಿವಾಹದಲ್ಲಿ ಮಾಂಸಾಹಾರ ನಿಷಿದ್ಧವಿತ್ತು. ಈಗ ವರ ಮತ್ತು ವಧು ಮಾತ್ರ ವಿವಾಹದ ದಿನ ಮಾಂಸಾಹಾರ ಸ್ವೀಕರಿಸುವು ದಿಲ್ಲ. ಸತ್ತವರನ್ನು ಹಿಂದೆ ಹೂಳುತ್ತಿದ್ದರಂತೆ. ಆದರೆ ಈಗ ಸುಡುತ್ತಾರೆ. ಬೂದಿಯನ್ನು ಗುಂಡಿ ತೋಡಿ ಮುಚ್ಚುತ್ತಾರೆ. ಹದಿನಾರನೇಯ ದಿನ ನೆಂಟರಿಷ್ಟರಿಗೆ ಊಟ ಹಾಕುತ್ತಾರೆ. ಇವರು ವಾಟೆ, ಬಿದಿರಿನಿಂದ ಬುಟ್ಟಿ, ಗೊರಗಳನ್ನು ಮಾಡುತ್ತಾರೆ. ಆದರೆ ಈಗ ಇವರು ಹೆಚ್ಚಾಗಿ ಕೃಷಿ ಕಾರ್ಮಿಕರು.

**ಬಣ್ಣರು/ಫಣಿಕರು**

ಇವರು ಜಿಲ್ಲೆಗೆ ಮಲಬಾರಿನಿಂದ ವಲಸೆ ಬಂದವರು. ಇವರ ಮನೆ ಮಾತು ಮಲೆಯಾಳಿ. ಕೊಡವರ ಮತ್ತು ಇತರರ ಮನೆಗಳಲ್ಲಿ ಕಣಿಯರ ಹೇಳಿಕೆಗೆ ತಕ್ಕಂತೆ ಕಾರುಣ ಹಾಗೂ ಇತರ ಭೂತ, ದೇವತೆಗಳ ಹಬ್ಬ ಜಾತ್ರೆಗಳಲ್ಲಿ ವೇಷ ಹಾಕುವುದು, ಕುಣಿಯುವುದು, ಹಾಗೂ ಮೈಮೇಲೆ ಆವೇಶ ಬಂದಾಗ ಪ್ರಶ್ನೆಗೆ ಉತ್ತರ ಹೇಳುವುದು ಮಾಡುತ್ತಾರೆ. ಆವೇಶದಲ್ಲಿ ಇವರು ಮಲೆಯಾಳಿಯಲ್ಲಿಯೇ ಮಾತನಾಡುತ್ತಾರೆ. ಗ್ರಾಮದೇವತೆಗಳ ಹಬ್ಬಗಳಲ್ಲಿ ಕೋಲ ಕಟ್ಟುವುದೂ ಉಂಟು. ಇಂತಹ ಸಂದರ್ಭಗಳಲ್ಲಿ ಹೆಚ್ಚಾಗಿ ಹೆಂಡ ಕುಡಿಯುತ್ತಾರೆ. ಬಣ್ಣರು ಹೆಚ್ಚಾಗಿ ಡೋಲು ಬಾರಿಸುತ್ತಾರೆ. ಫಣಿಕರು ತೆರೆ ಕಟ್ಟುವುದು (ವೇಷ ಧರಿಸುವುದು) ಮತ್ತು ಬಲಿ ಹೊಡೆಯು ವುದು ಮಾಡುತ್ತಾರೆ.

**ಬ್ರಾಹ್ಮಣರು**

ಕೊಡಗಿಗೆ ಹಾಲೇರಿ ಅರಸರು ಬರುವುದಕ್ಕೆ ಮುಂಚೆ ಮಲಬಾರಿನ ನಂಬೂದರಿ ಬ್ರಾಹ್ಮಣರಿದ್ದಂತೆ ಕಂಡುಬರುತ್ತದೆ. ಹಾಲೇರಿ ರಾಜರ ಕಾಲದಲ್ಲಿ ಅನೇಕ ಬ್ರಾಹ್ಮಣರು ಜಿಲ್ಲೆಗೆ ವಲಸೆ ಬಂದರೆಂದು ಕಂಡು ಬರುತ್ತದೆ. ದಕ್ಷಿಣ ಕನ್ನಡದಿಂದ ಹವ್ಯಕರೂ, ಶಿವಳ್ಳಿ (ತುಳು ಮಾಧ್ವ) ಬ್ರಾಹ್ಮಣರೂ, ಮೈಸೂರು ಹಾಸನ ಮತ್ತು ಶಿವಮೊಗ್ಗ ಕಡೆಗಳಿಂದ ಇತರ ಬ್ರಾಹ್ಮಣರೂ ಜಿಲ್ಲೆಗೆ ವಲಸೆ ಬಂದಿದ್ದಾರೆ. ಬ್ರಾಹ್ಮಣರು ಕ್ರಿಸ್ತಶಕದ ಆರಂಭದ ಕಾಲದಲ್ಲಿಯೇ ವಲಸೆ ಬಂದವರೆಂಬ ನಂಬಿಕೆಯಿದೆಯೆಂದು ಹಿಂದಿನ ಕೊಡಗು ಜಿಲ್ಲಾ ಗ್ಯಾಸೆಟಿಯರ್ ನಲ್ಲಿ ತಿಳಿಸಲಾಗಿದೆ. ಹೀಗೆ ಬಂದ ಬ್ರಾಹ್ಮಣರು ದೇವಸ್ಥಾನ ಗಳಲ್ಲಿ ಅರ್ಚಕರಾಗಿದ್ದರು. ಬ್ರಾಹ್ಮಣರು ತ್ರಿಮತಗಳಿಗೆ ಸೇರಿರುತ್ತಾರೆ. ಸ್ಮಾರ್ತರು ಶ್ರೀ ಶಂಕರಾಚಾರ್ಯರ ಅನು

ಯಾಯಿಗಳು, ಮಾಧ್ವರು ಶ್ರೀಮಧ್ವಾಚಾರ್ಯರ ಅನುಯಾಯಿಗಳು, ಶ್ರೀ ವೈಷ್ಣವರು ಶ್ರೀ ರಾಮಾನುಜಾಚಾರ್ಯರ ಅನುಯಾಯಿಗಳು. ಜಿಲ್ಲೆಯ ಬ್ರಾಹ್ಮಣರಲ್ಲಿ ಸ್ಮಾರ್ತರು ಹಾಗೂ ಮಾಧ್ವರು ಮಾತ್ರ ಕಂಡು ಬರುತ್ತಾರೆ. ಸ್ಮಾರ್ತರಲ್ಲಿ ಹೆಚ್ಚಾಗಿ ಕನ್ನಡಭಾಷಿಕ ಹವ್ಯಕರೂ, ಮೈಸೂರು, ಹಾಸನ ಕಡೆಯಿಂದ ಬಂದ ಸ್ಮಾರ್ತರೂ ಇದ್ದಾರೆ. ಹವ್ಯಕರು ತೋಟಗಾರರಾಗಿದ್ದು, ಶಿವಮೊಗ್ಗ ಜಿಲ್ಲೆಯ ರಾಮಚಂದ್ರಾಪುರದ ಮಠಕ್ಕೆ ಸೇರಿದವರು. ಜಿಲ್ಲೆಯ ಬಹುತೇಕ ದೇವಸ್ಥಾನಗಳಲ್ಲಿ ಶಿವಳ್ಳಿ ಬ್ರಾಹ್ಮಣರೇ ಪೂಜಾರಿಗಳಾಗಿದ್ದಾರೆ.

ಬ್ರಾಹ್ಮಣರಲ್ಲಿ ಅನೇಕ ಕುಲಗಳಿದ್ದು ಅವುಗಳನ್ನು ಗೋತ್ರ ಪ್ರವರಗಳಿಂದ ಗುರ್ತಿಸಲಾಗುತ್ತದೆ. ಕಾಶ್ಯಪ, ವಿಶ್ವಾಮಿತ್ರ, ಭಾರದ್ವಾಜ ಮೊದಲಾದವು ಕೆಲವು ಗೋತ್ರಗಳ ಹೆಸರುಗಳು. ಬ್ರಾಹ್ಮಣರಲ್ಲಿ ಸಗೋತ್ರ ವಿವಾಹ ನಿಷಿದ್ಧ. ಬ್ರಾಹ್ಮಣರಿಗೆ 16 ಸಂಸ್ಕಾರಗಳಿದ್ದು ಅವುಗಳಲ್ಲಿ ಉಪನಯನವು ಅತಿಮುಖ್ಯವಾದದ್ದು. ಇದು ವ್ಯಕ್ತಿಯನ್ನು ವೇದಾಧ್ಯಯನಕ್ಕೆ ಅರ್ಹನನ್ನಾಗಿಮಾಡುತ್ತದೆ. ಉಪನಯನದ ನಂತರ ಪ್ರತಿಯೊಬ್ಬ ಬ್ರಾಹ್ಮಣನೂ ಯಜ್ಞೋಪವೀತವನ್ನು ಧರಿಸುತ್ತಾನೆ. ಬ್ರಾಹ್ಮಣರ ದೈನಂದಿನ ಜೀವನದಲ್ಲಿ ಅನೇಕ ಕಟ್ಟುಪಾಡುಗಳಿವೆ. ದಿನದಲ್ಲಿ ಎರಡೇ ಊಟ ಮಾಡಬೇಕು; ಹಗಲಿನಲ್ಲಿ ಒಂದು ಊಟ, ರಾತ್ರಿಯಲ್ಲಿ ಒಂದು ಊಟ. ಪಾರಂಪರಿಕವಾಗಿ ಬ್ರಾಹ್ಮಣರು ಷಟ್‌ಕರ್ಮ ನಿರತರಾಗಿರಬೇಕು. ಅವುಗಳು ಯಾವುವೆಂದರೆ ಯಜನ (ಯಜ್ಞ ಮಾಡುವುದು) ಯಾಜನ (ಯಜ್ಞ ಮಾಡಿಸುವುದು), ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತೀಗ್ರಹ. ಬ್ರಾಹ್ಮಣರಲ್ಲಿ ಬ್ರಹ್ಮ ವಿವಾಹ ಪದ್ಧತಿ ಆಚರಣೆಯಲ್ಲಿದೆ. ವಧುವಿನ ಪೋಷಕರು ವರನನ್ನು ಅರಸುತ್ತಾರೆ. ಅವರಲ್ಲಿ ತೆರ ಅಥವಾ ಕನ್ಯಾ ಶುಲ್ಕ ಕೊಡುವ ಪದ್ಧತಿಯಿಲ್ಲ. ಆದರೆ ಸಾಲಂಕೃತ ಕನ್ಯಾದಾನ ಕಲ್ಪನೆ ಈಗ ವರದಕ್ಷಿಣೆಗೆ ಅನುವು ಮಾಡಿಕೊಟ್ಟಿದೆ.

ಬ್ರಾಹ್ಮಣರಲ್ಲಿ ಎರಡು ರೀತಿಯ ವರ್ಗಗಳಿದ್ದವು. ವೈದಿಕರು ಮತ್ತು ಲೌಕಿಕರು. ವೈದಿಕರು ವೇದಾಧ್ಯಯನ ಮಾಡಿಕೊಂಡು ಷಟ್ಕರ್ಮನಿರತರಾಗಿರುತ್ತಿದ್ದರು. ಲೌಕಿಕರು ಕರಣಿಕ, ದಿವಾನ ಮೊದಲಾದ ಆಡಳಿತ ಹುದ್ದೆಗಳಲ್ಲಿದ್ದು ಲೌಕಿಕ ವ್ಯವಹಾರಗಳಲ್ಲಿ ತೊಡಗಿರುತ್ತಿದ್ದರು. ಬ್ರಾಹ್ಮಣರಲ್ಲಿ ಸಾಂಪ್ರದಾಯಿಕವಾಗಿ ವಿವಾಹ ವಿಚ್ಛೇದನವಾಗಲೀ ವಿಧವಾ ವಿವಾಹವಾಗಲೀ ರೂಢಿಯಲ್ಲಿಲ್ಲ. ವಿಧವೆಯರು ಹಿಂದೆ ಕೇಶವನ್ನು ತೆಗೆಯುವ ಸಂಪ್ರದಾಯವಿತ್ತು. ಈಗ ಅದು ಬಹುತೇಕ ನಿಂತುಹೋಗಿದೆ. ಆಹಾರ ಸೇವನೆಯಲ್ಲಿ ಸಾಂಪ್ರದಾಯಿಕವಾಗಿ ಈರುಳ್ಳಿ, ಬೆಳ್ಳುಳ್ಳಿ, ಮೊದಲಾದ ತರಕಾರಿಗಳನ್ನು ಸಂಪ್ರದಾಯಸ್ಥ ವೈದಿಕರು ತಿನ್ನುವುದಿಲ್ಲ.

ಬ್ರಾಹ್ಮಣರಲ್ಲಿ ಸತ್ತವರನ್ನು ಸುಡುತ್ತಾರೆ. ಹಲ್ಲುಹುಟ್ಟದ ಮಕ್ಕಳು, ಸಾಧು, ಸಂನ್ಯಾಸಿಗಳು ಸತ್ತಾಗ ಮಾತ್ರ ಹೂಳುತ್ತಾರೆ. ಹುಟ್ಟು ಸಾವುಗಳಲ್ಲಿ ಜ್ಞಾತಿಗಳು 10 ದಿನಗಳ ಮೈಲಿಗೆಯನ್ನು ಆಚರಿಸುತ್ತಾರೆ. ಶವವನ್ನು ಸುಟ್ಟ ಎರಡನೇಯ ಅಥವಾ ಮೂರನೇಯ ದಿನ ಅಸ್ಥಿಗಳನ್ನು ತೀರ್ಥ ಕ್ಷೇತ್ರಗಳಲ್ಲಿ, ನದಿಯಲ್ಲಿ ವಿಸರ್ಜಿಸುತ್ತಾರೆ. ಸತ್ತ 5, 7 ಅಥವಾ 9 ನೇ ದಿನದಿಂದ ಶ್ರಾದ್ಧವನ್ನು ಪ್ರಾರಂಭಿಸಿ 13 ನೇ ದಿನ ಮುಗಿಸುತ್ತಾರೆ. ಕಡೇ ದಿನ ವೈಕುಂಠ ಸಮಾರಾಧನೆಯನ್ನು ಮಾಡಿ ಬಂಧು ಮಿತ್ರರಿಗೆ ಭೋಜನ ಮಾಡಿಸುತ್ತಾರೆ. ನಂತರ ಪ್ರತೀ ತಿಂಗಳೂ ಮಾಸಿಕ ಶ್ರಾದ್ಧವನ್ನು ಒಂದು ವರ್ಷದ ತನಕ ಮಾಡಿ ಮುಂದೆ ವಾರ್ಷಿಕ ಶ್ರಾದ್ಧ ಮಾಡುತ್ತಾರೆ.

ಈಗೀಗ ಬ್ರಾಹ್ಮಣರಲ್ಲಿ ಉಪಜಾತಿ ಹಾಗೂ ಭಿನ್ನ ಭಾಷೆ ಮಾತನಾಡುವವರಲ್ಲಿ ವಿವಾಹ ಸಂಬಂಧಗಳು ಏರ್ಪಡುತ್ತಿವೆ. ಅವರು ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗುತ್ತಿದ್ದಾರೆ. ಜಿಲ್ಲೆಯಲ್ಲಿ 1984 ರಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗವು ನಡೆಸಿದ ಸರ್ವೇಕ್ಷಣೆಯಿಂದ 7,570 ಜನ ಬ್ರಾಹ್ಮಣರಿದ್ದರೆಂದು ಅಂದಾಜು ಮಾಡಲಾಗಿದೆ.

ಸಾಮಾನ್ಯವಾಗಿ ಕೊಡಗು ಜಿಲ್ಲೆಯ ದೇವಸ್ಥಾನಗಳಲ್ಲಿ ಹವ್ಯಕ, ಶಿವಳ್ಳಿ ಬ್ರಾಹ್ಮಣರು ಅರ್ಚಕರು. ಇತ್ತೀಚಿನ ದಿನಗಳಲ್ಲಿ ಹವ್ಯಕರು ಅರ್ಚಕ ವೃತ್ತಿಯನ್ನು ಬಿಟ್ಟು ತೋಟ, ಗದ್ದೆಗಳ ವ್ಯವಸಾಯವನ್ನು ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಈಗ ಹವ್ಯಕರಾರೂ ಅರ್ಚಕ ವೃತ್ತಿಯಲಿಲ್ಲ. ಕೊಂಕಣಿ ಭಾಷಿಕ ಗೌಡ ಸಾರಸ್ವತ ಬ್ರಾಹ್ಮಣರ ಸುಮಾರು 20 ಕುಟುಂಬಗಳು ಮಡಿಕೇರಿ, ವೀರರಾಜಪೇಟೆಗಳಲ್ಲಿವೆ.

ಬಾಲಾವಳಿಕಾರ್ ಎನ್ನುವ ಬ್ರಾಹ್ಮಣರ ಉಪವರ್ಗವೊಂದು ವೀರರಾಜಪೇಟೆ ತಾಲೂಕಿನ ಬೇಟೋಳಿ, ಹೆಗ್ಗಳ, ಕೊಟ್ಟೋಳಿ ಮತ್ತು ಹಾತೂರುಗಳಲ್ಲಿ ಮಾತ್ರ ವಾಸಿಸುತ್ತಿದೆ. ಸುಮಾರು 150 ವರ್ಷಗಳ ಹಿಂದೆ ಮಂಗಳೂರು ಕಡೆಯಿಂದ ಬಂದವರೆಂದು ಹೇಳುತ್ತಾರೆ. ಸುಮಾರು 150 ಕುಟುಂಬಗಳು ಇಲ್ಲಿ ಕಂಡುಬರುತ್ತವೆ. ಇವರ ಮನೆಮಾತು ಕೊಂಕಣಿ ; ಶೃಂಗೇರಿ ಮಠಕ್ಕೆ ಸೇರಿದವರು. ಮೂಲತಃ ಇವರು ಕೊಂಕಣ (ರತ್ನಾಗಿರಿ ಜಿ||) ದವರು. ಇವರಲ್ಲಿ ಲೋಟಲಿಕಾರ್, ವಾಗಳೆ

ಬೋರ್‌ಕಾರ್, ಬೋಕಡೆ, ಆದ್ದೋಣಕಾರ್, ಸಿಂಕಾಂಲ್, ಮೊದಲಾದ ಕುಟುಂಬದ ಹೆಸರುಗಳಿವೆ. ಇವರ ಮುಖ್ಯ ಉದ್ಯೋಗ ವ್ಯವಸಾಯ. ಇವರಲ್ಲಿ ಹೆಚ್ಚು ವಿದ್ಯಾವಂತರಿಲ್ಲ. ಉಪನಯನ, ವಿವಾಹ, ಮೊದಲಾದ ಸಮಾರಂಭಗಳಿಗೆ ಗೋವೆಯಿಂದ ಪುರೋಹಿತರನ್ನು ಕರೆಸುತ್ತಾರೆ. ಇವರಿಗೆ ಕವಳೇಶ್ವರ, ರವಳೇಶ್ವರ, ವೆಂಕಟರಮಣ ಮೊದಲಾದ ಮನೆದೇವರುಗಳಿವೆ. ವೀರರಾಜಪೇಟೆಯಲ್ಲಿ ಇವರು ಕೊಡಗು ಬಾಲಾವಳಿಕಾರ್ ಬ್ರಾಹ್ಮಣರ ಸಹಕಾರ ಸಂಘವೊಂದನ್ನು 1942 ಸ್ಥಾಪಿಸಿಕೊಂಡು, ಸದಸ್ಯರ ಕುಟುಂಬಗಳಲ್ಲಿ ಯಾರಾದರೂ ಮೃತರಾದಾಗ 200 ರೂ.ಗಳ ಸಹಾಯ ಧನವನ್ನು ಕೊಡುತ್ತಾ ಬಂದಿದ್ದಾರೆ.

### ಮರಾಟ

ಜಿಲ್ಲೆಯಲ್ಲಿ ಕಂಡುಬರುವ ಮರಾಟರು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ವಲಸೆ ಬಂದವರು. ಇವರು ಶಿವಾಜಿಯ ಕ್ಷತ್ರಿಯ ಮರಾಠಾ ಜಾತಿಗಿಂತ ಪ್ರತ್ಯೇಕ ಜನ. ದಕ್ಷಿಣ ಕನ್ನಡಕ್ಕೆ (ಅಲ್ಲಿ ಇವರನ್ನು ಮರಾಟನಾಯ್ಕರೆನ್ನುತ್ತಾರೆ)ಇವರು ಗೋವಾ ಕಡೆಯಿಂದ ಪೋರ್ಚುಗೀಸರು ಗೋವೆಯನ್ನು ಅಕ್ರಮಿಸಿದಾಗ ವಲಸೆ ಬಂದವರೆಂದು ಹೇಳುತ್ತಾರೆ. ಜಿಲ್ಲೆಯಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ 1984ರಲ್ಲಿ 1,291 ಜನ ಇದ್ದಿರಬಹುದೆಂದು ಅಂದಾಜು ಮಾಡಲಾಗಿದೆ. ಇವರನ್ನು ಕಾಡು ಮರಾಟ ಎಂದೂ ಎ. ಎ. ಡಿ. ಲೂಯಿಸ್‌ರವರು ಕರೆಯುತ್ತಾರೆ* ಕೊಡಗಿನಲ್ಲಿ 1901ರಲ್ಲಿ ಇವರ ಸಂಖ್ಯೆ 2,457 ಇದ್ದದ್ದು 1931ರ ವೇಳೆಗೆ 540ಕ್ಕೆ ಇಳಿದಿತ್ತು. ಇವರದು ಸಾಮಾನ್ಯ ನಿಲುವು. ಕಾಡಿನಲ್ಲಿ ವಾಸಿಸುವ ಇವರ ಗುಡಿಸಲುಗಳು ವಿಶಾಲವಾಗಿರುತ್ತವೆ. ಒಳಗೆ ಹಲವು ಕೋಣೆಗಳಿರುತ್ತವೆ. ಅಡಿಗೆ ಮಾಡಲು ಬೇರೆ ಕೋಣೆಯಿರುತ್ತದೆ. ದನಕರುಗಳಿಗೆ, ಕೋಳಿಗಳಿಗೆ, ಸೌದೆ ಕಟ್ಟಿಗೆಗೆ ಬೇರೆ ಬೇರೆ ಭಾಗಗಳು ಅಥವಾ ಗುಡಿಸಲುಗಳಿರುತ್ತವೆ. ಇವರು ತಮ್ಮ ಕೂದಲುಗಳನ್ನು ಉದ್ದವಾಗಿ ಬೆಳೆಸಿ ಹಿಂದಕ್ಕೆ ಗಂಟು ಹಾಕುತ್ತಾರೆ. ಗಂಡಸರೂ ಕೂಡ ಕಿವಿಗೆ ಹತ್ತಕುಡಕ ಹಾಕಿಕೊಳ್ಳುತ್ತಿದ್ದರು. ಇವರ ಮನೆ ಮಾತು ಮರಾಟಿಯಾದರೂ ಕನ್ನಡ ಪದಗಳು ಮಿಶ್ರಿತವಾಗಿವೆ. ಕೊಡಗು ಜಿಲ್ಲೆಯಲ್ಲಿ ಇವರನ್ನು ಪರಿಶಿಷ್ಟ ಬುಡಕಟ್ಟಿಗೆ ಸೇರಿಸಲಾಗಿದೆ.

ಮರಾಟರಲ್ಲಿ 96 ಉಪನಾಮ ಅಥವಾ ದೇವಕ್‌ಗಳು ಇವೆಯೆಂದು ಹೇಳುತ್ತಾರೆ. ಒಂದೊಂದು ದೇವಕ್‌ಗೂ ಒಂದೊಂದುಗೋತ್ರವಿದ್ದು ಒಂದೊಂದು ಕುಲದೇವರಿರುತ್ತದೆ. ವಿವಾಹ, ಗೃಹಪ್ರವೇಶ ಮೊದಲಾದ ಸಂದರ್ಭಗಳಲ್ಲಿ 'ಗೋಂದಲ ನೃತ್ಯ'ವನ್ನು ಏರ್ಪಡಿಸುತ್ತಾರೆ. ಹೆಚ್ಚಾಗಿ ಪಂಜುರ್ಲಿ ದೈವಕ್ಕೆ ನಡೆದುಕೊಳ್ಳುತ್ತಾರೆ. ಇವರು ನವರಾತ್ರಿ, ಹೋಳಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ. ಮರಾಟರು ಖಂಡೋಬಾ ತುಳಜಾಭವಾನಿ, ಶಿವ, ಪಾರ್ವತಿ, ಗಣೇಶ ಮುಂತಾದ ದೇವರುಗಳನ್ನು ಹೆಚ್ಚಾಗಿ ಪೂಜಿಸುವುದರ ಜೊತೆಗೆ ಪಂಜುರ್ಲಿ ದೈವಕ್ಕೆ ನಡೆದುಕೊಳ್ಳುತ್ತಾರೆ. ವಿವಾಹಗಳಿಗೆ ಬ್ರಾಹ್ಮಣರನ್ನು ಆಮಂತ್ರಿಸುತ್ತಾರೆ. ಇವರಲ್ಲಿ ವಿಧವಾ ವಿವಾಹ ರೂಢಿಯಲ್ಲಿದೆ. ಸತ್ತಾಗ ಚಿಕ್ಕವರನ್ನು ಹೂಳುತ್ತಾರೆ ; ದೊಡ್ಡವರನ್ನು ಸುಡುತ್ತಾರೆ. ಹುಟ್ಟಿದಾಗ, ಸತ್ತಾಗ 10 ದಿನ ಮೈಲಿಗೆಯನ್ನು ಆಚರಿಸುತ್ತಾರೆ. ಸತ್ತ ನಂತರ 3ನೇಯ ಅಥವಾ 5ನೇಯ ದಿನ ಬೂದಿ, ಮೂಳೆಗಳನ್ನು ಸಂಗ್ರಹಿಸಿ ಹೂಳುತ್ತಾರೆ. ಮಹಾಲಯ ಪಕ್ಷದಲ್ಲಿ ಪಿತೃತರ್ಪಣ ಬಿಡುತ್ತಾರೆ. ಈ ಪರಿಶಿಷ್ಟ ಬುಡಕಟ್ಟಿಗೆ ಸೇರಿದ ಮರಾಟರಲ್ಲದೆ ಜಿಲ್ಲೆಯ ನಗರಗಳಲ್ಲಿ ಇತ್ತೀಚೆಗೆ ವಲಸೆ ಬಂದಿರುವ (ಶಿವಾಜಿಯ ಜಾತಿಯ ಗುಂಪಿನ ಕ್ಷತ್ರಿಯ) ಮರಾಟರೂ ಇದ್ದಾರೆ. ಇವರು ವ್ಯಾಪಾರ ಮಾಡುತ್ತಾರೆ. ಹಾಗೂ ಪರಿಶಿಷ್ಟ ಬುಡಕಟ್ಟಿಗೆ ಸೇರಿರುವುದಿಲ್ಲ.

### ಮರ್ತರು (ಮರ್ಧರು)

ಮರ್ತರು ಕೊಡಗಿಗೆ ರಾಜರ ಕಾಲದಲ್ಲಿ ಕೇರಳದ ಕಡೆಯಿಂದ ಬಂದವರರೆನ್ನುತ್ತಾರೆ. ಹಿಂದೆ ಇವರು ಸುಗ್ಗಿ ಕಾಲದಲ್ಲಿ ಬೆಳೆ ಕೊಯ್ಯುವ ಋತುಮಾನದ ವಲಸೆಗಾರರಾಗಿದ್ದು, ಜೂನ್ ತಿಂಗಳವರೆವಿಗೂ ನೆಲೆಸಿ ನಂತರ ಕೇರಳಕ್ಕೆ ಹಿಂತಿರುಗುತ್ತಿದ್ದರಂತೆ. ಅಂತಹವರಲ್ಲಿ ಕೆಲವರು ಜಿಲ್ಲೆಯಲ್ಲಿ ಉಳಿದು ತೋಟಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಸುಮಾರು ಒಂದು ನೂರು ಕುಟುಂಬಗಳಷ್ಟು ಬಿಟ್ಟಂಗಾಲ, ಅಮ್ಮತ್ತಿಗಳಲ್ಲಿ ನೆಲೆಸಿದ್ದಾರೆ. ಇವರು ಹೊಲೆಯರಲ್ಲಿ ಒಂದು ಗುಂಪು. ಇವರು ಮಾಂಸಾಹಾರಿಗಳು; ಇವರ ಮನೆಮಾತು ಮಲೆಯಾಳಿ; ಸುಬ್ರಮಣ್ಯ ದೇವರನ್ನು ಪೂಜಿಸುತ್ತಾರೆ ; ಪಳನಿಗೆ ಯಾತ್ರೆಗೆ ಹೋಗುವುದುಂಟು. ವಿವಾಹದಲ್ಲಿ ಗಂಡಿನ ಕಡೆಯವರು ಹೆಣ್ಣನ್ನು ಹುಡುಕಿಕೊಂಡು ಹೋಗುತ್ತಾರೆ ; ವಿವಾಹವು ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಇವರಲ್ಲಿ ತೆರವಾಗಲಿ,

---

* ಎ.ಎ.ಡಿ. ಲೂಯಿಸ್—ಟ್ರೈಬ್ಸ್ ಆಫ್ ಮೈಸೂರು, ಪುಟ 145.

ವರದಕ್ಷಿಣೆಯಾಗಲೀ ರೂಢಿಯಲ್ಲಿಲ್ಲ. ವಿವಾಹದಲ್ಲಿ ವರನು ವಧುವಿಗೆ ತಾಳಿಕಟ್ಟುವ ಸಂಪ್ರದಾಯವಿದೆ. ವಿವಾಹವನ್ನು ಕುಲದ ಮುಖ್ಯಸ್ಥರೇ ನೆರವೇರಿಸುತ್ತಾರೆ. ಸಾಮಾನ್ಯವಾಗಿ ಗಂಡಿನ ಕಡೆಯವರು ಹೆಣ್ಣಿನ ಮನೆಯನ್ನು ಬೆಳಗ್ಗೆ ಹತ್ತು ಗಂಟೆಯ ವೇಳೆಗೆ ಸೇರುವಂತೆ ದಿಬ್ಬಣ ಹೊರಡುತ್ತಾರೆ. ಸುಮಾರು ಹನ್ನೊಂದು ಗಂಟೆಯ ವೇಳೆಗೆ ವಿವಾಹದ ಮುಖ್ಯ ಶಾಸ್ತ್ರಗಳು ನಡೆಯುತ್ತವೆ. ದಂಪತಿ ಮುಹೂರ್ತವು ರೂಢಿಯಲ್ಲಿದೆ. ಸೋದರಮಾವನಿಗೆ ಹೆಣ್ಣನ್ನು ಕೊಡುವ ರೂಢಿಯಿಲ್ಲ. ಸೋದರರ ಮತ್ತು ಸೋದರಿಯರ ಮಕ್ಕಳ ನಡುವೆ ವಿವಾಹ ನಡೆಯುವುದುಂಟು. ಮಗು ಹುಟ್ಟಿದ 28 ನೇಯ ದಿನ ಹೆಸರಿಟ್ಟು ತೊಟ್ಟಿಲಿಗೆ ಹಾಕುತ್ತಾರೆ. ಓಣಂ, ವಿಷು ಸಂಕ್ರಮಣ, ಕಕ್ಕಡ ಅಮಾವಾಸ್ಯೆ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ಹೆಚ್ಚಾಗಿ ಕೇರಳದ ಸಂಪ್ರದಾಯಗಳು ಇವರಲ್ಲಿ ರೂಢಿಯಲ್ಲಿವೆ. ಸತ್ತವರು ವಯಸ್ಸಾಗಿದ್ದರೆ ಸುಡುತ್ತಾರೆ ; ಇಲ್ಲದಿದ್ದರೆ ಹೂಳುತ್ತಾರೆ. ಗಂಡಸರು ಪೋಯಾದಿ, ಕರುಂಬಯ್ಯ, ಕೊಟ್ಟಿ, ಸುಬ್ರಮಣ್ಯ ಮೊದಲಾದ ಹೆಸರುಗಳನ್ನಿಟ್ಟುಕೊಂಡರೆ ಹೆಂಗಸರು ಯಶೋಧ, ಮಾಧವೀ, ರೋಹಿಣಿ, ಪಿತ್ತೈ ಮೊದಲಾದ ಹೆಸರುಗಳನ್ನಿಟ್ಟುಕೊಳ್ಳುತ್ತಾರೆ. ಮರ್ತರೂ, ಮರಾಟರೂ ಬೇರೆ ಬೇರೆ. ಆದರೆ ಜಿಲ್ಲೆಯಲ್ಲಿ ಇವರಿಬ್ಬರನ್ನು ಒಂದೇ ಎಂದು ಗ್ರಹಿಸಿ ಮರ್ತರಿಗೆ ಮರಾಟರೆಂದು ಜಾತಿಯ ಪತ್ರಗಳು ಕೊಟ್ಟಿರುವುದು ಕಂಡು ಬಂದಿದೆ.

### ಮಲೆಯರು

ಮಲೆಯರು ಮಡಿಕೇರಿ ತಾಲೂಕಿನ ಕೋಡಂಬೂರು, ಹೆರವನಾಡು, ಬಿಳಿಗೇರಿ, ಮರಗೋಡು, ಪಾಲೂರು, ಕಳಚೇರಿ, ಬೊಮ್ಮಂಜೆ, ಬಲ್ಲಮಾವಟಿಗಳಲ್ಲಿಯೂ, ವೀರರಾಜಪೇಟೆಯ ಕಿರುಂದಾಡು, ಕೈಕಾಡು, ಪಾರಣೆ, ಮರಂದೋಡು, ಕೋಣಂಜಗೇರಿ, ಶ್ರೀಮಂಗಲ, ಬಾಳೆಲೆ, ನೆಮ್ಮಲೆ ಮೊದಲಾದ ಕಡೆಗಳಲ್ಲಿಯೂ ಕಂಡುಬರುತ್ತಾರೆ. ಜಿಲ್ಲೆಯಲ್ಲಿ 1991 ರಲ್ಲಿ ಸುಮಾರು 300 ಜನರಿದ್ದರೆಂದು ತಿಳಿದು ಬಂದಿದೆ. ಇವರು ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಇವರ ಸಂಪ್ರದಾಯಗಳು ಕೊಡವರ ಸಂಪ್ರದಾಯಗಳನ್ನು ಹೋಲುತ್ತವೆ. ಇವರ ಮುಖ್ಯ ಸಾಂಪ್ರದಾಯಿಕ ವೃತ್ತಿಗಳು ಕೋಲ ಕಟ್ಟುವುದು, ನಾಟಿ ಔಷಧಿ ಕೊಡುವುದು ಹಾಗೂ ಯಂತ್ರ, ಮಂತ್ರ, ತಂತ್ರಗಳನ್ನು ಮಾಡುವುದು. ವಿಷ್ಣುಮೂರ್ತಿ, ಅಜ್ಜಪ್ಪ, ಕುಟ್ಟಿಚಾತ ಮೊದಲಾದವರ ಕೋಲ ಕಟ್ಟುತ್ತಾರೆ. ಈಗಲೂ ಕೂಡ ಭಾಗಮಂಡಲ, ಮಕ್ಕಿ, ನಾಪೋಕ್ಲು, ಬಲಮುರಿ, ಕಾಂತೂರು, ಬಿಳಿಗೇರಿ, ಮರಗೋಡು, ಹೊದ್ದೂರು, ಹೆಗ್ಗಳ ಮೊದಲಾದ ಸ್ಥಳಗಳ ದೇವಸ್ಥಾನಗಳಲ್ಲಿ ಕೋಲ ಕಟ್ಟುತ್ತಾರೆ. ಮೂಲವ್ಯಾಧಿ, ಸನ್ನಿ, ಉಳುಕು, ಹೊಟ್ಟೆನೋವು, ಜ್ವರ, ಮಲದೋಷ, ಪಿತ್ತ, ಕಫ ಕಟ್ಟುವುದು ಮೊದಲಾದ ರೋಗಗಳಿಗೆ ಔಷಧ ಕೊಡುವುದಾಗಿಯೂ, ಬಾಲಗ್ರಹ, ಶ್ರೀಚಕ್ರ, ಲಕ್ಷ್ಮೀಚಕ್ರ ಮೊದಲಾದ ಯಂತ್ರ, ಮಂತ್ರಗಳನ್ನು ಮಾಡುವುದಾಗಿಯೂ ಹೇಳಿಕೊಳ್ಳುತ್ತಾರೆ. ಇವರು ಕೃಷಿ ಕಾರ್ಮಿಕರಾಗಿಯೂ ತೋಟಗಳಲ್ಲಿ ದುಡಿಯುತ್ತಿದ್ದಾರೆ.

**ಮಲೈ ಕುಡಿಯ :** ಕುಡಿಯರನ್ನು ನೋಡಿ.

**ಮುಸಲ್ಮಾನರು :** ಇಸ್ಲಾಂ ಧರ್ಮವನ್ನು ನೋಡಿ.

### ಮಾರಂಗಿಗಳು

ಮಾರಂಗಿಗಳು ಹೊಲೆಯರಲ್ಲಿ ಒಂದು ಉಪಜಾತಿ. ಇವರು ಜಿಲ್ಲೆಯ ಅಮ್ಮತ್ತಿ ನಾಡಿನಲ್ಲಿ ಕಂಡುಬರುತ್ತಾರೆ. ಇವರು ಮಾರಮ್ಮನ ವಿಗ್ರಹಗಳನ್ನು ತಲೆಯ ಮೇಲೆ ಹೊತ್ತು ಭಿಕ್ಷೆ ಬೇಡುತ್ತಿದ್ದುದರಿಂದ ಈ ಹೆಸರು ಬಂದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಇವರಲ್ಲಿ ಪಾಡುಕುಟ್ಟಿ, ಅಂಬಲಕುಟ್ಟಿ, ಪೊಂಡಿಕುಟ್ಟಿ,ಕೋಚಕುಟ್ಟಿ, ಮೊದಲಾದ ಹೆಸರಿನ ಕುಲಗಳಿವೆ. ಒಂದೇ ಕುಲದೊಳಗೆ ವಿವಾಹಸಂಬಂಧ ನಿಷಿದ್ಧ. ಇವರು ಸಂಪ್ರದಾಯ, ಆಚರಣೆಗಳಲ್ಲಿ ಕೆಂಬಟ್ಟಿ ಹೊಲೆಯರನ್ನು ಹೋಲುತ್ತಾರೆ.

### ಮೇದರು

ಕೊಡಗಿನ ಮೇದ (ಮ್ಯಾದ)ರು ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದಾರೆ. ಇವರು ಕೊಡವ ಭಾಷೆಯನ್ನು ಮಾತನಾಡುತ್ತಾರೆ. ಭಾಗಮಂಡಲ, ನಾಪೋಕ್ಲು, ಕಟಗೇರಿ, ವೀರರಾಜಪೇಟೆ ಮೊದಲಾದ ಕಡೆಗಳಲ್ಲಿ ಕಂಡುಬರುತ್ತಾರೆ. ಜಿಲ್ಲೆಯಲ್ಲಿ ಸುಮಾರು 500 ಜನರಿರಬಹುದೆಂದು ಒಂದು ಹೇಳಿಕೆ. ಎರಡನೇ ಹಿಂದುಳಿದ ವರ್ಗಗಳ ಆಯೋಗದವರು 1984ರಲ್ಲಿ ನಡೆಸಿದ ಸರ್ವೇಕ್ಷಣದ ಅನುಸಾರ ಜಿಲ್ಲೆಯಲ್ಲಿ ಅವರ ಸಂಖ್ಯೆ 616. ಇವರು ತಾವು ಮೂಲತಃ ಕೊಡಗಿನವರೆಂದೇ ಹೇಳಿಕೊಳ್ಳುತ್ತಾರೆ. ಇವರು ಆಚಾರ, ವಿಚಾರ, ಸಾಮಾಜಿಕ ಸಂಪ್ರದಾಯಗಳಲ್ಲಿ ಕೊಡವರನ್ನು ಹೋಲುತ್ತಾರೆ. ಇವರಲ್ಲಿ ಕುಲ ಅಥವಾ ಗೋತ್ರಗಳಿಲ್ಲವೆಂದು ತಿಳಿಸುತ್ತಾರೆ. ವಿವಾಹವೂ ಕೂಡ ಕೊಡವರ ಪದ್ಧತಿಯಂತೆಯೇ. ಇವರು ಬೊಂಬಿನಿಂದ ಕುಕ್ಕೆ, ಮೊರ, ಗೊರಗ, ಮುಕ್ಕರಿ, ತೊಟ್ಟಿಲು ಮೊದಲಾದವು

ಗಳನ್ನು ಮಾಡಿ ಮಾರುತ್ತಾರೆ. ಇವರಲ್ಲಿ ಕೆಲವರಿಗೆ ಜಮ್ಮಾ ಭೂಮಿಯಿದೆ. ಕೆಲವರು ಕೃಷಿಕಾರ್ಮಿಕರಾಗಿಯೂ ದುಡಿಯುತ್ತಾರೆ. ಸತ್ತವರನ್ನು ಹೂಳುವುದೂ ಉಂಟು, ಸುಡುವುದೂ ಉಂಟು. ಇವರ ಕುಲದೇವರು ಚಾಮುಂಡಮ್ಮ. ಹೆಂಗಸರು ಕೊಡವರಂತೆಯೇ ಸೀರೆಯುಡುತ್ತಾರೆ. ಬಹುಮಂದಿ ಗುಡಿಸಿಲುಗಳಲ್ಲಿ ವಾಸಿಸುತ್ತಾರೆ. ಮೇದರು ಕೊಡವರ ಹಬ್ಬಗಳಿಗೆ ಬುಟ್ಟಿ ಮೊದಲಾದವುಗಳನ್ನು ಹೆಣೆದುಕೊಡುವುದಲ್ಲದೆ' ಹಬ್ಬಗಳಲ್ಲಿ ಕುಣಿಯುವುದು, ತಮಟೆ ಬಾರಿಸುವುದೂ ಮಾಡುತ್ತಾರೆ.

**ಯೆರವರು**

ಕೊಡಗು ಜಿಲ್ಲೆಯ ಗಿರಿಜನರಲ್ಲಿ ಯೆರವರು ಬಹುಸಂಖ್ಯಾತರು. ಇವರು ರಾಜ್ಯದ ಪರಿಶಿಷ್ಟ ಬುಡಕಟ್ಟುಗಳ ಒಟ್ಟು ಜನಸಂಖ್ಯೆಯಲ್ಲಿ ಶೇ. 5.94 ರಷ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಯೆರವರನ್ನು ಪರಿಶಿಷ್ಟ ಬುಡಕಟ್ಟಿಗೆ ಸೇರಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಯೆರವರು ವೀರರಾಜಪೇಟೆ ತಾಲೂಕಿನಲ್ಲಿ ಹೆಚ್ಚು ಕೇಂದ್ರೀಕೃತವಾಗಿದ್ದಾರೆ. ಹದಿನೇಳನೇಯ ಶತಮಾನದಲ್ಲಿ ವೈನಾಡಿನಲ್ಲಿ ಉಂಟಾದ ಅಸ್ಥಿರತೆಯಿಂದ ಯೆರವರು ಕೊಡಗಿಗೆ ವಲಸೆ ಬಂದಿರಬೇಕೆಂಬ ಒಂದು ಅಭಿಪ್ರಾಯವಿದೆ. ಲಿಂಗಾಯತ ರಾಜರ ಕಾಲದಲ್ಲಿ ಪಣಿಯರನ್ನು ಕೃಷಿ ಕೆಲಸಗಳಿಗಾಗಿ ಜಮ್ಮದ ಆಳು (ಗುಲಾಮ)ಗಳಾಗಿ ಕರೆಸಿಕೊಳ್ಳಲಾಗುತ್ತಿತ್ತು. ಅವರೇ ಪಣಿಯರವರೆಂದು ಇನ್ನೊಂದು ಅಭಿಪ್ರಾಯವಿದೆ. ಇವರು ಹಳ್ಳಿಗಳಲ್ಲಿ ಸರ್ಕಾರದ ಕಾಲೋನಿಗಳಲ್ಲಿ ಹಾಗೂ ಕಾಡಿನೊಳಗೆ ಹೆಚ್ಚಾಗಿ ವಾಸಿಸುತ್ತಾರೆ. ಇವರ ಸಂಖ್ಯೆ ಕಡಿಮೆಯಾಗುತ್ತಾ ಬಂದಿದೆಯೆಂದು ಇತ್ತೀಚೆಗಿನ ಜನಗಣತಿಗಳಲ್ಲಿ ಕಂಡುಬಂದಿದೆ. ಯೆರವರು, ಕುರುಬರು, ಇರುಳ, ಪಣಿಯ, ಕಡಿರ, ಕೋಲ, ಗೊಂಡ ಮೊದಲಾದ ಗಿರಿಜನಗಳ ಗುಂಪಿಗೆ ಸೇರಿದವರೆಂದೂ, ಇವರು ಕಪ್ಪು ಮೈಬಣ್ಣ, ಗುಂಗುರು ಕೂದಲು, ದಪ್ಪವಾದ ತುಟಿ, ಕುಳ್ಳ ಶರೀರ, ಉದ್ದವಾದ ಪಾದ, ಉದ್ದವಾದ ಮುಂಗೈ ಮೊದಲಾದ ಲಕ್ಷಣಗಳನ್ನು ಹೊಂದಿದ್ದಾರೆಂದು ಹಾಲೆಂಡ್ ಎಂಬುವರು 1897–98ರಲ್ಲಿ ತಿಳಿಸಿದ್ದಾರೆ.* ಗಂಡಸರ ಮೈಮುಖಗಳ ಮೇಲೆ ಕೂದಲು ತುಂಬಾ ವಿರಳ. ಯೆರವರ ಸಂಖ್ಯೆ 1871 ರಲ್ಲಿ 11,148 ಇದ್ದಿತೆಂದೂ, ಅವರಲ್ಲಿ 10,516 ಜನ ಪಂಜಿರಿಯೆರವರೆಂದೂ, 632 ಜನ ಪಣಿಯೆರವರೆಂದು ತಿಳಿದು ಬಂದಿದೆ. ಆದರೆ ಮುಂದೆ 1891ರಲ್ಲಿ ಯೆರವರ ಸಂಖ್ಯೆ 14,209 ಇದ್ದು, ಇವರಲ್ಲಿ 10,003 ಜನರು ಪಣಿಯೆರವರಾಗಿದ್ದರು. ಅಂದರೆ ಇಪ್ಪತ್ತು ವರ್ಷಗಳಲ್ಲಿ ಆಶ್ಚರ್ಯಕರ ರೀತಿಯಲ್ಲಿ ಸಂಖ್ಯೆಗಳ ಅದಲು ಬದಲಾಗಿವೆ. ಈ ಶತಮಾನದ ದಶಕಗಳಲ್ಲಿ ಯೆರವರ ಸಂಖ್ಯೆ ಈ ರೀತಿ ಇದ್ದಿತು. 1901–14,586; 1911–15,338; 1921–14,008; 1931–12,810; 1941–12,674; 1961–15,296; 1971–13,743; 1981–17,939.

ಯೆರವರ ನಂಬಿಕೆಗಳಿಗೂ, ಉಳಿದ ಹಿಂದೂಗಳ ನಂಬಿಕೆಗಳಿಗೂ ಹೆಚ್ಚು ವ್ಯತ್ಯಾಸವಿಲ್ಲ. ಇವರು ತಮ್ಮ ದೇವರುಗಳ ಜೊತೆಗೆ ತಿರುಪತಿ ವೆಂಕಟರಮಣ, ನಂಜನಗೂಡಿನ ನಂಜುಂಡೇಶ್ವರ, ಮಹದೇಶ್ವರ, ಸಿದ್ದಪ್ಪಾಜಿ, ಕುಟ್ಟದಮ್ಮ, ಚಾಮುಂಡಿ, ದಂಡು ಮಾರಮ್ಮ, ಪೆರಿಯಾಪಟ್ಟಣದಮ್ಮ, ಕುಂತೂರು ಮಾರಮ್ಮ ಮೊದಲಾದ ದೇವರು, ದೇವತೆಗಳನ್ನು ಪೂಜಿಸುತ್ತಾರೆ.

ಯೆರವರಲ್ಲಿ ವಿವಾಹವಾದ ತಕ್ಷಣ ದಂಪತಿಗಳು ಬೇರೆ ಸಂಸಾರವನ್ನು ಹೂಡುತ್ತಾರೆ. ವಿವಾಹಗಳು ಪ್ರೌಢಾವಸ್ಥೆಗೆ ಬಂದ ಮೇಲೆ ನಡೆಯುತ್ತವೆ. ವಿವಾಹಗಳು ಫೆಬ್ರವರಿ ತಿಂಗಳಿನಲ್ಲಿ ಆರಂಭವಾಗಿ ಸುಮಾರು ಮೂರು ತಿಂಗಳ ಕಾಲ ನಡೆಯುತ್ತಿರುತ್ತವೆ. ಇವರು ಮಂಗಳವಾರ, ಶುಕ್ರವಾರ, ಅಮಾವಾಸ್ಯೆ ದಿನಗಳಂದು ಮದುವೆ ಮಾಡುವುದಿಲ್ಲ. ಇತ್ತೀಚೆಗೆ ಮದುವೆಯ ಲಗ್ನವನ್ನು ಅರ್ಚಕರಾದ ಬ್ರಾಹ್ಮಣರಿಂದ ಗೊತ್ತು ಮಾಡಿಕೊಳ್ಳುತ್ತಾರೆ. ಗಂಡಿನ ಕಡೆಯವರೇ ಹೆಣ್ಣನ್ನು ಹುಡುಕಿಕೊಂಡು ಹೋಗುತ್ತಾರೆ. ತೆರಪದ್ಧತಿ ರೂಢಿಯಲ್ಲಿದೆ. ಇವರಲ್ಲಿ ಓಡಿಹೋಗಿ ಮದುವೆಯಾಗುವುದೂ ರೂಢಿಯಲ್ಲಿತ್ತು. ಅದು ಈಗಲೂ ನಡೆಯುತ್ತಿದೆ. ವಿವಾಹ ವಿಚ್ಛೇದನ, ವಿಧವಾ ವಿವಾಹಗಳು ರೂಢಿಯಲ್ಲಿವೆ. ಬಹುಪತ್ನಿತ್ವ ಅಪರೂಪ ; ಬಹುಪತಿತ್ವವಿಲ್ಲ. (ವಿವರಗಳಿಗೆ ಸಾಮಾಜಿಕ ಜೀವನವನ್ನು ನೋಡಿ). ಪಂಜಿರಿ ಹಾಗೂ ಪಣಿಯೆರವರು ಬೇರೆ ಬೇರೆಯವರಾದರೂ ಆಗೊಮ್ಮೆ ಈಗೊಮ್ಮೆ ಅವರಲ್ಲಿ ವಿವಾಹ ಸಂಬಂಧವೇರ್ಪಡುತ್ತದೆ. ಇವರಿಬ್ಬರೂ ಸಾಮಾಜಿಕವಾಗಿ ಸಮಾನ ಅಂತಸ್ತುಳ್ಳವರೆಂದು ನಂಬಿಕೆ. ಯೆರವರು ಕೊಡಗಿನ ಇತರ ಜಾತಿಯ ಜನಗಳಲ್ಲಿ ಮಧುರ ಬಾಂಧವ್ಯವನ್ನಿಟ್ಟುಕೊಂಡಿದ್ದಾರೆ. ಕಾಡಿನಲ್ಲಿ ಹಿಂದೆ ಇವರಿಗೆ ನಿರ್ದಿಷ್ಟವಾದ ಪ್ರದೇಶವಿರಲಿಲ್ಲ. ಇವರು ನಂಬಿಕೆಗೆ ಅರ್ಹರು, ಸತ್ಯವಂತರು ಹಾಗೂ ಕಷ್ಟಪಟ್ಟು ಕೆಲಸ ಮಾಡುವವರು. ಇವರ ಸಂಸ್ಕಾರಗಳಿಗೆ ಬ್ರಾಹ್ಮಣರ ಅವಶ್ಯಕತೆಯಿಲ್ಲದಿದ್ದರೂ ಬ್ರಾಹ್ಮಣರನ್ನು ಗೌರವಿಸುತ್ತಾರೆ. ಯೆರವರು ಸತ್ತವರನ್ನು

* ಭಾರತದ ಜನಗಣತಿ, 1981–ಸೀರೀಸ್–9, ಪಾರ್ಟ್–XI, ಪುಟ–3 (ದಿ ಯೆರವಾಸ್ ಆಫ್ ಕೊಡಗು)

ಹೂಳುತ್ತಾರೆ. ನಂತರ ಪಣಿಯೆರವರು, ಏಳನೆಯದಿನದಿಂದಲೂ ಪಂಜಿರಿಯೆರವರು ಹನ್ನೆರಡನೆಯ ದಿನದಿಂದಲೂ ಕರ್ಮಾಂತರಗಳನ್ನು ಮಾಡುತ್ತಾರೆ. (ವಿವರಗಳಿಗೆ ಸಾಮಾಜಿಕ ಜೀವನವನ್ನು ನೋಡಿ).

ಯೆರವರಲ್ಲಿ ನಾಲ್ಕು ಒಳಗುಂಪುಗಳು ಅಥವಾ ಜಾತಿಗಳಿವೆ; ಪಣಿಯೆರವ, ಪಂಜಿರಿಯೆರವ, ಬಡಗಯೆರವ, ಮತ್ತು ಕಾಗೆ ಯೆರವರು.

**ಪಣಿಯೆರವರು :** ಇವರು ತಮ್ಮನ್ನು ಪಣಿಯರೆಂದು ಕರೆದುಕೊಳ್ಳುತ್ತಾರೆ. ವೀರರಾಜಪೇಟೆಯ ಹಳ್ಳಿಗಳಲ್ಲಿ ಹೆಚ್ಚಾಗಿ ಹಂಚಿಹೋಗಿದ್ದಾರೆ. ತಮ್ಮ ಜಮೀನ್ದಾರರ ಭೂಮಿಯಲ್ಲಿ ವಾಸ ಮಾಡುತ್ತಿದ್ದಾರೆ. ಪಣಿಯೆರವರು ವೈನಾಡಿನಲ್ಲಿರುವ ಪಣಿಯರು ಇರಬಹುದೆಂಬುದಕ್ಕೆ ಸಾಕ್ಷ್ಯಾಧಾರಗಳಿವೆ.* ಇವರು ಪಿತೃ ಪ್ರಧಾನ ಕುಟುಂಬದವರಾಗಿದ್ದು ಕೇರಳದಿಂದ 1792 ರಿಂದೀಚೆಗೆ ಕೊಡಗಿಗೆ ವಲಸೆ ಬಂದಿರಬಹುದೆಂಬ ಅಭಿಪ್ರಾಯವಿದೆ, ಇವರ ಕುಟುಂಬಗಳು ಸರಳ ಕುಟುಂಬಗಳು ; ತಂದೆ, ತಾಯಿ ಹಾಗೂ ಅವಿವಾಹಿತ ಮಕ್ಕಳಿಂದ ಕೂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ವಿಧುರ ತಂದೆ, ವಿಧವೆ ತಾಯಿ ಜೊತೆಗಿರಬಹುದು. ಕುಟುಂಬದ ಹಿರಿಯನು ಯಜಮಾನನಾದ ಇವರಕುಟುಂಬಗಳು ಪಿತೃವಂಶೀಯ ಮಕ್ಕಳು, ತಂದೆಯ ಕಡೆಗೆ ಸೇರುತ್ತಾರೆ. ಇವರಲ್ಲಿ ಕುಲವನ್ನು ಸೂಚಿಸಲು ಪಟ್ಟೋಲೆ ಅಥವಾ ತಾರಣ ಎಂಬ ಪದವನ್ನು ಬಳಸುತ್ತಾರೆ. ಒಂದೇ ಕುಲದೊಳಗೆ ವಿವಾಹವಾಗುವುದು ನಿಷಿದ್ಧ. 1981ರ ಜನಗಣತಿಯ ನಂತರ ಜನಗಣತಿ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ 35 ತಾರಣಗಳನ್ನು ಗುರ್ತಿಸಿದ್ದಾರೆ. ಅವುಗಳ ಹೆಸರುಗಳು ಈ ರೀತಿ ಇವೆ. ಅಚ್ಚಿರಿಯ, ಅಮ್ಮಂಗಾಲಿಯ, ಆನಿಮಲ್ಲೆ, ಅಂಜಿಲಿಯ, ಬೈನಾಡು, ಬೆಂಗೇರಿಯಮ್, ಬೂತ್ಯಾದಿ, ಚೆರತ್ತೋನಿಯಂ, ಚೇರಿಕೆ, ಚಿಂಗಪಾಚ್ಚಿ, ಚಿಂಗಾರಿಮಾರು, ಚುಳೋಡು, ಚುಂಡೇಪಟ್ಟಿಯೆ, ಏವಿಲಾತ್ತು, ಇಡೆಯೋಡೆ, ಆಯ್ಯಂಜಿರಿಯೆ, ಕಿಡೇಚ್ಚುಳ, ಕರುಮತ್ತೈ, ಕಿರಿಮತ್ತೈ, ಕಿಯಾಕ್ಕೈ, ಕೋತಲಿಯಂ, ಕೊಟ್ಟಿಪಟ್ಟಿಯ, ಕೋಯಿಮುಟ್ಟೈ, ಕುಂಡನಿಯಂ, ಕುಟ್ಟುಚ್ಚೇರೆಯ್ಯೆ, ಮಡಾತಿಲೆ, ಮಲೈಕೋಡು, ಮುತ್ತೊಟ್ಟೈ, ಮುಚ್ಚಳಿಯಂ, ಮುಂಡಚಿಯ, ನಗರತ್ತೆ, ಪಾಕತ್ತೈ, ಪಾಪ್ಪಲಿಯೆ, ಪತ್ತುಬೂಡು, ತಂಡಿಯೋಡೆಲಿ. ತಾರಣಗಳು ಕೇವಲ ವಿವಾಹ ಸಂಬಂಧವನ್ನು ಸೀಮಿತಗೊಳಿಸುವುದಕ್ಕೆ ಮಾತ್ರ ಅಸ್ತಿತ್ವದಲ್ಲಿರುವಂತೆ ಕಂಡುಬರುತ್ತಿವೆ. ಒಂದೇ ತಾರಣದಲ್ಲಿ ವಿವಾಹ ಸಂಬಂಧವು ನಿಷಿದ್ಧ. ಪಣಿಯೆರವರಲ್ಲಿ ಇಂದಿಗೂ ಕೂಡ ಕಟ್ಟುಪಾಡುಗಳನ್ನೊಳಗೊಂಡ ಭದ್ರವಾದ ಸಾಮಾಜಿಕ ವ್ಯವಸ್ಥೆ ಕಂಡುಬರುತ್ತಿಲ್ಲ.

ಸ್ಥಳೀಯ ಮುಖ್ಯಸ್ಥರಾದ ಚಮ್ಮಕಾರರು, ಅರ್ಚಕರಾದ ಆಟ್ಟಾಳಿಗಳು ವಿವಾಹ, ಶವಸಂಸ್ಕಾರಗಳಲ್ಲಿ ಮುಖ್ಯ ಪಾತ್ರ ವಹಿಸಿ, ನಡೆಸಿಕೊಡುವುದಲ್ಲದೆ ಸಮಾಜದ ಮುಖ್ಯಸ್ಥರಾಗಿ ಸರ್ಕಾರಿ ಅಧಿಕಾರಿಗಳೊಡನೆಯೂ ವ್ಯವಹರಿಸುವರು. ತಮ್ಮಡಿ ಎಂಬ ಸ್ಥಳೀಯ ಮುಖ್ಯಸ್ಥರೂ ಅವರಲ್ಲಿದ್ದಾರೆ.

ಪಣಿಯೆರವರು ತಮ್ಮ ಮೂಲವನ್ನು 'ಮೂನಾತುರುಮಕ್ಕ' ಎಂಬ ಭೂತಗಳ ಎರಡು ಮಕ್ಕಳಿಗೆ ಒಯ್ಯುತ್ತಾರೆ. ಈ ಎರಡು ಅಣ್ಣ ತಂಗಿಯರು ಇಪ್ಪುಮಲ್ಲೆ ತಂಬಿರನ ಬಂಧನಕ್ಕೆ ಬಿದ್ದು, ಸಮಯ ಸಂದರ್ಭಗಳ ಒತ್ತಡದಿಂದ ಗಂಡಹೆಂಡತಿಯರಾಗಿ ಬಾಳಿದರು. ಇವರ ವಂಶದವರೇ ಪಣಿಯೆರವರೆಂದು ನಂಬಿದ್ದಾರೆ. ಪಣಿಯೆರವರ ದೇವರುಗಳು ಇಪ್ಪಿಮಲ್ಲೆನ ತಂಬಿರ ಮತ್ತು ತಂಬಿರಾಟ್ಟಿ, ಆಂಜಲತ್ತು ಅಪ್ಪೆಮೂರ್ತಿ, ಪಾಪ್ಪಲತ್ತು ಅಮ್ಮೆಮುತ್ತಿ, ನಿರ್‌ಮಲ್ಲೆ ಮುತ್ತಾಚಿ, ಇಪ್ಪಿಮಲ್ಲೆ ಮುತ್ತಾಚಿ, ಕಲಿಮಲ್ಲೆ ಮುತ್ತಾಚಿ ಮತ್ತು ಪೊನ್ನಮಲ್ಲೆ ಮುತ್ತಾಚಿ. ಇವುಗಳಲ್ಲಿ ತಂಬಿರ ಮತ್ತು ಆಂಜಲತು ಅಪ್ಪೆಮೂರ್ತಿಗಳು ಪುರುಷ ದೇವರುಗಳು. ಉಳಿದವು ಸ್ತ್ರೀ ದೇವತೆಗಳು. ಈ ಎಲ್ಲಾ ದೇವರು, ದೇವತೆಗಳೂ ಕೇರಳದಲ್ಲಿವೆ ಎನ್ನುತ್ತಾರೆ. ಆದರೆ ಎಲ್ಲಿವೆಯೆಂದು ಖಚಿತವಾಗಿ ತಿಳಿದಿಲ್ಲ. ಈ ದೇವರು ದೇವತೆಗಳನ್ನು ಆಟ್ಟಾಳಿಯು ಮನೆಗಳಲ್ಲಿ, ಸಾಮೂಹಿಕ ಪೂಜೆಯಲ್ಲಿ ಎಲ್ಲಿ ಬೇಕಾದರೂ ಆಹ್ವಾನಿಸಿ ಪೂಜಿಸುತ್ತಾನೆ. ಸಮುದಾಯ ಪೂಜೆಗಳನ್ನು 'ತೆರ' ಎಂದು ಕರೆಯುತ್ತಾರೆ. ಪಣಿಯೆರವರು ತಮ್ಮ ಬೀಡುಗಳ ಸಮೀಪ, ಕಾಡುಗಳಲ್ಲಿ ಅಲ್ಲಲ್ಲೇ ದೇವಸ್ಥಾನಗಳನ್ನು ಜೋಪಡಿಗಳ ರೂಪದಲ್ಲಿ ಕಟ್ಟಿಕೊಂಡು ಒಳಗಡೆ ದೇವರುಗಳನ್ನು ಕಲ್ಲಿನ ರೂಪದಲ್ಲಿ ಪೂಜಿಸುತ್ತಾರೆ. ದೇವರ ಜೊತೆಗೆ ಕತ್ತಿ, ತ್ರಿಶೂಲ, ಗಂಟೆ, ದೀಪ, ದೇವರ ಪಟಗಳನ್ನು ಇಟ್ಟಿರುತ್ತಾರೆ.

**ಪಂಜಿರಿ ಯೆರವರು :** ಇವರು ಮೈಸೂರು ಕಡೆಯಿಂದಬಂದವರು ಎಂಬ ಅಭಿಪ್ರಾಯವೂ ಇದೆ. ಇವರಲ್ಲಿ ಎರಡು ಗುಂಪುಗಳಿವೆ. ಇಪ್ಪುಮಲೆ ಯೆರವರು ಮತ್ತು ಕರಟ್ಟಿ ಯೆರವರು. ಇಪ್ಪುಮಲ್ಲೆ ಯೆರವರು ಶ್ರೀಮಂಗಲ ಮತ್ತು ಪೊನ್ನಂಪೇಟೆ ನಾಡುಗಳಲ್ಲಿ ಕಂಡುಬರುತ್ತಾರೆ, ಕರಟ್ಟಿ ಯೆರವರು ಕೇರಳದ

* ಭಾರತದ ಜನಗಣತಿ 1981, ಸೀರೀಸ್ 9, ಭಾಗ II, ದಿ ಯೆರವಾಸ್ ಆಫ್ ಕೊಡಗು, ಪುಟ 14

ಗಡಿಯ ಬೈತೂರಿನ ಹತ್ತಿರ ಪರಟ್ಟಿಮಲೈಗಳಲ್ಲಿ ಕಂಡುಬರುತ್ತಾರೆ. ಪಂಜಿರಿ ಯೆರವರು ತಮ್ಮ ಮೂಲವನ್ನು ಮಣ್ಣಿನ ಎರಡು ಹೆಣ್ಣು ಗಂಡು ಬೊಂಬೆಗಳಿಗೆ ಒಯ್ಯುತ್ತಾರೆ. ಮೇಲ್ಜಾತಿಯವರಿಬ್ಬರು ಮಣ್ಣಿನಿಂದ ಎರಡು ಹೆಣ್ಣು ಗಂಡು ವಿಗ್ರಹಗಳನ್ನು ಮಾಡಿದರೆಂದು, ಅದಕ್ಕೆ ದೇವರು ಜೀವ ಕೊಟ್ಟನೆಂದೂ, ಅವರು ಗಂಡ ಹೆಂಡತಿಯರಾಗಿ ಅವರಿಂದ ಬಂದ ಸಂತತಿಯೇ ಪಂಜಿರಿ ಯೆರವರೆಂದು ದಂತಕತೆಯೊಂದಿದೆ. ಪಂಜಿರಿ ಯೆರವರು ಮಾತೃವಂಶೀಯರು. ಇವರ ಭಾಷೆಗೂ ಪಣಿ ಯೆರವರ ಭಾಷೆಗೂ ವ್ಯತ್ಯಾಸವಿದೆ. ಪಂಜಿರಿ ಯೆರವರು ಕೇರಳದ ಅಡಿಯರು ಒಂದೇ ಎಂಬ ಅಭಿಪ್ರಾಯವೂ ಇದೆ.* ಪಂಜಿರಿ ಯೆರವರು ತಮ್ಮ ಮೂಲಸ್ಥಾನವನ್ನು ತಿರ್‌ನೆಲ್ಲಿಗೂ ತಮ್ಮ ಮೂಲ ಪುರುಷರನ್ನು ಅಚ್ಚೆ ಮತ್ತು ಇತ್ತಿಗೂ ಒಯ್ಯುತ್ತಾರೆ. ಪಂಜಿರಿ ಯೆರವರಿಗೂ ಕೇರಳದ ಅಡಿಯರಿಗೂ ವೈವಾಹಿಕ ಸಂಬಂಧವಿದ್ದು, ಇವರ ಸಂಪ್ರದಾಯಗಳು ಒಂದೇ ಆಗಿದ್ದು ಇವರ ಮೂಲ ಒಂದೇಯಿರಬೇಕೆಂದು ಜನಗಣತಿ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ ತಿಳಿಸಲಾಗಿದೆ. (ಹಿಂದೆ ಪಣಿ ಮತ್ತು ಪಂಜಿರಿ ಯೆರವರೂ ಒಂದೇ ಗುಂಪಿನವರೆಂದು ನಂಬಲಾಗಿದ್ದು ಇವರು ಪ್ರತ್ಯೇಕ ಗುಂಪುಗಳೆಂದು ವಿವರವಾಗಿ ಎನ್. ಪಿ. ಶಂಕರನಾರಾಯಣ ರಾವ್ ಜನಗಣತಿ ಇಲಾಖೆಗಾಗಿ ನಡೆಸಿದ ಸಮೀಕ್ಷೆಯಿಂದ ತೋರಿಸಿಕೊಟ್ಟಿದ್ದಾರೆ). ಅಡಿಯರನ್ನು ಕೊಡಗಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿಸಿದ್ದಾರೆ. (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಬುಡಕಟ್ಟಿಗೆ ಸೇರಿಸಲಾಗಿದೆ). ಪಣಿ ಯೆರವರು, ಪಂಜಿರಿ ಯೆರವರು ವೈನಾಡಗೆ ಸೇರಿದ ಬೇರೆ ಬೇರೆ ಗುಂಪುಗಳೆಂದೂ ಅಭಿಪ್ರಾಯವಿದೆ. ಪಂಜಿರಿ ಯೆರವರು ಒಂದು ಕಾಲಕ್ಕೆ ಜಮೀನನ್ನು ಹೊಂದಿದ್ದು, ಬೇರೆಯವರಿಂದ ಪರಾಜಿತಗೊಂಡು ಅವರಿಗೆ ಗುಲಾಮರಾದರೆಂದೂ, ಅವರ ಮೂಲ ಸ್ಥಳ ವೈನಾಡಿನ ಉತ್ತರ ಭಾಗ ಹಾಗೂ ಕೊಡಗಿನ ಆಗ್ನೇಯ ಭಾಗವೆಂದು ಹೇಳುತ್ತಾರೆ. ಪಣಿ ಯೆರವರಂತೆ ಇವರ ಕುಟುಂಬಗಳೂ ಕೂಡ ಸರಳ ಕುಟುಂಬಗಳು. ಇವರಲ್ಲಿ ಈಗ ಬಹುಮಂದಿ ಸರ್ಕಾರದ ಕಾಲೋನಿಗಳಲ್ಲಿ ವಾಸಿಸುತ್ತಿದ್ದಾರೆ. ಇವರು ಮಾತೃವಂಶೀಯರಾಗಿದ್ದು ವಂಶವನ್ನು ಹೆಣ್ಣು ಮಕ್ಕಳಿಂದ ಗುರ್ತಿಸುತ್ತಾರೆ. ಮಕ್ಕಳು ತಾಯಿಯ ವಂಶಕ್ಕೆ ಸೇರಿದವರು. ವಿವಾಹವಾದ ಮೇಲೂ ಪುರುಷನು ತನ್ನ ತಂದೆಯ, ಸ್ತ್ರೀಯು ತನ್ನ ತಾಯಿಯ ವಂಶಗಳಿಗೆ ಸೇರಿರುತ್ತಾರೆ. ಆದರೆ ಇವರು ಮಾತೃ ಪ್ರಧಾನರಲ್ಲ ; ತಂದೆಯೇ ಕುಟುಂಬದ ಯಜಮಾನ. ವಂಶವು ಅನೇಕ ಕುಟುಂಬಗಳನ್ನು ಹೊಂದಿದ್ದು ಅವುಗಳಿಗೆಲ್ಲಾ ಒಬ್ಬ ಸ್ತ್ರೀ ಮೂಲವಾಗಿರುತ್ತಾಳೆ. ಈ ಎಲ್ಲಾ ಕುಟುಂಬಗಳ ಹಿರಿಯನು ಯಜಮಾನನಾಗುತ್ತಾನೆ. ಈತನ ವಿವಾಹ ಸಂಬಂಧವೇರ್ಪಡಿಸುವುದು, ಸತ್ತಾಗ ಕೂಟವೇರ್ಪಡಿಸುವುದು ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತಾನೆ. ಈ ಮಾತೃವಂಶೀಯ ಕುಟುಂಬಗಳಲ್ಲಿ ಇತ್ತೀಚೆಗೆ ಬದಲಾವಣೆಗಳುಂಟಾಗುತ್ತಿವೆ. ಕುಟುಂಬದ ಆಸ್ತಿಯನ್ನು ಗಂಡು ಮಕ್ಕಳೇ ಹಂಚಿಕೊಳ್ಳುತ್ತಿದ್ದಾರೆ ; ಸಹೋದರಿಯರ ಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೊಡುತ್ತಿಲ್ಲ. ಇವರು ಕುಲಗಳನ್ನು ಚಮ್ಮ ಅಥವಾ ಕುಡಿ ಎಂದು ಕರೆಯುತ್ತಾರೆ. ಮಕ್ಕಳು ತಾಯಿಯ ಚಮ್ಮಕ್ಕೆ ಸೇರಿದವರು. ಇವರ ಜಾನಪದದ ಪ್ರಕಾರ 33 ಕುಲಗಳ ಹೆಸರುಗಳು ದೊರೆಯುತ್ತವೆ. ಅವು ಯಾವುವೆಂದರೆ ಅಂಜಿಲ, ಬಡಾಕ್ ಮುಂಜು, ಬಾಳೆಪಾತೆರ, ಬೆಳ್ಳಿಚಲು, ಬೈನಾಟ್ಲು, ಚೈಂದೆ, ಚಲುಂಬೆಡು, ಚೇಗಾಡಿ, ಚೆರುವಳ್ಳ, ಏವಿಲ, ಇಡೆಮಲೆ, ಕಚ್ಚೆಲೆ, ಕಡೆಮಲೆ, ಕಾಳಕೊಟ್ಟಿ, ಕಲ್ಲುಮಾನಿ, ಕಲ್ಯ, ಕರ್ಕೈಲ, ಕೋಟ್ಟಿ, ಕುಪ್ಪೆತೋಡ, ಮಾಡಚೇರಿ, ಮಾಮ್ಮಟ್ಲ, ಮರೆಂಗಾವ್ಲ, ಮುದ್ರಿಲ, ಮುದುಂಗುತ್ತು, ನಾಲಪ್ಪಾಡಿ, ಪನ್ನೇಲಿ, ಪಾವಡೆ, ಪೊದರ್‌ಮುಂಜು, ಪೂವರಿ, ಪುದುಚೇರಿ, ಪುದುರು, ತಿರುಮಂಜೆ ಮತ್ತು ಉಳಾಂಗುತ್ತು. ಒಂದೇ ಕುಲದೊಳಗೆ ವಿವಾಹಗಳು ನಿಷಿದ್ಧ. ಚಮ್ಮದ ಹಿರಿಯನನ್ನು ಚಮ್ಮಕಾರನೆನ್ನುತ್ತಾರೆ. ಹಿಂದೆ ಚಮ್ಮಕಾರನು ತನ್ನ ಚಮ್ಮದ ಕುಟುಂಬಗಳಿಂದ ಬತ್ತವನ್ನು ಶೇಖರಿಸಿ ತಂದು ಪಿತೃಗಳನ್ನು ಪೂಜಿಸುತ್ತಿದ್ದನು. ಈ 33 ಚಮ್ಮಗಳನ್ನು 13 ಹೊರ ಗುಂಪುಗಳಾಗಿಯೂ, ಅವುಗಳನ್ನು ಪುನಃ ಮೂರು ಗುಂಪುಗಳಾಗಿಯೂ, ವಿಂಗಡಿಸಿದ್ದಾರೆ. ಈ ಮೂರು ಗುಂಪುಗಳಾದ ಬಡಾಕ್‌ಮುಂಜುಗೆ, ಪೂಕ್ಕರಿಮುಗೆ, ಪೋದರ್ ಮುಂಜುಗೆ ಕರಿಚಾತ್ತೈಮಾಳಿಯಮ್ಮೈ ಮತ್ತು ತಿರ್‌ನೆಲ್ಲಿ ಮುಂಜುಗೆ ಪಕತ್ತಯ್ಯಗಳು ದೇವತೆಗಳು. ಎಲ್ಲಾ ಚಮ್ಮಗಳೂ ಸಮಾನ ಅಂತಸ್ತಿನವು. ಬಡಾಕ್ ಮುಂಜು ದೇವತೆಯಾದ ಪೂಕ್ಕರಿಮುಗೆಗೆ ಶಾಖಾಹಾರಿ ನೈವೇದ್ಯ ಮಾಡುತ್ತಾರೆ. ಪಂಜಿರಿ ಯೆರವರ ಊರುಗಳನ್ನು ಕುಂಜ ಎಂದು ಕರೆಯುತ್ತಾರೆ. ಪ್ರತಿಯೊಂದು ಕುಂಜಕ್ಕೂ ಕುಂಜಕಾರನಿರುತ್ತಾನೆ. ಪಂಜಿರಿ ಯೆರವರು ಆಹಾರಾನ್ವೇಷಣೆಯಿಂದ, ಕುಮರಿ ವ್ಯವಸಾಯಗಾರರಾಗಿ, ಈಗ ಕೃಷಿ ಕಾರ್ಮಿಕರಾಗಿದ್ದಾರೆ. ಕೋಳಿಗಳನ್ನು ಸಾಕುವುದು, ಮಳೆಗಾಲದಲ್ಲಿ ಹೊಳೆಗಳಲ್ಲಿ ಮೀನು ಹಿಡಿಯುವುದು ಇವರ ಇತರ ಉದ್ಯೋಗಗಳಾಗಿವೆ. ಹೆಚ್ಚಾಗಿ ಬತ್ತದ ಗದ್ದೆಗಳಲ್ಲಿ, ಕಾಫಿ ತೋಟಗಳಲ್ಲಿ ದುಡಿಯುತ್ತಾರೆ. ಮದುವೆ ಸಮಾರಂಭಗಳು ಪಣಿ ಯೆರವರಂತೆಯೇ

---

* ಭಾರತದ ಜನಗಣತಿ, 1981 ಸೀರೀಸ್ 9 ಭಾಗ XI, ದಿ ಯೆರವಾಸ್ ಆಫ್ ಕೊಡಗು, ಪುಟ 14

ಇರುತ್ತವೆ. ಇವರಲ್ಲಿಯೂ ವಿವಾಹ ವಿಚ್ಛೇದನ, ಪುನರ್ವಿವಾಹ, ವಿಧವಾ ವಿವಾಹಗಳಿಗೆ ಅವಕಾಶವುಂಟು, ಓಡಿಹೋಗಿ ಮದುವೆ ಯಾಗುವುದೂ ರೂಢಿಯಲ್ಲಿದೆ. ಇವರು ಸತ್ತವರನ್ನು ಹೂಳುತ್ತಾರೆ. ಕುಂಜುಕಾರನು ಸತ್ತಾಗ ಕೆಲಸ ಕಾರ್ಯಗಳನ್ನು ನಡೆಸಿಕೊಡುತ್ತಾನೆ. ಪಂಜಿರಿ ಯೆರವರು ಸತ್ತ ಹನ್ನೊಂದನೇಯ ದಿನ ಕರ್ಮಾಂತರಗಳನ್ನು ನೆರವೇರಿಸುತ್ತಾರೆ ; ನಂತರ ಆರು ತಿಂಗಳೊಳಗೆ ಕೂಟವನ್ನು ಏರ್ಪಡಿಸುತ್ತಾರೆ. ಪ್ರತೀ ವರ್ಷ ಫೆಬ್ರವರಿ ಮಾರ್ಚ್ ತಿಂಗಳಿನಲ್ಲಿ ಚಮ್ಮದ ಕುಟುಂಬಗಳೆಲ್ಲವೂ ಸೇರಿ ತಮ್ಮ ಪಿತೃಗಳಿಗೆ ಆಹಾರ ಕೊಟ್ಟು ಆಶೀರ್ವಾದ ಪಡೆಯುತ್ತಾರೆ.

ಪಂಜಿರಿ ಯೆರವರು ಇತರ ಹಿಂದೂ ದೇವತೆಗಳ ಜೊತೆಗೆ ತಮ್ಮ ಮೂಲ ಪುರುಷರಾದ ಮೆಲ್‌ರಚ್ಚೆ ಮತ್ತು ಕೀಯರಿತ್ತಿಯನ್ನು ಪೂಜಿಸುತ್ತಾರೆ. ಇವರು ವೈನಾಡಿನ ತಿರ್‌ನೆಲ್ಲಿಯಲ್ಲಿ ವಾಸಿಸುತ್ತಾರೆಂಬ ನಂಬಿಕೆ. ತಿರ್‌ನೆಲ್ಲಿಯ ಸಮೀಪ ಕುದರೆ ಕೊಡೆಯಲ್ಲಿರುವ ಒಂದು ಹಾಳುಬಿದ್ದ ದೇಗುಲದಲ್ಲಿರುವ ಅನೇಕ ಕಲ್ಲುಗಳು ದೇವರುಗಳೆಂಬ ನಂಬಿಕೆ. ಇಲ್ಲಿಗೆ ಪಂಜಿರಿ ಯೆರವರು ಯಾತ್ರೆ ಹೋಗುತ್ತಾರೆ. ಇವರ ಅರ್ಚಕರಾದ ಕುಂಜ್‌ನೆಲಡಿಗಳು ಅವರ ಮೂರು ಮಂಜುಗಳ ದೇವತೆಗಳನ್ನು ಅಹ್ವಾನಿಸಿ ಪೂಜೆ ಮಾಡುತ್ತಾರೆ. ಇವರ ದೇವಸ್ಥಾನಗಳು ಪಣಿಯೆರವರ ದೇವಸ್ಥಾನಗಳಂತಿವೆ. ಇವರು ಮನೆಗಳಲ್ಲಿ ತಮ್ಮ ಪಿತೃಗಳನ್ನು ಮಾತ್ರ ಆರಾಧಿಸುತ್ತಾರೆ ; ಪೊನ್ನಂಪೇಟೆ, ಗೋಣಿಕೊಪ್ಪಲು, ತಿತಿಮತಿಗಳಲ್ಲಿ, ನಡೆಯುವ ಮುತ್ತಪ್ಪ ದೇವರ ತೇರುಗಳಲ್ಲಿ ಭಾಗವಹಿಸುತ್ತಾರೆ. ಕುಟ್ಟ, ಇರ್ಪುಗಳ ಜಾತ್ರೆಗಳಿಗೆ ಹೋಗುತ್ತಾರೆ. (ಮದುವೆ, ಶವಸಂಸ್ಕಾರಗಳಿಗೆ ಸಾಮಾಜಿಕ ಜೀವನ ನೋಡಿ).

**ಬಡಗ ಯೆರವರು :** ಇವರು ಕುಟ್ಟ ಹಾಗೂ ವಿಶೇಷವಾಗಿ ವೀರರಾಜಪೇಟೆ ತಾಲೂಕಿನ ಈಶಾನ್ಯ ಭಾಗದಲ್ಲಿ ಕಂಡುಬರುತ್ತಾರೆ. ಇವರಲ್ಲಿ ಎರಡು ಒಳಪಂಗಡಗಳಿವೆ. ಹೆಗ್ಗಡದೇವನ ಕೋಟೆಯ ಕಡೆಯಿಂದ ಬಂದ ಯೆರವರು ಮತ್ತು ವೀರರಾಜಪೇಟೆಯ ಈಶಾನ್ಯ ದಿಕ್ಕಿನಲ್ಲಿರುವ ಸೋಲಿಗರೆಂದುಕೊಳ್ಳುವ ಬಡಗ ಯೆರವರು. ಮೊದಲನೆ ಗುಂಪಿನವರು, ಈಗಲೂ ಕೂಡ ಹೆಗ್ಗಡದೇವನಕೋಟೆ ತಾಲೂಕಿನ ಜನರೊಡನೆ ಸಂಬಂಧವಿಟ್ಟುಕೊಂಡಿದ್ದಾರೆ. ಇವರು ಹೆಗ್ಗಡದೇವನ ಕೋಟೆ ತಾಲೂಕಿಗೆ ವಲಸೆ ಬಂದವರೆಂದೂ ಅಲ್ಲಿಯ ಜನರೊಡನೆ ಬೆರೆತು ಕ್ರಮೇಣ ಯೆರವಗೌಡರೆನಿಸಿಕೊಂಡರೆಂದು ಕಡೆಗೆ ಪರಿಶಿಷ್ಟ ಬುಡಕಟ್ಟುಗಳ ಸೌಲಭ್ಯಗಳನ್ನು ಪಡೆಯಲು ಗೌಡ ಎನ್ನುವ ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುವ ಪ್ರತ್ಯಯವನ್ನು ಕೈಬಿಟ್ಟರೆಂದು ಹೇಳುತ್ತಾರೆ. ಇವರ ಮನೆ ಮಾತು ಕನ್ನಡ. ಯೆರವರಲ್ಲಿ ಇವರೇ ಒಂದು ಉಪಜಾತಿಯಾಗಿದ್ದು ಸ್ಥಳದ ಆಧಾರದ ಅನೇಕ ಕುಲಗಳಿದ್ದು, ಕಟ್ಟಿಮನೆ ಮತ್ತು ಗಡಿಮನೆ ಎಂಬ ಎರಡು ದೊಡ್ಡ ಪಂಗಡಗಳಾಗಿವೆ. ಇವರದು ಪಿತೃಪ್ರಧಾನ ಕುಟುಂಬ. ಮದುವೆಗೆ ಸೋದರಮಾವನ ಅಥವಾ ಸೋದರತ್ತೆಯ ಮಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಾರೆ. ಕನ್ಯಾಶುಲ್ಕವು ರೂಢಿಯಲ್ಲಿದೆ ಹಾಗೂ ಅದರ ಮೊತ್ತ ರೂ. 20 ರಿಂದ 25ರವರೆಗಿದೆ. ವೀಳ್ಯದ ಶಾಸ್ತ್ರ, ದೇವರು ತರುವುದು, ಕಂಕಣಧಾರಣೆ, ಧಾರೆ ಮೊದಲಾದವು ಮದುವೆಯ ಮುಖ್ಯ ಅಂಗಗಳು. ಮದುವೆಯಲ್ಲಿ ಮದ್ಯಮಾಂಸ ನಿಷೇಧವಿದೆ. ವಿವಾಹ ವಿಚ್ಛೇದನ, ವಿಧವಾ ವಿವಾಹಗಳು ರೂಢಿಯಲ್ಲಿವೆ. ಇವರು ಸತ್ತವರನ್ನು ಹೂಳುತ್ತಾರೆ. ಮಹದೇಶ್ವರನನ್ನು ಪೂಜಿಸುತ್ತಾರೆ. ದೇಶದ ಮಾರಮ್ಮ, ದಂಡುಮಾರಮ್ಮ, ಚಿಕ್ಕದೇವಮ್ಮ, ಮೊದಲಾದ ಗ್ರಾಮದೇವತೆಗಳು ಪೂಜಿಸಲ್ಪಡುವ ಇತರ ದೇವತೆಗಳು. ಬತ್ತದಗದ್ದೆ, ಕಾಫಿ ತೋಟಗಳಲ್ಲಿ ಕೃಷಿ ಕಾರ್ಮಿಕರಾಗಿದ್ದಾರೆ.

ವೀರರಾಜಪೇಟೆ ತಾಲೂಕಿನ ಈಶಾನ್ಯದಲ್ಲಿರುವ ಬಡಗ ಯೆರವರು ತಾವು ಬಿಳಿಗಿರಿ ರಂಗನ ಬೆಟ್ಟದ ಸೋಲಿಗರ ಪಂಗಡಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಾರೆ. ಇವರು ಮೈಸೂರು ದೊರೆಗಳ ಸೈನ್ಯದೊಂದಿಗೆ ಬಂದವರು ಮುಂದೆ ಕೊಡಗಿನಲ್ಲಿಯೇ ಉಳಿದವರೆನ್ನುತ್ತಾರೆ. ಇವರದೂ ಕೂಡ ಪಿತೃವಂಶೀಯ ಕುಟುಂಬಗಳು. ಇವರ ಸಂಪ್ರದಾಯಗಳು ಕುಟ್ಟದ ಕಡೆಯಿರುವ ಬಡಗ ಯೆರವರ ಸಂಪ್ರದಾಯಗಳನ್ನು ಸ್ವಲ್ಪಮಟ್ಟಿಗೆ ಹೋಲುತ್ತವೆ. ಇವರ ಮದುವೆಗಳಲ್ಲಿ ಧಾರೆಯೇ ಮುಖ್ಯವಾದ ಅಂಗ, ಕೂಡಾವಳಿ ಪದ್ಧತಿ ರೂಢಿಯಲ್ಲಿದೆ. ಮನೆಯಲ್ಲಿ ಕನ್ನಡ ಮಾತನಾಡುತ್ತಾರೆ. ಸಿದ್ದೇಶ್ವರ, ಬಿಳಿಗಿರಿರಂಗ, ವೀರಭದ್ರ, ಮಾದಯ್ಯ, ಬಸವ, ಪೆರಿಯಾಪಟ್ಟಣದಮ್ಮ, ಗುಳಿಕಾ, ಚೌಡಿ ಮೊದಲಾದ ದೇವದೇವತೆಗಳನ್ನು ಪೂಜಿಸುತ್ತಾರೆ. ಪಿತೃಪೂಜೆಯನ್ನು ಮಾಡುತ್ತಾರೆ. ಯುಗಾದಿ, ದೀಪಾವಳಿಗಳನ್ನು ಆಚರಿಸುತ್ತಾರೆ. ಕೃಷಿ ಕಾರ್ಮಿಕರಾಗಿಯೂ ಕಾಡುಗಳಲ್ಲಿಯೂ ಕೆಲಸ ಮಾಡುತ್ತಾರೆ. ಸತ್ತವರನ್ನು ಹೂಳುತ್ತಾರೆ.

**ಕಾಗೆ ಯೆರವರು :** ಇವರನ್ನು ಕಾಕೆ ಪಣಿಯರೆಂದೂ ಕರೆಯುತ್ತಾರೆ. ಇವರ ಸಂಖ್ಯೆ ತುಂಬ ಕಡಿಮೆಯಿದ್ದು ಮಧ್ಯ ಕೊಡಗಿನಲ್ಲಿ ಹೆಬ್ಬಾಲೆ, ದೇವರ ಕಾಡುಗಳಲ್ಲಿ ಕಂಡುಬರುತ್ತಾರೆ. ಇವರು ಕಾಗೆಯನ್ನು ತಿನ್ನುವುದರಿಂದ ಈ ಹೆಸರು ಬಂದಿರಬಹುದೆಂಬ ಅಭಿಪ್ರಾಯವೂ ಇದೆ. ಇವರು

ಕೊಡವರಂತೆ ಸೀರೆಯುಡುತ್ತಾರೆ, ಪಣೆಯೆರವರನ್ನು ಹೋಲುತ್ತಾರೆ. ಇವರ ಸಂಖ್ಯೆ ಸುಮಾರು ನೂರಿನ್ನೂರಿರಬಹುದೆಂದು ಅಂದಾಜು ಮಾಡಲಾಗಿದೆ.

### ಲಿಂಗಾಯತರು

ಲಿಂಗಾಯಿತರನ್ನು ವೀರಶೈವರೆಂದು ಕರೆಯುತ್ತಾರೆ. ಕೊಡಗು ಜಿಲ್ಲೆಯಲ್ಲಿ ಎರಡನೇಯ ಹಿಂದುಳಿದ ವರ್ಗಗಳ ಆಯೋಗದ ಅಂದಾಜಿನ ಪ್ರಕಾರ 1984ರಲ್ಲಿ 16,621 ಜನರು ವೀರಶೈವ ವರ್ಗಕ್ಕೆ ಸೇರಿದ್ದರು. ವೀರಶೈವ ಎನ್ನುವುದು ಒಂದು ಜಾತಿ ಸೂಚಕವಲ್ಲ. ವೀರಶೈವರಲ್ಲಿ ಅನೇಕ ಉದ್ಯೋಗಗಳನ್ನು ಮಾಡುವ ಜನರಿದ್ದು ಹಲವು ಒಳಗುಂಪುಗಳಿವೆ. ಚೆಂಗಾಳ್ವರ ಕಾಲದಿಂದ ಜಿಲ್ಲೆಯಲ್ಲಿ ವೀರಶೈವರು ಇದ್ದರೂ ಕೊಡಗಿನ ಒಡೆಯರ ಕಾಲದಲ್ಲಿ ಜಿಲ್ಲೆಗೆ ವೀರಶೈವರು ಹೆಚ್ಚು ಹೆಚ್ಚಾಗಿ ವಲಸೆ ಬಂದಿರಬಹುದೆಂಬ ಅಭಿಪ್ರಾಯವಿದೆ. ಮೂರನೇ ಮೈಸೂರು ಯುದ್ಧದ ಸಮಯದಲ್ಲಿ ಟಿಪ್ಪುಸುಲ್ತಾನನ ಕೋಪಕ್ಕೆ ಗುರಿಯಾಗಿ ಅನೇಕ ಮಂದಿ ವೀರಶೈವ ವರ್ತಕರು ಪಿರಿಯಾ ಪಟ್ಟಣದ ಕಡೆಯಿಂದ ಜಿಲ್ಲೆಯೊಳಕ್ಕೆ ವಲಸೆ ಬಂದರು. ಇವರಲ್ಲಿ ಕೆಲವರು ವೀರರಾಜಪೇಟೆಗೂ ಬಂದು ನೆಲೆಸಿದರು. ಕೊಡಗಿನ ರಾಜನು ವೀರರಾಜಪೇಟೆಯಲ್ಲಿ ಅವರಿಗೆ ಬಸವೇಶ್ವರ ದೇವಸ್ಥಾನವನ್ನೂ ಜಂಗಮ ಮಠವನ್ನು ಕಟ್ಟಿಸಿಕೊಟ್ಟನು. ಜಿಲ್ಲೆಯಲ್ಲಿ ವೀರಶೈವರು ಹೆಚ್ಚಾಗಿ ಮೈಸೂರು, ಹಾಸನ ಜಿಲ್ಲೆಯ ಗಡಿ ಪ್ರದೇಶವಾದ ಸೋಮವಾರಪೇಟೆ ತಾಲೂಕಿನಲ್ಲಿ ಕಂಡುಬರುತ್ತಾರೆ. ಇವರ ಸಂಖ್ಯೆ ವೀರರಾಜಪೇಟೆಯಲ್ಲಿ ತುಂಬಾ ಕಡಿಮೆ. ಸೋಮವಾರಪೇಟೆಯಲ್ಲಿರುವ ವೀರಶೈವರಲ್ಲಿ ಹೆಚ್ಚಾಗಿ ಶೆಟ್ಟಿ (ಬಣಜಿಗ)ರು, ಗೌಡ (ಕೃಷಿಕ)ರ ವರ್ಗಕ್ಕೆ ಸೇರಿದವರಾಗಿದ್ದಾರೆ. ಕುಂಬಾರ ವೀರಶೈವರೂ ಕೆಲವರಿದ್ದಾರೆ. ಕೊಡ್ಲಿಪೇಟೆ, ಶನಿವಾರ ಸಂತೆಗಳಲ್ಲಿ ವೀರಶೈವರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದೆ. ಜಿಲ್ಲೆಯ ವೀರಶೈವರ ಆಚಾರ, ವಿಚಾರ ಸಂಪ್ರದಾಯಗಳಿಗೂ ಬೇರೆ ಜಿಲ್ಲೆಗಳ ವೀರಶೈವರ ಆಚಾರ ವಿಚಾರ ಸಂಪ್ರದಾಯಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಜಿಲ್ಲೆಯಲ್ಲಿ ಒಂದು ಕಾಲಕ್ಕೆ 64 ವೀರಶೈವ ಮಠಗಳಿದ್ದವೆಂದು ಹೇಳುತ್ತಾರೆ (ಮಠಗಳನ್ನು ನೋಡಿ). ಸೋಮವಾರಪೇಟೆ ತಾಲೂಕು ತೊರೆನೂರಿನಲ್ಲಿ ಕಂಚಗಟಗ ಲಿಂಗಾಯಿತರಿದ್ದಾರೆ. ಇದೇ ತಾಲೂಕಿನ ಬೀಕಳ್ಳಿ, ಕಿತ್ತೂರು, ಹೆಬ್ಬುಲಸೆ, ನಾಕಲಗೋಡುಗಳಲ್ಲಿ ಜಂಗಮರು ಕಂಡು ಬರುತ್ತಾರೆ.

### ವೈಶ್ಯರು

ವೈಶ್ಯರು ಕುಶಾಲನಗರದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. (ಇವರು ಪಿರಿಯಾಪಟ್ಟಣದಿಂದ ಹೆಚ್ಚಾಗಿ ಬಂದವರು). ಇವರನ್ನು ಕೋಮಟಿಗಳೆಂದೂ, ಶೆಟ್ಟರೆಂದೂ ಕರೆಯುತ್ತಾರೆ. ಮಡಿಕೇರಿ, ರಾಮಸ್ವಾಮಿ ಕಣಿವೆ, ಸೋಮವಾರಪೇಟೆಗಳಲ್ಲಿಯೂ ಇವರು ವಾಸಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ 1984ರಲ್ಲಿ 2,077 ಇದ್ದಿರಬಹುದೆಂದು ಅಂದಾಜು ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 85 ಕುಟುಂಬಗಳಿವೆಯೆಂದು ತಿಳಿದು ಬಂದಿದೆ. ಇವರಲ್ಲಿ ಬಹಳ ಮಂದಿ ವ್ಯಾಪಾರಸ್ಥರು. ಕೆಲವರು ಕಾಫಿ, ಏಲಕ್ಕಿ ಕಿತ್ತಳೆ ತೋಟಗಳ ಮಾಲಿಕರೂ ಆಗಿದ್ದಾರೆ. ಮನೆಯಲ್ಲಿ ತೆಲುಗು ಮಾತನಾಡುತ್ತಾರೆ. ಜಾತಿಯ ಕುಲದೇವತೆ ಕನ್ನಿಕಾಪರಮೇಶ್ವರಿ. ಬ್ರಾಹ್ಮಣರಂತೆ ಗೋತ್ರಗಳನ್ನು ಹೊಂದಿದ್ದು ಧಾರ್ಮಿಕ ಕಾರ್ಯಗಳಿಗೆ ಬ್ರಾಹ್ಮಣರನ್ನು ಕರೆಸುತ್ತಾರೆ. ವೈದಿಕ ಸಂಪ್ರದಾಯಗಳನ್ನು ಅನುಸರಿಸುತ್ತಾರೆ. ಹೆಸರಿನ ಮುಂದೆ ಶೆಟ್ಟಿ, ಗುಪ್ತ ಎಂದು ಸೇರಿಸಿಕೊಳ್ಳುತ್ತಾರೆ. ಮೆಂಡ್ಲಿ ಕುಲ, ಪೈದು ಕುಲ, ಯಲ್ಲಶೆಟ್ಲ ಮೊದಲಾದ ಒಳಪಂಗಡಗಳು ಇವರಲ್ಲಿ ಇವೆ. ಇವರ ಸಂಪ್ರದಾಯ ಆಚಾರ ವಿಚಾರಗಳು ಬ್ರಾಹ್ಮಣರ ಸಂಪ್ರದಾಯ ಆಚಾರ, ವಿಚಾರಗಳನ್ನು ಹೋಲುತ್ತವೆ. ಧಾರ್ಮಿಕ ಕಾರ್ಯಗಳಿಗೆ ಅವರಲ್ಲೇ ಪುರೋಹಿತರಿದ್ದಾರೆ. ಬೆಂಗಳೂರಿನ ಜಯನಗರದಲ್ಲಿ ಅವರದೇ ಒಂದು ವೇದ ಪಾಠಶಾಲೆ ಇದೆ. ಇವರಿಗೂ ಬೇರೆ ಜಿಲ್ಲೆಗಳ ವೈಶ್ಯರಿಗೂ ವ್ಯತ್ಯಾಸವಿಲ್ಲ.

### ವಿಶ್ವಕರ್ಮ

ಕೊಡಗು ಜಿಲ್ಲೆಯಲ್ಲಿ ವಿಶ್ವಕರ್ಮ ಗುಂಪಿಗೆ ಸೇರಿದವರು ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ಈ ಗುಂಪಿನಲ್ಲಿ ತುಳು ಕನ್ನಡ, ಮಲೆಯಾಳಿ, ತೆಲುಗು, ಕೊಂಕಣಿ, ತಮಿಳು ಮಾತನಾಡುವವರಿದ್ದಾರೆ. ಇವರು ದಕ್ಷಿಣ ಕನ್ನಡ, ಮೈಸೂರು, ಹಾಸನ ಜಿಲ್ಲೆಗಳಿಂದಲೂ, ಮಲಬಾರು, ತಮಿಳುನಾಡಿನ ಕಡೆಯಿಂದಲೂ ವಲಸೆ ಬಂದವರಾಗಿದ್ದಾರೆ. ಜಿಲ್ಲೆಯಲ್ಲಿ ಇವರ ಸಂಖ್ಯೆ 1984ರಲ್ಲಿ 5,356 ಇದ್ದಿರಬಹುದೆಂದು ರಾಜ್ಯದ ಎರಡನೇಯ ಹಿಂದುಳಿದ ವರ್ಗಗಳ ಆಯೋಗ ತಿಳಿಸುತ್ತದೆ. ವಿಶ್ವಕರ್ಮ ಜಾತಿಯ ಜನರನ್ನು ಪಾಂಚಾಲರೆಂದೂ ಕರೆಯುತ್ತಾರೆ. ಇವರಲ್ಲಿ ಚಿನ್ನ, ಬೆಳ್ಳಿ, ಕೆಲಸ ಮಾಡುವ ಅಕ್ಕಸಾಲಿಗಳು, ಕಂಚು, ಹಿತ್ತಾಳೆ ಕೆಲಸ ಮಾಡುವ ಕಂಚುಗಾರರೂ, ಕಬ್ಬಿಣದ ಕೆಲಸ ಮಾಡುವ ಕಮ್ಮಾರರೂ, ಮರದ ಕೆಲಸ ಮಾಡುವ ಬಡಗಿಗಳೂ ಮತ್ತು ಶಿಲ್ಪದ ಕೆಲಸ ಮಾಡುವ ಶಿಲ್ಪಿಗಳೂ ಸೇರಿದ್ದಾರೆ.

ವಿಶ್ವಬ್ರಹ್ಮನ ಐದುಮುಖಗಳಿಂದ ಹುಟ್ಟಿದ ಮನು, ಮಯ, ತ್ವಷ್ಟ, ಶಿಲ್ಪಿ ಮತ್ತು ವಿಶ್ವಜ್ಞ ಋಷಿಗಳ ಮಕ್ಕಳಾದ ಸನಕ, ಸನಂದನ, ಅಹಭೂವನ, ಪ್ರಾತ್ನಸ ಮತ್ತು ಸುಪರ್ಣರು ಪಾಂಚಾಲರ ಗೋತ್ರಕಾರರೆಂದೂ, ಇವರಿಂದ ಮುಂದೆ 125 ಗೋತ್ರಗಳು ಹುಟ್ಟಿಪವೆಂದೂ ಹೇಳುತ್ತಾರೆ. ಪಾಂಚಾಲರ ಕುಲದೇವತೆ ಕಾಳಿಕಾದೇವಿ. ಇವರು ಉಪನಯನ ಮಾಡಿಕೊಂಡು ಯಜ್ಞೋಪವೀತ ಧರಿಸುತ್ತಾರೆ.

ತುಳು ಮಾತನಾಡುವವರು ದಕ್ಷಿಣ ಕನ್ನಡದ ಕಡೆಯಿಂದ ವಲಸೆ ಬಂದವರು. ಇವರು ಇತ್ತೀಚಿನ ದಿನಗಳಲ್ಲಿ ಕನ್ನಡ ಮಾತನಾಡುವ ಪಾಂಚಾಲರೊಡನೆ ವಿವಾಹ ಸಂಬಂಧ ಮಾಡುತ್ತಿದ್ದಾರೆ. ಇವರಲ್ಲೂ ಮೇಲೆ ತಿಳಿಸಿದ ಐದು ಗೋತ್ರಗಳುಂಟು. ವಿವಾಹದಲ್ಲಿ ಗಂಡಿನ ಕಡೆಯವರು ಹೆಣ್ಣನ್ನು ಹುಡುಕಿಕೊಂಡು ಹೋಗುತ್ತಾರೆ. ವರದಕ್ಷಿಣೆ ಪದ್ಧತಿ ಇತ್ತೀಚೆಗೆ ಶುರುವಾಗಿದೆ. ವಿವಾಹದಲ್ಲಿ ಧಾರೆ, ತಾಳಿ ಕಟ್ಟುವುದು, ಹೋಮಗಳು, ಸಪ್ತಪದಿ ಮೊದಲಾದವುಗಳುಂಟು. ಅವರಲ್ಲೇ ಪುರೋಹಿತ ವರ್ಗವಿದೆ. ಪುರೋಹಿತರನ್ನು ಮಂಗಳೂರು ಕಡೆಯಿಂದ ಕರೆಸುತ್ತಾರೆ. ಕೊಡವರ ಹಬ್ಬಗಳ ಜೊತೆಗೆ, ಯುಗಾದಿ, ನವರಾತ್ರಿ, ದೀಪಾವಳಿ, ಸಂಕ್ರಾಂತಿಗಳನ್ನೂ ಆಚರಿಸುತ್ತಾರೆ. ಉಪಾಕರ್ಮವನ್ನು ಆಚರಿಸುತ್ತಾರೆ. ಹೆಚ್ಚಾಗಿ ಮಂಗಳೂರಿನ ಕಾಳಿಕಾಂಬ ದೇವಸ್ಥಾನಕ್ಕೆ ಹೋಗುತ್ತಾರೆ. ಇವರು ಶವಗಳನ್ನು ಸುಡುತ್ತಾರೆ. ಸತ್ತ ಮೂರನೆಯದಿನ ಬೂದಿಯನ್ನು ಒಪ್ಪಮಾಡಿ ನದಿಗೆ ಬಿಡುತ್ತಾರೆ. ಸತ್ತಾಗ ಹತ್ತು ದಿನ ಸೂತಕ ಆಚರಿಸುತ್ತಾರೆ, ಹನ್ನೆರಡನೇಯ ದಿನ ಶ್ರಾದ್ಧ ಮಾಡುತ್ತಾರೆ. ಸತ್ತವರಿಗೆ ಪ್ರತೀವರ್ಷ ಶ್ರಾದ್ಧ ಮಾಡುತ್ತಾರೆ. ಮಹಾಲಯ ಪಕ್ಷದಲ್ಲಿ ಪಿತೃಗಳಿಗೆ ತರ್ಪಣ ಬಿಡುತ್ತಾರೆ. ಇವರು ಚಾಂದ್ರಮಾನ ಪಂಚಾಂಗವನ್ನು ಅನುಸರಿಸುತ್ತಾರೆ. ಮಂಗಳೂರಿನ ಕಾಳಿಕಾ ದೇವಾಲಯದವರು ಮುಕ್ತೇಸರರನ್ನು ನೇಮಿಸುತ್ತಾರೆ. ಇವರು ಸಮಾಜದ ಜಗಳಗಳನ್ನು ತೀರ್ಮಾನಿಸುವರು. ಇವರ ಕಸುಬಿನಲ್ಲಿ ಹೆಚ್ಚು ಬದಲಾವಣೆ ಕಂಡುಬಂದಿಲ್ಲ. ಕೈಕೆಲಸಕ್ಕೆ ಹೆಚ್ಚಾಗಿ ಯಂತ್ರಗಳನ್ನು ಉಪಯೋಗಿಸುವುದರಿಂದ ಕೆಲಸ ಸುಲಭವಾಗಿದೆ. ಕನ್ನಡ ಮತ್ತು ತುಳು ಮಾತನಾಡುವ ವಿಶ್ವಕರ್ಮ ಸಮಾಜದವರು ಜಿಲ್ಲೆಯಲ್ಲಿ ಒಂದು ಸಂಘವನ್ನು ಸ್ಥಾಪಿಸಿದ್ದಾರೆ.

ಕೊಡವ ಭಾಷೆಯಲ್ಲಿ ಚಿನ್ನ, ಬೆಳ್ಳಿ ಕೆಲಸ ಮಾಡುವ ಜನರನ್ನು ತಟ್ಟರೆಂದು ಕರೆಯುತ್ತಾರೆ. ಇದು ಉದ್ಯೋಗದ ಹೆಸರಾಗಿದ್ದು ಜಾತಿಯನ್ನು ಸೂಚಿಸುವುದಿಲ್ಲ. ಇವರಲ್ಲಿ ಕನ್ನಡ, ತೆಲುಗು, ತುಳು, ಮಲೆಯಾಳೀ ಮತ್ತು ತಮಿಳು ಮಾತನಾಡುವವರಿದ್ದಾರೆ. ಮಲೆಯಾಳೀ ಮಾತನಾಡುವ ಮರದ ಕೆಲಸಗಾರರನ್ನು ತಚ್ಚೇರಿಗಳೆಂದು ಕರೆಯುತ್ತಾರೆ. ಮಲೆಯಾಳೀ ಮಾತನಾಡುವ ಕಬ್ಬಿಣದ ಕೆಲಸಗಾರರನ್ನು ಕೊಲ್ಲರೆಂದೂ, ಇರಂಬುತಟ್ಟಿಗಳೆಂದೂ ಕರೆಯುತ್ತಾರೆ. ಇವರಲ್ಲದೆ ಹೊರಗಡೆಯಿಂದ ಬಂದ ವಿಭಿನ್ನ ಜಾತಿಗೆ ಸೇರಿದ ಲೋಹದ ಪಾತ್ರೆ ರಿಪೇರಿ ಮಾಡುವವರನ್ನು ಚಂಬುಕುಟ್ಟಿಗಳೆಂದು ಕರೆಯುತ್ತಾರೆ. ಹೆಚ್ಚಾಗಿ ಕ್ರಿಶ್ಚಿಯನ್ನರು ಈ ಉದ್ಯೋಗದಲ್ಲಿದ್ದಾರೆ. ಜಿಲ್ಲೆಯಲ್ಲಿ ಮೊದಲಿನಿಂದಲೂ ಚಿನ್ನ, ಬೆಳ್ಳಿ ಕೆಲಸ ಮಾಡುತ್ತಿದ್ದವರು ಐರಿಗಳು. ಇವರು ಕೊಡವರಂತೆಯೇ ಜಿಲ್ಲೆಯಲ್ಲಿ ಆಚಾರ, ವಿಚಾರ, ಭಾಷೆ, ಸಂಸ್ಕೃತಿಯನ್ನು ಹೊಂದಿದ್ದಾರೆ (ವಿವರಗಳಿಗೆ ನೋಡಿ : ಐರಿಗಳು).

ಮಡಿಕೇರಿ ಮೊದಲಾದ ಕಡೆಗಳಲ್ಲಿ ಕೊಂಕಣಿ ಮಾತನಾಡುವ ಚಿನ್ನ, ಬೆಳ್ಳಿ ಕೆಲಸ ಮಾಡುವ ದೈವಜ್ಞ ಬ್ರಾಹ್ಮಣರಿದ್ದಾರೆ. ಇವರು ಗೋವಾ ಮೂಲದವರು. ಈ ಜಿಲ್ಲೆಗೆ ಪಕ್ಕದ ಜಿಲ್ಲೆಗಳಿಂದ ವಲಸೆ ಬಂದವರು. ಇವರು ತಮ್ಮದೇ ಒಂದು ಸಂಘವನ್ನು ಜಿಲ್ಲೆಯಲ್ಲಿ ಸ್ಥಾಪಿಸಿಕೊಂಡಿದ್ದಾರೆ. ಇವರಲ್ಲಿ ವಶಿಷ್ಠ, ವಿಶ್ವಾಮಿತ್ರ, ಕಶ್ಯಪ ಮೊದಲಾದ ಗೋತ್ರಗಳಿವೆ. ಇವರು ಋಗ್ವೇದಿಗಳಾಗಿದ್ದು ಅಶ್ವಲಾಯನ ಸೂತ್ರ ಮತ್ತು ಶಾಕಲ ಶಾಖೆಗೆ ಸೇರಿದವರಾಗಿದ್ದಾರೆ. ಧಾರ್ಮಿಕ ಕಾರ್ಯಗಳಿಗೆ ಅವರಲ್ಲೇ ಪುರೋಹಿತ ವರ್ಗವಿದೆ.

### ಹೊಲೆಯ

ಹೊಲೆಯರು (ಪರಿಶಿಷ್ಟ ಜಾತಿಯವರು) ಜಿಲ್ಲೆಯ ಆದಿವಾಸಿಗಳಲ್ಲಿ ಒಬ್ಬರು. ಇವರನ್ನು ಪೊಲೆಯ ಎಂದೂ ಕರೆಯುತ್ತಾರೆ. ಕೊಡಗಿನಲ್ಲಿ ಹಿಂದೆ ಹೊಲೆಯರನ್ನು ಕೃಷಿ ಗುಲಾಮರ (ಜಮ್ಮದಾಳು) ನ್ನಾಗಿ ಮಾಡಿಕೊಂಡಿದ್ದರು. ರಾಜನು ಜಮ್ಮ ಭೂಮಿ ಕೊಟ್ಟ ಸೈನಿಕರಾದಿಯಾಗಿ ಸರಕಾರೀ ನೌಕರರಿಗೆ ಅವರು ಸರಕಾರೀ ಕಾರ್ಯ ನಡೆಸಲು ಮುಕ್ತರಾಗಿರಬೇಕೆಂದು ಸಾಗುವಳಿ ಕೆಲಸಗಳಿಗಾಗಿ ಕೊಡುತ್ತಿದ್ದ ಗುಲಾಮವರ್ಗಗಳಲ್ಲಿ ಇವರೂ ಸೇರಿದ್ದರು. ಗುಲಾಮರಲ್ಲಿ ಪೊನ್ನು (ಒಕ್ಕಲು) ಮತ್ತು ಮಣ್ಣು (ಭೂಮಿ) ಎಂದು ಎರಡು ಬಗೆಯಿದ್ದು ಮೊದಲನೆ ವರ್ಗದವರನ್ನು ಹಸ್ತಾಂತರ ಮಾಡಬಹುದಾಗಿತ್ತು. ಇವರು ಓಡಿಹೋದರೆ ಹಿಡಿದು ತಂದು ಶಿಕ್ಷಿಸುತ್ತಿದ್ದರು. ಎರಡನೇಯ ವರ್ಗ ಒಂದು ಹಿಡುವಳಿಗೆ ಬದ್ಧರು. ಇವರ ಕುಟುಂಬಗಳನ್ನು ರಕ್ಷಿಸುವ ಜವಾಬ್ದಾರಿ ಇವರ ಧಣಿಯದಾಗಿತ್ತು. ಈ ಧಣಿಗಳು ಜಿಲ್ಲೆಯಲ್ಲಿ ಹೊಲೆಯರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆಂದು ಅಂದಿನ ಕಾಗದ ಪತ್ರಗಳಿಂದ ತಿಳಿದುಬರುತ್ತದೆ. ರಾಜರು ಅನೇಕ

ಮಂದಿಯನ್ನು ತಮ್ಮ ಅರಮನೆಯ ಕಾವಲಿಗೆ ಪಡೆದುಕೊಂಡಿದ್ದರು. (ಚಿಕ್ಕವೀರರಾಜೇಂದ್ರನ ವಶದಲ್ಲಿ 1,750 ಜಮ್ಮದಾಳುಗಳು ಇದ್ದರು). ಬ್ರಿಟಿಷರು ಕೊಡಗನ್ನು ತಾವು ಗೆದ್ದ ನಂತರ ಅನೇಕ ಬದಲಾವಣೆಗಳಾದವು. ಕೆಲವು ಜಮ್ಮದಾಳುಗಳು ತಕ್ಷಣ ಜಿಲ್ಲೆಯನ್ನು ಬಿಟ್ಟು ಓಡಿ ಹೋದರು. ಹೊಲೆಯರು ಕಾಫಿ ತೋಟಗಳಿಗೆ ಕೆಲಸಕ್ಕೆ ಹೋಗತೊಡಗಿದರು. ಆಂಗ್ಲರ ಕಾಫಿತೋಟಗಳಿಗೆ ಓಡಿ ಹೋದ ಕಾರ್ಮಿಕರನ್ನು ಒಡೆಯರು ಹಿಂದಕ್ಕೆ ಕರೆಸಿ ಶಿಕ್ಷಿಸಲು ಅಸಾಧ್ಯವಾಯಿತು. ಕೊಡಗಿನಲ್ಲಿ 1843ರಲ್ಲಿ ಗುಲಾಮಗಿರಿಯನ್ನು ತೆಗೆದುಹಾಕಲಾಯಿತು. ಕೆ. ಎಲ್. ಅನಂತಕೃಷ್ಣ ಅಯ್ಯರ್‌ರವರು ಕೊಡಗಿನ ಹೊಲೆಯರಲ್ಲಿ ಎಂಟು ಒಳಗುಂಪುಗಳನ್ನು ಹೇಳುತ್ತಾರೆ. ಕೆಂಬಟ್ಟಿ ಹೊಲೆಯರು, ಕಾಪಲ ಹೊಲೆಯರು, ಎಡಗೈ ಹೊಲೆಯರು, ಮರ್ತ್ತ ಹೊಲೆಯರು, ಮಲಯರು, ಅಡಿಯರು, ಮಾರಂಗಿಗಳು, ಬಲಗೈ ಹೊಲೆಯರು ಇವೇ ಆ ಎಂಟು ಒಳಗುಂಪುಗಳು. ಇವಲ್ಲದೆ ಮುಂಡ ಪಾತಿ, ಮಾರಿ, ಕುಕ್ಕೆ ಮುಂತಾದ ಜಾತಿಗಳೂ ಇವರಲ್ಲಿ ಇವೆ. ಇವರಲ್ಲಿ ಕೆಂಬಟ್ಟಿ ಹೊಲೆಯರು ಮೂಲತಃ ಜಿಲ್ಲೆಯವರೇ ಆಗಿದ್ದು ಕಾಪಳರು, ಮಾರಂಗಿಗಳು ಮತ್ತು ಮಲಯರು ಮಲಬಾರಿನಿಂದ ವಲಸೆ ಬಂದವರಾಗಿರುತ್ತಾರೆ. ಇವರು ಕೊಡವ ಭಾಷೆಯನ್ನಾಡುವುದರ ಜೊತೆಗೆ ಆಹಾರ, ಉಡುಪು, ಸಂಪ್ರದಾಯಗಳಲ್ಲೂ ಕೊಡವರನ್ನು ಹೋಲುತ್ತಾರೆ. ಮರ್ತ್ತರು ಮಲೆಯಾಳಿ ಭಾಷೆಯನ್ನಾಡುತ್ತಾರೆ. ಎಡಗೈ ಮತ್ತು ಬಲಗೈ ಹೊಲೆಯರು ಮೈಸೂರು ಹಾಸನ ಜಿಲ್ಲೆಗಳಿಂದ ಬಂದವರಾಗಿದ್ದು ಕನ್ನಡ ಮಾತನಾಡುತ್ತಾರೆ. ಹೊಲೆಯರು ಮಾರಮ್ಮನನ್ನು ಪೂಜಿಸುತ್ತಾರೆ. ಇವರು ಚರ್ಮದ ಕೆಲಸ ಮಾಡುತ್ತಾರೆ. ಕೃಷಿ ಕಾರ್ಮಿಕರೂ ಆಗಿದ್ದಾರೆ. ಹೊಲೆಯರು ಕುಟ್ಟ ಕರಿಂಗಾಳಿಯಮ್ಮ, ಚಾಮುಂಡಿ, ಸಿದ್ದೇಶ್ವರ, ಪರೀಂದ್ರ ಕೋಲಪ್ಪ, ಸೋಮೇಶ್ವರ ಮೊದಲಾದ ದೇವ ದೇವತೆಗಳನ್ನು ಪೂಜಿಸುತ್ತಾರೆ. ಸಮಾಜದ ಹಿರಿಯ ಅಥವಾ ಯಜಮಾನ ಪೂಜಾರಿಯಂತೆ ವರ್ತಿಸುತ್ತಾನೆ. ಸಾಮಾನ್ಯವಾಗಿ ಇವರು ಶವವನ್ನು ಹೂಳುತ್ತಾರೆ.

ಅದಿದ್ರಾವಿಡರೆಂದು ಕರೆಸಿಕೊಳ್ಳುವ ಪರಿಶಿಷ್ಟ ಜಾತಿಗೆ ಸೇರಿದವರು ಜಿಲ್ಲೆಯ ಎಲ್ಲಾ ಕಡೆಯೂ ಇದ್ದಾರೆ. ಇವರು ಮನೆಯಲ್ಲಿ ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಆದಿ ಕರ್ನಾಟಕರೊಂದಿಗಾಗಲೀ ಹೊಲೆಯರೊಂದಿಗಾಗಲೀ ವಿವಾಹ ಸಂಬಂಧವನ್ನು ಇವರು ಇಟ್ಟುಕೊಂಡಿಲ್ಲ. ಇವರು ಹುಣಸೂರು ಮಂಡ್ಯ, ಮೈಸೂರು ಕಡೆ ಸಂಬಂಧ ಬೆಳೆಸುತ್ತಾರೆ. ಇವರಲ್ಲಿ ಧಾರೆ ಎರೆದು ವಿವಾಹ ಮಾಡುವುದಲ್ಲದೆ, ತೆರಪದ್ಧತಿಯೂ ರೂಢಿಯಲ್ಲಿದೆ. ಮದುವೆಯನ್ನು ಹೆಣ್ಣಿನ ಮನೆಯಲ್ಲಿ ಮಾಡುತ್ತಾರೆ. ಮಾರಮ್ಮನನ್ನು ಪೂಜಿಸುತ್ತಾರೆ. ಹೆಚ್ಚಾಗಿ ಇವರು ಸರ್ಕಾರಿ ಕೆಲಸಗಳಲ್ಲಿದ್ದಾರೆ. ಕೆಲವರು ತೋಟದ ಕೆಲಸಗಳನ್ನು ಮಾಡುತ್ತಾರೆ. ಇನ್ನೂ ಕೆಲವರು ರಸ್ತೆ ಕೆಲಸದಲ್ಲಿ ಕಾರ್ಮಿಕರಾಗಿದ್ದಾರೆ. ಇವರಲ್ಲಿ ಹುಟ್ಟಿದಾಗ, ಸತ್ತಾಗ ಕುಟುಂಬದವರು ಹನ್ನೊಂದು ದಿನ ಮೈಲಿಗೆಯನ್ನು ಆಚರಿಸುತ್ತಾರೆ. ಸತ್ತವರನ್ನು ಹೂಳುತ್ತಾರೆ.



### ಇತರ ಕಿರುಜಾತಿಗಳು

ಭಾಗಮಂಡಲ, ಪಾಡಿ, ಇರ್ಪು ಮೊದಲಾದ ಸ್ಥಳಗಳ ದೇವಸ್ಥಾನಗಳಲ್ಲಿ ಕೆಲಸ ಮಾಡುವ ಅಂಬಲ ವಾಸಿಗಳೂ ಪದಾರ್ತಿಗಳೂ ಇದ್ದಾರೆ. ಇವರು ಸಸ್ಯಾಹಾರಿಗಳು. ಅಂಬಲವಾಸಿಗಳು ದೇವಸ್ಥಾನದ ಒಳ ಅಂಗಳಗಳನ್ನು ಗುಡಿಸುತ್ತಾರೆ. ಇವರಲ್ಲಿ ಕೈದೀಪ ಹಿಡಿಯುವವರನ್ನು ಮುಕ್ಕಾಟಿಗಳೆಂದೂ, ಹೂವು ಕಟ್ಟುವವರನ್ನು ಮಾಲೆ ಮುಕ್ಕಾಟಿಗಳೆಂದೂ ಕರೆಯುತ್ತಾರೆ. ಇವರ ಮನೆ ಮಾತು ತುಳು. ಪದಾರ್ತಿಗಳು ದೇವಸ್ಥಾನಗಳಲ್ಲಿ ಚಂಡೆ ಹೊಡೆಯುತ್ತಾರೆ. ಇವರನ್ನು ಮಾರಾಯರೆಂದೂ ಕರೆಯುತ್ತಾರೆ. ಇವರ ಮನೆ ಮಾತು ತುಳು. ಇತ್ತೀಚೆಗೆ ವಲಸೆ ಬಂದವರಲ್ಲಿ ಕೇರಳದ 'ನಾಯರು'ಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯ ಪ್ರಕಾರ 1984ರಲ್ಲಿ ಜಿಲ್ಲೆಯಲ್ಲಿ ನಾಯರುಗಳ ಸಂಖ್ಯೆ 11,270 ಇದ್ದಿರಬಹುದೆಂದು ತಿಳಿಸಲಾಗಿದೆ. ಹೀಗೆ ವಲಸೆ ಬಂದಿರುವವರು ಇಲ್ಲಿಯ ಜಮೀನು ತೋಟಗಳನ್ನು ಖರೀದಿಸಿ ಇಲ್ಲಿಯೇ ನೆಲೆಸಿದ್ದಾರೆ. ತಮಿಳುನಾಡಿನ ಕಡೆಯಿಂದ ವಲಸೆ ಬಂದವರಲ್ಲಿ ಮೊದಲಿಯಾರರು ಇದ್ದಾರೆ. ಇವರು ಹೆಚ್ಚಾಗಿ ವ್ಯಾಪಾರ ಮಾಡುತ್ತಾರೆ, ಹಾಗೂ ಉದ್ಯೋಗಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಇವರ ಸಂಖ್ಯೆ 1984ರಲ್ಲಿ 2,043 ಇದ್ದಿರಬಹುದೆನ್ನಲಾಗಿದೆ.

ಮೈಸೂರು ಕಡೆಯಿಂದ ವಲಸೆ ಬಂದವರಲ್ಲಿ ಬೇಡರು (ನಾಯಕರು) ಇದ್ದಾರೆ. ಬೇಡರು ಸ್ವಭಾವತಃ ಬೇಟೆಗಾರರು. ಬೇಡರಲ್ಲಿ ಅನೇಕ ಒಳಗುಂಪುಗಳಿವೆ. ವರ್ಷದ ಕೆಲವು ಕಾಲಗಳಲ್ಲಿ ಮಾತ್ರ ಜಿಲ್ಲೆಯಲ್ಲಿ ಕಾಣಿಸಿಕೊಳ್ಳುವ ಜನರನ್ನು ಋತುಮಾನದ ಅಲೆಮಾರಿಗಳೆಂದು ಕರೆಯಬಹುದು. ಅಂತಹವರಲ್ಲಿ ಪ್ರಾಣಿಜನ್ಯ ಔಷಧಿಗಳನ್ನು ಮಾರುವ ಕೊರಮರು, ಹಾವುಗಳನ್ನು ಆಡಿಸುವ ಹಾವಾಡಿಗರು (ಪಾಕೊಂಗ), ಬಸವನಾಟವಾಡಿಸುವ ಕಾದಿಕೊಂಗರು, ಕರಡಿಯಾಡಿಸುವ ಕರಡಿಕೊಂಗರು ಮಂಗನಾಟವಾಡಿಸುವವರು, ದೊಂಬರು, ಬುಡುಬುಡುಕಿಯರು ಬುಂಡೆಬೆಸ್ತರು, ದುರ್ಗಮುರ್ಗಿಗಳು ಮೊದಲಾದವರಿದ್ದಾರೆ.

ಭಾಗಮಂಡಲದಲ್ಲಿ ಕೆಲವು ದಾಸರ ಕುಟುಂಬಗಳಿವೆ. ಇವರು ವೈಷ್ಣವ ಸಂಪ್ರದಾಯದವರು. ಇತರ ಜಿಲ್ಲೆಗಳ ದಾಸರಂತೆ ಭಿಕ್ಷೆ ಬೇಡುತ್ತಾರೆ. ಗೌಡರು ಮೊದಲಾದವರು ಇವರನ್ನು ಹರಿಸೇವೆ, ಮಣಿಸೇವೆಗಳಿಗೆ ಕರೆಯುತ್ತಾರೆ.

ತೆಲುಗು ಮಾತನಾಡುವ ಕಲ್ಲೊಡ್ಡರು, ಮಣ್ಣು ಒಡ್ಡರು ಮೈಸೂರು ಹಾಸನದ ಕಡೆಯಿಂದ ವಲಸೆ ಬಂದವರು. ಜಿಲ್ಲೆಯಲ್ಲಿ ಇವರ ಸಂಖ್ಯೆ ಬಹಳ ಕಡಿಮೆ. ಕರ್ನಾಟಕ ಸರ್ಕಾರದ ಮೊದಲನೇ ಹಿಂದುಳಿದ ವರ್ಗಗಳ ಆಯೋಗದ ವರದಿಯಲ್ಲಿ ಜಿಲ್ಲೆಯ ಕೆಲವು ವಿರಳ ಜಾತಿಗಳ ಹೆಸರುಗಳನ್ನು ಕೊಟ್ಟಿದೆ. ಆ ಜಾತಿಗಳ ಹೆಸರು ಮತ್ತು 1931ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಆ ಜಾತಿಗಳ ಸಂಖ್ಯೆಯನ್ನು ಆವರಣದಲ್ಲಿ ಕೊಡಲಾಗಿದೆ. ಅಗ್ನಾನಿ (132), ಅರ್ಯನ್ (60), ಬಸವಿ (16), ಬಿನಪಟ್ಟಿ (90), ಚಂಬುಕುಟ್ಟಿ (4), ಪದಾರ್ತಿ (133), ಪಾಂಡವ ಕುಲಂ (6), ಪಣ್ಣೀಕಾರ ಕೊಂಕಣಿ (4) ಪುಲ್ಲವನ್ (40), ಕಾನನ್ (7) ಮತ್ತು ತುಳುವ (19).

## ಸಾಮಾಜಿಕ ಜೀವನ

ಹಿಂದೂಗಳಲ್ಲಿ ಸಾಮಾನ್ಯವಾಗಿ ವಿವಾಹಗಳಲ್ಲಿ ಗಂಡನ ವಯಸ್ಸು ಹೆಂಡತಿ ವಯಸ್ಸಿಗಿಂತ ಹೆಚ್ಚಾಗಿರುತ್ತದೆ. ತಮ್ಮ ಗಂಡದಿರನ್ನು ಹೆಸರು ಹಿಡಿದು ಕೂಗುವ ಪದ್ಧತಿ ಹಿಂದೂಗಳಲ್ಲಿ ಹಿಂದಿನಿಂದ ರೂಢಿಗೆ ಬಂದಿಲ್ಲ. ಮದುವೆಯಾದ ಮೇಲೆ ಮೊದಲನೇಯ ಹೆರಿಗೆಯು ಸಾಮಾನ್ಯವಾಗಿ ತಾಯಿಯ ಮನೆಯಲ್ಲಿ ಆಗುತ್ತದೆ. ಗರ್ಭಿಣಿ ಹೆಂಗಸರು ಅನೇಕ ಕಟ್ಟಳೆಗಳಿಗೆ ಒಳಗಾಗುತ್ತಾರೆ. ಗ್ರಹಣ ಕಾಲದಲ್ಲಿ ಮನೆಯಿಂದ ಹೊರಗೆ ಬರುವುದಿಲ್ಲ. ಸಂಜೆಯ ನಂತರ ಮನೆಯ ಮುಂಭಾಗದ ಹೊಸಲು ದಾಟಬಾರದು. ಗರ್ಭಿಣಿ ಹೆಂಗಸರಿಗೆ ಅವರು ಆಸೆ ಪಡುವ ತಿಂಡಿ ತಿನಸುಗಳನ್ನು ಮಾಡಿಕೊಡುತ್ತಾರೆ. ಅವರನ್ನು ನೋಡಲು ಬರುವವರೂ ಬರಿಕೈಲಿ ಬರುವುದಿಲ್ಲ. ಐದನೇಯ ಅಥವಾ ಏಳನೇಯ ತಿಂಗಳಿನಲ್ಲಿ ಶ್ರೀಮಂತವನ್ನು ಮಾಡಿ ಹಸಿರು ಸೀರೆ ಉಡಿಸುತ್ತಾರೆ. ಸಾಮಾನ್ಯವಾಗಿ ಎಲ್ಲಾ ಜಾತಿಯ ಜನಗಳಲ್ಲಿ ಸ್ತ್ರೀಯರು ಮಾಸಿಕಸ್ರಾವದ ಮೂರು ದಿನ ಮೈಲಿಗೆಯೆಂದು ಬೇರೆ ಉಳಿಯುತ್ತಾರೆ. ವೀರಶೈವರಲ್ಲಿ ಮಾತ್ರ ಈ ಪದ್ಧತಿಯಿಲ್ಲ. ಹುಡುಗಿಯು ಮೈನೆರೆದಾಗ ಹಳ್ಳಿಗಳಲ್ಲಿ ಬೇರೊಂದು ಗುಡಿಸಿಲನ್ನೇ ಕಟ್ಟಿ ಅದರಲ್ಲಿಟ್ಟು ಮೂರು ದಿನಗಳ ನಂತರ ಗುಡಿಸಲನ್ನು ಕೆಡವಿ ಸುಟ್ಟು ಹಾಕುತ್ತಿದ್ದರು. ಈ ದಿನಗಳಲ್ಲಿ ಹುಡುಗಿಗೆ ಪುಷ್ಟಿಕರ ಆಹಾರ ಕೊಟ್ಟು ಸಾಯಂಕಾಲಗಳಲ್ಲಿ ಮಣೆಯ ಮೇಲೆ ಕೂರಿಸಿ, ಆರತಿ ಎತ್ತಿ ಉಡಿ ತುಂಬುತ್ತಿದ್ದರು. ಹುಡುಗಿಯು ಮೈನೆರೆದಾಗಲೂ, ಮದುವೆಯಲ್ಲಿಯೂ ಹುಡುಗಿಯ ಸೋದರಮಾವನು ವಿಶೇಷ ಪಾತ್ರವಹಿಸುತ್ತಾನೆ. ಮೈನೆರೆದಾಗ ಗುಡಿಸಲು ಕಟ್ಟುವುದು, ಹುಡುಗಿಗೆ ಹೊಸಬಟ್ಟೆ ತರುವುದು, ಗುಡಿಸಲನ್ನು ಕೆಡವಿ ಬೆಂಕಿ ಹಚ್ಚುವುದು, ವಿವಾಹದಲ್ಲಿ ಹಾಲುಗಂಬ ತಂದು ನೆಡುವುದು, ಹುಡುಗಿಯನ್ನು ಧಾರೆ ಮಂಟಪಕ್ಕೆ ಕರೆತರುವುದು, ಬಾಸಿಂಗ ಕಟ್ಟುವುದು, ಕಾಲುಂಗರ ಹಾಕುವುದು, ಸೆರೆ ಬಿಡಿಸುವುದು ಮೊದಲಾದ ಸಾಂಪ್ರದಾಯಿಕ ಕಾರ್ಯಗಳನ್ನು ಸೋದರಮಾವನು ಅವನಿಲ್ಲದಿದ್ದರೆ ಅವನ ಮಗ ನೇರವೇರಿಸುತ್ತಾನೆ. ಸೋದರ ಮಾವನ ಈ ಕಾರ್ಯಗಳು ಹಾಗೂ ಅವನ ಸ್ಥಾನಮಾನಗಳು ಬಹುಶಃ ಹಿಂದೆ ಇದ್ದ ಮಾತೃ ಪ್ರಧಾನ ಕುಟುಂಬದ ಗುರುತಾಗಿ ಉಳಿದಿರಬಹುದು.

ಮುಸಲ್ಮಾನರಲ್ಲಿಯೂ ಅನೇಕ ಸಂಪ್ರದಾಯಗಳಿವೆ. ಮಗು ಹುಟ್ಟಿದ ಸುದ್ದಿ ತಂದವರಿಗೆ ತಂದೆಯು ಬಹುಮಾನ ಕೊಡುತ್ತಾನೆ. ಹುಟ್ಟಿದ ಆರನೇಯ ದಿನ ಸಾಮಾನ್ಯವಾಗಿ ಹೆಸರಿಡುತ್ತಾರೆ. ಏಳು ಅಥವಾ ಹದಿನಾಲ್ಕು ಅಥವಾ ಇಪ್ಪತ್ತೊಂದನೇಯ ದಿನ ಅಕಿಕ ಎಂಬ ಶಾಸ್ತ್ರ ಮಾಡುತ್ತಾರೆ. ನಾಲ್ಕುವರೆ ತಿಂಗಳಿಗೆ ನಮಕ್ ಚಾಸಿ ಎಂಬ ಶಾಸ್ತ್ರವನ್ನು, ನಾಲ್ಕು ವರ್ಷ ನಾಲ್ಕು ತಿಂಗಳು ನಾಲ್ಕು ದಿವಸವಾದಾಗ ಬಿಸ್ಮಿಲ್ಲ ಎಂಬ ಶಾಸ್ತ್ರವನ್ನು ಆಚರಿಸುತ್ತಾರೆ. ಏಳನೇಯ ವರ್ಷಕ್ಕೆ ಸುನ್ನತ್ ಮಾಡುತ್ತಾರೆ.

ಕೊಡಗಿನ ಸ್ಥಳೀಯ ಜನರಲ್ಲಿ ಕೊಡವರು ಬಹುಸಂಖ್ಯಾತರಾಗಿರುವುದರಿಂದ ಅವರ ಆಚಾರ ವಿಚಾರ ಸಂಪ್ರದಾಯಗಳನ್ನು ಗಿರಿಜನರನ್ನೂ ಒಳಗೊಂಡಂತೆ ಬಹುತೇಕ ಮಂದಿ ಅನುಕರಿಸಿ ತಮ್ಮದನ್ನಾಗಿಸಿಕೊಂಡಿದ್ದಾರೆ. ಹೊರಗಿನಿಂದ ಬಂದವರೂ ಕೂಡ ಅನೇಕ ಸಾಮಾಜಿಕ ನಡಾವಳಿಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದಾರೆ.*

ಕೊಡವರಲ್ಲಿ ಮಗು ಹುಟ್ಟಿದ ಕೂಡಲೆ ಗಂಡಾದರೆ ಒಂದು ಗುಂಡು ಹಾರಿಸಿ ಜನನವನ್ನು ಸೂಚಿಸುತ್ತಾರೆ, ಹೆಣ್ಣಾದರೆ ಗಂಟೆಯನ್ನೋ, ತಳಿಯ ಮಣೆಯನ್ನೋ ಬಾರಿಸುತ್ತಾರೆ. ಹಿಂದೆ ಹರಳು ಗಿಡದ ಎಲೆಯ ದಂಟಿನಿಂದ ಬಿಲ್ಲುಬಾಣ ಮಾಡಿ

* ಕೊಡವರ ಸಾಮಾಜಿಕ ಜೀವನವನ್ನು ತಿಳಿಸುವಾಗ ಬಿ.ಡಿ. ಗಣಪತಿಯವರ 'ಕೊಡಗು ಮತ್ತು ಕೊಡವರು' ಎಂಬ ಗ್ರಂಥವನ್ನು ಬಹುಮಟ್ಟಿಗೆ ಅನುಸರಿಸಲಾಗಿದೆ.

ಗಂಡು ಮಗುವಿನ ಕೈಗೆ ಕೊಡುತ್ತಿದ್ದರು. ಮಗುವಿಗೆ ಸ್ನಾನ ಮಾಡಿಸಿ ಬಾಯಿಗೆ ಬೆಲ್ಲ, ತುಪ್ಪ, ಕಾಳುಮೆಣಸಿನ ಪುಡಿಯನ್ನು ತೀಡುತ್ತಾರೆ. ಕೊಠಡಿಯಲ್ಲಿ ಹರಳೆಣ್ಣೆ ದೀಪವಿರುತ್ತದೆ. ಹುಟ್ಟಿದ ಮಗುವನ್ನು ಬಾಳೆ ಎಲೆಯ ಮೇಲೆ ಮಲಗಿಸುತ್ತಾರೆ. ಕುಟುಂಬವು ಹನ್ನೆರಡು ದಿನಗಳ ಸೂತಕವನ್ನು ಆಚರಿಸುತ್ತದೆ. ಸೂತಕದಲ್ಲಿ ಕುಟುಂಬದವರು ಗ್ರಾಮದ ಹಬ್ಬಗಳಲ್ಲಿ ಭಾಗಿಗಳಾಗುವುದಿಲ್ಲ ; ಗ್ರಾಮದ ಮಂದು, ದೇವಸ್ಥಾನಗಳಿಗೆ ಪ್ರವೇಶಿಸುವುದಿಲ್ಲ. ಹನ್ನೆರಡನೇಯ ದಿನ ಸ್ನಾನ ಮಾಡಿ ಮನೆ ಶುದ್ಧಿ ಮಾಡಿ, ತೀರ್ಥಪ್ರೋಕ್ಷಣೆ ಮಾಡುತ್ತಾರೆ. ಆ ದಿನವೇ ಮಗುವಿಗೆ ನಾಮಕರಣ ಮಾಡಿ ತೊಟ್ಟಿಲಿಗೆ ಹಾಕುತ್ತಾರೆ. ಆ ದಿನ ಗಂಡು ಮಗುವಿಗೆ ಸೊಂಟ, ಕೈ, ಕಾಲುಗಳಿಗೆ, ಹೆಣ್ಣು ಮಗುವಿಗೆ ಕೈಕಾಲುಗಳಿಗೆ ಮಾತ್ರ ಕರಿಯ ನೂಲನ್ನು ಕಟ್ಟುತ್ತಾರೆ. ತೊಟ್ಟಿಲಿಗೆ ಹಾಕುವ ಮೊದಲು ಗುಂಡುಕಲ್ಲನ್ನು ಮೂರು ಬಾರಿ ತೊಟ್ಟಿಲಿಗೆ ಹಾಕಿ ತೆಗೆದು ಗುಂಡು ಕಲ್ಲಿನಂತೆ ಬಾಳು ಎಂದು ಹರಸುತ್ತಾರೆ. ತೊಟ್ಟಿಲಿಗೆ ಹಾಕಿ ಮಗುವಿನ ಹೆಸರನ್ನು ಹಿಡಿದು ಕೂಗುತ್ತಾರೆ. ತಾಯಿಯು ಅರವತ್ತು ದಿನಗಳು ಬಾಣಂತಿತನವನ್ನು ಮಾಡಿಕೊಂಡು ಆರೈಕೆ ಪಡೆಯುತ್ತಾಳೆ. ಬಾಣಂತಿತನದಿಂದ ದೈನಂದಿನ ಕಾರ್ಯಗಳಿಗೆ ಹಿಂತಿರುಗುವ ಮೊದಲು ಗಂಗಾಪೂಜೆಯನ್ನು ಮಾಡುತ್ತಾಳೆ. ನೆಲ್ಲಕ್ಕಿ ನಡುಬಾಡೆಯ ಹರಳೆಣ್ಣೆ ದೀಪಕ್ಕೆ ಅಕ್ಕಿ ಹಾಕಿ ಹಿರಿಯರನ್ನು ನಮಸ್ಕರಿಸುತ್ತಾಳೆ. ಹಿಂದೆ ಚಿಕ್ಕ ಮಕ್ಕಳಿಗೆ 'ಕೋದಿ ಮಂಗಲ' ಎನ್ನುವ ಪ್ರೀತಿಯ ಮದುವೆಯನ್ನು ಮಾಡುತ್ತಿದ್ದರು. ಈಗ ಅದು ರೂಢಿಯಲ್ಲಿಲ್ಲ. ಗಂಡು ಮಕ್ಕಳಿಗೆ ಕಿವಿ ಚುಚ್ಚುವುದನ್ನು ಕೆಮಿಕುತ್ತಿ ಮಂಗಲವೆನ್ನುತ್ತಾರೆ. ಇದನ್ನು ಒಂದು ದೊಡ್ಡ ಸಮಾರಂಭವಾಗಿಯೇ ಆಚರಿಸುತ್ತಿದ್ದರು. ಹೆಣ್ಣು ಮಕ್ಕಳಿಗೆ ಮಾತ್ರ ಈ ಸಮಾರಂಭವಿಲ್ಲ. ಕಿವಿ ಚುಚ್ಚದೆ ಸತ್ತವರನ್ನು ಶವಸಂಸ್ಕಾರದ ಕಾಲದಲ್ಲಾದರೂ ಕಿವಿ ಚುಚ್ಚಿ ಶವಸಂಸ್ಕಾರ ಮಾಡುತ್ತಿದ್ದರು. ಹುಲಿಯನ್ನು ಬೇಟೆಯಾಡಿದರೆ 'ನರಿಮಂಗಲ' ವೆಂಬ (ಗಂಡಸರಾಗಲೀ, ಹೆಂಗಸರಾಗಲೀ) ಹುಲಿ ಮದುವೆಗೆ ಅರ್ಹರಾಗುತ್ತಾರೆ.

ಕೊಡವರ ಸಾಮಾಜಿಕ ಜೀವನ ಬಗ್ಗೆ ಕೊಡಗು ಪ್ರಾದೇಶಿಕ ಸಂಶೋಧನಾ ಕೇಂದ್ರದ ಶ್ರೀಮತಿ ತುಳಸೀದೇವಿಯವರು ಈ ಕೆಳಗಿನ ವಿಷಯಗಳನ್ನು ಒದಗಿಸಿದ್ದಾರೆ. ತುಲಾಮಾಸದ ಮೊದಲ ಹತ್ತು ದಿನಗಳಲ್ಲಿ ಪತ್ತಲೋದಿ ಎಂಬ ಹಿರಿಯರ ಸಾಮೂಹಿಕ ವಾರ್ಷಿಕ ಆರಾಧನೆಯನ್ನು ಕೊಡವರು ಮಾಡುತ್ತಾರೆ. ಆಗ ಕಣಿತಾಯಿ (ವಂಶದ ಮೂಲಮಾತೆ), ಎಳ್ ತಲೆಯಕ್ಕಿತಾಯಿ (ಆಯಾ ವಂಶದ ಏಳು ತಲೆಮಾರಿನ ಮೂಲ ಮಾತೆಯರು), ಕೊಡಚಿ ತಾಯಿ (ಹುತಾತ್ಮರು), ಕುಡಿಬೀರಂಗ್ (ಹುತಾತ್ಮರಾದ ಪುರುಷರು), ನೂರ್ ಪಡಿಯಾಂಡಿಯ (ಶತಾಯುಷಿಗಳಾದ ಕೊಡಚಿಯರು ಮತ್ತು ಮೂಪರು), ಮೂಪಂಗ್ (ಹಟ್ಟಿಯ ಮುಖ್ಯಸ್ಥರು) ಮತ್ತು ಕೂಳಿಯ (ಸತ್ತ ಹಟ್ಟಿಯ ಇತರರು) ಆರಾಧನೆಗೊಳ್ಳುವ ಹಿರಿಯರು. ಸತ್ತ ಮಕ್ಕಳನ್ನು ಆರಾಧಿಸುವುದಿಲ್ಲ. ಆರಾಧನೆಯ ಸಮಯದಲ್ಲಿ ಹರಸಿಕೊಂಡಿದ್ದವರು ಕಣಿತಾಯಿತೆರೆ, ಕೊಡಚಿ ತಾಯಿತೆರೆಗಳನ್ನು ಕಟ್ಟಿಸುವರು. ತೆರೆ ಎಂದರೆ ದೈವಿಕ ಹಿನ್ನೆಲೆಯಲ್ಲಿ ವೇಷ ಹಾಕುವುದು. ಬಾಣಂತಿ, ತೊಟ್ಟಿಲ ಕೂಸುಗಳಿಗೆ ಆಗಾಗ ತೊಂದರೆಯುಂಟಾಗುತ್ತಿದ್ದರೆ ಆರಾಧನೆಯ ಸಮಯದಲ್ಲಿ ಕಣಿತಾಯಿ ತೆರೆ, ಕೊಡಚಿ ತಾಯಿ ತೆರೆಗಳನ್ನು ಕಟ್ಟಿಸುವುದಾಗಿ ಹರಸಿಕೊಳ್ಳುತ್ತಾರೆ. ಹಿಂದೆ ಬರ, ಯುದ್ಧ, ಸಾಂಕ್ರಾಮಿಕ ರೋಗಗಳಿಂದ ಜನ–ದನಗಳು ಸಾಯುತ್ತಿದ್ದರೆ ಕೊಡಚಿ ತಾಯಿ ತೆರೆ ಕಟ್ಟಿಸುತ್ತಿದ್ದರು. ಈಗ ಈ ಪದ್ಧತಿ ರೂಢಿಯಲ್ಲಿಲ್ಲ. ಹರಕೆ ಮಾಡಿಕೊಂಡಿದ್ದರೆ ಹಿರಿಯರ ಆರಾಧನೆಯ ಸಮಯದಲ್ಲಿ ನರಿಪೂಪ (ಭೂತ) ವನ್ನು ಕಟ್ಟಿಸುತ್ತಿದ್ದರು.

ಕೊಡವರ ಮನೆಗಳಲ್ಲಿ ಕೈಮಡದ ಮುಂದೆ ಒಂದು ಸೂಚನಾ ಸ್ಥಂಬವನ್ನು ನಿಲ್ಲಿಸುವುದರ ಮೂಲಕ ಅನೇಕ ಸೂಚನೆಗಳನ್ನು ನೀಡುತ್ತಿದ್ದರಂತೆ. ಈ ಸೂಚನಾ ಸ್ಥಂಬವನ್ನು ಕೊಡಿಮರವೆನ್ನುತ್ತಾರೆ. ಈ ಕೊಡಿಮರವು ಸುಮಾರು ಎರಡಾಳು ಎತ್ತರದ ಪಕ್ಕಗಳನ್ನು ಸವರಿದ ಬೊಂಬು. ಇದಕ್ಕೆ ಬೇರೆ ಬೇರೆ ರೀತಿಯ ಅಲಂಕಾರಗಳನ್ನು ಹಾಕಿ ಬೇರೆ ಬೇರೆ ಸಂದರ್ಭಗಳನ್ನು ಸೂಚಿಸುತ್ತಿದ್ದರು. ಶುಭಮಿಲನದ ಹಾರೈಕೆಯ ಸಂಕೇತವಾಗಿ (ಪತ್ತಯಿವು) ಬೊಂಬಿನ ಸುತ್ತಲೂ ಕಾಳು ಮೆಣಸಿನ ಗೊಂಚಲು, ಹಸಿರು ಎಲೆಗಳನ್ನು ಕಟ್ಟುತ್ತಿದ್ದರು. ಆಗ ಇದು ಸಂತಾನವೃಕ್ಷವಾಗುತ್ತಿತ್ತು. ಯುದ್ಧದಲ್ಲಿ ಗೆದ್ದಾಗ ಬೊಂಬಿನ ಸುತ್ತ ಪಕ್ಷಿಗಳ ಬಣ್ಣ ಬಣ್ಣದ ಗರಿಗಳನ್ನು ಕಟ್ಟಿ ತುದಿಯಲ್ಲಿ ಹಚ್ಚಡದ ಬಿಳಿ ಬಾವುಟ ಕಟ್ಟುತ್ತಿದ್ದರು. ಆಗ ಇದು ಧ್ವಜಸ್ಥಂಭವಾಗುತ್ತಿತ್ತು. ಈ ಧ್ವಜಸ್ಥಂಭದ ಬಾವುಟದ ಹಚ್ಚಡವು ನಡುಭಾಗದಲ್ಲಿ ಹರಿದಿದ್ದಾದರೆ ಕುಡುಕೀತುವೊ ಎಂದು ಹಟ್ಟಿಹಟ್ಟಿಗಳ ನಡುವೆ ಸಂಬಂಧ ಕಳೆದುಕೊಳ್ಳುವ ಸೂಚಕವಾಗುತ್ತಿತ್ತು. ವ್ಯಕ್ತಿವ್ಯಕ್ತಿಯ ನಡುವೆ ಸಂಬಂಧ ಕಳೆದುಕೊಂಡಾಗ ಕಾಳು ಮೆಣಸಿನ ಬಳ್ಳಿಯ ನಡುಭಾಗವನ್ನು ಸೀಳಿ ಕಟ್ಟುತ್ತಿದ್ದರು. ಪ್ರಿಯ–ಪ್ರಿಯೆಯ ಸಂಬಂಧ ಕಳೆದುಕೊಳ್ಳುವಾಗ ವೀಳ್ಯದೆಲೆಯ ನಡುಭಾಗವನ್ನು ಸೀಳಿ ಕಟ್ಟುತ್ತಿದ್ದರು (ಕೊಡಿಯೆಲೆ ಕೀತುವೊ). ಒಣಗಿದ ಬೋಳು ಬೊಂಬನ್ನು ಸಾವಿನ ಸೂಚನೆಯಾಗಿ ನಿಲ್ಲಿಸುತ್ತಿದ್ದರು.

ಬೊಂಬಿನ ಸುತ್ತಲು ಲೊಕ್ಕಿಸೊಪ್ಪು ಬೇವಿನೆಲೆಯನ್ನು ಕಟ್ಟಿದ್ದರೆ ಚೊಡಲೆಕುತ್ತಿ ಅಥವಾ ದೊಡ್ಡಮ್ಮನ (ಸಿಡುಬು ಬೇನೆಯ) ಸಂಕೇತವಾಗುತ್ತಿತ್ತು.

ಕೊಡವರು ಹುಡುಗಿ ಮೈನೆರೆದಾಗ ಹೊಲೆದಾಣದಲ್ಲಿ ಕೂಡಿಸಿ ಒಂಬತ್ತು ದಿನಗಳು ಆರೈಕೆ ಮಾಡುತ್ತಿದ್ದರು. ಹತ್ತನೆಯ ದಿನ ಶುದ್ಧ ಸ್ನಾನವಾದ ಮೇಲೆ ಎರಡು ತಿಂಗಳು ವಿಶ್ರಾಂತಿ ಪಡೆಯುತ್ತಿದ್ದಳು. ನಂತರ ಶುಕ್ರವಾರ, ಮಂಗಳವಾರಗಳನ್ನು ಹೊರತು ಪಡಿಸಿ ಪೊಕೋಲ್ ನೆರ್‌ಪೊ (ಹೂಕೋಲಿನ ಆಟ) ಏರ್ಪಡಿಸುತ್ತಿದ್ದರು. ಹಿಂದೆ ಕೊಡವರ ಕುಟುಂಬಗಳು ಮಾತೃಪ್ರಧಾನ ಕುಟುಂಬಗಳಾಗಿದ್ದವೆಂದೂ, ದೊಡ್ಡ ವೀರರಾಜನ ಕಾಲದಲ್ಲಿ ಅವು ನಿಧಾನವಾಗಿ ಪಿತೃಪ್ರಧಾನ ಕುಟುಂಬಗಳಾದವೆಂದೂ, ಕೊಡವರಲ್ಲಿ ಸ್ವಯಂವರ ಪದ್ಧತಿ ಇದ್ದಿತೆಂದೂ ತುಳಸೀದೇವಿಯವರು ತಿಳಿಸುತ್ತಾರೆ.

ಹಿಂದೂಗಳಲ್ಲಿ ಬೆಳಗ್ಗೆ ಮನೆ ಮುಂದೆ ಗುಡಿಸಿ ಸಾರಿಸಿ ರಂಗೋಲಿ ಹಾಕುವುದು ರೂಢಿಯಲ್ಲಿದೆ. ಆದರೆ ಕೊಡವರಲ್ಲಿ ಗುಡಿಸಿ ಸಾರಿಸಿದ ಮೇಲೆ ರಂಗೋಲಿ ಹಾಕುವುದು ರೂಢಿಯಲ್ಲಿಲ್ಲ. ಮನೆಯನ್ನು ಗುಡಿಸಿದ ನಂತರ ತುಳಸಿ, ಸಗಣಿ ನೀರಿನಿಂದ ಚುಮುಕಿಸಿ ಶುದ್ಧಿಗೊಳಿಸುತ್ತಾರೆ. ನಂತರ ನೆಲ್ಲಕ್ಕಿ ನಡುಬಾಡೆಯಲ್ಲಿ ದೀಪ ಹಚ್ಚಿ ಕಾವೇರಮ್ಮನನ್ನು ಪ್ರಾರ್ಥಿಸುತ್ತಾರೆ. ಕೊಡವರು ಕೆಲಸ ಕಾರ್ಯಗಳನ್ನು ಮುಗಿಸಿಕೊಂಡು ಸಾಯಂಕಾಲ ಅಥವಾ ರಾತ್ರಿ ಸ್ನಾನ ಮಾಡುತ್ತಾರೆ. ಮೋಗ್ಲಿಂಗ್ ತಿಳಿಸಿರುವಂತೆ ಹಿಂದೆ ಕೊಡವ ಗಂಡಸರು ಜುಟ್ಟು ಬಿಡುತ್ತಿದ್ದರು. ಶ್ರೀಮಂತ ಕೊಡವ ಕುಟುಂಬಗಳಲ್ಲಿ ಬ್ರಿಟಿಷರ ಆಡಳಿತದಿಂದ ಪಾಶ್ಚಿಮಾತ್ಯರ ಸಂಸ್ಕೃತಿಯ ಪ್ರಭಾವವು ಕಂಡುಬರುತ್ತದೆ. ಕ್ಲಬ್ಬುಗಳೂ ಕೂಡ ಬ್ರಿಟಿಷರ ಒಂದು ಕೊಡುಗೆ.

ಕೊಡವರ ಸಾಮಾಜಿಕ ಕೇಂದ್ರ ಒಕ್ಕ. ಈ ಒಕ್ಕವು ಒಂದು ಮೂಲ ಕುಟುಂಬ. ಇದರ ಮೂಲ ಪುರುಷ ಕಾರಣವ (ಕಾರೋಣ ಎಂದೂ ಕರೆಯುವರು). ಒಕ್ಕದ ಮೂಲ ಮನೆ ಐನ್‌ಮನೆ. ಒಕ್ಕದ ಹಿರಿಯ ಪುರುಷ ಕೊರವಕಾರ, ಸ್ತ್ರೀ ಕೊರವಕಾರ್ತಿ. ಇವರು ಕುಟುಂಬದ ಆಗುಹೋಗುಗಳಿಗೆ ಜವಾಬ್ದಾರರು. ಹಿಂದೆ ಒಕ್ಕವು ಅವಿಭಕ್ತ ಕುಟುಂಬವಾಗಿದ್ದು ಕೆಲವು ಐನ್‌ಮನೆಗಳಲ್ಲಿ 100–150 ಜನರು ವಾಸಿಸುತ್ತಿದ್ದರು. ರೈಸ್ ಅವರ ಪ್ರಕಾರ 1870ರ ವೇಳೆಗೆ ಒಂದೊಂದು ಒಕ್ಕದಲ್ಲಿಯೂ 20–30 ಜನರಿರುತ್ತಿದ್ದರು. ಒಕ್ಕದಲ್ಲಿ ಸಾಮಾನ್ಯವಾಗಿ 3–4 ತಲೆಮಾರಿಗೆ ಸೇರಿದ ಜನರಿರುತ್ತಿದ್ದರು. ಪ್ರತೀಯೊಬ್ಬ ಕಿರಿಯನಿಗೂ ಒಕ್ಕವು ಸಾಮಾಜಿಕ ಪರಿಸರವನ್ನೊದಗಿಸುತ್ತಿತ್ತು. ಅದೇ ರೀತಿ ಗ್ರಾಮದ ಹಿರಿಯ ಅಥವಾ ಯಜಮಾನನನ್ನು ತಕ್ಕ ಎಂದು ಕರೆಯುತ್ತಾರೆ. ತಕ್ಕವು ಒಂದು ಸಂಸ್ಥೆಯಾಗಿದ್ದು ಅದು ವ್ಯಕ್ತಿಗೆ ಸಂಬಂಧ ಪಡದೆ ಒಕ್ಕಕ್ಕೆ ಸಂಬಂಧ ಪಡುತ್ತಿತ್ತು. ಗ್ರಾಮಕ್ಕೆ ತಕ್ಕನಿದ್ದಂತೆ ನಾಡಿಗೂ ನಾಡತಕ್ಕನಿರುತ್ತಿದ್ದನು. ಕೊಡಗಿನಲ್ಲಿ ಹಿಂದೆ 35 ನಾಡುಗಳೂ, 12 ಕೊಂಬುಗಳೂ ಇದ್ದವು. ಪ್ರತಿಯೊಂದು ಕುಟುಂಬಕ್ಕೂ ಅವರ ಕಷ್ಟ-ಸುಖಗಳಲ್ಲಿ ಭಾಗಿಯಾಗುವ ಒಂದು ಮಿತ್ರ ಕುಟುಂಬ ಕೊಡವರಲ್ಲಿದೆ. ಇದನ್ನು ಅರುವಕುಟುಂಬವೆನ್ನುತ್ತಾರೆ. ಕೊಡವರ ಸಾಮಾಜಿಕ ಜೀವನದಲ್ಲಿ ಐನ್‌ಮನೆ ಒಂದು ಅವಿಭಾಜ್ಯ ಅಂಗ. ಒಂದು ಒಕ್ಕಕ್ಕೆ ಸೇರಿದ ಕುಟುಂಬಗಳೆಲ್ಲವೂ ಕಾರುಣ ಪೂಜೆಗೆ, ಶುಭ, ಅಶುಭ ಸಂದರ್ಭಗಳಲ್ಲಿ ಐನ್‌ಮನೆಯಲ್ಲಿ ಸಮಾವೇಶಗೊಳ್ಳುತ್ತವೆ. ಕೊಡಗಿನ ಸಮಾಜ ಜೀವನದಲ್ಲಿ ಕೊಡವರು ಅವರನ್ನು ಅನುಸರಿಸುವ ಬಣ್ಣರು, ಫಣಿಕರು, ಹೊಲೆಯರು ಮೊದಲಾದ ಇತರ ಜಾತಿಗಳ ಜನರು ಒಂದು ಸುಸ್ಥಿತಿಯಿಂದ ವ್ಯವಸ್ಥೆಗೊಂಡಿರುವ ಸಮುದಾಯವಾಗಿದ್ದಾರೆ. ಮೊದಲಿಗೆ ಒಕ್ಕದ ಸ್ಥಿರ ಆಸ್ತಿಯು ಹರಿದು, ಹಂಚಿಹೋಗಲು ಸಾಧ್ಯವಿರಲಿಲ್ಲ. ಆದರೆ ಲಿಂಗಾಯತ ರಾಜರ (ಒಡೆಯರ) ಕಾಲಕ್ಕೆ ಸ್ಥಿರ ಆಸ್ತಿಯನ್ನು ಹಂಚಿಕೊಳ್ಳಲು ಅವಕಾಶ ಮಾಡಲಾಯಿತು. ಮುಂದೆ 1858–9ರಲ್ಲಿ ಕೊಡವರ ಇಚ್ಛೆಯ ಮೇರೆಗೆ ಬ್ರಿಟಿಷ್ ಸರ್ಕಾರವು ಪುನಃ ಆಸ್ತಿಯು ಹಂಚಿ ಹರಿದುಹೋಗಲು ಅವಕಾಶವಿರದಂತೆ ಮಾಡಿತು.

ಕೊಡವರಲ್ಲಿ ಏಳು ರೀತಿಯ ಮಂಗಲ (ಶುಭ ಆಚರಣೆ) ಗಳಿವೆಯೆನ್ನುತ್ತಾರೆ. (1) ಹುಲಿಯನ್ನು ಕೊಂದಾಗ ಮಾಡುವ ನರಿಮಂಗಲ (ಇದು ಎಲ್ಲರಿಗೂ ಸಂಬಂಧಿಸಿದ್ದಲ್ಲ); (2) ಇಬ್ಬರು ಹೆಂಡತಿಯರು ಸತ್ತಿದ್ದು ಮೂರನೇಯವಳನ್ನು ಮದುವೆಯಾಗಬೇಕಾದರೆ ಮೊದಲು ಒಂದು ಬಾಳೆಗಿಡಕ್ಕೆ ಮದುವೆ ಮಾಡುತ್ತಾರೆ. ಇದನ್ನು ಬಾಳೇಕ್‌ಮಂಗಲವೆನ್ನುತ್ತಾರೆ; (3) ಹೊಸಮನೆ ಕಟ್ಟಿದಾಗ ಮನೆ ಮಂಗಲ ಮಾಡುತ್ತಾರೆ; (4) ಕನ್ನಿಮಂಗಲ (ಮದುವೆ) (5) ಸ್ತ್ರೀಯು ಮೊದಲನೆಯ ಸಾರಿ ಗರ್ಭಿಣಿಯಾದಾಗ ಕೂಲಿಯಮ್ಮೆ ಮಂಗಲವನ್ನು ಆಚರಿಸುತ್ತಾರೆ. (6) ಋತುಮತಿಯಾದಾಗ ಪೋಲ್‌ಕಂಡ್ ಮಂಗಲವನ್ನು ಆಚರಿಸುತ್ತಾರೆ ಮತ್ತು (7) ಕಿವಿ ಚುಚ್ಚಿದಾಗ ಕೆಮ್ಮಿಕುತ್ತಿ ಮಂಗಲವನ್ನು ಆಚರಿಸುತ್ತಾರೆ. ಮುಹೂರ್ತವು ಮಂಗಲದ ಮುಖ್ಯ ಭಾಗ.

ಕೊಡಗಿನ ಗೌಡರಲ್ಲಿ ಮಗು ಜನನವಾದಾಗ 15 ದಿನ ಸೂತಕ ಆಚರಿಸುತ್ತಾರೆ. ಏಳನೇಯ ದಿನ ಮಡಿವಾಳಗಿತ್ತಿ ಮಗುವಿಗೆ ಸ್ನಾನ ಮಾಡಿಸಿ ಅಮೆ ಎಂಬ ಶುದ್ಧಿ ಕ್ರಿಯೆಯನ್ನು ಮಾಡುತ್ತಾಳೆ. ಹದಿನಾರನೆಯ ದಿನ ನಾಮಕರಣ ಮಾಡಿ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಆದೇದಿನ ಅನ್ನ ಪ್ರಾಶನ ಮಾಡಿಸುವ ಕಾರ್ಯಕ್ರಮವಿದೆ. ಬಾಣಂತಿಯು ನಲವತ್ತನೆಯ ದಿನ ಗಂಗಾ ಪೂಜೆಯನ್ನು ಮಾಡಿ ಶುದ್ಧಿಯಾಗುತ್ತಾಳೆ. ಕನ್ಯೆಯು ಮೈನೆರೆದಾಗ ಪುಣ್ಯಾರ್ಚನೆ ಮಾಡಿ ಮನೆಯನ್ನು ಶುದ್ಧಿಗೊಳಿಸುತ್ತಾರೆ. ಹಿಂದೆ ಆದ್ದೂರಿಯಾಗಿ ಋತುಶಾಂತಿ ಲಗ್ನವನ್ನು ಆಚರಿಸುತ್ತಿದ್ದರಂತೆ. ಗರ್ಭಿಣಿ ಸ್ತ್ರೀಗೆ ಏಳನೇ ತಿಂಗಳಿನಲ್ಲಿ ಸೀಮಂತವನ್ನು ಮಾಡುತ್ತಾರೆ. ಇದನ್ನು ಬಯಕೆಯ ಮದುವೆಯೆನ್ನುತ್ತಾರೆ. ಮೂರನೇ ದಿನ ಸತ್ಯನಾರಾಯಣನ ಪೂಜೆ ಮಾಡುವುದು ರೂಢಿಗೆ ಬರುತ್ತಿದೆ.

ಯೆರವರ ಹಾಗೂ ಇತರ ಗಿರಿಜನರ ಕುಟುಂಬಗಳು ಸರಳ ಕುಟುಂಬಗಳು. ಇವರು ಬೆಳಗಿನಿಂದ ಸಂಜೆಯವರೆವಿಗೂ ದುಡಿಯುತ್ತಾರೆ. ಸಾಮಾನ್ಯವಾಗಿ ಬೆಳಿಗ್ಗೆ 6 ಗಂಟೆಗೆ ಎದ್ದು 8 ಗಂಟೆಯ ವೇಳೆಗೆ ಕೆಲಸಗಳಿಗೆ ಹೋಗುತ್ತಾರೆ. ಈ ಎರಡು ಗಂಟೆಗಳ ಅವಧಿಯಲ್ಲಿ ಹೆಂಗಸರು ನೀರು ತರುವುದು, ಅಡಿಗೆ, ಮೊದಲಾದ ಮನೆಗೆಲಸಗಳನ್ನು ಮುಗಿಸಿಕೊಳ್ಳುತ್ತಾರೆ. ಕೆಲಸದಿಂದ ಹಿಂದಿರುಗುವ ವೇಳೆಗೆ ಸಂಜೆಯಾಗಿರುತ್ತದೆ. ಹೆಂಗಸರು ಕುಟ್ಟುವುದು, ಬೀಸುವುದು ಮೊದಲಾದ ಮನೆಗೆಲಸಗಳಲ್ಲಿ ತೊಡಗುತ್ತಾರೆ. ಗಂಡಸರು ಸ್ವಲ್ಪ ಹೊತ್ತು ವಿಶ್ರಮಿಸುತ್ತಾರೆ. ರಾತ್ರಿ 9 ಗಂಟೆಯ ವೇಳೆಗೆ ಎಲ್ಲರೂ ಊಟಮಾಡಿ ಮಲಗುತ್ತಾರೆ. ಕೆಲಸಕ್ಕೆ ಹೋಗುವಾಗ, ಕೆಲಸದಿಂದ ಬರುವಾಗ ದಾರಿಯಲ್ಲಿ ಹರಟೆ ಹೊಡೆಯುವುದು ಮನರಂಜನೆ ಒದಗಿಸುತ್ತದೆ. ವಾರದ ರಜಾದಿನಗಳಲ್ಲಿ ಬಟ್ಟೆ ಒಗೆಯುವುದು, ಪೇಟೆಗೆ, ಸಂತೆಗೆ ಹೋಗಿ ಸಾಮಾನು ತರುವುದು ಮೊದಲಾದ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಜನಪದ ಗೀತೆ, ಕುಣಿತಗಳಲ್ಲಿಯೂ ಆಗೊಮ್ಮೆ ಈಗೊಮ್ಮೆ ಮನರಂಜನೆ ಪಡೆಯುತ್ತಾರೆ. ಪಂಜಿರಿ ಯೆರವರಲ್ಲಿ ಬರಿ ಗಂಡಸರು ಕುಣಿದಾಟದಲ್ಲಿ ತೊಡಗಿದರೆ, ಪಣಿಯೆರವಲ್ಲಿ ಸ್ತ್ರೀಪುರುಷರಿಬ್ಬರೂ ತೊಡಗುತ್ತಾರೆ. ಯೆರವರಲ್ಲಿಯೂ ಇತರರಂತೆ ಹನ್ನೊಂದನೇಯ ದಿನ ಮಗುವಿಗೆ ಹೆಸರಿಟ್ಟು ಪಿತೃ ಪೂಜೆ ಮಾಡಿ ತೊಟ್ಟಿಲಿಗೆ ಹಾಕುತ್ತಾರೆ. ಇವರಲ್ಲಿ ಗಂಡು ಮಕ್ಕಳಾಗಬೇಕೆಂಬ ಹಂಬಲವಿಲ್ಲ. ಪಂಜಿರಿ ಯೆರವರು ಮೊದಲನೇಯ ಮಗು ಹೆಣ್ಣಾದರೆ ಸಂತೋಷ ಪಡುತ್ತಾರೆ. ಇವರಲ್ಲಿ ಹುಡುಗಿಯು ಋತುಮತಿಯಾದಾಗ ಬೇರೆ ಗುಡಿಸಲುಗಳಲ್ಲಿ 16 ದಿವಸವಿಟ್ಟು ಕಡೆಯ ದಿನ ಸ್ನಾನದ ನಂತರ ಗಂಗಾಪೂಜೆ ಮಾಡಿ ಶುದ್ಧಿಯಾಗುತ್ತಿದ್ದಳು.

ಇತರ ಜಿಲ್ಲೆಯ ಜನರಂತೆ ಕೊಡಗಿನ ಜನರಲ್ಲೂ ಬಂಜೆತನವನ್ನು ಶಾಪವೆಂದು ಪರಿಗಣಿಸುತ್ತಾರೆ. ಮಕ್ಕಳಾಗಲು ಕುಲದೇವತೆಗಳನ್ನು ಪೂಜಿಸುವುದು, ಮರಗಳನ್ನು ಪೂಜಿವುದು, ಶಾಸ್ತ್ರ ಕೇಳುವುದು ಮೊದಲಾದ ಕಾರ್ಯಗಳಲ್ಲಿ ತೊಡಗುತ್ತಾರೆ. ಬಹುತೇಕ ಎಲ್ಲಾ ಜಾತಿಗಳಲ್ಲಿಯೂ ಮದುವೆಯಾದ ಹುಡುಗಿಯ ಮೊದಲನೇ ಬಾಣಂತಿತನವು ತಾಯಿಯ ಮನೆಯಲ್ಲಿ ನಡೆಯುತ್ತದೆ. ಗರ್ಭಿಣಿ ಸ್ತ್ರೀಯರನ್ನು ತಾಯಿಯ ಮನೆಗೂ ತಾಯಿ ಮಗುವನ್ನು ಗಂಡನ ಮನೆಗೂ ಬೆಸ ತಿಂಗಳುಗಳಲ್ಲಿ ಕಳುಹಿಸಿ ಕೊಡುತ್ತಾರೆ. ಕಿವಿ ಚುಚ್ಚುವುದು, ಕುಲದೇವರ ಯಾತ್ರೆ ಹೋಗಿ ತಲೆ ಮುಡಿಪು ಕೊಟ್ಟು ಬರುವುದು, ಅನೇಕ ಜಾತಿಗಳಲ್ಲಿ ಕಂಡುಬರುತ್ತದೆ.

ರಾಜರ ಕಾಲದಲ್ಲಿ ಸೈನ್ಯ ಹಾಗೂ ಸರಕಾರೀ ಸೇವೆಯಲ್ಲಿನ ಜನ 15 ದಿನ ಅರಮನೆ (ಚಾವಡಿ) ಕೆಲಸಕ್ಕೆ ಹೋಗಬೇಕಾಗಿತ್ತು. ಎಲ್ಲಿಗಾದರೂ ನಡೆದೇ ಪ್ರಯಾಣ. ಶ್ರೀಮಂತರಿಗೆ ಕುದುರೆ, ಪಲ್ಲಕ್ಕಿಗಳಿದ್ದವು. ಬಂಡಿ ರಸ್ತೆಗಳೂ ಇರಲಿಲ್ಲ. ಯುದ್ಧದಲ್ಲಿ ಪಾಲುಗೊಂಡವರಿಗೆ ಸೂರೆ (ದನಕರು, ಧಾನ್ಯ, ಸೆರೆಹಿಡಿದ ಆಳುಗಳು) ಯಲ್ಲಿ ಪಾಲು ಇರುತ್ತಿತ್ತು. ಇವರ ಕೃಷಿ ಕಾರ್ಯ ಮಾಡಲು ಗುಲಾಮರು (ಜಮ್ಮದಾಳು) ಇದ್ದರು. ಹಳ್ಳಿಗಳ, ಅರಣ್ಯಗಳ ಜನ ವನೋತ್ಪತ್ತಿ (ಏಲಕ್ಕಿ, ಮೆಣಸು, ಮೂಲಿಕೆ, ಶ್ರೀಗಂಧ) ಗಳನ್ನು ಅರಮನೆಗೆ ಮಾರಿ ಜೀವನ ಸಾಗಿಸುತ್ತಿದ್ದರು. ಬ್ರಿಟಿಷರ ಆಗಮನಾನಂತರ ಕಾಫಿ ತೋಟಗಳು ಬಂದವು. ಹಿಂದೆ ಇದ್ದ ಅವಿಭಕ್ತ ಕುಟುಂಬಗಳು ಈಗ ಕಡಿಮೆಯಾಗಿವೆ. ರಸ್ತೆ ಸಾರಿಗೆ ಸಂಪರ್ಕ ಹೆಚ್ಚಿ ಕೃಷಿ ಕಾರ್ಮಿಕರೂ ಕೂಡ ಊರಿಂದೂರಿಗೆ ತೋಟಗಳ ದೈನಂದಿನ ಕೆಲಸಗಳಿಗೆ ಹೋಗಿ ಬರುತ್ತಾರೆ. ತೋಟಗಳ ಮಾಲೀಕರು ವಾಹನಗಳನ್ನು ಹೊಂದಿರುವುದರಿಂದ ರಸ್ತೆಗಳ ಜಾಲ ವ್ಯಾಪಕವಾಗಿದೆ. ತಾಲೂಕು ಸ್ಥಳಗಳಿಂದ ಮಡಿಕೇರಿಗೂ, ಹಳ್ಳಿಗಳಿಗೂ ಉದ್ಯೋಗಸ್ಥರು ಪ್ರತೀದಿನವೂ ಓಡಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಹಳ್ಳಿಯ ಹಲವಾರು ಕಸುಬುಗಳು ಮಾಯವಾಗುತ್ತಿವೆ. ಕಾಡುಗಳನ್ನು ಕಡಿದು ತೋಟಗಳನ್ನು ಮಾಡಿರುವುದರಿಂದಲೂ, ಈ ತೋಟಗಳಿಗೆ ಹೆಚ್ಚಾಗಿ ಹೊರ ರಾಜ್ಯಗಳಿಂದ ಜನರು ವಲಸೆ ಬಂದಿರುವುದರಿಂದಲೂ, ಸ್ವಾತಂತ್ರ್ಯಾನಂತರ ಉಂಟಾಗಿರುವ ರಾಜಕೀಯ, ಸಾಮಾಜಿಕ ಬದಲಾವಣೆಗಳಿಂದಲೂ, ದೈನಂದಿನ ಜೀವನದಲ್ಲೂ ಬದಲಾವಣೆ

ಗಳು ಕಂಡು ಬರುತ್ತಿವೆ. ಪರಿಶಿಷ್ಟ ಜಾತಿಗಳ ಹಾಗೂ ಬುಡಕಟ್ಟುವಳ ಜನರಿಗೆ ಸರ್ಕಾರವು ಅನೇಕ ಕಾಲೋನಿಗಳನ್ನು ಕಟ್ಟಿ ವಸತಿ ಸೌಕರ್ಯ ಏರ್ಪಡಿಸಿರುವುದರ ಪರಿಣಾಮವಾಗಿ, ಗಿರಿಜನರ ಅಲೆಮಾರಿತನ ಕಡಮೆಯಾಗಿದೆ. ಪರಿಶಿಷ್ಟ ಜಾತಿ ಜನರ ಮೇಲೆ ಆಗುತ್ತಿದ್ದ ದೌರ್ಜನ್ಯ ಕಡಿಮೆಯಾಗಿದೆ. ಬೇಟೆಯ ಪ್ರವೃತ್ತಿ ಜನಗಳಲ್ಲಿ ಕಣ್ಮರೆಯಾಗಿದೆ ; ಇದರ ಮೇಲೆ ಕಾನೂನಿನ ಪ್ರತಿಬಂಧವೂ ಇದೆ. ಸಮುದಾಯ ಮಾಧ್ಯಮಗಳೂ, ಉತ್ತಮವಾದ ಸಾರಿಗೆ ಸಂಪರ್ಕ, ಸರ್ಕಾರದ ಕಾರ್ಯಕ್ರಮಗಳಾದ ಕುಡಿಯುವ ನೀರಿನ ಪೂರೈಕೆ, ಹಣ ಸಾಲ ಕೊಡುವುದು, ಉಳಲು ಜಮೀನು, ಸಾಕಲು ದನಕರು, ಎಮ್ಮೆ ಕೋಳಿ, ಹಂದಿಗಳನ್ನು ಕೊಡುವುದು, ದವಾಖಾನೆಗಳು, ಶಾಲೆಗಳ ಸ್ಥಾಪನೆ, ಉಚಿತ ಕಾನೂನು ಸಲಹೆ ಮೊದಲಾದ ಕಾರ್ಯಕ್ರಮಗಳಿಂದಲೂ ಜನರಲ್ಲಿ ಜಾಗೃತಿಯುಂಟಾಗಿದೆ. ತಾವು ಸರ್ಕಾರವು ಒದಗಿಸಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಜೀವನವನ್ನು ಉತ್ತಮಪಡಿಸಿಕೊಳ್ಳಬೇಕೆಂಬ ಹಂಬಲವು ಗಿರಿಜನರಲ್ಲಿ ಮೂಡಿದೆ. ಕೊಡಗಿನಲ್ಲಿ ಶಿಕ್ಷಣ ವ್ಯವಸ್ಥೆ ವ್ಯಾಪಕವಾಗಿದ್ದು ಸಾಕ್ಷರತೆ ಹೆಚ್ಚಿದೆ. ಪರಿಶಿಷ್ಟ ಜಾತಿ ಬುಡಕಟ್ಟಿನವರಿಗಾಗಿ ವಿದ್ಯಾರ್ಥಿನಿಲಯಗಳೂ ಆಶ್ರಮ ಶಾಲೆಗಳೂ ಇವೆ (ನೋಡಿ : ಅಧ್ಯಾಯ 16).

ಸ್ಪರ್ಧಾತ್ಮಕ ಆರ್ಥಿಕ ಕಾರಣಗಳಿಂದಾಗಿ ಕೊಡವರು ತಮ್ಮ ಅನೇಕ ಹಳೆಯ ಸಾಮಾಜಿಕ ಕಟ್ಟಳೆಗಳನ್ನು ಬಿಟ್ಟಿದ್ದಾರೆ. ಸ್ತ್ರೀಯರು ಸೀರೆಗಳನ್ನು ಕೊಡವರದಲ್ಲದ ರೀತಿಯಲ್ಲೂ ಧರಿಸುತ್ತಾರೆ. ಶೇ. 80ರಷ್ಟು ಕೊಡವರ ವಿವಾಹಗಳು ಒಂದು ದಿನದ ವಿವಾಹಗಳಾಗಿವೆ, ಶೇ. 45ರಷ್ಟು ವಿವಾಹಗಳು ಬರೀ ದಂಪತಿ ಮುಹೂರ್ತಗಳಾಗಿವೆ, ಎಂದು ಐ. ಎಂ. ಮುತ್ತಣ್ಣ ಹೇಳಿದ್ದಾರೆ. ಕಲ್ಯಾಣ ಮಂಟಪಗಳಲ್ಲಿ ನಡೆಯುವ ವಿವಾಹಗಳಲ್ಲಿ ಅನೇಕ ಪಾರಂಪರಿಕ ವಿಧಿಗಳೂ ಹಾಡುವ ಪದ್ಧತಿಗಳೂ ಮಾಯವಾಗುತ್ತಿವೆ.

'ಪಟ್ಟೋಲೆ ಪಳಮೆ' ಎಂಬ ಗ್ರಂಥದಲ್ಲಿ ನಡಕೇರಿಯಂಡ ಚಿನ್ನಪ್ಪನವರು ಕೊಡಗಿನ ಮೂಲ ಜಾತಿಗಳಲ್ಲಿ ಕಂಡು ಬರುತ್ತಿದ್ದ ಹಲವು ಅಂತಸ್ತುಗಳನ್ನು ತಿಳಿಸುತ್ತಾರೆ. ನಾಯರ್, ಬಂಟರು, ಒಕ್ಕಲಿಗರು, ವೆಲ್ಲಾಳರು ಕೊಡವರೊಂದಿಗೆ ಸಮಾನ ಅಂತಸ್ತನ್ನು ಹೊಂದಿದ್ದರು. ತೀಯರು, ಬಿಲ್ಲವರು, ಮಡಿವಾಳರು, ಹೆಗ್ಗಡೆಗಳು (ಪೆಗ್ಗಡೆಗಳು) ಎರಡನೇ ಅಂತಸ್ತನ್ನು ಹೊಂದಿದ್ದು ಕೊಡವರ ಮನೆಗಳಲ್ಲಿ ಅಡಿಗೆ ಮನೆ, ಕನ್ನಿಂಕೊಂಬರೆ, ಮತ್ತು ನೆಲ್ಲಕ್ಕಿ ನಡುಬಾಡೆಗಳಿಗೆ ಪ್ರವೇಶಿಸುವಂತಿರಲಿಲ್ಲ. ಮೂರನೇಯ ಅಂತಸ್ತಿನವರಾದ ಯೆರವರು, ಕುರುಬರು, ಪಾಲೆಯರು ಕೊಡವರ ಜಗಲಿಯವರೆಗೆ ಮಾತ್ರ ಪ್ರವೇಶಿಸುವಂತಿದ್ದರೆ ಕಡೆಯ ಗುಂಪಿಗೆ ಸೇರಿದ ಹೊಲೆಯರು, ಮೇದರು ಮೊದಲಾದವರು ಅಂಗಳದಲ್ಲಿ ನಿಲ್ಲಬೇಕಾಗುತ್ತಿತ್ತು.

ಕೊಡಗಿನಲ್ಲಿಯೂ ಹಿಂದೆ ಬಡತನವಿದ್ದು ಬಡವರ ಜೀವನವು ಕಷ್ಟಕರವಾಗಿತ್ತು. ಇಸವಿ 1910ರ ಒಂದು ವರದಿಯ ಪ್ರಕಾರ ಬಡವರ ಕುಟುಂಬಗಳಲ್ಲಿ ಮಳೆಗಾಲದಲ್ಲಿ ದಿನಕ್ಕೆ ಒಂದೇ ಊಟ. ಮಳೆಗಾಲ ಮುಗಿಯುವ ವೇಳೆಗೆ ಮನೆಗಳಲ್ಲಿ ಧಾನ್ಯವೇ ಇರುತ್ತಿರಲಿಲ್ಲ. ಆಗಸ್ಟ್-ಸೆಪ್ಟಂಬರ್ ತಿಂಗಳುಗಳಲ್ಲಿ ಮುಂದೆ ಬರುವ ಬೆಳೆಯನ್ನು ಅಡವಿಟ್ಟು ಹೆಚ್ಚಿನ ಬಡ್ಡಿಗೆ ಧಾನ್ಯಗಳನ್ನು ತರುತ್ತಿದ್ದರು. ಬಡ್ಡಿ ದರವು ಸುಮಾರು ಶೇ. 250 ರಷ್ಟಿತ್ತೆಂದು ವರದಿಯು ತಿಳಿಸುತ್ತದೆ.

## ವಿವಾಹ

ಕೊಡವರ ವಿವಾಹ ಪದ್ಧತಿಯು ಕೆಲವು ವೈಶಿಷ್ಟ್ಯಗಳಿಂದ ಕೂಡಿದೆ. ಅವರಲ್ಲಿ ಗಂಡಿನ ಮನೆಯಲ್ಲಿ ಗಂಡಿನ ವಿವಾಹ ಶಾಸ್ತ್ರಗಳೂ ಹೆಣ್ಣಿನ ಮನೆಯಲ್ಲಿ ಹೆಣ್ಣಿನ ವಿವಾಹ ಶಾಸ್ತ್ರಗಳು ನಡೆಯುತ್ತವೆ. ಕಡೆಯಲ್ಲಿ ಗಂಡಿನವರು ಹೆಣ್ಣಿನ ಮನೆಗೆ ಬಂದು ಹೆಣ್ಣನ್ನು ಕರೆದುಕೊಂಡು ಹೋಗುತ್ತಾರೆ. ಅವರಲ್ಲಿ ಹಿಂದೆ ತಾಳಿ ಕಟ್ಟುವ ಪದ್ಧತಿಯಿರಲಿಲ್ಲ. ಇತ್ತೀಚೆಗೆ ರೂಢಿಗೆ ಬಂದಿದ್ದು ತಾಳಿಯನ್ನು ಹೆಣ್ಣಿನ ತಾಯಿ ಅಥವಾ ಸುಮಂಗಲಿಯರು ಕಟ್ಟುತ್ತಾರೆ. ಹಿಂದಿನ ಸಂಪ್ರದಾಯಗಳಾದ ಜಾತಕವನ್ನು ನೋಡಿಸುವುದು, ದೇವರಲ್ಲಿ ಹೂವು ಕೇಳುವುದು ಇತ್ತೀಚಿನ ದಿನಗಳಲ್ಲಿ ಕಡಮೆಯಾಗಿ ಗಂಡು ಹೆಣ್ಣುಗಳು ಒಪ್ಪಿದರೆ ಸಾಕೆಂಬ ಅಭಿಪ್ರಾಯ ಹೆಚ್ಚಾಗಿ ಕಂಡುಬರುತ್ತಿದೆ. ಅವರಲ್ಲಿ ವಿವಾಹಗಳು ಹಿಂದಿನಿಂದಲೂ ಪ್ರೌಢಾವಸ್ಥೆಗೆ ಬಂದ ನಂತರ ನೆರವೇರುತ್ತವೆ. ಗಂಡಿನ ಕಡೆಯವರು ಅರುವನೊಂದಿಗೆ ಹೆಣ್ಣನ್ನು ಕೇಳಲು ಹೆಣ್ಣಿನ ಮನೆಗೆ ಹೋಗುವರು. ಹೆಣ್ಣಿನ ಕಡೆಯವರು ವಿವಾಹ ಸಂಬಂಧಕ್ಕೆ ಒಪ್ಪಿಕೊಳ್ಳುವುದನ್ನು 'ಕುರಿ' ಎನ್ನುತ್ತಾರೆ. ಅದಾದನಂತರ ಮದುವೆ ನಿಶ್ಚಯ ಮಾಡುತ್ತಾರೆ. ಇದನ್ನು ಮಂಗಲ ಕುರಿಪ ಎನ್ನುತ್ತಾರೆ. ಆ ದಿನ ಗಂಡಿನ ಕಡೆಯವರು ಅರುವ ಮತ್ತು ಸಂಬಂಧಿಕರು ಅಥವಾ ಸ್ನೇಹಿತರೊಂದಿಗೆ ಹೆಣ್ಣಿನ ಮನೆಗೆ ಹೋಗಿ ಲಗ್ನ ನಿಶ್ಚಯಿಸಿ ಲಗ್ನಪತ್ರಿಕೆ ಬರೆಸುವರು. ಶುದ್ಧಿಗೊಳಿಸಿದ ನೆಲ್ಲಕ್ಕಿನಡುಬಾಡೆಯಲ್ಲಿ ತಳಿಯಕ್ಕಿ ಬೊಳಿಚದ (ದೀಪ) ಎರಡು ಕಡೆ ಗಂಡು-ಹೆಣ್ಣಿನ ಕಡೆಯವರು ನಿಂತು ಮದುವೆ ನಿಶ್ಚಯಿಸಿ ದೀಪಕ್ಕೆ ನಮಸ್ಕರಿಸಿ ಈಡ್ ಮಾಡುವರು (ಹಣವನ್ನಾಗಲೀ, ಆಭರಣವನ್ನಾಗಲೀ ತಳಿಯಕ್ಕಿ ಬೊಳಿಚಕ್ಕೆ ನಂಬಿಕೆಗಾಗಿ ಇಡುವುದು). ಕರೆಯೋಲೆಯನ್ನು ಮುದ್ರಿಸಿ ಹಂಚುವರು.

ಚಪ್ಪರದ ದಿನವನ್ನು ಕರಿಕ್ ಮುರಿಪ ಎಂದು ಕರೆಯುತ್ತಾರೆ. ಅಂದು ಗಂಡಿನ ಮನೆಯಲ್ಲಿ, ಅವನ ಊರಿನವರು ಸಂಬಂಧಿಕರು, ಹೆಣ್ಣಿನ ಮನೆಯಲ್ಲಿ ಆಕೆಯ ಊರಿನವರು ಮತ್ತು ಸಂಬಂಧಿಕರು ಚಪ್ಪರ ಹಾಕಿ, ಬಾಳೆಕಂಬ ತೋರಣಗಳನ್ನು ಕಟ್ಟಿ, ಬಿಳಿಬಟ್ಟೆಯ ಮೇಲುಕಟ್ಟು ಹಾಕಿ ಚಪ್ಪರವನ್ನು ಅಲಂಕರಿಸುತ್ತಾರೆ. ಅಂದಿನಿಂದ ಮದುವೆ ಮುಗಿಯುವವರೆವಿಗೂ ಮನೆಯಲ್ಲಿ ಬಾಳೆಸಾರು, ದೋಸೆ, ಹೆಸರುಬೇಳೆ ಪಾಯಸ ನಿಷೇಧ. ಹೆಂಗಸರೆಲ್ಲ ಒಟ್ಟು ಸೇರಿ ಮುಂದಿನ ಭೋಜನಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಚಪ್ಪರಕ್ಕೆ ಬೆಸ ಸಂಖ್ಯೆಯಲ್ಲಿ ಕಾಲುಗಳಿರುತ್ತವೆ. ಇವುಗಳಲ್ಲಿ ಒಂದು ಹಾಲುಗಂಬವಾಗಿರುತ್ತದೆ (ಹಾಲು—ಸೊನೆ—ಬರುವ ಮರದ ಕಂಬ). ಅಂದು ಮದುವೆಯ ಹುಡುಗನು ಬಿಳಿ ಕುಪ್ಪಸ, ತಲೆಗೆ ಕೆಂಪು ವಸ್ತ್ರದಿಂದ ಕೂಡಿದ ಉಡುಪು ಧರಿಸಿ, ನೆಲ್ಲಕ್ಕಿ ನಡುಬಾಡೆಯ ದೀಪಕ್ಕೆ ಅಕ್ಕಿ ಹಾಕಿ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾನೆ. ಅದೇ ರೀತಿ ಹೆಣ್ಣಿನ ಮನೆಯಲ್ಲಿಯೂ ವಧುವು ಹೊಸ ಬಟ್ಟೆಯುಟ್ಟು, ದೊಡ್ಡವರಿಗೆ ನಮಸ್ಕರಿಸಿ, ಆಶೀರ್ವಾದ ಪಡೆಯುತ್ತಾಳೆ. ಅವರವರ ಮನೆಯಲ್ಲಿ ತೇರಣ ಶಾಸ್ತ್ರ ನಡೆಯುತ್ತದೆ. ತೇರಣ ಶಾಸ್ತ್ರದಲ್ಲಿ ಹುಡುಗ ಅಥವಾ ಹುಡುಗಿಯನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ಕೂರಿಸಿ ಮೂರು ಜನ ಮುತ್ತೈದೆಯರು ಕೈಕಾಲುಗಳಿಗೆ ತೇರಣ ಹಚ್ಚುತ್ತಾರೆ. ತೇರಣದ ನಂತರ ಊಟ, ಊಟವಾದ ಮೇಲೆ ಮನೆಯ ಯಜಮಾನರು ಊರವರಿಗೆ 'ಊರುಪತ್ತಿ' ಕೊಡುತ್ತಾರೆ (ವೀಳ್ಯದೆಲೆ, ಅಡಿಕೆ, ಬಾಳೆಹಣ್ಣು, ತೆಂಗಿನಕಾಯಿ ಚೂರು, ಕುರುಕಲುಗಳನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ತಂದಿಟ್ಟು ತೆಗೆದುಕೊಳ್ಳಬೇಕೆಂದು ಊರಿನವರನ್ನು ಪ್ರಾರ್ಥಿಸುತ್ತಾನೆ). ಹೆಣ್ಣಿನ ಮನೆಯಲ್ಲಿ ಅಂದು ರಾತ್ರಿ ಪೆಟ್ಟಿ ತುಂಬುವ ಶಾಸ್ತ್ರವಿದೆ. ವಧುವಿಗೆ ಕೊಡುವ ಬಟ್ಟೆ ಬರೆ, ಆಭರಣ, ಪಾತ್ರೆಗಳನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ತಂದು ಪೆಟ್ಟಿಗೆಗೆ ತುಂಬುತ್ತಾರೆ. ಈಡ್ (ಹಣ, ಆಭರಣ)ನ್ನು ಕೂಡ ಪೆಟ್ಟಿಗೆಗೆ ಹಾಕುತ್ತಾರೆ.

ಮದುವೆಯ ದಿನ ಮಡಿವಾಳರು ಚಪ್ಪರದ ಮುಂಭಾಗದಿಂದ ನೆಲ್ಲಕ್ಕಿ ನಡುಬಾಡೆಯ ತಲೆಯುವರೆವಿಗೂ ಬಿಳಿ ಬಟ್ಟೆಯ ಮೇಲ್ಕಟ್ಟು ಕಟ್ಟಿ, ಮುಹೂರ್ತಕ್ಕೆ ಕೂಡುವ ಸ್ಥಳದಲ್ಲಿ, ಮೇಲ್ಕಟ್ಟಿನ ಕೆಳಗೆ ಕೆಂಪುರೇಷ್ಮೆಯ ಮೇಲ್ಕಟ್ಟು ಕಟ್ಟುತ್ತಾನೆ. ಇದರ ಮೂಲೆಗಳಿಗೆ ಒಂದಕ್ಕೆ ಬಾಳೆಹಣ್ಣಿನ ಗೊನೆ, ಇನ್ನೊಂದಕ್ಕೆ ತೆಂಗಿನಕಾಯಿ, ಮೂರನೆಯದಕ್ಕೆ ಬೆಳ್ಳುರಿಕಾಯಿ, ಕಡೆಯದಕ್ಕೆ ವೀಳ್ಯದೆಲೆ, ಅಡಿಕೆ, ಅಡಿಕೆಮರದ ಹೂವುಗಳನ್ನು ಕಟ್ಟುತ್ತಾರೆ. ಗಂಡಿನ ಮನೆಯಲ್ಲಿ ಮದುವೆಯ ಹುಡುಗನು ಬಿಳಿಕುಪ್ಪಸ, ತಲೆಗೆ ಕೆಂಪು ವಸ್ತ್ರ, ಸೊಂಟಕ್ಕೆ ಪಟ್ಟಿ ಧರಿಸಿ, ಕನ್ನಿಕೊಂಬರೆ, ನೆಲ್ಲಕ್ಕಿ ನಡುಬಾಡೆಗಳಲ್ಲಿ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಹಿರಿಯರ ಆಶೀರ್ವಾದ ಪಡೆದು ಕ್ಷೌರ ಮಾಡಿಸಿಕೊಳ್ಳುತ್ತಾನೆ. ಕ್ಷೌರಿಕನು ಮುಕ್ಕಾಲಿಯ ಮೇಲೆ ಪಾತ್ರೆಯಲ್ಲಿರಿಸಿರುವ ಹಾಲಿನಿಂದ ಕ್ಷೌರ ಮಾಡಿ ಕೂದಲನ್ನು ಅದಕ್ಕೆ ಹಾಕುತ್ತಾನೆ. ಅದನ್ನು ಹಾಲು ಒಸರುವ ಮರದ ಬುಡದಲ್ಲಿ ಚೆಲ್ಲುತ್ತಾರೆ. ಹುಡುಗನ ಜೊತೆಗೆ ಇನ್ನಿಬ್ಬರಾದರೂ ಕ್ಷೌರ ಮಾಡಿಸಿಕೊಳ್ಳುತ್ತಾರೆ. ಕ್ಷೌರಿಕನಿಗೆ ಪುತ್ತರಿ ಪಚ್ಚೆಯಲ್ಲಿ (ಕುಕ್ಕೆ) ಅಕ್ಕಿ ತೆಂಗಿನಕಾಯಿ ಬಾಳೆಹಣ್ಣು ಕೊಡುತ್ತಾರೆ. ಜೊತೆಗೆ ಹುಡುಗನು ತಲೆ ಕಟ್ಟಿದ್ದ ಕೆಂಪುವಸ್ತ್ರ (ಮುಂಡೆತುಣಿ)ವನ್ನೂ ಕೊಡುತ್ತಾರೆ. ಹುಡುಗನನ್ನು ಸ್ನಾನ ಮಾಡಿಸಿ ಬಿಳಿ ಅಥವಾ ಕೆಂಪು ರೇಷ್ಮೆ ಕುಪ್ಪಸ, ಕೆಂಪು ರೇಷ್ಮೆ ಚೇಲೆ, ಪಾನಿಮುಂಡೆ ತುಣಿ, ಪೀಚೆಕತ್ತಿ, ಒಡಿಕತ್ತಿ, ಅರೆ, ಚಂಚೋಲೆ, ಕುತ್ತಿಗೆಗೆ ಚಿನ್ನದ ಸರ ಮೊದಲಾದವುಗಳಿಂದ ಅಲಂಕರಿಸಿ ಮುಹೂರ್ತಕ್ಕೆ ಸಿದ್ಧಪಡಿಸುತ್ತಾರೆ. ಹೆಣ್ಣಿನ ಮನೆಯಲ್ಲಿ ಹೆಣ್ಣಿಗೆ ಮುತ್ತೈದೆಯರು ಬಳೆ ತೊಡಿಸುತ್ತಾರೆ. ನಂತರ ಸ್ನಾನ ಮಾಡಿಸಿ ಮದುವೆ ಶೃಂಗಾರ ಮಾಡುತ್ತಾರೆ. ಕೆಂಪು ಜರಿತಾರಿ ಸೀರೆ, ಕೆಂಪು ಉದ್ದ ಕೈ ರವಿಕೆ, ಕರಿಮಣಿ, ಓಲೆ, ಚಿನ್ನದ ಸರ, ಕಡಗ, ಕಾಲುಂಗುರ ಇತ್ಯಾದಿಗಳು ಹೆಣ್ಣಿನ ಮದುವೆಯ ಅಲಂಕಾರದ ಉಡುಪು, ಆಭರಣಗಳು. ಮುಹೂರ್ತದ ಸಮಯಕ್ಕೆ ಅವರವರ ಮನೆಗಳಲ್ಲಿ ಹುಡುಗನನ್ನು ಬೋಜಕಾರನು (ಹುಡುಗನ ಭಾವ, ಅರುವ ಅಥವಾ ಆಪ್ತ) ಹುಡುಗಿಯನ್ನು ಬೋಜಕಾರ್ತಿಯು (ಅತ್ತಿಗೆ, ಸೋದರತ್ತೆ ಅಥವಾ ಗೆಳತಿ) ಮಡಿವಾಳರು ಹಾಸಿದ ಮಡಿಯ ಮೇಲೆ ಮುಹೂರ್ತದ ಸ್ಥಳಕ್ಕೆ ಕರೆದುತರುತ್ತಾರೆ. ಮುಹೂರ್ತದ ಸ್ಥಳದಲ್ಲಿ ಇರುವ ಮುಕ್ಕಾಲಿಯನ್ನು ಮೂರು ಸುತ್ತು ಸುತ್ತಿ ಅದರ ಮೇಲೆ ಕುಳಿತುಕೊಳ್ಳುತ್ತಾರೆ. ಅವರಿಗೆ ಆರತಿ ಮಾಡಿ, ಅಕ್ಷತೆ ಹಾಕಿ, ಆಶೀರ್ವದಿಸಿ, ಗಿಂಡಿಯಿಂದ ಹಾಲು ಕುಡಿಸಿ, ಬಹುಮಾನವನ್ನು ಹಣದ ರೂಪದಲ್ಲಾಗಲೀ, ವಸ್ತುವಿನ ರೂಪದಲ್ಲಾಗಲೀ ಕೊಡುತ್ತಾರೆ. ಮುಹೂರ್ತದ ನಂತರ ಹುಡುಗನನ್ನು ಬೋಜಕಾರನೂ ಹುಡುಗಿಯನ್ನು ಬೋಜಕಾರ್ತಿಯೂ ಕೈ ಹಿಡಿದು ಎಬ್ಬಿಸಿ ಕೋಣೆಗೆ ಕರೆದುಕೊಂಡು ಹೋಗುತ್ತಾರೆ. ಬ್ರಾಹ್ಮಣನು ತಂದಿರುವ ತೀರ್ಥ ಪ್ರಸಾದವನ್ನು ಕೊಡುತ್ತಾರೆ. ಮುಹೂರ್ತಕ್ಕೆ ಬರುವ ಗಣ್ಯ ನೆಂಟರಿಗೆ ಬಾಳೆಬಿರುದು ಮರ್ಯಾದೆ ಕೊಡುವ ಪದ್ಧತಿಯಿದೆ. ಮುಹೂರ್ತವಾದ ಮೇಲೆ ಊಟ. ಹುಡುಗ ಹುಡುಗಿಯರು ತಾವು ಇರುವ ಕೋಣೆಯಲ್ಲಿ ಊಟ ಮಾಡುತ್ತಾರೆ. ನಂತರ ಪೋಳಿಯ ತುಂಬುವ ಸಂಪ್ರದಾಯ. ಬೆತ್ತದಿಂದ ಕಲಾತ್ಮಕವಾಗಿ ನೇಯ್ದ ಮುಚ್ಚಳದಿಂದ ಕೂಡಿರುವ ಚಿಕ್ಕ ಕುಕ್ಕೆಯೊಂದರಲ್ಲಿ 3 ಅಥವಾ 5 ಸೇರು ಅಕ್ಕಿ ಸೇರಿಗೊಂದರಂತೆ

ತೆಂಗಿನಕಾಯಿ, ಒಂದು ಅಚ್ಚು ಬೆಲ್ಲ, ಒಂದೊಂದು ಚಿಪ್ಪು ಪೂಬಾಳೆ, ಒಂದೊಂದು ಕವಳಿಗೆ ವೀಳ್ಯೆದೆಲೆ ಒಂದೊಂದು ಮಾನ ಅಡಿಕೆಯಿಟ್ಟಿರುತ್ತಾರೆ. ಒಂದು ಗಿಂಡಿಯಲ್ಲಿ ಹಾಲು ಇರುತ್ತದೆ. ಇದನ್ನೇ ಪೋಳಿಯ ತುಂಬುವುದು ಎನ್ನುತ್ತಾರೆ. ಗಿಂಡಿ ಹಾಲನ್ನು ಅರುವನ ಮನೆಯ ಹೆಣ್ಣೇ ತುಂಬಬೇಕು. ಮತ್ತು ಹುಡುಗಿಯ ಮನೆಗೆ ಹೊತ್ತು ತಂದು ಹೆಣ್ಣಿನ ಮನೆ ಮನೆಯಲ್ಲಿ ದಂಪತಿ ಮುಹೂರ್ತದಲ್ಲಿ ಮದುಮಗನು ಮದು ವಣಗಿತ್ತಿಗೆಕೊಡಬೇಕು. ಪೋಳಿಯವನ್ನು ದಂಪತಿ ಮುಹೂರ್ತ ವಾದ ಏಳು ದಿವಸಗಳ ನಂತರ ಏಳು ಬಗೆಯ ತಿಂಡಿಗಳೊಡನೆ ಹಿಂತಿರುಗಿಸಬೇಕು.

ಊಟವಾದ ಮೇಲೆ ಗಂಡಿನ ಮನೆಯವರು ಹೆಣ್ಣಿನಮನೆಗೆ ಸಿದ್ಧತೆ ಮಾಡಿಕೊಂಡು ಹೊರಡುತ್ತಾರೆ. ಭೋಜಕಾರನ ಜೊತೆ ಮದುಮಗನು ನೆಲ್ಲಕ್ಕಿ ನಡುಬಾಡೆಯಲ್ಲಿ ದೀಪಕ್ಕೆ ಅಕ್ಕಿ ಹಾಕಿ ನಮಸ್ಕರಿಸಿ ಹಿರಿಯರ ಆಶೀರ್ವಾದ ಪಡೆದು ಕೈಮಡಕ್ಕೆ ನಮಸ್ಕರಿಸಿ ಹೊರಡುತ್ತಾನೆ. ಹೆಣ್ಣಿನ ಮನೆ ತಲುಪಿದಾಗ ಹುಡುಗಿಯ ಮನೆಯವರು ಎದುರ್ಗೊಂಡು ಬಾಳೆ ಬಿರುದಿ ನೊಡನೆ ಮನೆಗೆ ಕರೆದೊಯ್ಯುತ್ತಾರೆ. ಮದುಮಗನು ನೆಲ್ಲಕ್ಕಿ ನಡುಬಾಡೆಯಲ್ಲಿ ಐಮರದ ಮೇಲೆ ಕುಳಿತುಕೊಳ್ಳುತ್ತಾನೆ. ಕಾಲು ತೊಳೆದ ನಂತರ ಫಲಾಹಾರ.

ದಂಪತಿ ಮುಹೂರ್ತವು ನೆಲ್ಲಕ್ಕಿ ನಡುಬಾಡೆಯಲ್ಲಿ ನಡೆಯು ತ್ತದೆ(ಸಾಮಾನ್ಯವಾಗಿ ರಾತ್ರಿ 7 ರಿಂದ 8 ಗಂಟೆಯ ವೇಳೆಗೆ). ಮುಕ್ಕಾಲಿಗಳ ಮೇಲೆ ವಧುವರರು ಕೂಡುತ್ತಾರೆ. ಹಣ (ಉಡುಗೊರೆ) ಕೊಡುವವರು ಕೊಡುತ್ತಾರೆ. ಬೋಜ ಕಾರನು ವರನನ್ನು ಕೈಹಿಡಿದು ಎಬ್ಬಿಸುತ್ತಾನೆ. ವರನು ವಧುವಿನ ತಲೆಯ ಮೇಲೆ ಅಕ್ಕಿ ಹಾಕಿ, ಮನೆಯಿಂದ ಪೋಳಿಯದಲ್ಲಿ ತಂದ ಹಾಲನ್ನು ವಧುವಿಗೆ ಕುಡಿಯಲು ಕೊಟ್ಟು, ಹಣದ ಚೀಲ ಕೊಡುತ್ತಾನೆ. ಹುಡುಗಿಯು ಹಣದ ಚೀಲವನ್ನು ಬಲಗೈಯಲ್ಲಿ ತೆಗೆದುಕೊಂಡು ಎಡಗೈಲಿ ಹಿಡಿದು ಬಲಗೈಯನ್ನು ವರನಿಗೆ ಕೊಡುತ್ತಾಳೆ. ವರನು ಕೈಯನ್ನು ಹಿಡಿದು ಮೇಲಕ್ಕೆ ಎಬ್ಬಿಸುತ್ತಾನೆ. ನಂತರ ಸಂಬಂಧ ಪರಜೆ ಸಂಪ್ರದಾಯ ನಡೆಯುತ್ತದೆ. ವರನು ವಧುವನ್ನು ಕರೆದುಕೊಂಡು ಹೊರಗೆ ದಾಟುವಾಗ ಹುಡುಗಿಯ ಸೋದರಮಾವನ ಮಗ ಅಥವಾ ಸೋದರತ್ತೆಯ ಮಗ, ಮುಂದೆ ಕುಟುಂಬದ ಸೇವಕರಾದ ಯೆರವ ಅಥವಾ ಪೊಲೆ ಯರು ದಾರಿಯನ್ನು ತಡೆಯುತ್ತಾರೆ. ಅವರಿಗೆ ಬಹುಮಾನ ಗಳನ್ನು ಕೊಟ್ಟು ವರನು ಸಂತೈಸುತ್ತಾನೆ. ಮೆರವಣಿಗೆ ಗಂಡಿನ ಮನೆಯ ಬಾಳೆಬಿರುದಿನ ಸ್ಥಳಕ್ಕೆ ತಲುಪುವಾಗ ವಧುವು ಕೆಂಪು ಮುಸುಕು ಹಾಕಬೇಕು. ವಧುವಿನ ಗೌರವಕ್ಕಾಗಿ ಇಡುವ ಬಾಳೆ ಬಿರುದನ್ನು ಹೆಣ್ಣಿನ ಕಡೆಯವರು ಸ್ವೀಕರಿಸು ತ್ತಾರೆ. ಗಂಡಿನ ಮನೆಯಲ್ಲಿ ವಧುವನ್ನು ಅಂದು ಐಮರದ ಮೇಲೆ ಕೂರಿಸುವ ಪದ್ಧತಿಯಿದೆ. ವಧೂವರರು ಕೆನ್ನಿ ಕೊಂಬರೆ, ನೆಲ್ಲಕ್ಕಿ ನಡುಬಾಡೆಯ ದೀಪಗಳಿಗೆ ಅಕ್ಕಿ ಹಾಕಿ ನಮಸ್ಕರಿಸುತ್ತಾರೆ. ನಂತರ ಫಲಾಹಾರ. ಫಲಾಹಾರವಾದ ಮೇಲೆ ವಧುವು ಕೊಟ್ಟಿಗೆಯಿಂದ ಗೊಬ್ಬರವನ್ನು ಹೊಲಕ್ಕೆ ಹಾಕಿ (ಈ ಪದ್ಧತಿ ಈಗ ನಿಂತುಹೋಗಿದೆ), ಬಾವಿಯಿಂದ (ಗಂಗಾಪೂಜೆ ಮಾಡಿ) ನೀರು ತರಬೇಕು. ಕಡೆಯಲ್ಲಿ ವಧು ವಿಗೆ ಹೆಸರಿಡುವ ಸಂಪ್ರದಾಯವಿದೆ. ಇತ್ತೀಚಿನ ದಿನಗಳಲ್ಲಿ ಮದುವೆಗಳು ಕೊಡವ ಸಮಾಜಗಳಲ್ಲಿ ಹೆಚ್ಚಾಗಿ ನಡೆಯುತ್ತವೆ. ಮುಖ್ಯವಾದ ಸಂಪ್ರದಾಯಗಳನ್ನು ಮಾತ್ರವಿಟ್ಟುಕೊಂಡು ಮದುವೆಯನ್ನು ಸಾಧ್ಯವಿದ್ದಷ್ಟು ಕಡಿಮೆ ಅವಧಿಯಲ್ಲಿ ಮುಗಿಸುವ ಪರಿಪಾಠ ಬೆಳೆದು ಬರುತ್ತಿದೆ. ಕೊಡವರ ವಿವಾಹ ಗಳಲ್ಲಿ ವಧುವಿನ ತಾಯಿಯು ತಾಳಿಯಿರುವ (ಪತ್ತಾಕು) ಕರಿಮಣಿ ಸರವನ್ನು ಮುಹೂರ್ತದ ಸಮಯದಲ್ಲಿ ವಧುವಿನ ಕತ್ತಿಗೆ ಕಟ್ಟುವ ಸಂಪ್ರದಾಯ ಬೆಳೆದು ಬರುತ್ತಿದೆ.

ಕೊಡವರ ಇತರ ಮೂರು ರೀತಿಯ ವಿವಾಹ ಪದ್ಧತಿಗಳು ಕೂಡಾವಳೀ ಮಂಗಲ, ಒಕ್ಕಪರಿಜೆ ಮತ್ತು ಮಕ್ಕಪರಿಜೆ. ಕೂಡಾವಳೀ ಮಂಗಳದಲ್ಲಿ ವಿಧವೆಯು ಅಥವಾ ವಿವಾಹ ವಿಚ್ಛೇದನ ಪಡೆದವಳು ಪುನಃ ವಿವಾಹವಾಗುತ್ತಳೆ. ಕೂಡಾವಳಿ ಮಂಗಲದಲ್ಲಿ ಮೂರು ವಿಧ. ವಿಧವೆಯು ತನ್ನ ಗಂಡನ ಸಹೋದರ ಇಲ್ಲವೇ ಆ ಕುಟುಂಬದ ಇನ್ನೊಬ್ಬನನ್ನು ಮದುವೆ ಯಾಗುವುದು ; ವಿಧವೆಯು ಬೇರೆ ಕುಟುಂಬದವರನ್ನು ವಿವಾಹ ವಾಗುವುದು ಮತ್ತು ಗಂಡನು ತನ್ನ ಹೆಂಡತಿಯನ್ನು ಬಿಟ್ಟಾಗ ಅವಳು ಬೇರೆಯವರನ್ನು ವಿವಾಹವಾಗುವುದು. ಮೊದಲನೇಯ ರೀತಿಯ ಕೂಡಾವಳೀ ಮಂಗಲದಲ್ಲಿ ಗಂಡಿಗೆ ಮುಹೂರ್ತದ ಗೌರವವುಂಟು. ಆದರೆ ಹೆಣ್ಣಿಗಿಲ್ಲ. ಎರಡು ಮತ್ತು ಮೂರನೆಯ ರೀತಿಯ ಕೂಡಾವಳಿ ಮಂಗಲದಲ್ಲಿ ಮೊದಲಿಗೆ ಮೊದಲನೇ ಗಂಡನ ಮನೆಯ ಸಂಬಂಧವನ್ನು ತಪ್ಪಿಸುವ ಶಾಸ್ತ್ರವಿದೆ.

ಒಕ್ಕಪರಿಜೆಯನ್ನು ಕುತ್ತಿಕ್‌ನಿಪ್ಪೊ ಎಂದು ಕರೆಯುತ್ತಾರೆ. ಕುಟುಂಬದಲ್ಲಿ ಗಂಡು ಮಕ್ಕಳಿಲ್ಲದೆ ಹೆಣ್ಣು ಮಕ್ಕಳಿದ್ದರೆ, ಕುಟುಂಬವು ನಿರ್ವಂಶವಾಗುವುದನ್ನು ತಪ್ಪಿಸಲು ಈ ಪದ್ಧತಿ ರೂಢಿಯಲ್ಲಿದೆ. ಈ ಪದ್ಧತಿಯಲ್ಲಿ ಹೆಣ್ಣು ಮಗಳನ್ನು ವಿವಾಹವಾಗುವವನು ತನ್ನ ಮನೆತನವನ್ನು ಬಿಟ್ಟು ಹೆಣ್ಣಿನ ಮನೆಗೇ ಬಂದು ನಿಲ್ಲುತ್ತಾನೆ. ಆ ಮನೆತನದ ಹೆಸರನ್ನೇ

ಪಡೆಯುತ್ತಾನೆ. ಆತನ ಮಕ್ಕಳು ತಾಯಿಯ ಮನೆತನದ ಹೆಸರನ್ನೇ ಪಡೆಯುತ್ತಾರೆ, ಹಾಗೂ ಮುಂದುವರೆಸಿಕೊಂಡು ಹೋಗುತ್ತಾರೆ. ಮಕ್ಕಪರಿಜೆಯು ಇನ್ನೊಂದು ರೀತಿಯ ಪದ್ಧತಿ. ಇದನ್ನು ಪಚ್ಚಡಕ್ ನಡಪದ್ ಎಂದು ಕರೆಯುತ್ತಾರೆ. ಒಂದು ಕುಟುಂಬದಲ್ಲಿ ಗಂಡು ಮಕ್ಕಳಿಲ್ಲದೆ ಹೆಣ್ಣು ಮಕ್ಕಳು ಮಾತ್ರವಿದ್ದು ಹಾಗೂ ಯಾರೂ ಒಕ್ಕಪರಿಜೆಗೆ ಒಪ್ಪದಿದ್ದರೆ ಆ ಕುಟುಂಬವು ನಿರ್ವಂಶವಾಗುವುದನ್ನು ತಪ್ಪಿಸಲು ಮಾಡಿಕೊಂಡಿರುವ ಪದ್ಧತಿ ಮಕ್ಕಪರಿಜೆ. ಈ ಪದ್ಧತಿಯಲ್ಲಿ ಸ್ತ್ರೀಯು ಕುಟುಂಬವನ್ನು ಮುಂದುವರೆಸಲು ವಿವಾಹವಾಗಿರುವ ಪುರುಷನನ್ನು ವಿವಾಹವಾಗಿ ಸಂತಾನವನ್ನು ಪಡೆಯುತ್ತಾಳೆ. ಆದರೆ ಆತನು ತನ್ನ ಕುಟುಂಬದಲ್ಲಿಯೇ ವಾಸಿಸುತ್ತಿರುತ್ತಾನೆ. ಆತನ ಊಟ, ಉಪಚಾರ, ಉಡುಪು, ಮೊದಲಾದವುಗಳನ್ನು ಈ ಸ್ತ್ರೀಯು ನೋಡಿಕೊಳ್ಳುತ್ತಿರುತ್ತಾಳೆ. ಆಕೆಯ ಆಸ್ತಿ ಅಥವಾ ಇತರ ವಿಷಯಗಳಲ್ಲಿ ಗಂಡಿಗೆ ಯಾವ ಹಕ್ಕೂ ಇರುವುದಿಲ್ಲ. ಹೀಗೆ ಆ ಸ್ತ್ರೀಯು ಆ ಪುರುಷನಿಂದ ಪಡೆದ ಮಕ್ಕಳು ತಾಯಿಯ ಮನೆತನವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಕನ್ನಿಮಂಗಲವನ್ನು ಬಿಟ್ಟು ಇತರೆ ವಿವಾಹ ಪದ್ಧತಿಗಳು ತೀರಾ ವಿರಳ. ಮಕ್ಕಪರಿಜೆ ಪದ್ಧತಿಯು ಈಗ ಪೂರ್ಣವಾಗಿ ನಿಂತುಹೋಗಿದೆ.

ಕೊಡಗು ಜಿಲ್ಲೆಯಲ್ಲಿ ಗೌಡರು ಧಾರೆ ಮದುವೆ ಮಾಡುತ್ತಾರೆ. ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ತೊಟ್ಟಿಲಲ್ಲಿಯೇ ತಾಳಿ ಕಟ್ಟಿಸಿ ನಂತರ ವಿವಾಹ ಮಾಡುತ್ತಿದ್ದರಂತೆ. ಈಗ ಪ್ರೌಢಾವಸ್ಥೆಗೆ ಬಂದ ಮೇಲೆ ವಿವಾಹ ಮಾಡುತ್ತಾರೆ. ಗಂಡಿನ ಕಡೆಯವರು ಹೆಣ್ಣನ್ನು ಹುಡುಕಿಕೊಂಡು ಹೋಗುತ್ತಾರೆ. ತೆರ ಪದ್ಧತಿ ರೂಢಿಯಲ್ಲಿದೆ. ಗಂಡು ಹೆಣ್ಣು ನಿಶ್ಚಯಿಸುವಾಗ ಕೆಲವರು ದೇವರನ್ನು ಹೂವು ಕೇಳುತ್ತಿದ್ದ ಪದ್ಧತಿಯಿತ್ತು. ಈಗಲೂ ಕೆಲವರು ಅನುಸರಿಸುತ್ತಾರೆ. ವೀಳ್ಯದ ಶಾಸ್ತ್ರ, ಚಪ್ಪರ, ಮುಹೂರ್ತ, ಧಾರೆ, ಮಾಂಗಲ್ಯಧಾರಣೆ, ನಾಗವಲ್ಲಿ ಮೊದಲಾದ ಶಾಸ್ತ್ರಗಳನ್ನು ಮದುವೆಯಲ್ಲಿ ಆಚರಿಸುತ್ತಾರೆ. ವೀಳ್ಯದ ಶಾಸ್ತ್ರದಲ್ಲಿ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಹೋಗುತ್ತಾರೆ. ಕೈಸಾಲೆಯಲ್ಲಿ ಮುಕ್ಕಾಲಿಯ ಮೇಲೆ ಅಕ್ಕಿ, ವೀಳ್ಯದೆಲೆ, ಹಣ, ಅಡಿಕೆ, ಇಟ್ಟು ಒಂದು ದೀಪವಿಟ್ಟಿರುತ್ತಾರೆ. ಗಂಡಿನ ಕಡೆಯವರು ಹೆಣ್ಣಿನ ಕಡೆಯವರು ಅದರ ಎರಡು ಬದಿಯಲ್ಲಿಯೂ ಕುಳಿತು ಮಾತಿನ ಕರಾರು ಮಾಡಿಕೊಳ್ಳುತ್ತಾರೆ. ಗಂಡಿನ ಕಡೆಯವರು ಸಾಲಾವಳಿ ವೀಳ್ಯ, ಮಾತಿನ ಕರಾರು ವೀಳ್ಯ, ವೀಳ್ಯದ ಶಾಸ್ತ್ರದ ವೀಳ್ಯ, ಬಣ್ಣ ಬಂಗಾರದ ವೀಳ್ಯ, ಮದುವೆ ಕುರಿ ವೀಳ್ಯ ಹಾಗೂ ಗುರು ವೀಳ್ಯ ಎಂದು ಆರು ವೀಳ್ಯಗಳನ್ನು ಎತ್ತಿಕೊಡುತ್ತಾರೆ. ದಿನ ನಿಶ್ಚಯವಾದ ಮೇಲೆ ಲಗ್ನಪತ್ರಿಕೆಯನ್ನು ಹಂಚುತ್ತಾರೆ. ಮುಹೂರ್ತದ ಹಿಂದಿನ ದಿನ 12 ಕಂಬಗಳ ಚಪ್ಪರ ಹಾಕುತ್ತಾರೆ. ಕಂಬಗಳ ಮೇಲೆ ಗುಂಬ, ಬುಡದಲ್ಲಿ ಒಂದೊಂದು ಕುಡಿಕೆಯಿಡುತ್ತಾರೆ. ಧಾರೆ ಮಂಟಪವನ್ನು ನಿರ್ಮಿಸಿ, ಅಲಂಕರಿಸುತ್ತಾರೆ. ಚಪ್ಪರದ ರಾತ್ರಿ ಎಲ್ಲರಿಗೂ ಊಟವಿರುತ್ತದೆ. ಊಟವಾದ ಮೇಲೆ ಮದುಮಗನಿಗೆ ಮದುಮಗಳಿಗೆ ಅವರವರ ಮನೆಯಲ್ಲಿ ಎಣ್ಣೆ–ಅರಿಶಿನ ಶಾಸ್ತ್ರ ಮಾಡುತ್ತಾರೆ. ನಂತರ ಸ್ನಾನ ಮಾಡಿ ಹೊಸ ಉಡುಪು ಧರಿಸುತ್ತಾರೆ. ಮುಹೂರ್ತದ ದಿನ ಚಪ್ಪರದ ಧಾರೆ ಮಂಟಪದೊಳಗೆ ಎಣ್ಣೆ–ಅರಿಶಿನ ಶಾಸ್ತ್ರ ಮಾಡಿದ ಮೇಲೆ ಮದುಮಗನು ಕ್ಷೌರ ಮಾಡಿಸಿಕೊಂಡು ಸ್ನಾನಮಾಡಿ ಮದುವೆಯ ಉಡುಪಾದ ಉದ್ದವಾದ ನಿಲುವಂಗಿ, ಪಂಚೆ, ರುಮಾಲು, ಹಣೆಗೆ ಚಿನ್ನದ ಪಟ್ಟಿ ಧರಿಸುತ್ತಾನೆ. ಮದುಮಗಳು ಸೀರೆಯುಟ್ಟು, ತುಂಡು ಕೈ ರವಿಕೆ, ಹಣೆಗೆ ಬಾಸಿಂಗ ಧರಿಸುತ್ತಾಳೆ. ಚಪ್ಪರದಲ್ಲಿ ಆರತಿ ಎತ್ತಿ, ಮಡಿನಡಿಗೆಯಲ್ಲಿ ಗೃಹಪ್ರವೇಶ ಮಾಡಿ, ಕುಲದೇವರಿಗೆ ಹಣ ಮುಡುಪಿಟ್ಟು ಮುಹೂರ್ತಕ್ಕೆ ಚಪ್ಪರದಡಿಗೆ ಬಂದು ಕುಳಿತುಕೊಳ್ಳುತ್ತಾರೆ. ನೆಂಟರಿಷ್ಟರು ಆಶೀರ್ವದಿಸಿ ಹಣ ಕೊಡುತ್ತಾರೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಸಾಯಂಕಾಲ ಗಂಡಿನ ಕಡೆಯವರು ಮಡಿಲಕ್ಕಿ ಸಮೇತ ಹೆಣ್ಣಿನ ಮನೆಗೆ ದಿಬ್ಬಣ ಹೊರಡುತ್ತಾರೆ. ಹೆಣ್ಣಿನ ಊರನ್ನು ಸೇರಿ ಇಳಿದುಕೊಳ್ಳಲು ಮಾಡಿರುವ ಜಾಗದಲ್ಲಿ ಉಳಿಯುತ್ತಾರೆ.

ಹೆಣ್ಣಿನ ತಾಯಿ ಮದುಮಗನಿಗೆ ಹಾಲು ತುಪ್ಪ ಕೊಡುತ್ತಾಳೆ. ಗಂಡಿನ ಕಡೆಯವರು ಕಳಶ ಕನ್ನಡಿಯೊಡನೆ ಬಣ್ಣ ಬಂಗಾರವನ್ನು ಚಪ್ಪರಕ್ಕೆ ತಂದು ಹುಡುಗಿಗೆ ಮಡಿಲು ತುಂಬುತ್ತಾರೆ. ಧಾರೆ ಮಂಟಪದಲ್ಲಿ ದಿಬ್ಬಣದ ಮುಖ್ಯಸ್ಥನು ತೆರವನ್ನು (ಹತ್ತು ರೂಪಾಯಿ ಐವತ್ತು ಪೈಸೆ) ಕಂಚಿನ ಬಟ್ಟಲಲ್ಲಿ ಇಡುತ್ತಾನೆ. ತೆರವಿನ ವಿವರ ಹೀಗಿದೆ; ಆರೂಕಾಲು ರೂಪಾಯಿಗಳು ಹುಡುಗಿಯ ಮುತ್ತೈದೆತನಕ್ಕೆ ಕಟ್ಟುವ ಹಣ ಎಂಟು ಆಣೆ ಎಲೆ ಅಡಿಕೆ ಖರ್ಚಿಗೆ, ಒಂದು ರೂಪಾಯಿ 25 ಪೈಸೆ ಸ್ಥಳ ಮರ್ಯಾದೆಗೆ, ಹಾಲೆಮರದ ಪಾದ ಕಂಬಕ್ಕೆ ಒಂದು ರೂ. 25 ಪೈಸೆ, ಆರತಿಗಳಿಗೆ ಒಂದು ರೂ. 25ಪೈಸೆ. ತೆರೆ ಕಟ್ಟಿದ ನಂತರ ತಂದೆ ಗೋತ್ರ, ತಾಯಿ ಗೋತ್ರ, ಮಹಾನಾಡು ಗೋತ್ರದ ವೀಳ್ಯಗಳನ್ನು ಎತ್ತಿಕೊಡುತ್ತಾರೆ. ಪುರೋಹಿತರು ಕಳಶವನ್ನು (ನೀರಿರುವ ಗಿಂಡಿಯ ಮೇಲೆ ಮಾವಿನ ಸೊಪ್ಪು ತೆಂಗಿನಕಾಯಿ ಇಟ್ಟಿರುತ್ತಾರೆ) ವಧುವಿನ ತಂದೆ ಕೈಗೆ ಕೊಡುತ್ತಾರೆ. ವರನನ್ನು ಧಾರೆ ಮಂಟಪಕ್ಕೆ ಕರೆತಂದು ಆರತಿ ಎತ್ತುತ್ತಾರೆ. ಹುಡುಗಿಯನ್ನು ಸೋದರಮಾವನು ಧಾರೆಗೆ ಕರೆತರುತ್ತಾನೆ. ವಧುವನ್ನು ಕರೆತರುವಾಗ ವರನ ಮುಂದೆ

ಅಂತರಪಟವನ್ನು ಹಿಡಿದಿರುತ್ತಾರೆ. ವಧೂವರರನ್ನು ಎದುರು ಬದುರು ನಿಲ್ಲಿಸಿ ಅವರ ಕೈಗಳನ್ನು ಒಂದರಮೇಲೊಂದು ಹಿಡಿಸಿ ಗಿಂಡಿಯ ನೀರಿನಿಂದ ಧಾರೆ ಎರೆಯುತ್ತಾರೆ. ವಧುವಿಗೆ ವರನು ಮಾಂಗಲ್ಯ ಕಟ್ಟಿದ ಮೇಲೆ, ಇಬ್ಬರೂ ಕೈಹಿಡಿದುಕೊಂಡು ಮಂಟಪವನ್ನು ಮೂರಾವರ್ತಿ ಪ್ರದಕ್ಷಿಣೆ ಹಾಕಿ, ವಧುವಿನ ಮನೆಯ ಗೃಹಪ್ರವೇಶ ಮಾಡಿ ಬಂದು ಕೂರುತ್ತಾರೆ. ನಂತರ ಎಲ್ಲರಿಗೂ ಊಟವಾಗುತ್ತದೆ. ದಿಬ್ಬಣವು ವಧುವಿನೊಂದಿಗೆ ಸ್ವಸ್ಥಳಕ್ಕೆ ಹಿಂತಿರುಗುತ್ತದೆ. ವರನ ಮನೆ ಸೇರುವಾಗ ವರನ ಸೋದರ ಮಾವನಿಗೆ ಮರ್ಯಾದೆ ಮಾಡಿದ ನಂತರ ದಂಪತಿ ಮುಹೂರ್ತವಿರುತ್ತದೆ. ದಿಬ್ಬಣವು ಹಿಂತಿರುಗಿ ಬಂದ ಮಾರನೇಯ ದಿನ ನಾಗವಲ್ಲಿ ಶಾಸ್ತ್ರ ನಡೆಯುತ್ತದೆ. ವಧುವು ಚಪ್ಪರದ ಕೆಳಗಿರುವ ಬುಟ್ಟಿಯಲ್ಲಿರುವ ಗೊಬ್ಬರವನ್ನು ಹೊರುತ್ತಾಳೆ. ವರನು ಹಾಲುಗಂಬವನ್ನು ಹೊತ್ತು ಹಿತ್ತಲಲ್ಲಿ ನೆಡುತ್ತಾನೆ. ವಧುವು ಗೊಬ್ಬರವನ್ನು ಹಾಕುತ್ತಾಳೆ. ಸ್ನಾನ ಮಾಡಿ ಹೊಸ ಉಡುಪು ಧರಿಸಿ ಗೃಹಪ್ರವೇಶ ಮಾಡುತ್ತಾರೆ. ಇತರ ಸಂಸ್ಕಾರ ಪದ್ಧತಿಗಳೊಂದಿಗೆ ನಾಗವಲ್ಲಿ ಮುಕ್ತಾಯ ಗೊಳ್ಳುತ್ತದೆ. ಹೆಣ್ಣು ಗಂಡಿನ ಮನೆಗೆ ಬಂದ ಐದು ಅಥವಾ ಏಳನೇಯ ದಿನ ತುಪ್ಪದ ಕಟ್ಲೆ ನಡೆಯುತ್ತದೆ (ಗಂಡು ಹೆಣ್ಣಿನ ಮನೆಗೆ ತುಪ್ಪ, ನೆಲ್ಲಕ್ಕಿ ತಂದು ಹಿರಿಯರಿಂದ ಆಶೀರ್ವಾದ ಪಡೆದು ಊಟ ಮಾಡುವುದು). ಗೌಡರಲ್ಲಿ ಕರ್ಕಾಟಕ ಮಾಸ ಶೂನ್ಯಮಾಸವಾಗಿದ್ದು ನೂತನ ದಂಪತಿಗಳು ಒಬ್ಬರ ಮುಖ ಒಬ್ಬರು ನೋಡುವುದಿಲ್ಲ. ಹುಡುಗಿಯು ತೌರು ಮನೆಗೆ ಬರುತ್ತಾಳೆ. ಇದನ್ನು ಆಟಿಕೂರುವುದು ಎನ್ನುತ್ತಾರೆ.

ಯೆರವರಲ್ಲಿ ಮದುವೆಯಾದ ಕೂಡಲೇ ದಂಪತಿಗಳು ಬೇರೆ ಸಂಸಾರವನ್ನು ಹೂಡುತ್ತಾರೆ. ಮದುವೆಯ ಮುಹೂರ್ತಗಳು ಸಾಮಾನ್ಯವಾಗಿ ಫೆಬ್ರವರಿ ತಿಂಗಳಿನಲ್ಲಿ ಶುರುವಾಗಿ ಸುಮಾರು ಮೂರು ತಿಂಗಳು ಇರುತ್ತವೆ. ಮಂಗಳವಾರ, ಶುಕ್ರವಾರ ಗಳಲ್ಲಿ ಅಮಾವಾಸ್ಯೆಯ ದಿನ ಮದುವೆ ಮಾಡುವುದಿಲ್ಲ. ಗಂಡು ಹೆಣ್ಣುಗಳು ವಯಸ್ಸಿಗೆ ಬಂದ ಮೇಲೆ ವಿವಾಹವಾಗುತ್ತಾರೆ. ಗಂಡಿನ ಕಡೆಯವರು ಹೆಣ್ಣನ್ನು ಹುಡುಕಿಕೊಂಡು ಹೋಗುತ್ತಾರೆ. ಆದರೆ ಯೆರವರಲ್ಲಿ ಹೆಣ್ಣು ಗಂಡುಗಳು ಒಟ್ಟಿಗೇ ಕೃಷಿ ಕಾರ್ಮಿಕರಾಗಿ ಕೆಲಸ ಮಾಡುವುದರಿಂದ ಮೊದಲೇ ಗಂಡು ಹೆಣ್ಣುಗಳು ಒಬ್ಬರನ್ನೊಬ್ಬರು ಮೆಚ್ಚಿ ಮದುವೆಯಾಗಲು ತೀರ್ಮಾನಿಸಿರುತ್ತಾರೆ. ಹುಡುಗಿಯ ಮದುವೆಯ ವಯಸ್ಸು ಸಾಮಾನ್ಯವಾಗಿ 17–18 ವರ್ಷಗಳಾದರೆ ಹುಡುಗನ ವಯಸ್ಸು 22–23 ವರ್ಷಗಳಿರುತ್ತವೆ. ಚಪ್ಪರ ಹಾಕಿ ಗೊತ್ತುಪಡಿಸಿ ಮಾಡುವ ಮದುವೆ ಒಂದು ವಿಧವಾದರೆ ಓಡಿ ಹೋಗಿ ಮದುವೆಯಾಗುವುದು ಇನ್ನೊಂದು ವಿಧ. ಓಡಿ ಹೋಗಿ ಮದುವೆಯಾಗುವುದು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದ್ದರೂ ಆಗಾಗ್ಗೆ ನಡೆಯುತ್ತಿರುತ್ತದೆ. ಈ ರೀತಿಯ ಮದುವೆ ಕಡಿಮೆ ಖರ್ಚಿನದು. ಗಂಡು ಹೆಣ್ಣುಗಳು ಮದುವೆಯಾಗಲು ತಮ್ಮ ತಮ್ಮಲ್ಲೇ ಒಪ್ಪಿದ ನಂತರ ವಿವಾಹವಾಗುವುದು ನಿಧಾನವಾದರೆ ಅಥವಾ ತಂದೆ ತಾಯಿಗಳು ಗಂಡು ಹೆಣ್ಣುಗಳನ್ನು ನಿಶ್ಚಯಿಸಿ ಮದುವೆ ಮಾಡಲು ನಿಧಾನ ಮಾಡಿದರೆ, ಇಬ್ಬರೂ ಕಾಡಿಗೆ ಓಡಿ ಹೋಗಿ ಜೊತೆಯಲ್ಲಿ ಕೆಲವು ದಿನ ಗಳಿದ್ದು ಹಿಂತಿರುಗಿ ಬರುತ್ತಾರೆ. ಆಗ ಎರಡು ಕಡೆಯವರೂ ಸಭೆ ಸೇರಿ ತಪ್ಪಿತಸ್ಥರಿಗೆ ದಂಡಹಾಕಿ ವಿವಾಹದ ಶಾಸ್ತ್ರ ಮಾಡುತ್ತಾರೆ. ಗೊತ್ತುಪಡಿಸಿದ ಮದುವೆಗಳಲ್ಲಿ ಹೆಣ್ಣಿನ ಕಡೆಯ ಒಪ್ಪಿಗೆ ಸಿಕ್ಕೊಡನೆಯೇ ಹೆಣ್ಣಿನ ಮನೆಯಲ್ಲಿ ವೀಳ್ಯದ ಶಾಸ್ತ್ರದ ದಿನವನ್ನು ಗೊತ್ತು ಮಾಡಿಕೊಂಡು, ಆ ದಿನ ಒಪ್ಪಂದದ ಅಂಗವಾಗಿ ಗಂಡಿನ ತಾಯಿ ಹುಡುಗಿಗೆ ಒಂದು ಸೀರೆ ಕೊಡುತ್ತಾಳೆ, ಕೈಗೆ ಒಂದು ಬೆಳ್ಳಿ ಉಂಗುರ ಹಾಕುತ್ತಾಳೆ(ಹಿಂದೆ ಉಂಗುರಕ್ಕೆ ಬದಲಾಗಿ ಕಡಗ ಹಾಕುವ ಪದ್ಧತಿಯಿತ್ತಂತೆ). ಹುಡುಗಿಯ ಕತ್ತಿಗೆ ಒಂದು ತಾಳಿಯನ್ನೂ ಕಟ್ಟುತ್ತಾಳೆ. ನಂತರ ಎಲ್ಲರೂ ಊಟ ಮಾಡುತ್ತಾರೆ. ಮದುವೆ ನಿಶ್ಚಯವಾದೊಡನೆ ಹುಡುಗನು ಹುಡುಗಿಯ ಮನೆಗೆ ಹೋಗಿ ಬರುತ್ತಿರುತ್ತಾನೆ. ಮಾವನ ಮನೆಗೆ ತಿಂಡಿ ತಿನಿಸುಗಳನ್ನು ಕೊಂಡೊಯ್ಯುವುದು, ಸೌದೆ ತಂದು ಹಾಕುವುದು ಮೊದಲಾದ ಕೆಲಸ ಮಾಡಿ ಕೊಡುತ್ತಿರುತ್ತಾನೆ. ಈಗ ಕೆಲಸಕ್ಕೆ ಬದಲಾಗಿ ಹಣ ಕೊಡುವುದು ರೂಢಿಗೆ ಬಂದಿದೆ. ಪಂಜಿರಿ ಯೆರವರಲ್ಲಿ 200 ರಿಂದ 300 ರೂ. ತೆರವನ್ನು ಸೋದರಮಾವ ಅಥವಾ ಕುಲದ ಯಜಮಾನನಿಗೆ ಕೊಡಬೇಕು. ಪಣಿಯೆರವರಲ್ಲಿ ತೆರವನ್ನು ಹೆಣ್ಣಿನ ತಂದೆ ತಾಯಿಗಳಿಗೆ ಕೊಡಬೇಕು. ಯೆರವರಲ್ಲಿ ತೆರದ ಜೊತೆ 'ಪಡಿ ಪಲಂಬು' ಎಂಬ ಪದ್ಧತಿಯಂತೆ ವರನು ಹೆಣ್ಣಿನ ತಾಯಿಗೆ ಹಣ ಕೊಡಬೇಕು. ಇತ್ತೀಚಿನ ದಿನಗಳಲ್ಲಿ ಕೆಲವರು ಬ್ರಾಹ್ಮಣರಿಂದ ಅಥವಾ ದೇವಸ್ಥಾನದ ಅರ್ಚಕರಿಂದ ಮದುವೆ ಲಗ್ನವನ್ನು ನಿಶ್ಚಯಿಸುತ್ತಾರೆ. ಯೆರವರ ಮದುವೆಗಳು ಮುಖ್ಯವಾಗಿ ಮೂರು ಭಾಗಗಳಿಂದ ಕೂಡಿವೆ; ಮುಹೂರ್ತ, ದಿಬ್ಬಣ ಮತ್ತು ದಂಪತಿ ಮುಹೂರ್ತ. ವಿವಾಹವು ಸಾಮಾನ್ಯವಾಗಿ ಎರಡು ದಿವಸ ನಡೆಯುತ್ತದೆ. ಪಂಜಿರಿ ಯೆರವರಲ್ಲಿ ಕುಂಜುಕಾರನು, ಪಣಿಯೆರವರಲ್ಲಿ ಚಮ್ಮಕಾರನು ಯಜಮಾನಿಕೆಯನ್ನು ತೆಗೆದುಕೊಂಡು ಕಾರ್ಯಗಳನ್ನು ನೆರವೇರಿಸುತ್ತಾನೆ. ಮೊದಲನೇಯ ದಿನ ಗಂಡು ಹೆಣ್ಣುಗಳ ಮನೆಗಳಲ್ಲಿ 12 ಕಂಬಗಳ ಚಪ್ಪರ ಹಾಕಿ ಮಾವಿನ ಎಲೆ ಹೂವುಗಳಿಂದ ಅಲಂಕರಿಸುತ್ತಾರೆ. ಹಾಲುಗಂಬವನ್ನು ತಂದು ನಿಲ್ಲಿಸುತ್ತಾರೆ. ಮಧ್ಯಾಹ್ನದ ಹೊತ್ತಿಗೆ ಮದುಮಗನು ಹೊಸ ಬಟ್ಟೆ ಹಾಕಿಕೊಂಡು ಮುಹೂರ್ತಕ್ಕೆ

ಸಿದ್ಧನಾಗಿ ಚಪ್ಪರದ ಕೆಳಗೆ ಚಾಪೆಯ ಮೇಲೆ ಕುಳಿತಾಗ ಸಂಬಂಧಿಕರು ಅವನಿಗೆ ಹಣಕೊಟ್ಟು ತಲೆಯ ಮೇಲೆ ಅಕ್ಕಿ ಹಾಕಿ ಆಶೀರ್ವದಿಸುತ್ತಾರೆ. ನಂತರ ಬಂದವರಿಗೆ ಔತಣದ ಊಟ ನಡೆಯುತ್ತದೆ. ಇದೇ ರೀತಿಯ ಶಾಸ್ತ್ರ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಮಾರನೇಯ ದಿನ ನಸುಕಿನಲ್ಲಿಯೇ ಗಂಡಿನ ಮನೆಯವರು ದಿಬ್ಬಣ ಹೊರಟು ಬೆಳಗಾಗುವುದರೊಳಗಾಗಿ ಹೆಣ್ಣಿನ ಮನೆಯ ಸಮೀಪಕ್ಕೆ ಬರುತ್ತಾರೆ. ಅಲ್ಲಿ ಸಮೀಪದ ಮರದ ಕೆಳಗೆ ವಿಶ್ರಮಿಸಿಕೊಳ್ಳುತ್ತಾರೆ. ವಾದ್ಯಗಳು ಮೊಳಗುತ್ತಿರುತ್ತವೆ. ಹೆಣ್ಣಿನ ಕಡೆಯವರು ಗಂಡಿನ ದಿಬ್ಬಣವನ್ನು ಎದುರ್ಗೊಂಡು ಸತ್ಕಾರ ಮಾಡುತ್ತಾರೆ. ಉಪಾಹಾರವಾದ ಮೇಲೆ ಎರಡು ಕಡೆಯವರೂ ಬೇರೆ ಬೇರೆ ಗುಂಪುಗಳಾಗಿ, ನರ್ತಿಸುತ್ತಾರೆ. ನಂತರ ಹೆಣ್ಣಿನ ತಂದೆ ತಾಯಿಗಳು ಗಂಡಿನ ಕಡೆಯವರನ್ನು ಮದುವೆ ಮಂಟಪಕ್ಕೆ ಕರೆದೊಯ್ಯುತ್ತಾರೆ. ಗಂಡು ಒಂದು ಪಂಚೆಯುಟ್ಟು, ಬಿಳಿ ಅಂಗಿ, ಬಿಳೀಪೇಟ ಹಾಕಿಕೊಂಡು ಮೇಲ್ಭಾಗದಲ್ಲಿ ಒಂದು ಕೆಂಪು ವಸ್ತ್ರವನ್ನು ಹೊದ್ದಿರುತ್ತಾನೆ. ಪಣಿಯೆರವರಲ್ಲಿ ಒಂದು ಹಾರ ಹಾಕಿಕೊಳ್ಳಬೇಕೆಂಬ ನಿಯಮವಿದೆ. ಮದುಮಗಳು ಒಂದು ಕೆಂಪು ಸೀರೆ ಉಟ್ಟು ಕೆಂಪು ರವಿಕೆ ತೊಟ್ಟಿರುತ್ತಾಳೆ. ತಲೆಯ ಮೇಲೆ ಮುಂಭಾಗದಲ್ಲಿ ಕೆಂಪು ಬಟ್ಟೆ ಹಾಕಿಕೊಂಡಿರುತ್ತಾಳೆ. ಕೊರಳಲ್ಲಿ ಹಾರಗಳಿರುತ್ತವೆ. ಮದುಮಗನು ಮಂಟಪಕ್ಕೆ ಬಂದಾಗ ಆರತಿ ಎತ್ತಿ, ಎಲೆ, ಅಡಿಕೆ, ತೆಂಗಿನ ಕಾಯಿ, ಒಂದು ದೀಪ, ಬೀಜಗಳಿರುವ ಒಂದು ಬೊಂಬಿನ ಅಂಡೆಯನ್ನು ಕೈಗೆ ಕೊಡುತ್ತಾರೆ. ಅವುಗಳನ್ನು ತೆಗೆದುಕೊಂಡು ಚಾಪೆಯ ಬಳಿ ಹೋಗುತ್ತಾನೆ. ಮದುಮಗಳನ್ನು ಕರೆತರುತ್ತಾರೆ. ಅವಳು ಮದುಮಗನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾಳೆ. ಬಂದವರು ಬಹುಮಾನಗಳನ್ನು ಕೊಡುತ್ತಾರೆ. ನಂತರ ಮದುಮಗನು ಮದುಮಗಳಿಗೆ ಕರಿಮಣಿಸರದ ತಾಳಿ ಕಟ್ಟುತ್ತಾನೆ. ಪಣಿಯೆರವರಲ್ಲಿ ಸೋದರಮಾವನು ಹುಡುಗಿಯ ಕತ್ತಿಗೆ ಮಧ್ಯದಲ್ಲಿ ಕೆಂಪು ಮಣಿಯಿರುವ ಬಿಳಿಮಣಿ ಸರ ತಾಳಿಯನ್ನು ಕಟ್ಟುತ್ತಾನೆ. ನಂತರ ದಂಪತಿಗಳು ಮನೆಯೊಳಕ್ಕೆ ಹೋಗಿ ದೇವರು, ಪಿತೃಗಳಿಗೆ ನಮಸ್ಕರಿಸುತ್ತಾರೆ. ಊಟವಾದ ಮೇಲೆ ಸ್ವಲ್ಪಹೊತ್ತು ಸುಧಾರಿಸಿಕೊಂಡು ಗಂಡಿನ ಕಡೆಯವರು ವಧುವಿನೊಡನೆ ಹಿಂತಿರುಗುತ್ತಾರೆ. ಗಂಡಿನ ಮನೆಯಲ್ಲಿ ಆರತಿ ಬೆಳಗಿದ ನಂತರ ಮನೆ ಪ್ರವೇಶ ಮಾಡುತ್ತಾರೆ. ಹುಡುಗಿಯು ಬಾವಿ ಬಳಿ ಹೋಗಿ ಗಂಗಾ ಪೂಜೆ ಮಾಡಿ ಮೂರು ಮಡಕೆಗಳಲ್ಲಿ ನೀರನ್ನು ಹೊತ್ತುತರುತ್ತಾಳೆ. ನಂತರ ಹೆಣ್ಣಿನ ಕಡೆಯವರು ಊಟ ಮಾಡಿ ಹಿಂದಿರುಗುತ್ತಾರೆ. ಮದುವೆಗಳಲ್ಲಿ ಗಂಡಿನ ಕಡೆಯವರ ಖರ್ಚೇ ಹೆಚ್ಚಾಗಿರುತ್ತದೆ.

ಕೊಡಗಿನ ಇತರ ಮೂಲನಿವಾಸಿಗಳ ಮದುವೆ ಸಮಾರಂಭಗಳು ಕೊಡವರ ಮದುವೆ ಸಂಪ್ರದಾಯ ಹಾಗೂ ಆಚರಣೆಗಳನ್ನೇ ಹೋಲುತ್ತವೆ. ಜೀವನ ವಿಧಾನ, ನಂಬಿಕೆ ಮತ್ತಿತರ ಕಾರಣಗಳಿಂದಾಗಿ ಸ್ವಲ್ಪ ವ್ಯತ್ಯಾಸ ಕಂಡು ಬರಬಹುದು.

ಹೊರಗಿನಿಂದ ಬಂದು ನೆಲಸಿರುವವರು ತಮ್ಮ ಮೂಲದ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಕೊಡವರ ಸಂಪ್ರದಾಯಗಳ ಪ್ರಭಾವದಿಂದಾಗಿ ಬದಲಾಯಿಸಬಹುದಾದ ಹಲವಾರು ಮುಖ್ಯವಲ್ಲದ ಆಚರಣೆಗಳಲ್ಲಿ ವ್ಯತ್ಯಾಸಗಳಾಗಿರಬಹುದಷ್ಟೆ. ಬೇರೆ ಪ್ರದೇಶಗಳಲ್ಲಿ ಆಧುನಿಕತೆಯಿಂದಾಗಿ ಉಂಟಾಗಿರುವ ಬದಲಾವಣೆಗಳು ಕೊಡಗಿನ ಜನರಲ್ಲೂ ಕಂಡು ಬರುತ್ತಿವೆ. ಉದಾಹರಣೆಗೆ ಕೊಡವರು ತಮ್ಮ ಮದುವೆಗಳನ್ನು ಹೆಚ್ಚಾಗಿ ಕೊಡವ ಸಮಾಜಗಳಲ್ಲಿ (ಕಲ್ಯಾಣಮಂಟಪ) ಮಾಡುತ್ತಿದ್ದಾರೆ. ಮದುವೆಯ ಕಾಲವನ್ನು ಕಡಮೆ ಮಾಡಿದ್ದಾರೆ. ಮುಖ್ಯವಾದ ಸಂಪ್ರದಾಯ, ಆಚರಣೆಗಳನ್ನು ಮಾತ್ರ ಇಟ್ಟುಕೊಂಡಿದ್ದಾರೆ. ಹಿಂದಿನ ಜಾನಪದ ವಿಧಿಗಳು ಮೊಟಕಾಗಿವೆ.

ಬ್ರಾಹ್ಮಣರಲ್ಲಿ ವಿವಾಹ ವಿಧಿಗಳು 'ಬ್ರಹ್ಮ' ವಿವಾಹ ಪದ್ಧತಿಯಲ್ಲಿವೆ. ಹೆಣ್ಣಿನ ತಂದೆತಾಯಿಗಳು ಗಂಡನ್ನು ಹುಡುಕಿ ಸಾಲಂಕೃತ ಕನ್ಯಾದಾನ ಮಾಡುತ್ತಾರೆ. ತೆರ ಪದ್ಧತಿಯಿಲ್ಲ. ವರದಕ್ಷಿಣೆ ಹಿಂದೆ ರೂಢಿಯಲ್ಲಿಲ್ಲದಿದ್ದರೂ ಕ್ರಮೇಣ ರೂಢಿಗೆ ಬಂದು, ಈಗ ಅದರ ಹಾವಳಿ ಕಡಮೆಯಾಗುತ್ತಿದೆ. ಸಗೋತ್ರ ವಿವಾಹ ನಿಷಿದ್ಧ. ಮದುವೆ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಮದುವೆಯ ಮುಖ್ಯ ಸಂಪ್ರದಾಯಗಳಲ್ಲಿ ಮದುವೆಯ ಹಿಂದಿನ ದಿನ ದೇವರ ಸಮಾರಾಧನೆ, ನಾಂದಿ, ಸಾಯಂಕಾಲ ವರಪೂಜೆ, ಮಾರನೇ ದಿನ ಕಾಶಿಯಾತ್ರೆ, ಮಂಗಳಾಷ್ಟಕ, ಧಾರೆ, ಮಾಂಗಲ್ಯಧಾರಣೆ, ಲಾಜಹೋಮ, ಶೇಷಹೋಮ, ಸಪ್ತಪದಿ ಮುಖ್ಯವಾದವುಗಳು. ನಂತರ ನಾಗವಲ್ಲಿ ಹಾಗೂ ವಧುವಿನ ಗೃಹಪ್ರವೇಶಗಳು ಬರುತ್ತವೆ.

ಹಿಂದಿನ ಕಾಲದಲ್ಲಿ ಮದುವೆಯ ಸಿದ್ಧತೆಗಳು ತಿಂಗಳುಗಳ ಮುಂಚೆಯೇ ಆರಂಭವಾಗುತ್ತಿದ್ದವು. ಸಮಾರಂಭವು ಎಂಟು ದಿನಗಳವರೆವಿಗೂ ನಡೆಯುತ್ತಿತ್ತು. ಆದರೆ ಈಗ ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತವಾಗುತ್ತಾ ಬಂದು ಅವಶ್ಯಕವಾದ ವಿಧಿಗಳನ್ನು ಮಾತ್ರ ಸನ್ನಿವೇಶಕ್ಕೆ ತಕ್ಕಂತೆ ಮಾರ್ಪಾಟು ಮಾಡಲಾಗಿದೆ. ಮದುವೆಗಳು ಕಲ್ಯಾಣ ಮಂಟಪಗಳಲ್ಲಿ, ದೇವಸ್ಥಾನಗಳಲ್ಲಿ ಹೆಚ್ಚಾಗಿ ನಡೆಯುತ್ತವೆ. ಒಂದು ಕಾಲಕ್ಕೆ

ಬ್ರಾಹ್ಮಣರಲ್ಲಿ ಕಂಡು ಬರುತ್ತಿದ್ದ ವರದಕ್ಷಿಣೆ ಪಿಡುಗು ಈಗ ಎಲ್ಲಾ ಜಾತಿಗಳ, ವರ್ಗಗಳ ಜನರಲ್ಲೂ ಹಬ್ಬಿವೆ. ಒಂದು ಕಾಲಕ್ಕೆ ಜಾತಿ–ಉಪ ಜಾತಿಗಳಲ್ಲಿ ಮಾತ್ರ ಮದುವೆಯನ್ನು ನಿಶ್ಚಯಿಸಿಕೊಳ್ಳುತ್ತಿದ್ದರು. ಈಗ ಅಂತರ ಜಾತಿ ವಿವಾಹಗಳು ನಡೆಯುತ್ತಿವೆ.

ಭಾರತ ಸರ್ಕಾರದ ವಿವಾಹ ಕಾಯಿದೆಯನ್ವಯ ಎಲ್ಲರೂ ವಿವಾಹಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕು. ಮಡಿಕೇರಿ ತಾಲೂಕಿನಲ್ಲಿ 1988–89ರಲ್ಲಿ ಹತ್ತು, 1989-90ರಲ್ಲಿ 18ವಿವಾಹಗಳು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿದ್ದವೆಂದು ವರದಿಯಾಗಿದೆ.

ಇತ್ತೀಚಿನ ದಿನಗಳಲ್ಲಿ ಸಾಮೂಹಿಕ ವಿವಾಹಗಳೂ ಅಲ್ಲಲ್ಲೇ ಜರುಗುತ್ತಿವೆ. ಇದರಿಂದ ಮದುವೆಯ ವೆಚ್ಚ ಕಡಮೆಯಾಗುವುದಲ್ಲದೆ, ದಾನಿಗಳು ಕೊಡುವ ಹಣ ವಸ್ತುಗಳಿಂದ ಬಡ ದಂಪತಿಗಳಿಗೂ ಉಪಯೋಗವಾಗುತ್ತದೆ. ಇಂತಹ ಸಾಮೂಹಿಕ ವಿವಾಹಗಳನ್ನು ಸಂಸ್ಥೆಗಳು ಮುಂದೆ ಬಂದು ನಡೆಸುತ್ತಿವೆ. ಜಿಲ್ಲೆಯಿಂದ ಅನೇಕರು ಧರ್ಮಸ್ಥಳದಲ್ಲಿ ನಡೆಯುವ ಸಾಮೂಹಿಕ ವಿವಾಹಕ್ಕೆ ಹೋಗುತ್ತಾರೆ.

ವಿವಾಹ ವಿಚ್ಛೇದನ

ಬ್ರಾಹ್ಮಣ, ವೈಶ್ಯ, ಕೊಡವ ಮೊದಲಾದವರಲ್ಲಿ ವಿವಾಹ ವಿಚ್ಛೇದನ ಅತಿ ವಿರಳ. ಹಿಂದೂ ವಿವಾಹ ಕಾಯಿದೆಯನ್ವಯ ವಿಚ್ಛೇದನವನ್ನು ಸರಿಯಾದ ಸಂದರ್ಭಗಳಲ್ಲಿ ಮಾತ್ರ ಕೋರ್ಟಿನಿಂದ ಪಡೆಯಬಹುದು. ಅದೇ ರೀತಿ ಕ್ಯಾಥೋಲಿಕ್ ಕ್ರೈಸ್ತರಲ್ಲಿ ವಿವಾಹ ವಿಚ್ಛೇದನವು ಧಾರ್ಮಿಕವಾಗಿ ಅನುಮೋದಿಸಲ್ಪಟ್ಟಿಲ್ಲ. ಗಿರಿಜನರಲ್ಲಿ ಹಾಗೂ ಇತರ ವರ್ಗಗಳಲ್ಲಿ ವಿಚ್ಛೇದನಕ್ಕೆ ಅವಕಾಶವಿದ್ದು ಕುಲದ, ಜಾತಿಯ ಮುಖ್ಯಸ್ಥರು ತೀರ್ಮಾನ ಮಾಡಿ ತಪ್ಪಿತಸ್ಥರಿಗೆ ದಂಡವನ್ನು ಹಾಕುವರು. ಮುಸಲ್ಮಾನರಲ್ಲಿಯೂ ವಿವಾಹ ವಿಚ್ಛೇದನಕ್ಕೆ ಅವಕಾಶವಿದೆ. ವಿವಾಹವು ಮುರಿದು ಬಿದ್ದಾಗ ತೆರ ಹಣವನ್ನು ಅಥವಾ ಅದರ ಒಂದು ಭಾಗವನ್ನು ಹಿಂದಕ್ಕೆ ಕೊಡಬೇಕು.

ವಿಧವೆಯರು, ವಿವಾಹ ವಿಚ್ಛೇದನ ಹೊಂದಿದವರು, ಪುನಃ ವಿವಾಹವಾಗಲು ಬಹುತೇಕ ಜಾತಿಗಳಲ್ಲಿ ಅವಕಾಶವಿದೆ. ಇವುಗಳನ್ನು ಕೂಡಾವಳಿಯೆನ್ನುತ್ತಾರೆ. ಈ ಪದ್ಧತಿಯು ಕೊಡವರಲ್ಲಿಯೂ ರೂಢಿಯಲ್ಲಿದೆ. ಕೊಡವ ವಿಧವೆಯು ಪುನರ್ವಿವಾಹವಾಗಲು ಇಷ್ಟಪಟ್ಟರೆ ಗಂಡನತಮ್ಮನನ್ನೋ ಇಲ್ಲವೆ ಇತರರನ್ನು ವಿವಾಹವಾಗಬಹುದು. ಕೂಡಾವಳಿಯು ಕೇವಲ ಒಂದು ಸಣ್ಣ ಸಮಾರಂಭವಾಗಿರುತ್ತದೆ. ದೇವಸ್ಥಾನಗಳಲ್ಲಿ, ರಾತ್ರಿ ವೇಳೆ ನಡೆಯುತ್ತದೆ. ವಿಧವೆಯನ್ನು ಮದುವೆಯಾಗುವವನು ಹೊಸ ಬಟ್ಟೆಗಳನ್ನು ತಂದು ಒಂದು ಊಟ ಹಾಕಿಸುವುದರ ಮೂಲಕ ಮುಗಿದುಹೋಗುತ್ತದೆ. ತೆರ ಪದ್ಧತಿ ರೂಢಿಯಲ್ಲಿರುವ ಜಾತಿಗಳಲ್ಲಿ ವಿಧವೆಯನ್ನು ಮದುವೆಯಾಗುವಾಗ ಅರ್ಧದಷ್ಟು ಹಣವನ್ನು ಮಾತ್ರ ಕೊಡಬೇಕಾಗುತ್ತದೆ. ಕೂಡಾವಳಿಯಿಂದ ವಿವಾಹವಾದ ಸ್ತ್ರೀಗೆ ವಿವಾಹವಾದ ಕನ್ಯೆಯಂತೆ ಧಾರ್ಮಿಕ ಹಾಗೂ ಕೆಲವು ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ. ಆದರೆ ಅವಳ ಮಕ್ಕಳಿಗೆ ಈ ನಿರ್ಬಂಧವಿರುವುದಿಲ್ಲ. ವಿಧವೆಯನ್ನು ವಿವಾಹವಾಗುವವನು ವಿಧುರನಾಗಿರಬೇಕೆಂಬ ಸಂಪ್ರದಾಯದಂತೆ ಅನೇಕ ವೇಳೆ ಮದುವೆಯಾಗುವವನು ವಿಧುರನಲ್ಲದಿದ್ದರೆ, ಅವನಿಂದ ಒಂದು ಬಾಳೆಗಿಡಕ್ಕೋ, ಎಕ್ಕದ ಗಿಡಕ್ಕೋ ತಾಳಿ ಕಟ್ಟಿಸಿ, ಅವನನ್ನು ವಿಧುರನೆಂದು ಪರಿಗಣಿಸಿ ಮದುವೆ ಮಾಡುವ ಪದ್ಧತಿಯೂ ಇದೆ. ಜಿಲ್ಲೆಯ ಎಲ್ಲಾ ಜಾತಿಗಳ ಜನರಲ್ಲೂ ಏಕಪತ್ನಿತ್ವವೇ ಆದರ್ಶಪ್ರಾಯವಾದ ವಿವಾಹ ಪದ್ಧತಿ. ಬಹುಪತಿತ್ವವು ಈಗ ಎಲ್ಲಿಯೂ ರೂಢಿಯಲ್ಲಿಲ್ಲ. ಹಿಂದೆ ಕೊಡಗಿನಲ್ಲಿ 'ಪಚ್ಚಡ ಪೊಣ್ಣು' ಎಂದರೆ ಸೀರೆಕೊಟ್ಟು ಪಡೆಯುವ ಹೆಣ್ಣು ಎಂಬ ಉಪಪತ್ನಿಯನ್ನು ಹೊಂದುವ ವಿಧಾನ ರೂಢಿಯಲ್ಲಿತ್ತು. ಇವಳನ್ನು ಗಂಡು ಬೇಕಾದಾಗ ಬಿಟ್ಟುಬಿಡಬಹುದಾಗಿತ್ತು. ಎರಡನೇಯ ಲಿಂಗರಾಜೇಂದ್ರನು ಇದನ್ನು ಪ್ರತಿಬಂಧಿಸಿದನು.

ಮುಸಲ್ಮಾನರಲ್ಲಿ ಮದುವೆಯು ಒಂದು ಕರಾರು. ಅವರಲ್ಲಿ ದಾಯಾದಿಗಳ ಮಕ್ಕಳು ವಿವಾಹವಾಗುವುದು ರೂಢಿಯಲ್ಲಿದೆ. ಹುಡುಗನ ತಂದೆತಾಯಿಗಳು ಮಧ್ಯವರ್ತಿಗಳೊಂದಿಗೆ ಹುಡುಗಿಯನ್ನು ಹುಡುಕಿಕೊಂಡು ಹೋಗುತ್ತಾರೆ. ಹುಡುಗಿಯು ನಿಶ್ಚಯವಾದ ನಂತರ ಮಧ್ಯವರ್ತಿಗಳೊಡನೆ ಹುಡುಗನ ತಂದೆತಾಯಿಗಳು ಹುಡುಗಿಯ ಮನೆಗೆ ಹೋಗಿ ನಿಶ್ಚಿತಾರ್ಥವನ್ನು ಮಾಡಿಕೊಳ್ಳುತ್ತಾರೆ. ಆ ದಿನ ಬಹುಮಾನಗಳೊಂದಿಗೆ ಹೋಗಿ ಕೊಡಬೇಕಾದ ಮೆಹರ್ (ತೆರ) ಹಾಗೂ ಇತರ ವಿಷಯಗಳ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳುತ್ತಾರೆ. ಮದುವೆಯ ದಿನ ಮದುಮಗನು ಮದುವೆಯ ಉಡುಪನ್ನು ಧರಿಸಿಕೊಂಡು, ಇಳಿಬಿಟ್ಟ ಹೂಮಾಲೆಗಳಿಂದ ಮುಖ ಮುಚ್ಚಿಕೊಂಡು (ಸೆಹ್ರ) ಕುದುರೆಯ ಮೇಲೋ ಅಥವಾ ಕಾರಿನಲ್ಲಿಯೋ ಮದುಮಗಳ ಮನೆಗೆ ಬರುತ್ತಾನೆ. ಅಲ್ಲಿ ಖಾಜಿಯು ಮದುಮಗನು ಮದುಮಗಳಿಗೆ ಕೊಡಬೇಕಾದ ಮೆಹರ್ ಬಗ್ಗೆ ಇಬ್ಬರ ಅನುಮತಿ ಪಡೆದು, ಅಲ್ಲಿರುವ ಸಾಕ್ಷಿದಾರರ ಸಹಿಯೊಂದಿಗೆ ಮದುವೆಯ ಪುಸ್ತಕದಲ್ಲಿ ದಾಖಲು

ಮಾಡುತ್ತಾನೆ. ನಂತರ ಎಲ್ಲರಿಗೂ ತಿಳಿಯುವಂತೆ ಈ ಒಪ್ಪಂದವನ್ನು ಓದುತ್ತಾನೆ. ಈ ನಿಕಾ ಆದನಂತರ ಹುಡುಗ, ಹುಡುಗಿಯರ ಪರವಾಗಿ ಪಾರ್ಥನೆ ಮಾಡಿ ನಿಕಾ ಸಮಯದಲ್ಲಿ ಅಲ್ಲಿ ತಟ್ಟೆಯಲ್ಲಿಟ್ಟಿರುವ ಸಕ್ಕರೆ, ಖರ್ಜೂರ ಬಾದಾಮಿ ಅಡಿಕೆ, ಎಲೆಗಳನ್ನು ತೆಗೆದುಕೊಂಡು, ಅಲ್ಲಿರುವ ಕರಿಮಣಿ ಸರವನ್ನು (ಲಚ್ಚಾ) ಹುಡುಗಿಗೆ ಕಟ್ಟಲು ಮದುಮಗನ ತಾಯಿಯ ಕೈಗೆ ಕೊಡುತ್ತಾನೆ. ಹುಡುಗಿಯು ಇಂತಹವನನ್ನು ಮದುವೆಯಾದಳೆಂದು ತಿಳಿಸುವಂತೆ ಹೇಳಿ ಸಕ್ಕರೆಯನ್ನು ತಿನ್ನುವಂತೆ ತಿಳಿಸುತ್ತಾರೆ. ಕರಿಮಣಿಸರವನ್ನು ಅಲ್ಲಿರುವ ಹೆಂಗಸರು ಹುಡುಗಿಯ ಕತ್ತಿಗೆ ಕಟ್ಟುತ್ತಾರೆ. ಮದುಮಗನು ತನ್ನ ಹತ್ತಿರದ ಸಂಬಂಧಿಕರು, ಸ್ನೇಹಿತರೊಡನೆ ಹುಡುಗಿಯ ಕೊಠಡಿಗೆ ಬರುತ್ತಾನೆ. ಮದುಮಗಳನ್ನು ತೋರಿಸುವುದು, ಹುಡುಗನ ಮನೆಗೆ ಸಿಹಾರವನ್ನು ಮೆರವಣಿಗೆಯಲ್ಲಿ ತರುವುದು, ಮೊದಲಾದ ಸಂಪ್ರದಾಯಗಳು ನಡೆಯುತ್ತವೆ. ಕುರಾನಿನ ಪ್ರಕಾರ ಮುಸಲ್ಮಾನರ ಮದುವೆಗಳಲ್ಲಿ ಮೂರು ಮುಖ್ಯ ಅಂಶಗಳೆಂದರೆ, ಗಂಡು ಹೆಣ್ಣಿನ ಕಡೆಯವರ ಒಪ್ಪಿಗೆ, ಸಾಕ್ಷೀದಾರರ ರುಜುಪಾತು ಮತ್ತು ಮದುವೆಯ ನಿಶ್ಚಯಗಳು. ಮದುವೆಯಾದ ನಂತರ ಮೊದಲನೇ ಶುಕ್ರವಾರ ಹುಡುಗನು ಹುಡುಗಿಯ ಮನೆಯಲ್ಲಿ ಊಟ ಮಾಡುತ್ತಾನೆ. ನಂತರ ಮುಂದಿನ ಮೂರು ಶುಕ್ರವಾರಗಳು ಹತ್ತಿರದ ಸಂಬಂಧಿಕರಲ್ಲಿ ಊಟ ಮಾಡುತ್ತಾನೆ. ಇದನ್ನು ಚಾರ್‌ಜುಮ ಎನ್ನುತ್ತಾರೆ.

ಕ್ರೈಸ್ತರಲ್ಲಿ ಮದುವೆಯಾಗುವ ಹೆಣ್ಣು, ಗಂಡಿನ ಕಡೆಯವರು ಹೆಣ್ಣಿನ ಮನೆಯಲ್ಲಿ ಸೇರಿ ಮಾತುಕತೆಯಾದ ನಂತರ ನಿಶ್ಚಿತಾರ್ಥವನ್ನು ಗಂಡಿನ ಕಡೆಯವರ ಪ್ಯಾರಿಷ್ ಚರ್ಚಿನಲ್ಲಿ ಏರ್ಪಡಿಸುತ್ತಾರೆ. ನಿಶ್ಚಿತಾರ್ಥದಲ್ಲಿ ಹೆಣ್ಣು, ಗಂಡುಗಳು ಕೈ ಉಂಗುರಗಳನ್ನು ಅಥವಾ ಯಾವುದಾದರೂ ಆಭರಣವನ್ನು ಬದಲಾಯಿಸುತ್ತಾರೆ. ನಿಶ್ಚಿತಾರ್ಥವು ಊಟ ಅಥವಾ ಉಪಾಹಾರದೊಂದಿಗೆ ಮುಕ್ತಾಯವಾಗುತ್ತದೆ. ಮದುವೆಯ ದಿನ ಗೊತ್ತಾದ ಮೇಲೆ ಮುಂದಿನ ಮೂರು ಭಾನುವಾರಗಳಲ್ಲಿ ಮದುವೆಯ ವಿಷಯವನ್ನು ಮುಂದೆ ಒದಗಬಹುದಾದ ಸಮಸ್ಯೆಗಳನ್ನು ಬಗೆಹರಿಸಲು ಚರ್ಚಿನಲ್ಲಿ ಪ್ರಾರ್ಥನೆಯ ನಂತರ ಪ್ರಕಟಿಸುತ್ತಾರೆ. ಇದನ್ನು ಬಾನ್ ಎನ್ನುತ್ತಾರೆ. ಮದುವೆಯ ದಿನ ಗಂಡಿನ ಪ್ಯಾರಿಷ್ ಚರ್ಚಿನಲ್ಲಿ ಮದುವೆಯನ್ನು ಪಾದ್ರಿಗಳು ವಿಧಿಯುಕ್ತವಾಗಿ ನೆರವೇರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಕ್ರೈಸ್ತರಲ್ಲಿಯೂ ತಾಳಿಕಟ್ಟುವ ಸಂಪ್ರದಾಯ ರೂಢಿಗೆ ಬರುತ್ತಿದೆ. ಕೈಬೆರಳುಂಗುರವನ್ನು ಬದಲಾಯಿಸುತ್ತಾರೆ. ಮದುವೆಯ ಪುಸ್ತಕದಲ್ಲಿ ಸಾಕ್ಷಿದಾರರೊಂದಿಗೆ ಸಹಿ ಮಾಡುತ್ತಾರೆ. ಊಟವಾದ ಮೇಲೆ ಸಂಗೀತದೊಡನೆ ಸಮಾರಂಭವು ಮುಕ್ತಾಯವಾಗುತ್ತದೆ.

## ಶವಸಂಸ್ಕಾರ

ಕೊಡವರಲ್ಲಿ ಸಾವು ಸಮೀಪಿಸಿದಾಗ ಅವರನ್ನು ಮನೆಯ ವಿಶಾಲವಾದ ಅಂಗಳದಲ್ಲಿ (ಬಾಡೆ) ಮಲಗಿಸುತ್ತಾರೆ. ಪಕ್ಕದಲ್ಲಿ ತೆಂಗಿನಕಾಯಿ, ತುಳಸಿ, ಗರಿಕೆಹುಲ್ಲು ಮತ್ತು ಚಿನ್ನದ ನಾಣ್ಯ ವಿಟ್ಟಿರುತ್ತಾರೆ. ಪ್ರಾಣ ಬಿಡುವಾಗ ತುಳಸಿ ಮತ್ತು ಗರಿಕೆ ಹುಲ್ಲನ್ನು ಎಳನೀರಿನಲ್ಲಿ ಅದ್ದಿ ಮೃತರ ಬಾಯಿಗೆ ಬಿಡುತ್ತಾರೆ. ಸಂಬಂಧಿಕರು ಬಾಯೊಳಕ್ಕೆ ಚಿನ್ನದ ನಾಣ್ಯವಿಟ್ಟು ನೀರು ಬಿಡುತ್ತಾರೆ. ಸತ್ತವರು ವಿವಾಹವಾಗಿದ್ದರೆ ಅಥವಾ ವಯಸ್ಸಾಗಿದ್ದವರಾಗಿದ್ದರೆ ಸ್ವಲ್ಪ ಸಮಯ ಬಿಟ್ಟು ಆಗಾಗ್ಗೆ ಜೋಡಿಗುಂಡು ಹಾರಿಸುತ್ತಿರುತ್ತಾರೆ. ವಿವಾಹವಿಲ್ಲದಿದ್ದರೆ ಒಂಟಿ ಗುಂಡು ಹಾರಿಸುತ್ತಿರುತ್ತಾರೆ. ಆಳುಗಳ ಮೂಲಕ ಸಾವಿನ ಸುದ್ದಿಯನ್ನು ಸಂಬಂಧಿಕರಿಗೆ ತಿಳಿಸುತ್ತಾರೆ. ಶವದ ಕುಬಸವನ್ನು ಮಗಚಿ ಹಾಕಿ ಶವವನ್ನು ಮಗಚಿ ಹಾಕಿದ ಚಾಪೆಯ ಮೇಲೆ ಮಲಗಿಸುತ್ತಾರೆ. ತುಳಸಿ ಮಾಲೆ ಹಾಕುತ್ತಾರೆ. ಹೊಲೆಯರು ಬಂದು ಸಾವಿನ 'ಚಾವುಪರೆ' ವಾದ್ಯವನ್ನು ಶವಸಂಸ್ಕಾರವಾಗುವವರೆಗೂ ಬಾರಿಸುತ್ತಾರೆ. ಸಂಬಂಧಿಕರು ಬಟ್ಟೆ ಸಮೇತ ನೀರಿನಲ್ಲಿ ಮುಳುಗು ಹಾಕುತ್ತಾರೆ. ಗಂಡಸರು ಒಂದು ಜೊತೆ ಕುಪ್ಪಸ ಬಟ್ಟೆ ಅಥವಾ ಮೈಗೊಂದು ಸೊಂಟಕ್ಕೊಂದು ಬಿಳಿಪಂಚೆ ಕಟ್ಟಿಕೊಳ್ಳುತ್ತಾರೆ. ಹೆಂಗಸರು ಬಿಳಿಬಟ್ಟೆ ಉಡುತ್ತಾರೆ. ನೀರಿಗಿಳಿದು ಬಂದವರು ಸ್ವಲ್ಪ ಅನ್ನ, ಒಂದು ತುದಿಯಲ್ಲಿ ಉರಿಯುತ್ತಿರುವ ಬತ್ತಿ, ತೆಂಗಿನಕಾಯಿ ಚೂರಿರುವ ಬಾಳೆ ಅಗ್ರವನ್ನು (ಕೂಳ್) ಕೈಕೊಟ್ಟು ಎತ್ತಿ ಓಣಿಯ ತುದಿಯಲ್ಲಿ ಇಟ್ಟು ಮೂರು ಸಾರಿ 'ಕಟ್ಟರೋ' ಎಂದು ಸತ್ತವರ ಹೆಸರನ್ನು ಕೂಗಿ ಹೇಳುತ್ತಾರೆ. ನಂತರ ಜೋಡಿ ಗುಂಡು ಹಾರಿಸಿ ಮನೆಗೆ ಬರುತ್ತಾರೆ. ನೀರಿಗಿಳಿದವರು ತಮ್ಮ ತಲೆಯ ಮೇಲಿನ ವಸ್ತ್ರ ತೆಗೆದು, ಬಲಗೈಯನ್ನು ಶವದ ಎದೆಯ ಮೇಲಿಟ್ಟು 'ಕಟ್ಟರೋ....' ಎಂದು ಮೂರು ಸಾರಿ ಹೇಳುತ್ತಾರೆ. ಕಾರಣಾಂತರಗಳಿಂದ ಶವವನ್ನು ರಾತ್ರಿಯಿಡಬೇಕಾಗಿ ಬಂದರೆ, ಅದನ್ನು ಬೋರಲು ಹಾಕಿ ಮುಖಕ್ಕೆ ಕಂಚಿನ ಗಂಗಾಳವೊಂದನ್ನು ಇಡುತ್ತಾರೆ. ಶರೀರವನ್ನು ಬಿಳಿಬಟ್ಟೆಯಿಂದ ಹೊದಿಸುತ್ತಾರೆ. ಓಣಿಯಲ್ಲಿ ಕೂಳ್ ಇಟ್ಟ ಮೇಲೆ ನಾಲ್ಕು ಜನ ಗಂಡಸರು, ನಾಲ್ಕು ಜನ ಹೆಂಗಸರು ಸಾವಿನ ಹಾಡನ್ನು ಹಾಡುತ್ತಾರೆ. ಶವಕ್ಕೆ ಸ್ನಾನ ಮಾಡಿಸಿ (ಗಂಡಸರಾದರೆ ಮುಖ ಕ್ಷೌರಮಾಡಿ) ಉಡುಪಿನಿಂದ ಅಲಂಕರಿಸಿ ಏಮರದ ಮೇಲೆ ಅಥವಾ ಮಂಚದ ಮೇಲೆ

ಗಂಡಸರಾದರೆ ಕೂರಿಸುತ್ತಾರೆ, ಹೆಂಗಸರಾದರೆ ಮಲಗಿಸುತ್ತಾರೆ. ತಳಿಯಕ್ಕಿಯಿಟ್ಟು, ತೆಂಗಿನ ಚಿಪ್ಪಿನಲ್ಲಿ ಹಸುವಿನ ತುಪ್ಪದ ದೀಪ ಹಚ್ಚುತ್ತಾರೆ. ಶವದ ಜೊತೆ ದೀಪವನ್ನು ತೆಗೆದುಕೊಂಡು ಹೋಗಿ ಸುಡುವುದಾದರೆ ಬೆಂಕಿಗೆ, ಹೂಳುವುದಾದರೆ ಗುಂಡಿಗೆ ಅಕ್ಕಿ ಸಮೇತ ದೀಪವನ್ನು ಹಾಕುತ್ತಾರೆ. ಸತ್ತವರ ಬಳಿ ಸಾಮಾನ್ಯವಾಗಿ ಹೆಂಗಸರು ಕುಳಿತಿರುತ್ತಾರೆ. ಸಂಬಂಧಿಕರು ಬರುವಾಗ ವಾದ್ಯ, ಕೋವಿ, ಬಿಳಿಬಟ್ಟೆ ಮೊದಲಾದವುಗಳನ್ನು ತರುತ್ತಾರೆ. ಇವನ್ನು ಕೆಲ್ಲಟ ಎನ್ನುತ್ತಾರೆ. ಬಿಳಿಬಟ್ಟೆಯನ್ನು ಮುರಿ ತರುವುದು ಎನ್ನುತ್ತಾರೆ. ಹೆಂಗಸರು ಸತ್ತರೆ ತವರು ಮನೆಯಿಂದ ತೆಂಗಿನಕಾಯಿ, ತೆಂಗಿನಎಣ್ಣೆ, ಹುರುಕಲು ಮಾಂಸ ಅಥವಾ ಕೋಳಿಮೊಟ್ಟೆ ಸಾರು ಮಾಡಿ ಕಟ್ಟಿದ ಬುತ್ತಿ ಹರಳೆಣ್ಣೆಯಲ್ಲಿ ಮಾಡಿದ ಮೂರು ಕಜ್ಜಾಯ, ಅರಿಶಿನ ಮಿಶ್ರ ಮಾಡಿದ ಅಕ್ಕಿ ತರುತ್ತಾರೆ. ಇವನ್ನು ಸಮೆಯ ಎನ್ನುತ್ತಾರೆ. ಮಧ್ಯಾಹ್ನ ರಾಹುಕಾಲದ ನಂತರ ಶವವನ್ನು ತೆಗೆಯುತ್ತಾರೆ. ಶವವನ್ನು ಹೊರುವಾಗ ಗಂಡಸರು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ. ಹಿಂದೆ ಅಂಗ ಮುರಿಪ ಎನ್ನುವ ಪದ್ಧತಿಯಿತ್ತು. ಈಗ ಅದು ಹೆಚ್ಚಾಗಿ ಕಂಡುಬರುತ್ತಿಲ್ಲ. ಈ ಪದ್ಧತಿಯಲ್ಲಿ ಹೊಲೆಯನೊಬ್ಬನು ತನಗೆ ಕೊಟ್ಟ ಹೊಸ ಪಂಚೆಯನ್ನು ಉಟ್ಟು ದೀಕ್ಷೆ ನಿಲ್ಲುವವರಂತೆ ತಾನೂ ಮೇಂಗತೆ ಆಚರಿಸುತ್ತಿದ್ದನು. ಈ ಪದ್ಧತಿಯಲ್ಲಿ, ಅಂಗಳದಲ್ಲಿ ಮಣೆಯ ಮೇಲೆ ಕೈಯೆಣ್ಣೆ ದೀಪದ ಪಕ್ಕದಲ್ಲಿ ಪುತ್ತರಿ ಪಚ್ಚೆಯಲ್ಲಿ ಬತ್ತ ಅದರ ಮೇಲೆ ಕುಕ್ಕೆಯಲ್ಲಿ ಅಕ್ಕಿ, ಅದರ ಮೇಲೆ ತೆಂಗಿನಕಾಯಿ, ಕಾಯಿಯ ಮೇಲೆ ಒಂದು ಚಿಕ್ಕ ಕಬ್ಬಿಣದ ಬಾಣ, ಇಟ್ಟಿರುತ್ತಾರೆ. ವಾದ್ಯಕ್ಕೆ ಸರಿಯಾಗಿ ಎದೆಬಡಿದುಕೊಳ್ಳುತ್ತಾ ಹೊಲೆಯರು ಇವುಗಳನ್ನು ಸುತ್ತುತ್ತಾ ದುಃಖದ ನೃತ್ಯ ಮಾಡುತ್ತಾರೆ. ಶವಸಂಸ್ಕಾರ ಮಾಡುವ ಸ್ಥಳವನ್ನು ಕೇಕಳ ಅಥವಾ ತೂಟಂಗಳ ಎಂದು ಕರೆಯುತ್ತಾರೆ. ಕುಟುಂಬದ ಅರುವನು ಸೌದೆ ಕಡಿಯುವ ಕೆಲಸ ಮಾಡಿಸುತ್ತಾನೆ. ಶವವನ್ನು ಕುರ್ಚಿ ಅಥವಾ ಮಂಚದ ಮೇಲೆ ಸಾಗಿಸುತ್ತಾರೆ. ಅದರ ಮೇಲ್ಕಟ್ಟಿನ ಮೂಲೆಗಳಿಗೆ ಕರಿಮೆಣಸಿನ ಎಲೆಗಳನ್ನು ಕಟ್ಟುತ್ತಾರೆ. ನೆಂಟರಿಷ್ಟರು ಗರಿಕೆ ಹುಲ್ಲು ತುಳಸಿದಳಗಳಿಂದ ತೆಂಗಿನಕಾಯಿಯ ನೀರನ್ನು ಅದ್ದಿ ಶವದ ಬಾಯಿಗೆ ಕೊಟ್ಟ ನಂತರ ಶವವನ್ನು ತೆಗೆದುಕೊಂಡು ಹೋಗುತ್ತಾರೆ. ದಾರಿಯಲ್ಲಿ ನಾಣ್ಯ, ಅರಿಶಿನ ಮಿಶ್ರಿತ ಅಕ್ಕಿಯನ್ನು ಶವದ ಮೇಲೆ ಹಾಕುತ್ತಾರೆ. ಶ್ಮಶಾನದಲ್ಲಿ ಭಿಕ್ಷುಗಳಿಗೆ ಚಿಲ್ಲರೆ ನಾಣ್ಯ ಬಿಳಿಬಟ್ಟೆ ದಾನ ಮಾಡುತ್ತಾರೆ, ಶವದ ನೆರಳಿಗಾಗಿ ಬಳಿ ಬಟ್ಟೆಯ ಕೊಡೆ ಹಿಡಿಯುತ್ತಾರೆ. ಶವದ ತಲೆಯನ್ನು ದಕ್ಷಿಣ ದಿಕ್ಕಿಗೆ ಬರುವಂತೆ ಮಲಗಿಸಿ ಸಂಸ್ಕಾರ ಮಾಡುತ್ತಾರೆ.

ಶ್ಮಶಾನದಲ್ಲಿ ಸತ್ತವರ ಗಂಡ ಅಥವಾ ಹೆಂಡತಿ, ಮಕ್ಕಳು, ಸಂಬಂಧಿಕರು ನೀರಿಗಿಳಿದು ಬರುತ್ತಾರೆ. ಸತ್ತವರ ಗಂಡ ಅಥವಾ ಹೆಂಡತಿ ತಲೆಯ ಮೇಲೆ ನೀರು ತುಂಬಿದ ಮಡಕೆಯಿಟ್ಟುಕೊಳ್ಳುತ್ತಾರೆ. ಹಿರಿಯ ಮಗ ತಲೆಯ ಮೇಲೆ ತೆಂಗಿನ ಕಾಯಿಯನ್ನು, ಸೋದರಳಿಯ ಕೊಡವನ್ನು ಹೊರುತ್ತಾರೆ. ಇವರಾರೂ ಇಲ್ಲದಿದ್ದರೆ ಈ ಕೆಲಸಗಳನ್ನು ಸಂಬಂಧಿಕರು ಮಾಡುತ್ತಾರೆ. ಶವವನ್ನು ಅಪ್ರದಕ್ಷಿಣೆ ಮಾಡುವಾಗ ತೆಂಗಿನ ಕಾಯಿ ಮಡಕೆಗಳಿಗೆ ತೂತುಮಾಡಿ ನೀರು ಹೋಗುತ್ತಿರುವಂತೆ ಮಾಡುತ್ತಾರೆ. ಪ್ರದಕ್ಷಿಣೆಯ ನಂತರ ಹೆಂಡತಿ/ಗಂಡ ತಲೆಯ ಬಳಿ, ಮಗ ಕಾಲಿನ ಬಳಿ, ಅಳಿಯ ಬಲಬದಿಯಲ್ಲಿ ನಿಲ್ಲುತ್ತಾರೆ. ಸ್ವಲ್ಪ ಸ್ವಲ್ಪ ನೀರನ್ನು ಹತ್ತಿರದಲ್ಲಿರುವ ಕಂಚಿನ ಪಾತ್ರೆಗೆ ಸುರಿದು, ಪ್ರದಕ್ಷಿಣೆ ಬಂದು ಮಡಿಕೆ ತೆಂಗಿನಕಾಯಿಗಳನ್ನು ಒಡೆದು ಕೊಡದ ನೀರನ್ನು ಚೆಲ್ಲಿ, ಗರಿಕೆ ತುಳಸಿಗಳನ್ನು ಕಂಚಿನ ಪಾತ್ರೆಯ ನೀರಿಗೆ ಅದ್ದಿ ಶವದ ಬಾಯಿಗೆ ಇಡುತ್ತಾರೆ. ಸುಡುವುದಾದರೆ ಒಂದು ಉರಿಯುವ ಸೌದೆಯನ್ನು ತೆರಂಗೊಳ್ಳಿಯಾಗಿ ಚಿತೆಗೆ ಅಗ್ನಿಸ್ಪರ್ಶ ಮಾಡುತ್ತಾರೆ. ಹೆಂಡತಿ ಸತ್ತರೆ ಗಂಡ, ಗಂಡ ಸತ್ತರೆ ಹೆಂಡತಿ ಈ ವಿಧಿ ಮಾಡುತ್ತಾರೆ. ಹೂಳುವುದಾದರೆ ಮೂರು ಹಿಡಿ ಮಣ್ಣನ್ನು ಮೊದಲು ಗುಂಡಿಗೆ ಹಾಕುತ್ತಾರೆ. ಹಿಂತಿರುಗುವ ಸಮಯದಲ್ಲಿ ಅರುವನು ತಂದಿಟ್ಟ ಬುತ್ತಿಯನ್ನು ತಲೆಭಾಗದಲ್ಲಿಟ್ಟು ಒಂಟಿಗುಂಡು ಹಾರಿಸುತ್ತಾರೆ. ಹಿಂದಿರುಗುವಾಗ ದಾರಿಗೆ ಅಡ್ಡಲಾಗಿ ಮುಳ್ಳನ್ನು ಹಾಕಿ, ಸ್ನಾನ ಮಾಡಿ ಮನೆ ಸೇರುತ್ತಾರೆ. ಶವಸಂಸ್ಕಾರವಾಗುವವರೆವಿಗೆ ಮನೆಯಲ್ಲಿ ಅಡಿಗೆ ಮಾಡುವುದಿಲ್ಲ. ಅರುವನ ಮನೆಯಲ್ಲಿ ಬಾಳೆಗೊನೆ ಕಡಿದು ಉರುಟುರುಟಾಗಿ ಕತ್ತರಿಸಿ ತಿನ್ನಲು ಸತ್ತವರ ಹೆಂಡತಿ/ಗಂಡ, ಸಂಬಂಧಿಕರಿಗೆ ಕೊಡುತ್ತಾರೆ. ಇದನ್ನು ಚಾತಪುಕ್ಕವ ಎನ್ನುತ್ತಾರೆ. ಮೂರನೇಯ ದಿನ ಚಿತಾಭಸ್ಮವನ್ನು ನದಿಯಲ್ಲಿ ಸಂಚಯನ ಮಾಡುತ್ತಾರೆ. ಇಲ್ಲವೆ ಹಾಲು ಸುರಿಸುವ ಮರಗಳ ಬುಡದಲ್ಲಿ ಹಾಕಿ, ನೀರು ಸುರಿದು ಬತ್ತ, ಸಾಸುವೆ ಬಿತ್ತುತ್ತಾರೆ. ಮಕ್ಕಳು ಸತ್ತರೆ ಹೂಳುತ್ತಾರೆ. ಬೇರೆ ಸ್ಥಳ, ಊರುಗಳಲ್ಲಿ ಸತ್ತಾಗ, ಚಿತಾಭಸ್ಮವನ್ನು ಅಥವಾ ಸತ್ತವರ ಉಗುರು ಕೂದಲು, ಹಾಗೂ ಸಮಾಧಿಯ ಮಣ್ಣು ತಂದು ಅತನ ಸ್ವಂತ ಮನೆಯಲ್ಲಿ ಶವಸಂಸ್ಕಾರ ಮಾಡುವ ರೀತಿಯಲ್ಲೇ ಸಂಸ್ಕಾರ ಮಾಡುತ್ತಾರೆ. ಇದನ್ನು ಚಾವುಪೋಲೆ ಎನ್ನುತ್ತಾರೆ. ಸತ್ತಾಗ 11 ದಿವಸಗಳವರೆವಿಗೆ ಸೂತಕವನ್ನು ಕುಟುಂಬದವರು ಆಚರಿಸುತ್ತಾರೆ.

ಕರ್ಮಗಳನ್ನು ಮಾಡುವಾಗ ದೀಕ್ಷೆ ನಿಲ್ಲುವುದರಲ್ಲಿ ಎರಡು ವಿಧ; ಒಂದು ಮೇಂಗತೆನಿಪ್ಪ, ಇನ್ನೊಂದು ಕುಳಿಕ್‌ನಿಪ್ಪ.

ಕೇವಲ ಹನ್ನೊಂದು ದಿನಗಳವರೆವಿಗೆ ದೀಕ್ಷೆ ನಿಲ್ಲುವವರನ್ನು ಮೇಂಗತೆನಿಪ್ಪವರು ಎನ್ನುತ್ತಾರೆ. ತಿಥಿ ಕರ್ಮಾಂತರ ಮುಗಿದು ಒಂದು ತೀರ್ಥಯಾತ್ರೆ ಮಾಡಿ ಸತ್ತವರ ಹೆಸರಿನಲ್ಲಿ ಪಿಂಡ ತರ್ಪಣ ಅರ್ಪಿಸುವವರೆವಿಗೆ ದೀಕ್ಷಾ ಬದ್ಧರಾದರೆ ಕುಳಿಕ್ ನಿಪ್ಪವರು ಎನ್ನುತ್ತಾರೆ. ಸತ್ತವರ ಹೆಂಡತಿ ಅಥವಾ ಗಂಡ ಕಡ್ಡಾಯವಾಗಿ ಕುಳಿಕ್‌ನಿಪ್ಪ ದೀಕ್ಷೆ ಸ್ವೀಕರಿಸಬೇಕು.

ಕುಳಿಕ್‌ದೀಕ್ಷೆ ನಿಂತವರು ಮೊದಲು ಮೂರು ದಿನ ಹತ್ತಿರದ ಕೆರೆ ಬಾವಿಗಳಲ್ಲಿ ಮೀನುಗಳಿಗೆ ಅಕ್ಕಿ ಹಾಕುತ್ತಾರೆ. ಇದನ್ನು ನೀರ್‌ಬಲಿಯೆನ್ನುತ್ತಾರೆ. ನಾಲ್ಕನೇಯ ದಿನದಿಂದ ಏಳನೇಯ ದಿನದವರೆವಿಗೂ ಹೊರಗಡೆ ಮಡಿಕೆಯಲ್ಲಿ, ಅನ್ನ ಮಾಡಿ ಬಾಳೆ ಎಲೆ ಮೇಲೆ ಹಾಕಿ ಕರೆಬೆಲಿ ಕೊಡುತ್ತಾರೆ. ಏಳನೇಯ ದಿನ ದಿಂದ ಹನ್ನೊಂದನೇಯ ದಿನದವರೆವಿಗೆ ಮನೆಯ ಮುಂದೆ ಮರನೆಟ್ಟು (ಬೆಲಿಮರ) ಅದರ ಮೇಲೆ ತಾವು ಊಟ ಮಾಡುವ ಮೊದಲು ಅನ್ನವನ್ನು ಕಾಗೆಗೆ ಹಾಕುತ್ತಾರೆ (ಕಾಕೆಕ್ ಕೊಳ್‌ಬೆಪ್ಪ). ಹನ್ನೊಂದನೇಯ ದಿನ ಉತ್ತರ ಕ್ರಿಯಾದಿ ಗಳನ್ನು ಮಾಡುತ್ತಾರೆ. ಪನ್ನಂದ್, ಕುಳಿಚಂಬದ್, ಮಾದ ಎಂಬ ಉತ್ತರ ಕ್ರಿಯೆಗಳನ್ನು ಮಾಡುತ್ತಾರೆ. ತಿಥಿ, ಕರ್ಮಾಂತರ ಮುಗಿಯುವವರೆಗೆ ಸತ್ತ ಮನೆಯನ್ನು 'ತೀಕೆ ಮನೆ' ಎಂದು ಕರೆಯುತ್ತಾರೆ. ತಿಥಿ ಕರ್ಮಾಂತರದ ದಿನ ಮಧ್ಯಾಹ್ನ ಊಟ ಮುಗಿದ ಮೇಲೆ ನಾಲ್ಕು ಜನ ಗಂಡಸರು ದುಡಿ ತೆಗೆದುಕೊಂಡು ಮೃತರ ಗುಣಗಾನ ಮಾಡುತ್ತಾರೆ. ಇದನ್ನು ಪೊಲಿಚಿಪಾಡುವ ಎನ್ನುತ್ತಾರೆ. ಮದುವೆಯಾಗ ದವರು ಸತ್ತರೆ ಶವಕ್ಕೆ ವಿವಾಹ ಶಾಸ್ತ್ರ ಮಾಡಿಸುತ್ತಾರೆ. ಸ್ತ್ರೀ ಶವಕ್ಕೆ ಹುಲ್ಲಿನ ಬೊಂಬೆಯಿಂದ ಹೂವಿನ ಹಾರ ಹಾಕಿಸುತ್ತಾರೆ. ಪುರುಷರಾದರೆ ಶವದ ಕೈಯಿಂದ ಬಾಳೆಗಿಡಕ್ಕೆ ಹಾರ ಹಾಕಿಸುತ್ತಾರೆ. ನಂತರ ಶವಸಂಸ್ಕಾರ ಮಾಡುತ್ತಾರೆ.

ಕೊಡಗಿನಲ್ಲಿ ಗೌಡರ ಮನೆಗಳಲ್ಲಿಯೂ ಕೂಡ ಸಾವಿನ ಸಂಕೇತವಾಗಿ ಜೋಡಿ ಗುಂಡು ಹಾರಿಸುತ್ತಾರೆ. ಸಾಯುವಾಗ ಬಾಯಿಗೆ ಗಂಗಾಜಲ ಅಥವಾ ನೀರಿಗೆ ಬೆಳ್ಳಕ್ಕಿ ಹಾಕಿ ಅದನ್ನು ತುಳಸಿಯಿಂದ ಅದ್ದಿ ಬಾಯಿಗೆ ಬಿಡುತ್ತಾರೆ. ಸತ್ತನಂತರವೂ ಬಂದ ಸಂಬಂಧಿಕರು ಬಾಯಿಗೆ ನೀರು ಬಿಡುತ್ತಾರೆ. ನೆಂಟರಿಗೆಲ್ಲಾ ಸುದ್ದಿ ಕಳುಹಿಸಿ ಕಾಡಿನಲ್ಲಿ ಚಿತೆ ತಯಾರಿಸುವ ತಯಾರಿ ಮಾಡುತ್ತಾರೆ. ಎಣ್ಣೆ, ಅರಿಸಿನವನ್ನು ಕಲಸಿ ಗರಿಕೆ ಯಿಂದ ಮೈಗೆ ಲೇಪಿಸಿ ಶವಕ್ಕೆ ಸ್ನಾನ ಮಾಡಿಸಿ ಮಲಗಿಸುತ್ತಾರೆ. ಸಂಬಂಧಿಕರು ಸ್ನಾನ ಮಾಡಿ ಬಂದು ಶವಕ್ಕೆ ಮೂರು ಸುತ್ತು ಪ್ರದಕ್ಷಿಣೆ ಮಾಡಿ ಶವವನ್ನು ಚಟ್ಟದ ಮೇಲೆ ಇಟ್ಟು ವಾದ್ಯಗಳೊಂದಿಗೆ ತೆಗೆದುಕೊಂಡು ಹೋಗುತ್ತಾರೆ. ದಾರಿಯ ಮಧ್ಯದಲ್ಲಿ ಬುತ್ತಿಯಿಟ್ಟು ನಂತರ ಹೊರುವವರು ಸ್ಥಾನ ಬದಲಾಯಿಸಿ ಶ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಚಿತೆಯ ಸುತ್ತ ಮೂರು ಸುತ್ತು ಬಂದು ಹೆಣವನ್ನು ಚಿತೆಯ ಮೇಲಿಟ್ಟು ಬೆಂಕಿ ಇಡುತ್ತಾರೆ. ಮಾರನೆಯ ದಿನ ಉರಿದು ಹೋಗದೆ ಬಾಕಿ ಉಳಿದಿರುವ ಕಟ್ಟಿಗೆಗಳನ್ನು ಪುನಃ ಉರಿಸುತ್ತಾರೆ. ಇದನ್ನು ಕೊಳ್ಳಿ ಕೂಡಿಸುವ ಕ್ರಮವೆನ್ನುತ್ತಾರೆ. ಮೂರನೇಯ ದಿನ ಬೂದಿಯನ್ನು ಹೊಸ ಮಡಿಕೆಯಲ್ಲಿ ಸಂಗ್ರಹಿಸಿ ಗುಂಡಿ ತೋಡಿ ಹೂಳುತ್ತಾರೆ. ಉಳಿದ ಬೂದಿಯನ್ನು ನೀರಿನಲ್ಲಿ ಬಿಡುತ್ತಾರೆ. ಇದನ್ನು ಮೂರರ ಶುದ್ಧಿಯೆನ್ನುತ್ತಾರೆ. ಕರ್ಮಾಂತರಗಳನ್ನು ನಡೆಸುವಾಗ ಹೆಣ್ಣು ಮಕ್ಕಳು, ಸಮೀಪದ ಬಂಧುಗಳು ಖರ್ಚಿಗೆಂದು ಅಕ್ಕಿ, ತೆಂಗಿನ ಕಾಯಿ ಮೊದಲಾದವುಗಳನ್ನು ಕಳುಹಿಸುತ್ತಾರೆ. ಇದನ್ನು ಸರಕು ಕಳುಹಿಸುವ ಕ್ರಮವೆನ್ನುತ್ತಾರೆ. ಇವಲ್ಲದೆ ಶವಸಂಸ್ಕಾರ ಕರ್ಮಾಂತರ ವಿಧಿಗಳಲ್ಲಿ ಚಪ್ಪರ ಹಾಕುವುದು, ಜಾಲಗೂಡು ಮಾಡುವುದು, ಶುದ್ಧ, ಸ್ವರ್ಗ ಸಲ್ಲಿಸುವುದು, ಬೊಜ್ಜ, ಹದಿನಾರರ ಕೊಳೆಗೆ ಸೇರಿಸುವಿಕೆ, ಪಿಂಡ ಹಾಕುವುದು ಮೊದಲಾದ ಪದ್ಧತಿಗಳಿವೆ. ಸತ್ತ ಹನ್ನೊಂದನೇಯ ದಿನ ಮೃತನ ಹೆಸರಿನಲ್ಲಿ ಬಂದವರಿಗೆ ಊಟ ಹಾಕುತ್ತಾರೆ. ಶುದ್ಧಿಯ ದಿನ ದೀಕ್ಷೆ ನಿಂತವರು ಕ್ಷೌರ ಮಾಡಿಸಿಕೊಂಡು ಪುಣ್ಯ ಕ್ಷೇತ್ರದಲ್ಲಿ ಪಿಂಡ ಹಾಕುತ್ತಾರೆ. ದೀಪಾವಳಿ ಹಬ್ಬದಲ್ಲಿ ಕುಟುಂಬದಲ್ಲಿ ಸತ್ತವರಿಗೆ ಅವುಲು ಹಾಕುತ್ತಾರೆ. ಸತ್ತ ಗಂಡಸರಿಗೆ ಬಲಿ ಪಾಡ್ಯಮಿಯಂದು ಹೆಂಗಸರಿಗೆ ಅಮಾವಾಸ್ಯೆಯಂದು ಬೆಳಗಿನ ಜಾವ ನಾಲ್ಕು ಗಂಟೆಯ ಸಮಯದಲ್ಲಿ ಬಾಳೆಯೆಲೆಯ ಮೇಲೆ ಅವಲಕ್ಕಿ, ಬೆಲ್ಲ, ಬಾಳೆಹಣ್ಣು, ತೆಂಗಿನಕಾಯಿ ತುರಿಯ ಎಡೆ ಹಾಕುತ್ತಾರೆ. ಪ್ರತೀವರ್ಷ ಮಿಥುನಮಾಸದಲ್ಲಿ ಸತ್ತವರಿಗೆ ಎಡೆ ಹಾಕುತ್ತಾರೆ. ಗೌಡರಲ್ಲಿ ಸತ್ತಾಗ ಹನ್ನೊಂದು ದಿನ ಸೂತಕ ಆಚರಿಸುತ್ತಾರೆ. ಮಕ್ಕಳು ಸತ್ತರೆ ಹೂಳುತ್ತಾರೆ.

ಯೆರವರಲ್ಲಿ ಶವಗಳನ್ನು ಹೂಳುತ್ತಾರೆ. ಕುಟುಂಬದಲ್ಲಿ ಯಾರಾದರೂ ಸತ್ತರೆ ಪಣಿಯೆರವರು ಮೊದಲು ಚಮ್ಮಕಾರನಿಗೆ ಹೇಳಿಕಳುಹಿಸುತ್ತಾರೆ. ಅತನು ಶವಸಂಸ್ಕಾರಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲು ಜನಗಳನ್ನು ಬೇರೆಬೇರೆ ಕೆಲಸಗಳಿಗೆ ನಿಯೋಜಿಸುತ್ತಾನೆ. ಶವವನ್ನು ಸ್ನಾನ ಮಾಡಿಸಿ ಚಾಪೆಯ ಮೇಲೆ ಮಲಗಿಸಿರುತ್ತಾರೆ. ಚಟ್ಟದ ಮೇಲೆ ಶ್ಮಶಾನಕ್ಕೆ ಹೊತ್ತುಕೊಂಡು, ಚಮ್ಮಕಾರನನ್ನು ಮುಂದೆ ಮಾಡಿಕೊಂಡು ಒಯ್ಯುತ್ತಾರೆ. ಅಟ್ಟಾಳಿಯು (ಗುಂಪಿನ ಪೂಜಾರಿ) ಸ್ವಲ್ಪ ಕಾಳು, ಹಣವನ್ನು ಕೈಯಲ್ಲಿ ಹಿಡಿದು ಸತ್ತವರ ವಿಷಯವನ್ನು ಪಿತೃಗಳಿಗೆ ತಿಳಿಸುತ್ತಾನೆ. ಪಣಿಯೆರವರು ಹೆಣವನ್ನು ಸಾಮಾನ್ಯವಾಗಿ ಸಾಯಂಕಾಲ ಹೂಳುತ್ತಾರೆ. ಶ್ಮಶಾನದಲ್ಲಿ

ಚಟ್ಟವನ್ನು ಇಳಿಸಿ ಮಡಿಕೆಯಲ್ಲಿ ತಂದಿರುವ ಸಗಣಿನೀರನ್ನು ನೆಲದ ಮೇಲೆ ಚಿಮುಕಿಸಿ, ಮಡಕೆಯನ್ನು ಕುಕ್ಕಿ ಒಡೆದು, ಶವವನ್ನು ಮಲಗಿಸಿ ಬಿಳಿಬಟ್ಟೆಯಿಂದ ಸುತ್ತುತ್ತಾರೆ. ಬಂದಿರುವವರು ಶವದ ಸುತ್ತ ಮೂರು ಸಲ ಸುತ್ತಿ ನಮಸ್ಕರಿಸಿದ ನಂತರ ಶವವನ್ನು ಗುಂಡಿಯ ಸುತ್ತಲೂ ಮೂರು ಸುತ್ತು ತಂದು ಗುಂಡಿಯಲ್ಲಿ ದಕ್ಷಿಣ ದಿಕ್ಕಿಗೆ ತಲೆ ಮಾಡಿ ಮಲಗಿಸಿ, ಮುಖವನ್ನು ಪೂರ್ವಾಭಿಮುಖವಾಗಿ ತಿರುಗಿಸುತ್ತಾರೆ. ಸತ್ತವರಿಗೆ ಹೆಂಡತಿಯಿದ್ದರೆ, ಆಕೆತನ್ನ ತಾಳಿಯನ್ನು ಕಿತ್ತು ಬಳೆಗಳನ್ನು ಒಡೆದು ಶವದ ಮೇಲೆ ಹಾಕುತ್ತಾಳೆ. ಚಮ್ಮಕಾರನು ಮೊದಲು ಮೂರು ಹಿಡಿ ಮಣ್ಣನ್ನು ಹಾಕಿದ ನಂತರ ಇತರರು ಮಣ್ಣು ಹಾಕಿ ಮುಚ್ಚುತ್ತಾರೆ. ಮೇಲೆ ಮುಳ್ಳುಗಳನ್ನು ಹರಡಿ, ಅಟ್ಟಾಳಿಯು ತನ್ನಲ್ಲಿರುವ ಹಿತ್ತಾಳೆ ಬಳೆಯನ್ನು ಗೋರಿಯ ಮೇಲೆ ತಲೆಯ ಬಳಿಯಿಟ್ಟು ಕಾಲ ಬಳಿ ಬಂದು ಒಂದು ನಿಮಿಷ ಮೌನವಾಗಿ ನಿಂತು ಪಿತೃಗಳ ಆತ್ಮಗಳಿಗೆ ಅಲ್ಲಿ ಒಂದು ಹೆಣವನ್ನು ಇಟ್ಟಿರುವುದಾಗಿಯೂ ಅದನ್ನು ಹೆದರಿಸಕೂಡದೆಂತಲೂ, ಏಳು ದಿನಗಳ ನಂತರ ಬಂದು ಆತ್ಮಕ್ಕೆ ಸಲ್ಲಿಸಬೇಕಾದ ಸಂಸ್ಕಾರಗಳನ್ನು ಮಾಡುವುದಾಗಿಯೂ ಅಲ್ಲಿಯವರೆಗೂ ನೋಡಿಕೊಳ್ಳಬೇಕೆಂತಲೂ ಹೇಳಿ ಇತರರೊಡನೆ ಹಿಂದಿರುಗುತ್ತಾನೆ. ಪಣಿಯೆರವರು ಸತ್ತ ಏಳನೇಯ ದಿನ ಸಾಯಂಕಾಲದಿಂದ ಒಂಬತ್ತನೇಯ ದಿನ ಮಧ್ಯಾಹ್ನದವರೆಗೆ ಸಂಸ್ಕಾರಗಳನ್ನು ನೆರವೇರಿಸುತ್ತಾರೆ. ಏಳನೇಯ ದಿನದ ಸಂಸ್ಕಾರವನ್ನು ಈಯಿ ಎಂದು ಕರೆಯುತ್ತಾರೆ. ಆ ದಿನ ಸತ್ತವರ ಮಕ್ಕಳು, ಚಮ್ಮ, ಅಟ್ಟಾಳಿ ಮತ್ತು ಸಂಬಂಧಿಕರು ಸಮಾಧಿ ಸ್ಥಳಕ್ಕೆ ಹೋಗಿ ಕರ್ಮಗಳನ್ನು ಮಾಡುತ್ತಾರೆ. ಅಟ್ಟಾಳಿಯು ಹಿತ್ತಾಳೆ ಬಳೆಯನ್ನು ತೆಗೆದುಕೊಂಡು ಅದಕ್ಕೆ ಸತ್ತವನ ಆತ್ಮವನ್ನು ಆಹ್ವಾನಿಸಿ ಬಳೆಯೊಡನೆ ಮನೆಗೆ ಹಿಂದಿರುಗುತ್ತಾನೆ. ಕರ್ಮಾಂತರವನ್ನು ಮುಂದುವರೆಸುತ್ತಾರೆ. ಸತ್ತ ಎಂಟನೇಯ ತಿಂಗಳಿನಲ್ಲಿ ಪಂಡೆರು ಎಂಬ ಕರ್ಮವನ್ನು ಮಾಡುವುದರ ಮೂಲಕ ಸತ್ತವರ ಹೆಂಡತಿ ಅಥವಾ ಗಂಡ ಶೋಕ ಕಾಲವನ್ನು ಕಳೆದು ಪುನಃ ವಿವಾಹವಾಗಲು ಸ್ವತಂತ್ರರಾಗುತ್ತಾರೆ. ಪಣಿಯೆರವರು ಜುಲೈ ತಿಂಗಳಿನಲ್ಲಿ ಪ್ರತೀವರ್ಷ ಹಲವಾರು ಕುಟುಂಬಗಳು ಒಟ್ಟಿಗೆ ಸೇರಿ ಪಿತೃಗಳ ಆತ್ಮಕ್ಕೆ ಔತಣದ ಮೂಲಕ ತೃಪ್ತಿ ನೀಡುವ ಶತ್ತವರಂಗ್ ಉಂದಿ ಚೇಯಿ ಎಂಬುದನ್ನು ಆಚರಿಸುತ್ತಾರೆ.

ಪಂಜಿರಿಯೆರವರಲ್ಲಿ ಕುಂಜುಕಾರನು ಶವಸಂಸ್ಕಾರದ ಹೊಣೆ ಹೊರುತ್ತಾನೆ. ಗಂಡಸು ಸತ್ತಾಗ ಅವನ ಸಹೋದರರು, ಮಕ್ಕಳು, ಹೆಂಗಸು ಸತ್ತಾಗ ಅವಳ ತಾಯಿಯ ಕಡೆ ಸಂಬಂಧಿಕರು ಸಂಸ್ಕಾರ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಹೆಣಕ್ಕೆ ಸ್ನಾನ ಮಾಡಿಸಿ, ಬಿಳಿ ಬಟ್ಟೆ ಹೊದಿಸಿ ಚಟ್ಟದ ಮೇಲಿಟ್ಟು ಅದರ ನಾಲ್ಕು ಮೂಲೆಗೂ ಹಿತ್ತಾಳೆ ಬಳೆಗಳನ್ನು ಕಟ್ಟಿ ತಲೆಯ ಮತ್ತು ಕಾಲಿನ ಬಳಿ ತೆಂಗಿನಕಾಯಿಗಳನ್ನು ಒಡೆದು ಶ್ಮಶಾನಕ್ಕೆ ಶವವನ್ನು ಒಯ್ಯುತ್ತಾರೆ. ಮಧ್ಯ ದಾರಿಯಲ್ಲಿ ಹೆಣವನ್ನು ನೆಲದ ಮೇಲಿಟ್ಟು ಜೊತೆಯಲ್ಲಿ ಬಂದಿರುವ ಹೆಂಗಸರು ಮಡಿಕೆಯಲ್ಲಿ ತಂದಿದ್ದ ನೀರನ್ನು ಚಿಮುಕಿಸಿ ಹೆಂಡತಿ (ಇದ್ದರೆ) ಅವಳ ತಾಳಿ ಸರವನ್ನು ತೆಗೆದು ಚಮ್ಮನ ಕೈಗೆ ಕೊಟ್ಟು ಹೆಂಗಸರು ಹಿಂತಿರುಗಿದ ಮೇಲೆ ಚಟ್ಟವನ್ನು ಶ್ಮಶಾನಕ್ಕೆ ಒಯ್ಯುತ್ತಾರೆ. ಗುಂಡಿಯ ಬಳಿ ಚಟ್ಟವನ್ನು ಇಳಿಸಿ ಚಮ್ಮನು ಸತ್ತವನ ಹೆಸರು ಹೇಳಿ ಪಿತೃಗಳು ಅವನ ಶರೀರವನ್ನು ಕಾಡುಪ್ರಾಣಿಗಳಿಂದ ರಕ್ಷಿಸಬೇಕೆಂದು ಪ್ರಾರ್ಥಿಸಿದ ಮೇಲೆ, ಶವವನ್ನು ಗುಂಡಿಯೊಳಕ್ಕೆ ಇಳಿಸುತ್ತಾರೆ. ಕುಂಜುಕಾರನು ಮೊದಲು ಒಂದು ಹಿಡಿ ಮಣ್ಣನ್ನು ಹಾಕಿದ ಮೇಲೆ ಗುಂಡಿಯನ್ನು ಮುಚ್ಚುತ್ತಾರೆ. ಮೇಲೆ ಶಿವನಿ ಗಿಡದ ಒಂದು ಕೊಂಬೆಯನ್ನು ನೆಡುತ್ತಾರೆ. ಸಮಾಧಿಯ ಮೇಲೆ ಮಧ್ಯದಲ್ಲಿ ಹಿತ್ತಾಳೆ ಬಳೆಯಿಟ್ಟು ಮುಳ್ಳುಗಳನ್ನು ಹರಡಿ ಹಿಂದಿರುಗುತ್ತಾರೆ. ಪಂಜಿರಿ ಯೆರವರು ಸಂಜೆಯೊಳಗೆ ಶವವನ್ನು ಮಣ್ಣು ಮಾಡುತ್ತಾರೆ. ಕರ್ಮವನ್ನು ಹನ್ನೊಂದನೇಯ ದಿನ ಸಾಯಂಕಾಲ ಪ್ರಾರಂಭಿಸುತ್ತಾರೆ. ನೇರಳೆ ಮರದ ಕೊಂಬೆಗಳಿಂದ ಚಪ್ಪರ ಹಾಕುತ್ತಾರೆ. ಹಿರಿಯ ಮಗ, ಕುಂಜುಕಾರ, ಕರ್ಮಿ ಹಾಗೂ ಸಂಬಂಧಿಕರು ಶ್ಮಶಾನಕ್ಕೆ ಹೋಗಿ ಸತ್ತವರನ್ನು ಆಹ್ವಾನಿಸಿ ಊಟ ಹಾಕಿ, ಸಂಬಂಧಿಕರು ಪಿತೃಶೇಷವನ್ನು ತಿಂದು, ಆತ್ಮವನ್ನು ಹಿತ್ತಾಳೆ ಬಳೆಗೆ ಆಹ್ವಾನಿಸಿ ಹಿಂದಕ್ಕೆ ಸತ್ತ ಜಾಗಕ್ಕೆ ಬಂದು ಎಡೆಹಾಕಿ, ಹಿತ್ತಾಳೆ ಬಳೆಯಿಟ್ಟು, ಬಾಳೆನಾರಿನ ಗುಡಿಕಟ್ಟಿ, ಬಲಿ ಕೊಟ್ಟು ಪ್ರಾರ್ಥಿಸುತ್ತಾರೆ. ಸತ್ತವರ ಪಿತೃಗಳ ಆಕೃತಿಗಳನ್ನು ಬರೆದು ಸಾವಿನ ಹಾಡನ್ನು ಹಾಡುತ್ತಾರೆ. ಹಾಡು ಮುಗಿಯುವ ವೇಳೆಗೆ ಮನೆಯೊಳಗಿನಿಂದ ಸ್ತ್ರೀಯರು ಅಳುತ್ತಾ ಬಂದು, ಆ ಮನುಷ್ಯಾಕೃತಿಗಳ ಮೇಲೆ ಬೀಳುತ್ತಾರೆ. ಇಲ್ಲಿಗೆ ಕರ್ಮಗಳು ಮುಗಿಯುತ್ತವೆ. ಅಷ್ಟು ಹೊತ್ತಿಗೆ ಮಧ್ಯರಾತ್ರಿಯಾಗಿರುತ್ತದೆ. ಆಮೇಲೆ ಎಲ್ಲರೂ ಊಟಮಾಡಿ ಮಾರನೇಯ ದಿನ ಮಧ್ಯಾಹ್ನದವರೆವಿಗೂ ಶೋಕಗೀತೆಯನ್ನು ಹಾಡುತ್ತಾರೆ. ನಂತರ ಕಾಗೆಗೆ ತಿನ್ನಲು ಅರಿಶಿನದ ಅನ್ನವನ್ನು ಹಾಕಿ ಎಲ್ಲರೂ ಊಟ ಮಾಡುತ್ತಾರೆ. ನಂತರ ಸಂಬಂಧಿಕರು ಮನೆಗಳಿಗೆ ಮರಳುತ್ತಾರೆ. ಪಂಜಿರಿ ಯೆರವರು ಮಾತೃವಂಶೀಯರಾದರೂ, ಗಂಡು ಮಕ್ಕಳು ಸಂಸ್ಕಾರವನ್ನು ಮಾಡುತ್ತಾರೆ. ಈ ಕರ್ಮಗಳೆಲ್ಲಾ ಮುಗಿದ ಮೇಲೆ ಸತ್ತವರ ತಾಯಿಯ ಸಹೋದರರು, ಅವರ ಚಮ್ಮದ ಮುಖ್ಯಸ್ಥ ಸೇರಿ ಕೂಟವನ್ನು ಏರ್ಪಡಿಸುತ್ತಾರೆ. ಕೂಟವನ್ನು ಸತ್ತ ಆರು ತಿಂಗಳ ನಂತರ ಏರ್ಪಡಿಸುತ್ತಾರೆ. ಇಲ್ಲಿಯವರೆವಿಗೂ ಸತ್ತವರ ಗಂಡ

ಹೆಂಡತಿ ಪುನಃ ಮದುವೆಯಾಗುವಂತಿಲ್ಲ, ಮದ್ಯ, ಮಾಂಸ ಸೇವಿಸುವಂತಿಲ್ಲ, ಶೋಕವನ್ನು ಆಚರಿಸಬೇಕು. ಕೊಟ್ಟದ ಕರ್ಮಗಳು ಹನ್ನೊಂದನೇಯ ದಿನದ ಪದಮೂಂಡು ಕರ್ಮಗಳಂತಿರುತ್ತವೆ. ಕಡೆಯಲ್ಲಿ ಚಮ್ಮದ ಮುಖ್ಯಸ್ಥ ಬದುಕಿರುವ ಗಂಡ/ಹೆಂಡತಿಗೆ,ಪಂಚೆ/ಸೀರೆ,ಎಲೆ ಅಡಿಕೆ,ಮೊದಲಾದವುಗಳನ್ನು ಕೊಟ್ಟು, ಸತ್ತವರ ಸೋದರ ಮಾವಂದಿರಿಂದ ಪಂಚೆ, ಶರಟು, ಚಂಬು, ತಟ್ಟೆ, ಹಣ ಮುಂತಾದವನ್ನು ಪಡೆಯುತ್ತಾನೆ. ಕೊಟ್ಟು ತೆಗೆದುಕೊಳ್ಳುವುದು ಕೊಟ್ಟದ ಒಂದು ಮುಖ್ಯ ಅಂಗ. ಪ್ರತೀವರ್ಷ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಒಂದು ದಿನ ಚಮ್ಮದ ಕುಟುಂಬಗಳೆಲ್ಲವೂ ಸೇರಿ ತಮ್ಮ ಪಿತೃಗಳಿಗೆ ಆಹಾರವನ್ನು ಕೊಟ್ಟು ಆಶೀರ್ವಾದ ಪಡೆಯುತ್ತಾರೆ.

ಜಿಲ್ಲೆಯ ಇತರ ಮೂಲನಿವಾಸಿಗಳಲ್ಲಿ ಶವಸಂಸ್ಕಾರವು ಬಹುಸಂಖ್ಯಾತರಾದ ಕೊಡವರ ಸಂಸ್ಕಾರಗಳನ್ನು ಹೋಲುತ್ತದೆ. ಆದರೆ ಜಿಲ್ಲೆಗೆ ಹೊರಗಿನಿಂದ ಬಂದವರಲ್ಲಿ ಶವ ಸಂಸ್ಕಾರಗಳು ಬೇರೆ ಜಿಲ್ಲೆಗಳಲ್ಲಿರುವ ಅವರ ಜಾತಿಯ ಪದ್ಧತಿಗಳನ್ನೇ ಹೋಲುತ್ತವೆ.

ಮುಸಲ್ಮಾನರಲ್ಲಿ ಸಾಯುವ ಕಾಲಕ್ಕೆ ಮೌಲ್ವಿಯೊಬ್ಬರನ್ನು ಕರೆಸುತ್ತಾರೆ. ಅವರು ಮೃತರ ಬಳಿ ಕಲೀಮಾವನ್ನು ಸಾಯುತ್ತಿರುವವರಿಗೆ ಕೇಳಿಸಲೆಂದು ಗಟ್ಟಿಯಾಗಿ ಹೇಳುತ್ತಾರೆ. ಸಾಯುವಾಗ, ಸಾಯುತ್ತಿರುವವರ ಬಾಯಿಗೆ ಜೇನುತುಪ್ಪವನ್ನು ಹಾಕುತ್ತಾರೆ. ಸತ್ತ ನಂತರ ದೇಹವನ್ನು ತೊಳೆದು ಬಿಳಿಬಟ್ಟೆಯಿಂದ ಸುತ್ತಿ ಹಾಸಿಗೆಯ ಮೇಲಿಡುತ್ತಾರೆ. ಸತ್ತವರ ಬಳಿ ಹೆಂಗಸರು ಕುಳಿತು ರೋಧಿಸುತ್ತಾರೆ. ಇದನ್ನು ಆರ್ಘೂ ಎಂದು ಕರೆಯುತ್ತಾರೆ. ಶ್ಮಶಾನಕ್ಕೆ ಶವವನ್ನು ತಂದ ಮೇಲೆ ಹೂಳುವ ಗುಂಡಿಯ ಪಕ್ಕದಲ್ಲಿಡುತ್ತಾರೆ. ಈ ಜಾಗವನ್ನು ಶಹದ್ ಎಂದು ಕರೆಯುತ್ತಾರೆ. ಇಮಾಮನು ಪ್ರಾರ್ಥನೆಯನ್ನು ಮಾಡಿದ ನಂತರ ತೋಡಿರುವ ಗುಂಡಿಯಲ್ಲಿ ತಲೆಯನ್ನು ಉತ್ತರ ದಿಕ್ಕಿಗೂ ಮುಖವನ್ನು ಮಕ್ಕಾ ಕಡೆಗೂ ಮಾಡಿ ಹೂಳುತ್ತಾರೆ. ಮಣ್ಣು ಮುಚ್ಚಿದ ನಂತರ ಎಲ್ಲರೂ ಪ್ರಾರ್ಥಿಸಿ ಮನೆಗೆ ಹಿಂದಿರುಗುತ್ತಾರೆ. ಆ ದಿನ ಸತ್ತವರ ಮನೆಯಲ್ಲಿ ಅಡಿಗೆ ಮಾಡುವುದಿಲ್ಲ. ಹೆಂಗಸರು ಶ್ಮಶಾನಕ್ಕೆ ಹೋಗುವುದಿಲ್ಲ. ಮೂರನೇಯ ದಿನ ಸಂಬಂಧಿಕರು ಶ್ಮಶಾನಕ್ಕೆ ಹೋಗಿ ಕುರಾನ್ ಪಠಿಸಿ ಹಿಂದಿರುಗುತ್ತಾರೆ. ಹಾಗೆಯೇ ಸತ್ತ ಹತ್ತನೇಯ, ಇಪ್ಪತ್ತನೇಯ, ಮೂವತ್ತನೇಯ ನಲವತ್ತನೇಯ ದಿನ ಪ್ರಾರ್ಥನೆ ಮಾಡುತ್ತಾರೆ. ಅವರಲ್ಲಿ ಸೂತಕವನ್ನು 40 ದಿನಗಳು ಆಚರಿಸುತ್ತಾರೆ. ಸತ್ತ ನಲವತ್ತನೇಯ ದಿನ, ನಾಲ್ಕನೇಯ ತಿಂಗಳಲ್ಲಿ, ಆರನೇಯ ತಿಂಗಳಲ್ಲಿ ಒಂಬತ್ತನೇಯ ತಿಂಗಳಲ್ಲಿ ಹಾಗೂ ವರ್ಷದ ಕೊನೆಯ ದಿನ ಸಂಬಂಧಿಗಳಿಗೆ ಸಂತರ್ಪಣೆಯನ್ನು ಏರ್ಪಡಿಸುತ್ತಾರೆ. ಗಂಡಸರ ಸಮಾಧಿಯು ಮೇಲಿನ ಕಲ್ಲಿನ ಮೇಲ್ಭಾಗದ ಮಧ್ಯದಲ್ಲಿ ಉಬ್ಬಿರುತ್ತದೆ. ಸ್ತ್ರೀಯರ ಸಮಾಧಿಯ ಮೇಲೆ ತಗ್ಗಿರುತ್ತದೆ.




ಕ್ರೈಸ್ತರಲ್ಲಿ ಸಾಯುವ ಸಮಯಕ್ಕೆ ಪ್ಯಾರಿಷ್ ಪಾದ್ರಿಯನ್ನು ಕರೆಸುತ್ತಾರೆ. ರೋಮನ್ ಕ್ಯಾಥೊಲಿಕರಲ್ಲಿ ಪಾದ್ರಿಯು ಸಾಯುತ್ತಿರುವವರ ಕಡೆಯ ಸಂಸ್ಕಾರ ಎಕ್ಸ್ಟ್ರೀಮ್ ಅಂಕ್ಷನ್‌ವನ್ನು ಮಾಡಿ ಪ್ರಾರ್ಥಿಸುತ್ತಾನೆ. ಸಾಯುತ್ತಿರುವವರ ಶರೀರಕ್ಕೆ ಪವಿತ್ರಗೊಳಿಸಿದ ಎಣ್ಣೆಯನ್ನು ಜ್ಞಾನೇಂದ್ರಿಯಗಳಿಗೆ ಸವರುತ್ತಾರೆ. ಸತ್ತ ನಂತರ ದೇಹವನ್ನು ತೊಳೆದು ಅಲಂಕರಿಸಿ ಒಂದು ಎತ್ತರವಾದ ಜಾಗದಲ್ಲಿಡುತ್ತಾರೆ. ಪಕ್ಕದಲ್ಲಿ ಮೇಣದಬತ್ತಿ ಉರಿಯುತ್ತಿರುತ್ತದೆ. ಮೇಲುಗಡೆ ಶಿಲುಬೆಯಿರುತ್ತದೆ. ಪವಿತ್ರವಾದ ನೀರನ್ನು ಕಾಲಬಳಿಯಿಟ್ಟಿರುತ್ತಾರೆ. ಬಂದವರೆಲ್ಲರೂ ಪವಿತ್ರ ನೀರನ್ನು ಶರೀರದ ಮೇಲೆ ಚಿಮುಕಿಸುತ್ತಾರೆ. ಅನುಕೂಲವಿರುವವರು, ದೊರೆತರೆ ಕಪ್ಪು ಬಟ್ಟೆ ತೊಟ್ಟ ಶವಹೊರುವವರನ್ನು (ಪಾಲ್‌ಬೇರರ್ಸ್) ಕರೆಸಿ ಶವವನ್ನು ಶವದ ಪೆಟ್ಟಿಗೆಯಲ್ಲಿರಿಸಿ ಪ್ಯಾರಿಷ್ ಚರ್ಚಿಗೆ ಕೊಂಡೊಯ್ಯುತ್ತಾರೆ. ಇಲ್ಲದವರು ಶವದ ಪೆಟ್ಟಿಗೆಯನ್ನು ಕುದುರೆ ಗಾಡಿಯಲ್ಲಿ ಚರ್ಚಿಗೆ ಕೊಂಡೊಯ್ಯುತ್ತಾರೆ. ಅಲ್ಲಿ ಪಾದ್ರಿಯು ಮೃತದೇಹದ ಮೇಲೆ ಪವಿತ್ರ ನೀರನ್ನು ಚಿಮುಕಿಸಿ ಆಶೀರ್ವದಿಸುತ್ತಾನೆ. ನಂತರ ಶವವನ್ನು ಹೂಳುತ್ತಾರೆ. ರೋಮನ್ ಕ್ಯಾಥೊಲಿಕ್ಕರಲ್ಲಿ ಸತ್ತವರಿಗಾಗಿ ಸತ್ತ ದಿನ, ಮೂರನೇಯ ದಿನ, ಏಳನೇಯ ದಿನ, ಹಾಗೂ ಮೂವತ್ತನೇಯ ದಿನ ಚರ್ಚಿನಲ್ಲಿ ವಿಶೇಷ ಪ್ರಾರ್ಥನೆಯನ್ನು ಏರ್ಪಡಿಸುತ್ತಾರೆ. ಪ್ರಾಟೆಸ್ಟೆಂಟರಲ್ಲಿ ಹತ್ತನೇಯ ದಿನ ಸತ್ತವರಿಗಾಗಿ ವಿಶೇಷ ಪ್ರಾರ್ಥನೆಯಿರುತ್ತದೆ. ಕ್ರೈಸ್ತರಲ್ಲಿ ಸತ್ತಾಗ ಸೂತಕ ಆಚರಿಸುವುದಿಲ್ಲ.

## ಗೃಹಜೀವನ

### ಮನೆಗಳು

ಕೊಡವರ ಐನ್‌ಮನೆಗಳು ಅವರ ವೈಶಿಷ್ಟ್ಯಗಳಲ್ಲೊಂದು. ಕೊಡವ ಮೂಲ ಕುಟುಂಬಗಳ ಮನೆಗಳನ್ನು ಐನ್‌ಮನೆ, ಬಲ್ಯಮನೆ ಎಂದು ಕರೆಯುತ್ತಾರೆ. ಇವು ಕೊಡವರ ಜೀವನಾದರ್ಶ, ಸಂಸ್ಕೃತಿಗಳ ಪ್ರತೀಕಗಳಾಗಿವೆ. ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ಶುಭಾಶುಭ ಕಾರ್ಯಗಳೂ ಇಲ್ಲಿ ನಡೆಯುತ್ತವೆ. ಈ ಮನೆಗಳು ಬಹುದೊಡ್ಡವಿದ್ದು ಹಿಂದೆ ಮನೆಯ ಸುತ್ತಲೂ ಕೋಟೆಯಂತೆ ಗೋಡೆಗಳಿರುತ್ತಿದ್ದವು. ಎತ್ತರವಾದ

ಸ್ಥಳದಲ್ಲಿ ಪೂರ್ವಾಭಿಮುಖವಾಗಿ ಈ ಮನೆಗಳನ್ನು ಕಟ್ಟಿರುತ್ತಾರೆ. ಪ್ರವೇಶದಲ್ಲಿ ಮೆಟ್ಟಿಲುಗಳನ್ನು ಏರಿದೊಡನೆಯೇ ವಿಶಾಲವಾದ ಕಯ್ಯಾಲೆ ಎಂಬ ವರಾಂಡವಿರುತ್ತದೆ. ಕಯ್ಯಾಲೆಯ ಮೇಲ್ಛಾವಣಿಯನ್ನು ಎತ್ತಿ ಹಿಡಿದಿರುವ ಮುಂದಿನ ಕಂಬಗಳಿಗೆ ಹೊಂದಿಸಿ ಬೆಂಚಿನಂತಿರುವ ಮರಗಳನ್ನು ಐಮರಗಳೆನ್ನುತ್ತಾರೆ. ಇಲ್ಲಿಂದ ಒಳಬಂದಾಗ ಚೌಕಾಕಾರವಾದ ದೊಡ್ಡ ಪಡಸಾಲೆ. ಇದನ್ನು ಒಳಕಯ್ಯಾಲೆ ಎಂದು ಕರೆಯುತ್ತಾರೆ. ಇದರ ಮಧ್ಯದಲ್ಲಿ ನಾಲ್ಕು ಮೂಲೆಗೂ ಕಂಬಗಳಿರುವ ತೊಟ್ಟಿಯಿರುತ್ತದೆ, ನಡುವಿನ ತೊಟ್ಟಿಗೆ ಮುಚ್ಚಿಗೆ ಇಲ್ಲ. ಈ ತೊಟ್ಟಿಯನ್ನು ಮುಂದು ಎನ್ನುತ್ತಾರೆ. ಒಳಕಯ್ಯಾಲೆಯ ಸುತ್ತಲೂ ಅನೇಕ ಕೊಠಡಿಗಳಿದ್ದು ಒಂದು ಮೂಲೆಯಲ್ಲಿ ಕನ್ನಿ ಕೊಂಬರೆ ಎಂಬ ದೇವರ ಮನೆಯಿರುತ್ತದೆ. ಇಲ್ಲಿ ಪ್ರತಿನಿತ್ಯ ಇಲ್ಲವೆ ಹಬ್ಬ ಹರಿದಿನಗಳಲ್ಲಿ ಕಾರುಣರಿಗೆ (ಕುಟುಂಬದ ಮೂಲ ಪುರುಷರಿಗೆ) ಮೀದಿ (ಮನೆಯಲ್ಲಿ ಮಾಡಿದ ಅಡಿಗೆ) ನೈವೇದ್ಯ ಮಾಡುತ್ತಾರೆ. ಕಾರುಣನ ಪ್ರತಿರೂಪವಾಗಿ ದೀಪ ಹಚ್ಚುತ್ತಾರೆ. ಅಡಿಗೆ ಮನೆಯೂ ಕೊಡವರ ಪವಿತ್ರ ಸ್ಥಾನಗಳಲ್ಲೊಂದು. ಇಲ್ಲಿ ಪೂರ್ವಾಭಿಮುಖವಾಗಿ ಅಡಿಗೆ ಮಾಡಲು ಒಲೆಗಳಿರುತ್ತವೆ. ತೊಟ್ಟಿಯ ಸುತ್ತಲೂ ಕಂಬಗಳಿಗೆ ತಗಲುವಂತೆ ನಾಲ್ಕು ಮರಗಳನ್ನು ಹಾಸಿರುತ್ತಾರೆ. ಇವುಗಳನ್ನು ಐಮರಗಳೆನ್ನುತ್ತಾರೆ. ಐಮರಗಳು ಪವಿತ್ರ ಸ್ಥಳವಾಗಿದ್ದು ಸ್ತ್ರೀಯರು ಅದರ ಮೇಲೆ ಕೂಡುವಂತಿಲ್ಲ. ತೊಟ್ಟಿಯ ಸುತ್ತಲೂ ಇರುವ ಭಾಗವನ್ನು ನೆಲ್ಲಕ್ಕಿ ನಡಬಾಡೆಯೆಂದು




(ಕುಂಜಲಗೇರಿ ಮುಕ್ಕಾಟಿರ ಬಲ್ಯಮನೆಯ ಅಂದಾಜು ನಕ್ಷೆ)

ಕರೆಯುತ್ತಾರೆ. ಇಲ್ಲಿ ಪಶ್ಚಿಮದ ಗೋಡೆಯ ಒಂದು ಮೂಲೆಯಲ್ಲಿ ಗೂಡನ್ನು ಮಾಡಿ ಅಲ್ಲಿ ಪೂರ್ವಾಭಿಮುಖವಾಗಿ ದೀಪ ಹಚ್ಚುವ ಹಣತೆ ಇಟ್ಟಿರುತ್ತಾರೆ. ಇದನ್ನು ನೆಲ್ಲಕ್ಕಿ ಬೊಳಿಚ ಯೆನ್ನುತ್ತಾರೆ. ಅಲ್ಲೇ ನೇತಾಡುವ ದೀಪವನ್ನು ತುಕಂ ಬೊಳಿಚ ಎಂದು ಕರೆಯುತ್ತಾರೆ. ಸ್ತ್ರೀಯರು ಬೆಳಿಗ್ಗೆ ಸಾಯಂಕಾಲ ಈ ದೀಪಗಳನ್ನು ಹಚ್ಚಿ ನಮಸ್ಕರಿಸುತ್ತಾರೆ. ಕುಟುಂಬದ ಶುಭಕಾರ್ಯಗಳೆಲ್ಲಾ ಈ ತುಕಂಬೊಳಿಚದ ಮುಂದೆ ಅದರ ಸಾಕ್ಷಿಯಲ್ಲಿ ನಡೆಯುತ್ತದೆ. ಹಬ್ಬಹರಿದಿನಗಳಲ್ಲೂ ಈ ತುಕಂಬೊಳಿಚವನ್ನು ಹಚ್ಚಿ ಪ್ರಾರ್ಥಿಸುತ್ತಾರೆ. ಕನ್ನಿಕೊಂಬರೆ, ಐಮರ, ಅಡಿಗೆಮನೆ, ನೆಲ್ಲಕ್ಕಿ ನಡುಬಾಡೆಗಳು ಕೊಡವರ ಮನೆಗಳಲ್ಲಿ ಪವಿತ್ರವಾದ ಸ್ಥಳಗಳು. ಮನೆಯ ಸುತ್ತಲು ಕೊಡವ ಮೂಲಪುರುಷರಿಂದ ಬಂದ ತೋಟ, ಅದಕ್ಕೆ ಹೊಂದಿಕೊಂಡಂತೆ ಕಾಡುಗಳಿರುತ್ತವೆ. ಐನ್‌ಮನೆಯ ಸಮೀಪದಲ್ಲಿ ಅವರ ಮೂಲ ಪುರುಷ ಮತ್ತು ಪಿತೃಗಳನ್ನು ಪೂಜಿಸುವ ಕೈಮಠ ಅಥವಾ ಕೈಮಡವಿರುತ್ತವೆ. ಇವು ಆ ಕುಟುಂಬಗಳಿಗೆ ಸೇರಿರುವ ಪಿತೃಗಳ ದೇವಸ್ಥಾನಗಳಿದ್ದಂತೆ. ಇಲ್ಲಿ ಹಬ್ಬಹರಿದಿನಗಳಲ್ಲಿ ವಿಶೇಷ ಸಂದರ್ಭಗಳಲ್ಲಿ, ಕಾರಣ ಪೂಜೆಯಲ್ಲಿ ದೀಪವನ್ನು ಹಚ್ಚಿಟ್ಟು ಮನೆಯಲ್ಲಿ ಮಾಡಿದ ಅಡಿಗೆಯನ್ನು ನೈವೇದ್ಯ ಮಾಡುತ್ತಾರೆ. ಕೈಮಡ ಅಥವಾ ಕೈಮಠಗಳು ಒಂದೇ ಕೋಣೆಯ ಆಲಯಗಳಾಗಿದ್ದು ಪೂರ್ವಾಭಿಮುಖವಾಗಿರುತ್ತವೆ. ಅವುಗಳಲ್ಲಿ ಮರದಿಂದ ಕೆತ್ತಲ್ಪಟ್ಟು ಲೋಹದ ಹಲಗೆಗೆ ಸಿಕ್ಕಿಸಿರುವ ಮನುಷ್ಯಾಕೃತಿಗಳನ್ನು ಕಲ್ಲಿನ ಕೆಲವು ಅನಿರ್ದಿಷ್ಟಾಕಾರದ ಆಕೃತಿಗಳನ್ನು ಇಟ್ಟಿರುತ್ತಾರೆ. ಜೊತೆಗೆ ಹಿಂದೆ ಮರಣ ಹೊಂದಿದವರ ವಸ್ತುಗಳೂ ಇರುತ್ತವೆ. ಕಿಗ್ಗಟ್ಟು ನಾಡಿನಲ್ಲಿ ಪಿತೃಗಳಿಗೆ ಎತ್ತರವಾದ ವೇದಿಕೆಯನ್ನು ಹಾಲು ಸುರಿಸುವ ಮರದ ಸುತ್ತ ಕಟ್ಟುವುದು ವಾಡಿಕೆಯಿದೆ. ಕೆಲವು ಕಡೆ ಕಿಗ್ಗಟ್ಟು ನಾಡಿನಲ್ಲಿ ಯುದ್ಧಗಳಲ್ಲಿ ಮಡಿದವರಿಗೆ ದೊಡ್ಡ ದೊಡ್ಡ ಕೈಮಡ ಸಂಕೀರ್ಣಗಳನ್ನು ಕಟ್ಟಿರುವುದು ಕಂಡುಬಂದಿದೆ. ಇದರೊಂದಿಗೆ ಕುಂಜಿಲಗೇರಿ ಮುಕ್ಕಾಟಿರ 'ಬಲ್ಯ' ಮನೆಯ ಒಂದು ಅಂದಾಜು ನಕ್ಷೆಯನ್ನು ಕೊಟ್ಟಿದೆ (ಪುಟ 210). ಈ ಮನೆಯಲ್ಲಿ ಕನ್ನಿಕೊಂಬರೆ ಇಲ್ಲವೆಂದು ಮನೆಯಲ್ಲಿ ವಾಸಿಸುವವರು ತಿಳಿಸಿರುತ್ತಾರೆ. ವಕ್ಕ ಅಥವಾ ಕುಟುಂಬದ ತೋಟದಲ್ಲಿ ಶವಗಳನ್ನು ಹೂಳುವ ಜಾಗವನ್ನು ಕೇಕಳವೆಂದೂ, ಸುಡುವ ಜಾಗವನ್ನು ತೂಟಂಗಳವೆಂದೂ ಕರೆಯುತ್ತಾರೆ.

ಕೊಡವರ ಈ ಆಯತಾಕಾರವಾದ ಮನೆಗಳನ್ನು ನಾಲೆಕಟ್ ಮನೆಗಳೆನ್ನುತ್ತಾರೆ. ಕೆಲವು ಐನ್‌ಮನೆಗಳ ಮಧ್ಯದಲ್ಲಿ ತೊಟ್ಟಿಗಳಿರುವುದಿಲ್ಲ. ಕೊಡವರಲ್ಲಿರುವಂತೆಯೇ ಗೌಡರಲ್ಲಿಯೂ, ಕ್ಷೌರಿಕರಲ್ಲಿಯೂ, ಪೆಗ್ಗಡೆಗಳಲ್ಲಿಯೂ, ಇನ್ನೂ ಇತರ ಮೂಲನಿವಾಸಿಗಳಲ್ಲಿಯೂ ಕುಟುಂಬಗಳ ಐನ್ ಮನೆಗಳಿವೆ.

ಗಿರಿಜನರಾದ ಯೆರವರು ಜೇನು ಕುರುಬರು, ಬೆಟ್ಟ ಕುರುಬರು ಮಣ್ಣಿನ ಗೋಡೆಗಳ ಹುಲ್ಲಿನ ಮೇಲ್ಛಾವಣಿಗಳ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಮಳೆಗಾಲದಲ್ಲಿ ನೀರು ಒಳನುಗ್ಗದಂತೆ ಎತ್ತರಿಸಿದ ಜಾಗಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಗೋಡೆಗಳ ದಪ್ಪ ಒಂದು ಅಡಿಯಿಂದ ಒಂದೂವರೆ ಅಡಿಯಿರುತ್ತದೆ. ಮಣ್ಣಿನಗೋಡೆ ಇಲ್ಲವೆ ಬಿದಿರು ದಬ್ಬೆಗಳಿಗೆ ಮಣ್ಣು ಮೆತ್ತಿ ಗೋಡೆ ಮಾಡುತ್ತಾರೆ. ನೆಲಕ್ಕೆ ಸಗಣಿ ಸಾರಿಸುತ್ತಾರೆ. ಗುಡಿಸಲ ಮುಂದೆ ಗುಡಿಸಿ ಸಾರಿಸಿ ಅಂಗಳ ಮಾಡಿಕೊಂಡಿರುತ್ತಾರೆ. ಒಳಗಡೆ ಹಿಂಭಾಗದಲ್ಲಿ ಅಡಿಗೆ ಮನೆ ಮುಂಭಾಗದಲ್ಲಿ ಕುಳಿತುಕೊಳ್ಳಲು ವರಾಂಡವಿರುತ್ತದೆ. ಸರ್ಕಾರವು ಕಟ್ಟಿಸಿಕೊಟ್ಟಿರುವ ಕಾಲನಿಗಳಲ್ಲಿ ಹೆಂಚಿನ ಮೇಲ್ಛಾವಣಿಯಿರುತ್ತದೆ.

ಊರುಗಳಲ್ಲೂ, ಗ್ರಾಮಗಳಲ್ಲೂ ಜೋಪಡಿ ಮನೆಗಳು ಹೆಚ್ಚಾಗಿ ಕಂಡುಬರುತ್ತವೆ. ಜೊತೆಗೆ ನಾಡ ಹೆಂಚಿನ, ಮಂಗಳೂರು ಹೆಂಚಿನ ಮನೆಗಳೂ ಇವೆ. ಮನೆಗಳ ಮೇಲ್ಛಾವಣಿಗಳು ಬಹಳ ಇಳಿಜಾರಾಗಿದ್ದು ಮಳೆಗಾಲದಲ್ಲಿ ಮಳೆ ನೀರು ಸರಾಗವಾಗಿ ಇಳಿದುಹೋಗುವಂತಿರುತ್ತದೆ. ಸಿಮೆಂಟು ಕಾಂಕ್ರೀಟಿನ ಮನೆಗಳು ಪಟ್ಟಣಗಳಲ್ಲಿ ಕಟ್ಟಿಕೊಳ್ಳುತ್ತಿದ್ದಾರೆ. ಕಾಫಿ ಪ್ಲಾಂಟರುಗಳೂ ಹಾಗೂ ಶ್ರೀಮಂತ ವರ್ಗದವರು ತೋಟಗಳಲ್ಲಿ ಮತ್ತು ಹಳ್ಳಿಗಳಲ್ಲಿ ಕೂಡ ಸಿಮೆಂಟ್ ಕಾಂಕ್ರೀಟ್‌ನ ಮನೆಗಳನ್ನು ಕಟ್ಟ ತೊಡಗಿದ್ದಾರೆ. ಸಾಮಾನ್ಯವಾಗಿ ಮನೆಗಳ ಮುಂದೆ ಅಥವಾ ಹಿಂದೆ ಪೂಜಿಸಲು ತುಳಸಿ ಗಿಡಗಳನ್ನು ಬ್ರಾಹ್ಮಣರು, ವೈಶ್ಯರು, ಕೊಡವರು ಮೊದಲಾದವರು ಹಾಕಿಕೊಂಡಿರುತ್ತಾರೆ.

ಕೊಡಗು ಜಿಲ್ಲೆಯಲ್ಲಿ 1981ರ ಜನಗಣತಿಯ ಪ್ರಕಾರ 93,615 ಕುಟುಂಬಗಳಲ್ಲಿ 25,365 ಕುಟುಂಬಗಳು ಹುಲ್ಲು, ಗರಿ, ಎಲೆ, ಬೊಂಬು, ಸುಡದ ಇಟ್ಟಿಗೆ ಮೊದಲಾದವುಗಳ ಮೇಲ್ಛಾವಣಿಯಿದ್ದ ಮನೆಗಳನ್ನು ಹೊಂದಿದ್ದವು (ಗ್ರಾಮಾಂತರ 24,070, ಪಟ್ಟಣ 1,295) ; 65,360 ಕುಟುಂಬಗಳು ಹೆಂಚಿನ ಮನೆಗಳನ್ನೂ (ಗ್ರಾಮಾಂತರ 53,650, ಪಟ್ಟಣ 11,710) ; 320 ಕುಟುಂಬಗಳು ತಗಡು ಮೇಲ್ಛಾವಣಿಯ ಮನೆಗಳನ್ನು (ಗ್ರಾ. 210, ಪಟ್ಟಣ

110), 470 ಕುಟುಂಬಗಳು ಆಸ್‌ಬೆಸ್ಟಾಸ್ ಮತ್ತು ಸಿಮೆಂಟು ತಗಡುಗಳ ಮೇಲ್ಛಾವಣಿಯ ಮನೆಗಳನ್ನೂ (ಗ್ರಾ. 230, ಪ. 240), 205 ಕುಟುಂಬಗಳು ಗಾರೆ ಮನೆಗಳನ್ನೂ (ಗ್ರಾ. 175, ಪ. 30), 20 ಕುಟುಂಬಗಳು ಕಲ್ಲಿನ ಮೇಲ್ಛಾವಣಿಯ ಮನೆಗಳನ್ನೂ (ಗ್ರಾ. 10, ಪ. 13) 535 ಕುಟುಂಬಗಳು ಸಿಮೆಂಟ್ ಕಾಂಕ್ರೀಟ್‌ನ ಮೇಲ್ಛಾವಣಿಯನ್ನೂ (ಗ್ರಾ. 200, ಪ. 335), ಉಳಿದ 1,340 ಕುಟುಂಬಗಳು ಇತರ ಬೇರೆ ವಸ್ತುಗಳ ಮೇಲ್ಛಾವಣಿಯ ಮನೆಗಳನ್ನೂ (ಗ್ರಾ. 1,130, ಪ. 210) ಹೊಂದಿದ್ದವು. ಮನೆಗಳ ಗೋಡೆಗಳ ವಿಷಯವಾಗಿ ಹೇಳುವುದಾದರೆ 8,580 ಕುಟುಂಬಗಳ ಮನೆಗಳು (ಗ್ರಾ. 8,050, ಪ. 530) ಹುಲ್ಲು, ಗರಿ, ಜೊಂಡು ಬಿದಿರು ಮೊದಲಾದವುಗಳ ಗೋಡೆಗಳನ್ನೂ, 45,310 ಕುಟುಂಬದ ಮನೆಗಳು (ಗ್ರಾ. 41,250, ಪ. 4,060) ಮಣ್ಣು ಗೋಡೆಗಳನ್ನೂ, 13,145 ಕುಟುಂಬದ ಮನೆಗಳು (ಗ್ರಾ. 11,660, ಪ. 1,485) ಸುಡದ ಇಟ್ಟಿಗೆ ಗೋಡೆಗಳನ್ನೂ, 160 ಕುಟುಂಬಗಳ ಮನೆಗಳು (ಗ್ರಾ. 115, ಪ. 45) ಮರದ ಹಲಗೆಯ ಗೋಡೆಗಳನ್ನೂ, 25,390 ಕುಟುಂಬಗಳ ಮನೆಗಳು (ಗ್ರಾ. 17,795, ಪ. 7,595) ಸುಟ್ಟ ಇಟ್ಟಿಗೆಯ ಗೋಡೆಗಳನ್ನೂ, 90 ಕುಟುಂಬಗಳ ಮನೆಗಳು ಲೋಹದ ತಗಡುಗಳ ಗೋಡೆಗಳನ್ನೂ, 635 ಕುಟುಂಬಗಳು ಕಲ್ಲು ಗೋಡೆಗಳನ್ನೂ, 150 ಕುಟುಂಬಗಳವು ಸಿಮೆಂಟ್ ಕಾಂಕ್ರೀಟಿನ ಗೋಡೆಗಳನ್ನೂ ಮತ್ತು 150 ಕುಟುಂಬಗಳು ಇತರ ವಸ್ತುಗಳಿಂದ ಮಾಡಿದ ಗೋಡೆಗಳನ್ನೂ ಹೊಂದಿದ್ದವು. ಇದೇ ಜನಗಣತಿಯ ಪ್ರಕಾರ 65,260 ಕುಟುಂಬಗಳ ಮನೆಗಳು ಮಣ್ಣಿನ ನೆಲವನ್ನು ಹೊಂದಿದ್ದವು (ಗ್ರಾ. 60,095, ಪ. 5,165) ; 1,085 ಕುಟುಂಬಗಳ ಮನೆಗಳ ನೆಲಕ್ಕೆ ಮರದ ಹಲಗೆಗಳನ್ನು ಹಾಕಿದ್ದರು ; 85 ಮನೆಗಳಿಗೆ ಬಿದಿರನ್ನೂ, 455 ಕುಟುಂಬಗಳ ಮನೆಗಳಿಗೆ ಇಟ್ಟಿಗೆ, ಗಾರೆಯನ್ನೂ, 26,235 ಕುಟುಂಬಗಳ ಮನೆಗಳಿಗೆ (ಗ್ರಾ. 17,850, ಪ. 8,385) ನೆಲಕ್ಕೆ ಸಿಮೆಂಟನ್ನೂ ಹಾಕಲಾಗಿತ್ತು. ಕೇವಲ 190 ಕುಟುಂಬಗಳ ಮನೆಗಳ ನೆಲಕ್ಕೆ ಮೊಸಾಯಿಕ್ ಟೈಲ್ಸ್ ಹಾಕಲಾಗಿತ್ತು. ಅದೇ ಜನಗಣತಿಯ ಪ್ರಕಾರ ಒಬ್ಬರೇ ಇದ್ದ ಕುಟುಂಬಗಳ ಸಂಖ್ಯೆ 6,795 ಆಗಿದ್ದರೆ, 10,335 ಕುಟುಂಬಗಳಲ್ಲಿ ಇಬ್ಬರು ಸದಸ್ಯರೂ, 13,080 ಕುಟುಂಬಗಳಲ್ಲಿ ಮೂರು ಜನ ಸದಸ್ಯರೂ, 16,215 ಕುಟುಂಬಗಳಲ್ಲಿ ನಾಲ್ಕು ಜನ ಸದಸ್ಯರೂ, 15,620 ಕುಟುಂಬಗಳಲ್ಲಿ ಐದು ಜನ ಸದಸ್ಯರೂ ಉಳಿದ 32,800 ಕುಟುಂಬಗಳಲ್ಲಿ ಆರು ಅಥವಾ ಅದಕ್ಕಿಂತ ಹೆಚ್ಚು ಜನ ಸದಸ್ಯರೂ ಇದ್ದರು. ಅದೇ ರೀತಿ 20,075 ಕುಟುಂಬಗಳು ಒಂದು ಕೋಣೆಯ ಮನೆಗಳನ್ನೂ, 31,665 ಕುಟುಂಬಗಳು ಎರಡು ಕೋಣೆಯ ಮನೆಗಳನ್ನೂ, 17,235 ಕುಟುಂಬಗಳು ಮೂರು ಕೋಣೆಯ ಮನೆಗಳನ್ನೂ, 8,830 ಕುಟುಂಬಗಳು ನಾಲ್ಕು ಕೋಣೆಯ ಮನೆಗಳನ್ನೂ, 4,945 ಕುಟುಂಬಗಳು ಐದು ಕೋಣೆಯ ಮನೆಗಳನ್ನೂ ಉಳಿದ ಕುಟುಂಬಗಳು ಆರು ಅಥವಾ ಅದಕ್ಕೆ ಮೇಲ್ಪಟ್ಟ ಸಂಖ್ಯೆಗಳ ಕೋಣೆಗಳುಳ್ಳ ಮನೆಗಳನ್ನೂ ಹೊಂದಿದ್ದವು. ಕೇವಲ 310 ಕುಟುಂಬಗಳು ಮಾತ್ರ ಒಂದು ಕೊಠಡಿಯೂ ಇಲ್ಲದ ಮನೆಗಳಲ್ಲಿ ವಾಸಿಸುತ್ತಿದ್ದವು. ಪುಟ 213ರಲ್ಲಿ 1981ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಹಾಗೂ ಕಕ್ಕಸ್ಸುಗಳು ಲಭ್ಯವಿದ್ದ ಮನೆಗಳ ಸಂಖ್ಯೆಗಳನ್ನು ಕೊಡಲಾಗಿದೆ.

### ಆಹಾರ ಪಾನೀಯಗಳು

ಕೊಡವರು ಬೆಳಿಗ್ಗೆ 8–30 ಯಿಂದ 9–00ಗಂಟೆ ವೇಳೆಗೆ ಉಪಾಹಾರ ಮಾಡುತ್ತಾರೆ, ಅಕ್ಕಿರೊಟ್ಟಿ ತುಂಬಾ ಪ್ರಿಯವಾದ ಆಹಾರ. ಮಳೆಗಾಲದಲ್ಲಿ ಅಕ್ಕಿರೊಟ್ಟಿಗೆ ಹಲಸಿನ ಬೀಜ, ಹುರುಳಿಯ ಚಟ್ನಿ, ಒಣಗಿದ ಮಾಂಸವನ್ನು ಉಪಯೋಗಿಸುತ್ತಾರೆ. ಮಧ್ಯಾಹ್ನ 1–30ಯಿಂದ 2–00 ಗಂಟೆಯ ವೇಳೆಗೆ ಊಟ ಮಾಡುತ್ತಾರೆ. ಊಟಕ್ಕೆ ಅನ್ನ ಸಾರು, ಪಲ್ಯ, ಮಾಂಸ, ಮಜ್ಜಿಗೆಯಿರುತ್ತದೆ. ಹಂದಿ ಮಾಂಸವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಸಾಮಾನ್ಯ ಜನರಲ್ಲಿ ಪ್ರತಿನಿತ್ಯ ಹಂದಿ ಮಾಂಸವಿರುವುದಿಲ್ಲ. ಸಾಯಂಕಾಲ ನಾಲ್ಕು ಗಂಟೆಯ ವೇಳೆಗೆ ಕಾಫಿ, ಟೀ ಜೊತೆಗೆ ದೋಸೆ, ತಾಳಿಪಿಟ್ಟು ತಿಂಡಿಯಿರುತ್ತದೆ. ರಾತ್ರಿ ಎಂಟು ಗಂಟೆಗೆ ಅನ್ನಸಾರಿನ ಊಟ ಮಾಡುತ್ತಾರೆ. ಕೆಲವರು ರಾತ್ರಿಯ ವೇಳೆಯೂ ಅಕ್ಕಿರೊಟ್ಟಿ ಮಾಂಸವನ್ನು ಇಷ್ಟಪಟ್ಟು ತಿನ್ನುತ್ತಾರೆ. ಸುಬ್ರಮಣ್ಯ ಷಷ್ಠಿ, ಗ್ರಾಮ ದೇವತೆಯ ಹಬ್ಬದ (ಪಟ್ಟಣಿ) ದಿನಗಳಲ್ಲಿ ಉಪವಾಸವಿರುತ್ತಾರೆ. ತುಲಾಸಂಕ್ರಮಣದ ದಿವಸ ವಿಶೇಷವಾಗಿ ದೋಸೆ, ಜೇನುತುಪ್ಪ, ಸೀಗುಂಬಳಕಾಯಿ ಪಲ್ಯಗಳನ್ನು ಬೆಳಗಿನ ಆಹಾರಕ್ಕೆ ಉಪಯೋಗಿಸುತ್ತಾರೆ. ಕಣಿಪೂಜೆಗೆ ತಟ್ಟೆ ಇಡ್ಲಿ, ಅಕ್ಕಿ ಪಾಯಸ ಮಾಡುತ್ತಾರೆ. ಮಧ್ಯಾಹ್ನ ಅನ್ನಸಾರು, ಅಕ್ಕಿ ಪಾಯಿಸ ಮಾಡುತ್ತಾರೆ. ಹುತ್ತರಿ ಹಬ್ಬದಲ್ಲಿ ಎಳ್ಳು ಅಕ್ಕಿ ಹಿಟ್ಟು, ತೆಂಗಿನಕಾಯಿ ಹಾಕಿ ತಂಬಿಟ್ಟು, ಜೇನು, ಬಾಳೆ ಹಣ್ಣು, ತುಪ್ಪ ತಿನ್ನುತ್ತಾರೆ. ಹುತ್ತರಿ ಗೆಣಸನ್ನು ಬೇಯಿಸಿ, ಬೆಲ್ಲ ಹಾಕಿ ಜೇನು, ತುಪ್ಪ ಬೆರಸಿ ತಿನ್ನುತ್ತಾರೆ. ಹಳ್ಳಿಗಳಲ್ಲಿ

ಈ ಕೆಳಗಿನ ಪಟ್ಟಿಯಲ್ಲಿ 1981ನೇ ಜನಗಣತಿಯ ಪ್ರಕಾರ ಕೊಡಗು ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಹಾಗೂ ಕಕ್ಕಸ್ಸುಗಳ ಲಭ್ಯತೆಯಿರುವ ಕುಟುಂಬಗಳ ಸಂಖ್ಯೆಯನ್ನು ಪ್ರತೀ ತಾಲೂಕುಗಳಿಗೂ ಕೊಡಲಾಗಿದೆ.

| ತಾಲೂಕುಗಳು | ಒಟ್ಟು ಕುಟುಂಬಗಳು | | | ವಿದ್ಯುಚ್ಛಕ್ತಿ ಲಭ್ಯತೆಯಿರುವ ಕುಟುಂಬಗಳು | | | ಕಕ್ಕಸ್ಸು ವ್ಯವಸ್ಥೆ ಹೊಂದಿರುವ ಕುಟುಂಬಗಳು | | |
|---|---|---|---|---|---|---|---|---|---|
| | ಸ್ವಂತ | ಬಾಡಿಗೆ | ಒಟ್ಟು | ಸ್ವಂತ | ಬಾಡಿಗೆ | ಒಟ್ಟು | ಸ್ವಂತ | ಬಾಡಿಗೆ | ಒಟ್ಟು |
| **ಮಡಿಕೇರಿ ತಾಲೂಕು** | | | | | | | | | |
| ಗ್ರಾಮಾಂತರ | 12,665 | 5,920 | 18,585 | 1,350 | 720 | 2,070 | — | — | — |
| ಪಟ್ಟಣ | 1,575 | 3,070 | 4,645 | 1,060 | 2,090 | 3,150 | 1,015 | 2,075 | 3,090 |
| ಒಟ್ಟು | 14,540 | 8,990 | 23,230 | 2,410 | 2,810 | 5,220 | — | — | — |
| **ಸೋಮವಾರಪೇಟೆ ತಾಲೂಕು** | | | | | | | | | |
| ಗ್ರಾಮಾಂತರ | 16,060 | 11,035 | 27,095 | 2,175 | 2,020 | 4,195 | — | — | — |
| ಪಟ್ಟಣ | 2,220 | 2,870 | 5,090 | 935 | 1,630 | 2,565 | 1,080 | 1,735 | 2,815 |
| ಒಟ್ಟು | 18,280 | 13,905 | 32,185 | 3,110 | 3,650 | 6,760 | — | — | — |
| **ವೀರರಾಜಪೇಟೆ ತಾಲೂಕು** | | | | | | | | | |
| ಗ್ರಾಮಾಂತರ | 16,530 | 17,465 | 33,995 | 1,690 | 1,905 | 3,595 | — | — | — |
| ಪಟ್ಟಣ | 1,175 | 3,030 | 4,205 | 630 | 1,405 | 2,035 | 655 | 1,450 | 2,105 |
| ಒಟ್ಟು | 17,705 | 20,495 | 38,200 | 2,320 | 3,310 | 5,630 | — | — | — |
| **ಜಿಲ್ಲೆಯ ಒಟ್ಟು ಮೊತ್ತ** | | | | | | | | | |
| ಗ್ರಾಮಾಂತರ | 45,555 | 34,120 | 79,675 | 5,215 | 4,645 | 9,860 | — | — | — |
| ಪಟ್ಟಣ | 4,970 | 8,970 | 13,940 | 2,625 | 5,125 | 7,750 | 2,750 | 5,210 | 7,960 |
| ಒಟ್ಟು | 50,225 | 43,390 | 93,615 | 7,840 | 9,770 | 17,610 | — | — | — |

ಸಾಮಾನ್ಯವಾಗಿ ಮಣೆಯ (ಪಲಿಯ) ಮೇಲೆ ಕುಳಿತು ಮುಕ್ಕಾಲಿಯ ಮೇಲೆ ಕಂಚಿನ ತಟ್ಟೆಯಲ್ಲಿ ಊಟ ಮಾಡುತ್ತಾರೆ. ಕೈಲ್ ಪೋಳ್ಡ್ ಹಬ್ಬದಲ್ಲಿ ಅಕ್ಕಿ ತರಿಯಿಂದ ಮಾಡಿದ ತಡಂಬಿಟ್ಟು, ಹಂದಿಮಾಂಸ ತಿನ್ನುತ್ತಾರೆ. ಕರ್ಕಾಟಕ ಮಾಸದಲ್ಲಿ 18ನೇ ದಿನ ಮದ್ದುತೊಪ್ಪಿನ (ಒಂದು ಜಾತಿಯಗಿಡ) ರಸ ಹಿಂಡಿ ಪಾಯಸದಂತೆ ಮಾಡಿ ಸೇವಿಸುತ್ತಾರೆ.

ಕೊಡವರಂತೆಯೇ ಜಿಲ್ಲೆಯ ಇತರ ಜನರ ಮುಖ್ಯ ಆಹಾರ ಪದಾರ್ಥ ಅಕ್ಕಿ. ಅಕ್ಕಿಯಿಂದ ಬೇರೆ ಬೇರೆ ತಿಂಡಿ ತಿನಸುಗಳನ್ನು ಮಾಡುತ್ತಾರೆ. ಜೇನುಕುರುಬ, ಬೆಟ್ಟಕುರುಬ, ಯೆರವ ಮೊದಲಾದ ಗಿರಿಜನರು ಇಂದಿಗೂ ಕಾಡಿನ ಗೆಡ್ಡೆಗಣಸುಗಳನ್ನು ತಂದು ತಿನ್ನುತ್ತಾರೆ. ಕೆಲವರು ಬೆಳಿಗ್ಗೆ ಕೆಲಸಕ್ಕೆ ಹೋಗುವ ಮುನ್ನ ಅಕ್ಕಿ ಅಂಬಲಿಯನ್ನು ಕುಡಿದು ಹೋಗುತ್ತಾರೆ.

ಹೋಟೆಲುಗಳಲ್ಲಿ ಇಡ್ಲಿ, ಸಾಂಬಾರು, ಚಟ್ನಿ, ದೋಸೆ, ವಡೆ, ಚಪಾತಿ, ಪೂರಿಸಾಗು, ಮೊದಲಾದ ತಿಂಡಿಗಳನ್ನು ಮಾಡುತ್ತಾರೆ. ಸೌತೇಕಾಯಿ, ಕುಂಬಳಕಾಯಿ, ಸೊಪ್ಪುಗಳು, ಬದನೆಕಾಯಿ, ಬಾಳೇಕಾಯಿ, ಹುರುಳೀಕಾಯಿ, ಈರುಳ್ಳಿ ಮೊದಲಾದ ತರಕಾರಿಗಳನ್ನು ಉಪಯೋಗಿಸುತ್ತಾರೆ. ತರಕಾರಿಗಳಿಂದ ಹುಳಿ, ಪಲ್ಯಗಳನ್ನು ಮಾಡುತ್ತಾರೆ. ಪಾನೀಯಗಳಲ್ಲಿ ಕಾಫಿ ಟೀ ಎರಡು ಜನಪ್ರಿಯವಾಗಿವೆ. ಹೆಂಡ, ಸಾರಾಯಿ ಕುಡಿಯುವುದು ಹೆಚ್ಚಾಗಿ ಕಂಡು ಬರುತ್ತದೆ. ಹಣವಿದ್ದವರು ಬ್ರಾಂದಿ, ಬೀರು, ವಿಸ್ಕಿ ಮೊದಲಾದ ಮಾದಕ ಪಾನೀಯಗಳನ್ನು ತೆಗೆದುಕೊಳ್ಳುತ್ತಾರೆ. ಕೊಡವರಲ್ಲಿ ಹಂದಿಮಾಂಸ ಎಷ್ಟು ಪ್ರಿಯವೋ ಈ ಮಾದಕ ಪಾನೀಯಗಳೂ ಅಷ್ಟೇ ಅಪೇಕ್ಷಣೀಯ. ಬೀಡಿ, ಸಿಗರೇಟು, ತಂಬಾಕು ಬಳಸುವುದು ಸರ್ವೇ ಸಾಮಾನ್ಯ. ನಶ್ಯ ಹಾಕುವುದು ಸೀಮಿತವಾಗಿ ಕಂಡುಬರುತ್ತದೆ.

### ಉಡುಪುಗಳು

ಕೊಡವರ ವಿಶೇಷವಾದ ಉಡುಪು ಪುರುಷರಿಗೆ ನೀಳ ಕುಪ್ಪಸ, ದಟ್ಟಿ, ರುಮಾಲು, ಪೀಚೆಕತ್ತಿ, ಪಾನಿಮಂಡೇತುಣಿ, ಸೊಂಟದ ಸುತ್ತಲೂ ಚೇಲೆ. ಕುಪ್ಪಸವನ್ನು ಬಿಗಿದು ಕಟ್ಟುವುದಕ್ಕೆ ಮತ್ತು ಪೀಚೆ ಕತ್ತಿಯನ್ನು ಅಳವಡಿಸುವುದಕ್ಕೆ ಚೇಲೆಯನ್ನು ಉಪಯೋಗಿಸುತ್ತಾರೆ. ಚೇಲೆಯು ರೇಶ್ಮೆಯದಾಗಿದ್ದು ಹೂವುಗಳ ಆಕಾರಗಳಿಂದ ಚಿತ್ರಿತವಾಗಿರುತ್ತದೆ. ಸೊಂಟಕ್ಕೆ ಸುತ್ತಿ ಕಟ್ಟಿದಾಗ ಎರಡು ತುದಿಗಳು ಎಡಗಡೆಗೆ ನೇತಾಡುತ್ತಿರುತ್ತವೆ. ಕುಪ್ಪಸ ಅಥವಾ ಕುಪ್ಪಿಯು ಉದ್ದವಾದ ಕರಿಕೋಟು. ಬಿಳಿಯ ಕುಪ್ಪಿಯನ್ನು ಮದುವೆಯಲ್ಲಿ ಮದುಮಗನಿಗೆ ಅಲಂಕರಿಸುವಾಗ ಉಪಯೋಗಿಸುತ್ತಾರೆ. ಕರಿಯ ಕುಪ್ಪಸಗಳಿಗೆ ಚಿಕ್ಕದಾದ ತೋಳುಗಳಿರುತ್ತವೆ. ಇದು ಮುಂಭಾಗದಲ್ಲಿ ತೆರೆದಿದ್ದು ಮಂಡಿಯವರೆವಿಗೂ ಬರುತ್ತದೆ. ಸ್ತ್ರೀಯರು ಸೀರೆಯನ್ನು ಹಿಂಭಾಗಕ್ಕೆ ನೆರಿಗೆ ಬರುವಂತೆ ಉಡುತ್ತಾರೆ. ಇದಕ್ಕೆ ಬಲಮುರಿಯಲ್ಲಿ ಕಾವೇರಮ್ಮನು ಒಮ್ಮೆಗೇ ದಿಕ್ಕು ಬದಲಾಯಿಸಿದ್ದು ಕಾರಣವೆಂದು ಹೇಳುತ್ತಾರೆ. ಆದರೆ ಅಮ್ಮ ಕೊಡವರು ಮಾತ್ರ ನೆರಿಗೆಗಳು ಮುಂದೆ ಬರುವಂತೆ ಸೀರೆಯುಡುತ್ತಾರೆ. ಹೆಂಗಸರು ಕೈಮುಚ್ಚುವ ಹಾಗೆ ಉದ್ದವಾದ ತೋಳಿನ ರವಿಕೆ ಹಾಕುತ್ತಾರೆ. ವಯಸ್ಸಾದವರು ತಲೆಗೆ ಬಟ್ಟೆ ಕಟ್ಟುತ್ತಾರೆ. ಈಗ ಹೆಂಗಸರಲ್ಲಿ ರವಿಕೆಯ ಕೈ ತೋಳಿನ ಉದ್ದ ಕಡಿಮೆಯಾಗಿದೆ. ಸ್ತ್ರೀಯರು ತಲೆ ಕೂದಲನ್ನು ಬಾಬ್ ಮಾಡಿಸಿಕೊಳ್ಳುವುದು ಜನಪ್ರಿಯವಾಗುತ್ತಿದೆ. ಹಳ್ಳಿಯ ಜನರು ಆಧುನಿಕವಾಗಿ ಪ್ಯಾಂಟು ಶರ್ಟು ಹಾಕುತ್ತಾರೆ. ಕೊಡವರಲ್ಲದವರಲ್ಲಿ ಹಳೇ ಕಾಲದ ಜನರು ಮಾತ್ರ ಕಚ್ಚೆ ಪಂಚೆ ಉಡುವುದು ಕಂಡು ಬರುತ್ತದೆ. ಅನೇಕರು ಮನೆಯಲ್ಲಿ ಹೆಚ್ಚಾಗಿ ದಟ್ಟಿ ಪಂಚೆಯುಡುತ್ತಾರೆ. ಗಿರಿಜನರಲ್ಲಿ ಉಡುಪಿನ ವೈವಿಧ್ಯತೆ ಕಡಿಮೆ. ಮೈಮುಚ್ಚುವಷ್ಟು ಉಡುಪೂ ಅವರಿಗೆ ದುರ್ಲಭ. ಕೆಲಸ ಕಾರ್ಯಗಳಿಗೆ ಹೆಚ್ಚಾಗಿ ಹೋಗುವ ಇವರು ಮಂಡಿಯವರೆಗಿನ ಚಡ್ಡಿ ಅಥವಾ ಪಂಚೆ ಮತ್ತು ಅಂಗಿ ಅಥವಾ ಬನೀನುಗಳನ್ನು ಉಪಯೋಗಿಸುತ್ತಾರೆ. ಪಟ್ಟಣದ ಜನಗಳು, ಕಾಫಿ ಪ್ಲಾಂಟರುಗಳೂ ಮೊದಲಾದವರು ಬೆಲೆಬಾಳುವ ಬಟ್ಟೆಗಳನ್ನು ಉಪಯೋಗಿಸುತ್ತಾರೆ. ಕೊಡವ ಸ್ತ್ರೀಯರು ವಿಧವೆಯರಾದರೆ ಬಿಳಿ ಬಟ್ಟೆಯುಡುವುದೇ ಹೆಚ್ಚು ಹಾಗೂ ಗೌರವಯುತವಾದುದು. ಹಿಂದೆ ಕೊಡವ ಸ್ತ್ರೀಯರಲ್ಲಿ ಮದುವೆಯಾದವರಿಗೂ, ಮದುವೆಯಾಗದವರಿಗೂ ಅವರು ತೊಡುವ ಉಡುಪು, ಹಾಗೂ ಶೃಂಗಾರಗಳಲ್ಲಿ ವ್ಯತ್ಯಾಸವಿತ್ತು. ಆದರೆ ಈಗ ಆ ವ್ಯತ್ಯಾಸ ಕಂಡುಬರುತ್ತಿಲ್ಲ. ಗಂಡಸರು ಹೊರಗಡೆ ತೋಟ ಗದ್ದೆಗಳಲ್ಲಿ ಕೆಲಸ ಮಾಡುವಾಗ ಚಡ್ಡಿ, ಅಂಗಿಗಳನ್ನು ಧರಿಸುತ್ತಾರೆ. ಉಳಿದ ಸಮಯಗಳಲ್ಲಿ ಪಂಚೆ, ಪ್ಯಾಂಟು ಶರ್ಟುಗಳನ್ನು ಹಾಕುತ್ತಾರೆ. ಬಹುತೇಕ ಮಂದಿ ಚರ್ಮದ, ಕ್ಯಾನ್‌ವಾಸಿನ ಬೂಟ್ಸುಗಳನ್ನು ಹಾಕುತ್ತಾರೆ.

### ಗೃಹೋಪಕರಣಗಳು

ಶ್ರೀಮಂತ ಕುಟುಂಬಗಳಲ್ಲಿ ಸೋಫಾ, ಕುರ್ಚಿ, ಮೇಜು, ಊಟದ ಮೇಜು, ಮಂಚ ಮೊದಲಾದಗಳು ಸರ್ವೇಸಾಮಾನ್ಯ. ಇವು ಶ್ರೀಮಂತಿಕೆಯ ಅಂತಸ್ತನ್ನು ತೋರಿಸಲು ಕೆತ್ತನೆ ಕೆಲಸಗಳಿಂದಲೂ ಕೂಡಿರುತ್ತವೆ. ಕಾಡಿನಲ್ಲಿ ಸಿಕ್ಕುವ ಬೆಲೆ ಬಾಳುವ ಮರಗಳಿಂದ ಇವನ್ನು ಮಾಡಿರುತ್ತಾರೆ. ಸಾಮಾನ್ಯ ವರ್ಗದ

ಕುಟುಂಬಗಳಲ್ಲಿ ಕಬ್ಬಿಣದ ಕುರ್ಚಿ, ಮೇಜುಗಳು, ಮಂಚಗಳಿರುತ್ತವೆ. ನೆಲದ ಮೇಲೆ ಕುಳಿತುಕೊಳ್ಳಲು ಚಾಪೆ, ಕಂಬಳಿಗಳನ್ನು ಉಪಯೋಗಿಸುತ್ತಾರೆ. ಬಡವರು ಹಾಗೂ ಬಹುತೇಕ ಗಿರಿಜನರು ಈಚಲ ಚಾಪೆ, ಕಂಬಳಿಗಳನ್ನು ಉಪಯೋಗಿಸುತ್ತಾರೆ. ಚಳಿಗಾಲದಲ್ಲಿ ಕಂಬಳಿ, ರಗ್ಗುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಮಳೆಗಾಲಕ್ಕೆ ಛತ್ರಿಗಳು ಎಲ್ಲರಿಗೂ ಅವಶ್ಯಕ. ತೋಟಗಳಲ್ಲಿ ಓಡಾಡುವಾಗ ಗಂಬೂಟ್ಸ್‌ಗಳನ್ನು ಜಿಗಣೆಗಳ ಕಾಟದಿಂದ ಪಾರಾಗಲು ಉಪಯೋಗಿಸುತ್ತಾರೆ. ಕೃಷಿ ಕಾರ್ಮಿಕರು ಮಳೆಗಾಲದಲ್ಲಿ ಹೊರಗಡೆ ಕೆಲಸ ಮಾಡಲು ಬಿದಿರು, ತೆಂಗಿನ ಗರಿಗಳಿಂದ ಮಾಡಿದ ಗೊರಬು (ಗೊರಗ) ಗಳನ್ನು ಉಪಯೋಗಿಸುತ್ತಾರೆ. ಮನೆಗೆಲಸಗಳಿಗೆ, ಅಡಿಗೆ ಮಾಡಲು ಹಾಗೂ ನೀರು, ಕಾಳುಗಳನ್ನು ಸಂಗ್ರಹಿಸಿಡಲು ಹಿಂದಿನ ಕಾಲದಲ್ಲಿ ಹೆಚ್ಚಾಗಿ ಮಡಿಕೆ, ಕುಡಿಕೆ, ಹರವಿ, ಗುಡಾಣಗಳನ್ನು ಹಿತ್ತಾಳೆ ತಾಮ್ರದ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಅಡಿಗೆ ಮಾಡಲು ಮಡಿಕೆ, ಹಿತ್ತಾಳೆ ಪಾತ್ರೆಗಳನ್ನು ಕಲ್ಲುಮರಿಗೆಗಳನ್ನು, ನೀರು ತರಲು ಗಡಿಗೆ ಬಿಂದಿಗೆಗಳನ್ನು, ಕಾಳುಗಳನ್ನು ತುಂಬಿಡಲು ಗುಡಾಣಗಳನ್ನು ಉಪಯೋಗಿಸುತ್ತಿದ್ದರು. ಉಪ್ಪಿನಕಾಯಿ, ಉಪ್ಪು ಮೊದಲಾದವುಗಳನ್ನು ಕಲ್ಲುಮರಿಗೆಗಳಲ್ಲಿಡುತ್ತಿದ್ದರು. ಬಡವರ, ಗಿರಿಜನರ ಮನೆಗಳಲ್ಲಿ ಹೆಬ್ಬಿದಿರಿನ ಅಂಡೆಗಳಲ್ಲಿ ಉಪ್ಪು, ಬೀಜ, ಮೊದಲಾದ ವಸ್ತುಗಳನ್ನು ತುಂಬಿಡುತ್ತಿದ್ದರು. ಗಿರಿಜನರು ಅಂಡೆಗಳಲ್ಲಿ ನೀರನ್ನು ತರುತ್ತಿದ್ದರು. ಶ್ರೀಮಂತರ ಮನೆಗಳಲ್ಲಿ ಗೌರವಕ್ಕೆ ಕುಡಿಯಲು ಬೆಳ್ಳಿ ಲೋಟಗಳನ್ನು ಉಪಯೋಗಿಸುವ ಪದ್ಧತಿಯಿತ್ತು.

ನಾಗರಿಕತೆಯ ಮುನ್ನಡೆಯಿಂದ ಹೊಸ ಹೊಸ ಆವಿಷ್ಕಾರಗಳಾಗಿ ಅಲ್ಯೂಮಿನಿಯಂ, ಸ್ಟೈನ್‌ಲೆಸ್ ಸ್ಟೀಲ್‌ಗಳ ಪಾತ್ರೆಗಳು, ಉಪಕರಣಗಳು ಹೆಚ್ಚಾಗಿ ಉಪಯೋಗಕ್ಕೆ ಬಂದಿವೆ. ಮಡಿಕೆ ಕುಡಿಕೆ, ಹಿತ್ತಾಳೆ, ತ್ರಾಮದ ಪಾತ್ರೆಗಳು ಈಗ ಮೂಲೆಗುಂಪಾಗಿ ಅವುಗಳ ಜಾಗದಲ್ಲಿ ಅಲ್ಯೂಮಿನಂ ಮತ್ತು ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳು ಉಪಯೋಗಿಸಲ್ಪಡುತ್ತಿವೆ. ಆದರೆ ಈಗಲೂ ಕೆಲವು ಬಡವರ ಮತ್ತು ಗಿರಿಜನರ ಮನೆಗಳಲ್ಲಿ ಮಡಿಕೆ ಕುಡಿಕೆಗಳು ಇನ್ನೂ ಉಪಯೋಗದಲ್ಲಿವೆ. ಉಡುಪುಗಳನ್ನು, ಬೆಲೆ ಬಾಳುವ ಆಭರಣಗಳನ್ನು ಹಿಂದೆ ಕಬ್ಬಿಣದ ಪೆಟ್ಟಿಗೆಯಲ್ಲಿಡುತ್ತಿದ್ದರೆ ಈಗ ಅವುಗಳ ಬದಲಿಗೆ ಕಬ್ಬಿಣದ ಅಲ್‌ಮೇರಾಗಳು ಬಂದಿವೆ. ಅದೇ ರೀತಿ ಬತ್ತ ಮೊದಲಾದ ಧಾನ್ಯಗಳನ್ನು ಹಿಂದೆ ಗುಡಾಣ, ಹಿಂಡಿಗಳಲ್ಲಿಡುತ್ತಿದ್ದರೆ ಈಗ ತಗಡಿನ ದೊಡ್ಡ ದೊಡ್ಡ ಡ್ರಂಗಳನ್ನು ಉಪಯೋಗಿಸುತ್ತಾರೆ. ನೀರು ಕಾಯಿಸಲು ಬಡವರು ಮಡಿಕೆಗಳನ್ನು ಉಪಯೋಗಿಸಿದರೆ ಮಧ್ಯಮ ವರ್ಗದವರು ಶ್ರೀಮಂತರು ತಾಮ್ರದ ಹಂಡೆಗಳನ್ನು ಉಪಯೋಗಿಸುತ್ತಾರೆ. ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿಯ ಬಾಯ್ಲರ್‌ಗಳು ಉಪಯೋಗದಲ್ಲಿವೆ. ಊಟಕ್ಕೆ ಹಿಂದೆ ಕಂಚಿನ ಗಂಗಾಳವನ್ನು ಉಪಯೋಗಿಸುತ್ತಿದ್ದರೆ, ಈಗ ಸ್ಟೈನ್‌ಲೆಸ್ ಸ್ಟೀಲಿನ ತಟ್ಟೆಗಳನ್ನು ಉಪಯೋಗಿಸುತ್ತಾರೆ. ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸುತ್ತಿರುವುದರಿಂದ ಸೀಮೆಯೆಣ್ಣೆ ದೀಪಗಳು ಕಡಿಮೆಯಾಗಿವೆ. ಅಡಿಗೆ ಮಾಡಲು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಿಗೆಯೇ ಪ್ರಧಾನವಾದ ಉರುವಲು. ಪಟ್ಟಣಗಳಲ್ಲಿ ಸೀಮೆಯೆಣ್ಣೆ, ಪೆಟ್ರೋಲಿಯಂ ಅನಿಲ ಹಾಗೂ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಾರೆ.

## ಆಭರಣಗಳು

ಕೊಡಗಿನ ಜನರು ಹಾಕಿಕೊಳ್ಳುವ ಆಭರಣಗಳಿಗೂ ಇತರ ಜಿಲ್ಲೆಯ ಜನರು ಅಲಂಕರಿಸಿಕೊಳ್ಳುವ ಆಭರಣಗಳಿಗೂ ಹೆಚ್ಚು ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಕೊಡವ ಸ್ತ್ರೀಯರು ಕತ್ತಿನಾಗರ ಅಥವಾ ಚಂದ್ರನಾಗರ, ಚಂಗೋಲೆ ಮೊದಲಾದ ಚಿನ್ನದ ಹಾರಗಳನ್ನು ಕೊರಳಿಗೆ ಹಾಕಿಕೊಳ್ಳುತ್ತಾರೆ. ಪತ್ತಾಕು ಎಂಬ ಲಕ್ಷ್ಮೀತಲೆಯುಳ್ಳ ಬಿಲ್ಲೆಯನ್ನು ಕೊರಳಿಗೆ ಹಾಕಿಕೊಳ್ಳುತ್ತಾರೆ. ಜೋಮಾಲೆಸರವೆಂಬುದು ಇನ್ನೊಂದು ಕುತ್ತಿಗೆಗೆ ಹಾಕಿಕೊಳ್ಳುವ ಚಿನ್ನದಸರ. ಕಿವಿಗೆ ಚಿನ್ನದಿಂದ ಮಾಡಿದ ಓಲೆ, ಕೊಂಡೋಳ (ಕಿವಿಗೆ ಮೇಲಿಂದ ಕೆಳಗೆ ಸಾಲಾಗಿ ಹಾಕುವ ಉಂಗುರ) ಗಳನ್ನು ಧರಿಸುತ್ತಾರೆ. ಕೈಗೆ ಕಡಗ, ಜೋಡಿ ಬಳೆಗಳನ್ನು ಹಾಕಿಕೊಳ್ಳುತ್ತಾರೆ. ಮೂಗುತಿ ಈಗ ವಿರಳವಾಗುತ್ತಿರುವ ಒಡವೆ. ಜಡೆಗೆ ಜಡೆಬಿಲ್ಲೆ (ವಿವಾಹ ಕಾಲದಲ್ಲಿ) ಯನ್ನು ಹಾಕಿಕೊಳ್ಳುತ್ತಾರೆ. ವಿವಾಹ ಕಾಲದಲ್ಲಿ ಗಾಜಿನ ಬಳೆ ತೊಡುತ್ತಾರೆ. ಕಾಲಿನ ಬೆರಳಿಗೆ ಕಾಲುಂಗುರವು ವಿವಾಹ ಸಂಕೇತವಾಗಿರುತ್ತದೆ. ಕೊಡವರಲ್ಲಿ ಕೆಂಪು ಬಣ್ಣವು ಮುತ್ತೈದೆತನದ ಸಂಕೇತ. ಪಟ್ಟಣಗಳಲ್ಲಿ ಶ್ರೀಮಂತರ ಮಧ್ಯಮ ವರ್ಗದವರ ಮನೆಗಳಲ್ಲಿ ಅಲಂಕಾರ ಪ್ರಸಾಧನಗಳಾದ ಸ್ನೋ, ಪೌಡರ್, ಮೈ ಸಾಬೂನುಗಳು ಉಪಯೋಗದಲ್ಲಿವೆ. ಬಡವರ ಮನೆಗಳಲ್ಲಿ ಸೀಗೇಕಾಯಿಯನ್ನು ಉಪಯೋಗಿಸುತ್ತಾರೆ. ಬಟ್ಟೆಗಳನ್ನು ಒಗೆಯಲು ಸಾಬೂನು ಉಪಯೋಗಿಸುತ್ತಾರೆ. ಬಡವರ ಕುಟುಂಬಗಳಲ್ಲಿ ಗಿರಿಜನರಲ್ಲಿ ಚಿನ್ನ ಬೆಳ್ಳಿಯ ಒಡವೆಗಳು ಅಪರೂಪ. ಅವರು ಚಿನ್ನದ ಮುಲಾಮಿನ ಹಾಗೂ ಕಡಮೆ ಬೆಲೆಯ ಲೋಹಗಳ ಆಭರಣಗಳನ್ನು ಧರಿಸುತ್ತಾರೆ. ಗಿರಿಜನರು ಬಣ್ಣ ಬಣ್ಣದ ಮಣಿಗಳ, ಗಾಜಿನಿಂದ ಮಾಡಿದ ಹರಳುಗಳ ಸರಗಳನ್ನು ಇತರ ಒಡವೆಗಳನ್ನು ಧರಿಸುತ್ತಾರೆ.

## ಹಬ್ಬಗಳು

ಹಿಂದೂಗಳು ವರ್ಷದಲ್ಲಿ ಅನೇಕ ಹಬ್ಬಗಳನ್ನು, ವ್ರತಗಳನ್ನು ದೇವರ ಹೆಸರಿನಲ್ಲಿ, ಸಂತರ ಹೆಸರಿನಲ್ಲಿ ಆಚರಿಸುತ್ತಾರೆ. ಕೊಡಗು ಜಿಲ್ಲೆಯಲ್ಲಿ ಅಲ್ಲಿಯ ಮೂಲನಿವಾಸಿಗಳು ಹಾಗೂ ಇತರರು ಕೇರಳ, ದಕ್ಷಿಣ ಕನ್ನಡ, ಮೈಸೂರು, ಹಾಸನ ಮೊದಲಾದ ಕಡೆಯಿಂದ ಬಂದವರಾಗಿದ್ದು ಅವರು ಆಚರಿಸುವ ಹಬ್ಬಗಳಲ್ಲಿ ವೈಶಿಷ್ಟ್ಯವಿದೆ. ಕೊಡವರ ಹಬ್ಬಗಳಾದ ಕೈಲ್‌ಪೊಳ್ದು, ತುಲಾಸಂಕ್ರಮಣ, ಹುತ್ತರಿ ಹಬ್ಬಗಳು ಕೊಡಗಿಗೆ ಸೀಮಿತವಾದ ಹಬ್ಬಗಳು. ಹಿಂದೂಗಳು ಮಾರ್ಚ್ ಏಪ್ರಿಲ್ ತಿಂಗಳಲ್ಲಿ ವರ್ಷಾರಂಭದ ಯುಗಾದಿ ಹಬ್ಬವನ್ನು ಆಚರಿಸುತ್ತಾರೆ. ಇದು ಎಲ್ಲಾ ಹಿಂದೂಗಳಿಗೂ ಮುಖ್ಯವಾದ ಹಬ್ಬ. ಆ ದಿನ ಮನೆಯ ಮುಂಬಾಗಿಲುಗಳನ್ನು ಮಾವಿನ ತೋರಣಗಳಿಂದ ಅಲಂಕರಿಸಿ, ಎಣ್ಣೆಸ್ನಾನ ಮಾಡಿ, ದೇವರನ್ನು ಪೂಜಿಸಿ ಬೇವು–ಬೆಲ್ಲ ತಿಂದು ಹಬ್ಬವನ್ನು ಆಚರಿಸುತ್ತಾರೆ. ಸಾಯಂಕಾಲ ಅಥವಾ ರಾತ್ರಿ ಪಂಚಾಂಗ ಶ್ರವಣ ಮಾಡುತ್ತಾರೆ. ಮಾರನೇಯ ದಿನ ಬೇಟೆಗೆ ಹೋಗುವುದು ಒಂದು ಪದ್ಧತಿ. ಕೆಲವು ಕಡೆಗಳಲ್ಲಿ ಆ ದಿನ ಹೊನ್ನಾರು ಹೂಡಿ ಹೊಲಗದ್ದೆಗಳನ್ನು ಉಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಚೈತ್ರ ಶುದ್ಧ ನವಮಿಯಂದು ಏಪ್ರಿಲ್ ತಿಂಗಳಿನಲ್ಲಿ ಶ್ರೀರಾಮನವಮಿಯನ್ನು ಆಚರಿಸುತ್ತಾರೆ. ವೈಶಾಖ ಶುದ್ಧ ತೃತೀಯ ಬಸವ ಜಯಂತಿಯನ್ನು, ಆಷಾಢ ಶುದ್ಧ ಏಕಾದಶಿಯಂದು ಪ್ರಥಮ ಏಕಾದಶಿಯನ್ನೂ, ಶ್ರಾವಣ ಶುದ್ಧ ಪಂಚಮಿಯಂದು (ಆಗಸ್ಟ್) ನಾಗಪಂಚಮಿಯನ್ನು, ಶ್ರೀಕೃಷ್ಣನು ಹುಟ್ಟಿದ ದಿನವಾದ ಶ್ರಾವಣ ಬಹುಳ ಅಷ್ಟಮಿಯನ್ನು ಗೋಕುಲಾಷ್ಟಮಿಯೆಂದೂ ಆಚರಿಸುತ್ತಾರೆ. ಆಗಸ್ಟ್–ಸೆಪ್ಟಂಬರ್ ತಿಂಗಳಿನಲ್ಲಿ ಭಾದ್ರಪದ ಶುದ್ಧ ತೃತೀಯ, ಚತುರ್ಥಿಗಳಂದು ಗೌರಿ ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ. ಸೆಪ್ಟಂಬರ್–ಅಕ್ಟೋಬರ್ ತಿಂಗಳಿನಲ್ಲಿ ಬರುವ ಆಶ್ವಿಜ ತಿಂಗಳಿನ ಮೊದಲ ಒಂಬತ್ತು ದಿನಗಳಲ್ಲಿ ನವರಾತ್ರಿ ಹಬ್ಬವು ಬರುತ್ತದೆ. ನವರಾತ್ರಿಯ ಒಂಬತ್ತು ದಿನಗಳೂ ಮನೆಯಲ್ಲಿ ದೇವರಿಗೆ ನಂದಾದೀಪ ಹಚ್ಚುತ್ತಾರೆ. ಮನೆಗಳಲ್ಲಿ ಬೊಂಬೆಗಳನ್ನು ಕೂಡಿಸಿ ಪ್ರದರ್ಶನವೇರ್ಪಡಿಸಿ ಪ್ರತೀದಿನ ಸಂಜೆ ಆರತಿ ಮಾಡಿ ಮಕ್ಕಳಿಗೆ ತಿಂಡಿ ಹಂಚುತ್ತಾರೆ. ನವರಾತ್ರಿಯ ಏಳನೇಯ ದಿನ ಸರಸ್ವತಿಯನ್ನೂ, ಎಂಟನೇಯ ದಿನ ದುರ್ಗಿಯನ್ನೂ ಪೂಜಿಸುತ್ತಾರೆ. ಒಂಬತ್ತನೇಯ ದಿನವಾದ ಮಹಾನವಮಿಯನ್ನು ಮಗನ ಹಬ್ಬವಾಗಿ ಆಚರಿಸುತ್ತಾರೆ. ವಿಜಯದಶಮಿಯ ದಿನ ಮಡಿಕೇರಿಯಲ್ಲಿ ದೇವರುಗಳು ಉತ್ಸವಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಅನೇಕ ದೇವರು, ದೇವತೆಗಳನ್ನು ಮಂಟಪಗಳಲ್ಲಿ ಸಾಲಾಗಿ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆಯು ವಿಜಯದಶಮಿಯ ದಿನ ಮಧ್ಯಾಹ್ನ ನಾಲ್ಕು ಗಂಟೆಗೆ ಶುರುವಾಗಿ ಮಾರನೇ ದಿನವು ಊರಲ್ಲೆಲ್ಲಾ ಸುತ್ತಾಡುತ್ತದೆ. ಇತ್ತೀಚೆಗೆ ವಿಜಯದಶಮಿಯನ್ನು ಗೋಣಿಕೊಪ್ಪಲಿನಲ್ಲೂ ಅದ್ದೂರಿಯಿಂದ ಆಚರಿಸುತ್ತಾರೆ. ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಬರುವ ಆಶ್ವಿಜ ಬಹುಳ ಚತುರ್ದಶಿ, ಅಮಾವಾಸ್ಯೆ ಮತ್ತು ಕಾರ್ತಿಕ ಶುದ್ಧ ಪ್ರತಿಪದೆಯಂದು ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ. ದೀಪಾವಳಿಯನ್ನು ಹೆಚ್ಚಾಗಿ ಜಿಲ್ಲೆಗೆ ಹೊರಗಿನಿಂದ ಬಂದವರು ಆಚರಿಸುತ್ತಾರೆ. ಉತ್ತರಾಯಣ ಪುಣ್ಯಕಾಲವನ್ನು ಜನವರಿ 14 ರಂದು ಸಂಕ್ರಾಂತಿ ಹಬ್ಬವೆಂದು ಆಚರಿಸುತ್ತಾರೆ. ಕೊಡಗಿನ ದೊಡ್ಡ ಹಬ್ಬಗಳಲ್ಲಿ ಇದೂ ಒಂದು. ಅಂದು ಮನೆ ಮನೆಗಳಲ್ಲಿ ಎಳ್ಳು–ಬೆಲ್ಲ ಹಂಚುತ್ತಾರೆ. ಮಾಘಮಾಸದಲ್ಲಿ ಬರುವ (ಫೆಬ್ರವರಿಯಲ್ಲಿ) ಶಿವರಾತ್ರಿಯು ಕೊಡಗಿನಲ್ಲಿ ಒಂದು ದೊಡ್ಡ ಹಬ್ಬ. ಅಂದು ರಾತ್ರಿಯೆಲ್ಲಾ ಜಾಗರಣೆಯಿದ್ದು ಈಶ್ವರನನ್ನು ಪೂಜಿಸುತ್ತಾರೆ. ಶ್ರೀಮಂಗಲದ ಸಮೀಪ ಇರುವ ಇರ್ಪುವಿನಲ್ಲಿ ಒಂದು ಜಾತ್ರೆಯೇ ನಡೆಯುತ್ತದೆ. ಬ್ರಾಹ್ಮಣರಿಗೆ ಶ್ರಾವಣ ಮಾಸದಲ್ಲಿ ಬರುವ ಉಪಾಕರ್ಮವು ಒಂದು ಮುಖ್ಯ ಹಬ್ಬವಾಗಿದೆ.

ಜೈನರಲ್ಲಿ ಪಜ್ಜೂಶನಪರ್ವ, ದೀಪಾವಳಿ, ಜ್ಞಾನ ಪಂಚಮಿ ನಾಗಪಂಚಮಿ, ಯುಗಾದಿ, ಮಹಾವೀರ ಜಯಂತಿ, ಉಪಾಕರ್ಮ, ಗೌರೀಹಬ್ಬ, ಜೀವದಯಾಷ್ಟಮಿ, ಜಿನರಾತ್ರಿ, ಅಕ್ಷಯ ತೃತೀಯ, ಶ್ರುತಪಂಚಮಿ, ದಶಲಕ್ಷಣಪರ್ವ ಮೊದಲಾದವುಗಳು ಮುಖ್ಯ ಹಬ್ಬಗಳಾಗಿವೆ.

ಮುಸಲ್ಮಾನರ ಹಬ್ಬಗಳಲ್ಲಿ ಬಹುಮುಖ್ಯವಾದವುಗಳು ಮೊಹರಂ, ರಂಜಾನ್ ಮತ್ತು ಬಕ್ರೀದ್ ಹಬ್ಬಗಳು. ಈ ಹಬ್ಬಗಳಲ್ಲಿ ಮುಸಲ್ಮಾನರು ಹೊಸ ಬಟ್ಟೆ ಉಟ್ಟು ಈದ್ ಮೈದಾನಕ್ಕೆ ಗುಂಪಿನಲ್ಲಿ ಹೋಗಿ ಪ್ರಾರ್ಥನೆಯನ್ನು ಮಾಡುತ್ತಾರೆ. ರಂಜಾನ್ ತಿಂಗಳಿನಲ್ಲಿ ಹಗಲು ಹೊತ್ತು ಉಪವಾಸವಿರುತ್ತಾರೆ. ಈ ಹಬ್ಬಗಳಲ್ಲದೆ ಶಬ್–ಎ–ಬರಾತ್, ರಬಿ–ಉಸ್–ಸಾನ್, ರಬಿ–ಉಲ್–ಅವ್ವಾಲ್, ಅಖ್ರಿ ಚಾರ್‌ಶುಂಭ ಮೊದಲಾದವುಗಳು ಅವರ ಇತರ ಹಬ್ಬಗಳು.

ಕ್ರೈಸ್ತರು ಜನವರಿ ಒಂದನೇ ತಾರೀಖನ್ನು ಹೊಸ ವರ್ಷಾರಂಭದ ದಿನವೆಂದು ಆಚರಿಸುತ್ತಾರೆ. ಗುಡ್‌ಫ್ರೈಡೇ, ಈಸ್ಟರ್‌ಸಂಡೆ, ಸೆಪ್ಟಂಬರ್ ಎಂಟರಂದು ಮೇರಿ ಹುಟ್ಟಿದ ಹಬ್ಬ ಮತ್ತು ಡಿಸೆಂಬರ್ ಇಪ್ಪತ್ತೈದರಂದು ಕ್ರಿಸ್‌ಮಸ್

ಹಬ್ಬಗಳನ್ನು ಆಚರಿಸುತ್ತಾರೆ. ಕ್ರಿಸ್‌ಮಸ್ ಹಬ್ಬವು ಅವರಲ್ಲಿ ಬಹು ಮುಖ್ಯವಾದ ಹಬ್ಬ. ಕೊಂಕಣಿ ಕ್ರೈಸ್ತರು ಸೆಪ್ಟಂಬರ್ ಎಂಟರಂದು ಶಿಶು ಮೇರಿ ಮಾತೆಯನ್ನು 'ಮೋಂತಿಮಾತೆ' ಯೆಂದು ಕರೆದು 'ಮೋಂತಿಮಾತೆ'ಯ ಹಬ್ಬವನ್ನು ಆಚರಿಸುತ್ತಾರೆ. ಅಂದು ಹೂವುಗಳನ್ನು ತಂದು ತಟ್ಟೆಯಲ್ಲಿಟ್ಟು ಕೊಂಡು, ಹೊಸ ಬಟ್ಟೆ ಧರಿಸಿ ಚರ್ಚಿಗೆ ಹೋಗಿ ಪೂಜೆಮಾಡಿ ಶಿಶುಮೇರಿಯ ಪ್ರತಿಮೆಯ ಸುತ್ತ ಹಾಡುತ್ತಾ, ಹೂವುಗಳನ್ನು ಅರ್ಪಿಸುತ್ತಾರೆ. ಗುರುಗಳು ಹೊಸ ಬತ್ತದ ತೆನೆಯನ್ನು ಆಶೀರ್ವದಿಸಿ ಹಂಚುತ್ತಾರೆ. ಮಧ್ಯಾಹ್ನ ಬಗೆಬಗೆಯಾದ ತಿನಸುಗಳ ಊಟ ಮಾಡುತ್ತಾರೆ. ಅಂದು ಮಾಂಸ ಹಾಗೂ ಮದ್ಯಪಾನ ನಿಷಿದ್ಧ.

### ಕೈಲ್‌ಪೊಳ್ದ್

ಕೈಲ್‌ಪೊಳ್ದ್ ಹಬ್ಬವನ್ನು ಕೊಡವರು ಸೆಪ್ಟಂಬರ್ ತಿಂಗಳ ಎರಡು ಅಥವಾ ಮೂರರಂದು ಆಚರಿಸುತ್ತಾರೆ. ಆದರೆ ನಾಲ್ಕುನಾಡು, ಮುತ್ತ್‌ನಾಡು ಕಡೆಗಳಲ್ಲಿ ಶಾಸ್ತ್ರ ನೋಡಿ ನಿಶ್ಚಯಿಸುವ ದಿನ ಆಚರಿಸುತ್ತಾರೆ. ಕೈಲ್ ಎಂದರೆ ಆಯುಧವೆಂದೂ ಪೊಳ್ದ್ ಎಂದರೆ ಸಮಯವೆಂದೂ ಕೈಲ್‌ಪೊಳ್ದ್ ಎಂದರೆ ಆಯುಧಪೂಜೆಯೆಂದೂ ಅರ್ಥ. ಕೊಡವರು ಕೃಷಿ ಕಾರ್ಯದಲ್ಲಿ ತೊಡಗಿದ್ದಾಗ ತಮ್ಮ ಆಯುಧಗಳನ್ನು ಕನ್ನಿ ಕೊಂಬರೆಯಲ್ಲಿ ಇಡುತ್ತಾರೆ. ಇದನ್ನು ಕೈಲ್‌ಪೊಳ್ದ್ ಕೆಟ್ಟ್ ಎನ್ನುತ್ತಾರೆ. ಈ ಆಯುಧಗಳನ್ನು ತೆಗೆಯುವಾಗ ಅವುಗಳನ್ನು ಶುಭ್ರಗೊಳಿಸಿ, ಶೃಂಗರಿಸಿ, ಕನ್ನಿಕೊಂಬರೆ ಅಥವಾ ನೆಲ್ಲಕ್ಕಿ ನಡುಬಾಡೆಯಲ್ಲಿಟ್ಟು ಧೂಪ, ದೀಪಾದಿಗಳಿಂದ ಹೂವುಗಳಿಂದ ಪೂಜಿಸಿ ನಾಳಂಬು ಎಸೆದ ನಂತರ ಮುಟ್ಟುತ್ತಾರೆ. ನಾಳಂಬು ಎಂದರೆ ಕೈಲ್‌ಪೊಳ್ದ್ ದಿನ ಬೆಳಿಗ್ಗೆ ಜ್ಯೋತಿಷ್ಯರು ಸೂಚಿಸಿದ ಗಂಡಸು ನಿಶ್ಚಿತ ಗಿಡವೊಂದರ ಬೆರಳುಗಾತ್ರದ ಗೇಣುದ್ದದ ಮೂರು ತುಂಡುಗಳಲ್ಲಿ ಒಂದನ್ನು ಒಂದು ಕಡೆ ಚೂಪಾಗಿಸಿ ಬಾಣ ಮಾಡಿ ಅದರ ಇನ್ನೊಂದು ತುದಿಗೆ ನೇರಳೆ ಎಲೆಗಳನ್ನು ಗರಿಯಂತೆ ಕಟ್ಟಿ ಊರಿನ ಮಂದ್‌ಗೆ (ಮೈದಾನ) ಹೋಗಿ ಸೂರ್ಯೋದಯಕ್ಕೆ ಮುಂಚೆ ಆ ಬಾಣವನ್ನು ಹಾಲು ಬರುವ ಮರಕ್ಕೆ ತಗಲುವಂತೆ ಎಸೆದು ಬರುವುದು. ಆಡಂಬರವಾದ ಮಾಂಸಭೋಜನ ಮದ್ಯಪಾನಗಳಾದ ಮೇಲೆ ಹೊಸ ಬಟ್ಟೆ ಉಟ್ಟು ಗಂಡಸರೆಲ್ಲರೂ ಆಯುಧಗಳ ಮುಂದೆ ನಿಲ್ಲುತ್ತಾರೆ. ಕುಟುಂಬದ ಹಿರಿಯನು ಒಂದು ಕೋವಿಯನ್ನು ತೆಗೆದು ಅಲ್ಲಿರುವವರಲ್ಲಿ ಹಿರಿಯನಿಗೆ ಕೊಡುತ್ತಾನೆ. ಅವನು ತೆಗೆದುಕೊಂಡು ಹಿರಿಯರ ಪಾದ ಮುಟ್ಟಿ ನಮಸ್ಕರಿಸುತ್ತಾನೆ. ಅಲ್ಲಿರುವ ಇತರರೂ ಆಯುಧಗಳನ್ನು ತೆಗೆದುಕೊಳ್ಳುತ್ತಾರೆ. ಎಲ್ಲರೂ ಊರಿನ ಮಂದ್‌ಗೆ ಬರುತ್ತಾರೆ. ಅಲ್ಲಿ ಶಾರೀರಿಕ ಸ್ಪರ್ಧೆಗಳು, ಗುಂಡು ಹಾರಿಸುವಿಕೆ ನಡೆಯುತ್ತವೆ. ಎಲ್ಲರೂ ಊರು ಬೇಟೆಯ ದಿನವನ್ನು ನಿಶ್ಚಯಿಸಿ ಬೇಟೆಯಾಡುತ್ತಾರೆ. ಬುಧವಾರ ಮತ್ತು ಶನಿವಾರಗಳಲ್ಲಿ ದೇವರು ಬೇಟೆಯಾಡುತ್ತಾನೆಂದು ಆ ದಿವಸಗಳು ದೇವರ ಕಾಡಿನಲ್ಲಿ ಬೇಟೆಯಾಡುವುದಿಲ್ಲ. ಕೊಡಗಿನ ಜನಪದ ಸಾಹಿತ್ಯವೊಂದರ ಪ್ರಕಾರ ಕೊಡವರು ಪಾಂಡವರ ವಂಶಸ್ಥರೆಂದೂ, ಅವರಂತೆ ಅಜ್ಞಾತವಾಸದಲ್ಲಿ ಆಯುಧಗಳನ್ನು ರಹಸ್ಯವಾಗಿಟ್ಟು ನಂತರ ಅವುಗಳನ್ನು ಪೂಜಿಸಿ ಯುದ್ಧಕ್ಕೆ ಪಾಂಡವರು ತೆಗೆದುಕೊಂಡು ಹೋದಂತೆ ತಾವೂ ಸಾಂಕೇತಿಕವಾಗಿ ಅನುಸರಿಸುತ್ತಾರೆಂದು ಹೇಳಿಕೆಯಿದೆ. ಈಗ ಬೇಟೆಯಾಡಲು ನಿಷೇಧವಿರುವುದರಿಂದ ಬೇಟೆಗೆ ಬದಲಾಗಿ ತೆಂಗಿನಕಾಯೊಂದನ್ನು ಮೇಲೆ ಕಟ್ಟಿ ಬಂದೂಕಿನಿಂದ ಗುರಿಯಿಟ್ಟು ಹೊಡೆಯುತ್ತಾರೆ.

### ಕಾವೇರಿ ಸಂಕ್ರಮಣ

ಕೊಡಗಿನಲ್ಲಿ ತುಲಾ ಸಂಕ್ರಮಣವನ್ನು ಕಾವೇರಿ ಸಂಕ್ರಮಣವೆಂದು ಆಚರಿಸುತ್ತಾರೆ. ಈ ಹಬ್ಬವು ಅಕ್ಟೋಬರ್ ತಿಂಗಳ ಮಧ್ಯಭಾಗದಲ್ಲಿ ಬರುತ್ತದೆ. ಅಂದು ನಿಶ್ಚಿತ ವೇಳೆಯಲ್ಲಿ ತಲಕಾವೇರಿಯಲ್ಲಿ ಕಾವೇರಿಯು ಹುಟ್ಟುವ ಕಡೆ ತೀರ್ಥೋದ್ಭವವಾಗುತ್ತದೆ. ಅಂದು ಆ ಸಮಯದಲ್ಲಿ ಜನರು ಕಾವೇರಿಯಲ್ಲಿ ಸ್ನಾನ ಮಾಡಿ ತೀರ್ಥವನ್ನು ಸೇವಿಸುತ್ತಾರೆ. ಯಾತ್ರಿಕರು ವೃಶ್ಚಿಕ ಸಂಕ್ರಮಣದವರೆಗೂ ಬಂದು ಹೋಗುತ್ತಿರುತ್ತಾರೆ. ತಲಕಾವೇರಿಗೆ ಹೋಗಲು ಸಾಧ್ಯವಾಗದವರು ಹರಿಶ್ಚಂದ್ರ, ಬಲಮುರಿ, ಗುಯ್ಯ ಮೊದಲಾದ ಸ್ಥಳಗಳಿಗೆ ಹೋಗಿ ಕಾವೇರಿಯಲ್ಲಿ ಸ್ನಾನ ಮಾಡಿ ಪೂಜೆ ಮಾಡುವರು. ಕಾವೇರಿ ಸಂಕ್ರಮಣ ಹಬ್ಬವನ್ನು ಎರಡು ದಿನಗಳು ಆಚರಿಸುವರು. ಮೊದಲನೇ ದಿನ ಬೊತ್ತ್ ಹಾಕುವುದು, ಎರಡನೇ ದಿನ ಕಣಿಪೂಜೆ. ತುಲಾ ಸಂಕ್ರಮಣದ ಹಿಂದಿನ ದಿನ ಬೊತ್ತ್ ಹಾಕುತ್ತಾರೆ. ಅಂದರೆ ಆ ದಿನ ಬೆಳಗ್ಗೆ ಎರಡೆರಡು ಬೊಂಬಿನ ದಬ್ಬೆಗಳನ್ನು ಕತ್ತರಿ ರೂಪದಲ್ಲಿ ನಿಲ್ಲಿಸಿ ಅವುಗಳ ಮೇಲೆ ನಿಶಾನೆ ಎಂದು ಬಳ್ಳಿಗಳನ್ನು ಹೂವಿನ ಹಾರದಂತೆ ಸುತ್ತುತ್ತಾರೆ. ಇದೇ ಬೊತ್ತ್. ಇವುಗಳನ್ನು ಕೊಡವರು ಎಲ್ಲೆಲ್ಲಿ ತಮ್ಮ ಹೊಲಗದ್ದೆ ತೋಟಗಳಿವೆಯೋ ಅಲ್ಲೆಲ್ಲಾ ಅಲಂಕಾರವಾಗಿ ನಿಲ್ಲಿಸುತ್ತಾರೆ.

ಬೊತ್ ಹಾಕಿದ ಮೇಲೆ ಆದಿನ ಸಾಯಂಕಾಲ ಪ್ರತೀ ಮನೆಯಲ್ಲಿ ಕಣಿ ಪೂಜೆ ಮಾಡಲು ಹೂವುಗಳನ್ನು ಸಂಗ್ರಹಿಸಿಟ್ಟು ಕೊಳ್ಳುತ್ತಾರೆ. ತೀರ್ಥೋದ್ಭವವಾದ ಮರುದಿನ ಬೆಳಿಗ್ಗೆ ಸ್ನಾನ ಮಾಡಿ ಹೊಸ ಬಟ್ಟೆ ಉಟ್ಟು ಮನೆಯನ್ನು ಗಂಗೋ

ದಕದಿಂದ ಶುಭ್ರಗೊಳಿಸುತ್ತಾರೆ. ಮುತ್ತೈದೆಯೊಬ್ಬಳು ತಳಿಯಕ್ಕಿ ಬೊಳಚ (ದೀಪ) ಬೆಳಗಿ, ರೇಷ್ಮೆವಸ್ತ್ರವಿಟ್ಟು ತರಕಾರಿಯೊಂದಕ್ಕೆ ತಲೆ, ಕೈಕಾಲು ಮಾಡಿ ಹೂವಿನಿಂದ ಶೃಂಗರಿಸಿ ಕಾವೇರಿ ಮಾತೆಯಪ್ರತೀಕವನ್ನು ಪೂಜಿಸುತ್ತಾಳೆ. ಇದನ್ನು ಆಭರಣಗಳಿಂದ ಶೃಂಗರಿಸಿ ಪೂಜಿಸುತ್ತಾರೆ. ಇದೇ ಕಣಿಪೂಜೆ. ಪೂಜೆಗೆ ಎಲೆ ಅಡಕೆ ಮೂರು ಮೂರು ಇಡುತ್ತಾರೆ. ಈ ಮೂರ್ತಿಯನ್ನು ನೆಲ್ಲಕ್ಕಿ ನಡುಬಾಡೆಯಲ್ಲಿಟ್ಟು ಕುಟುಂಬದ ಪ್ರತಿಯೊಬ್ಬರೂ ತಳಿಯಕ್ಕಿ ಬೊಳಕಿನಿಂದ ಅಕ್ಕಿ ತೆಗೆದು ದೀಪಕ್ಕೆ ಪ್ರೋಕ್ಷಿಸಿ ಮೂರ್ತಿಗೆನಮಸ್ಕರಿಸುತ್ತಾರೆ. ಹಿರಿಯರಆಶೀರ್ವಾದ ಪಡೆಯುತ್ತಾರೆ. ಕಣಿಪೂಜೆಯಾದನಂತರ ಮುತ್ತೈದೆಯೊಬ್ಬಳು ಬಾವಿ ಬಳಿಗೆ ಹೋಗಿ ಗಂಗಾಪೂಜೆ ಮಾಡುತ್ತಾಳೆ. ಮನೆಯಲ್ಲಿ ಸಿದ್ಧವಾದ ದೋಸೆ ಅಥವಾ ಹಿಟ್ಟನ್ನು ಸಾಂಕೇತಿಕವಾಗಿ ಬಾವಿ ಹತ್ತಿರದ ಬೊತ್ತ್, ಗದ್ದೆಯ ಬೊತ್ತ್‌ದ ಮೇಲಿಡುವರು. ಬಾವಿಯಿಂದ ಹೊಸ ನೀರು ತಂದು ಅಡಿಗೆ ಮಾಡುವರು. ದೋಸೆಯನ್ನು ತಿಂದನಂತರ, ವಿದ್ಯಾವಂತರಾದವರ ಮನೆಗಳಲ್ಲಿ ಓದಲು ಬಲ್ಲವನು ಗೋವಿನ ಪದ ಪುಸ್ತಕದಿಂದ ಗೋವಿನ ಹಾಡನ್ನು ಓದಿ ಹೇಳಲು ಮನೆಮಂದಿಯೆಲ್ಲ ಆಲಿಸುತ್ತಾರೆ ಎಂದು ತನ್ನ ಕಾಲದಲ್ಲಿ ಇದ್ದ ರೂಢಿಯನ್ನು ಮೋಗ್ಲಿಂಗ್ ತಿಳಿಸಿದ್ದಾರೆ. ಶೃಂಗರಿಸಿದ ಕಾವೇರಿ ವಿಗ್ರಹವನ್ನು ಒಂದು ವಾರದ ಅವಧಿ ಮುಗಿದ ಮೇಲೆ ಹತ್ತಿರದ ಹೊಳೆಯಲ್ಲಿ ಇಲ್ಲವೆ ಹಾಲು ಬರುವ ಮರದ ಅಡಿಯಲ್ಲಿ ವಿಸರ್ಜಿಸುವರು.

## ಹುತ್ತರಿ

ಹುತ್ತರಿ ಹಬ್ಬವು ಪುತ್ತರಿ ಎಂದರೆ ಹೊಸ ಅಕ್ಕಿ ಎಂಬ ಪದದಿಂದ ಬಂದಿದೆ. ಅಂದರೆ ಹೊಸ ಅಕ್ಕಿ ತರುವ ಹಬ್ಬ. ಈ ಹಬ್ಬವು ನವೆಂಬರ್–ಡಿಸೆಂಬರ್ ತಿಂಗಳಿನಲ್ಲಿ ರೋಹಿಣಿ ನಕ್ಷತ್ರದಲ್ಲಿ ಆಚರಿಸಲ್ಪಡುತ್ತದೆ. ಕೊಡಗಿನ ಎಲ್ಲಾ ಹಬ್ಬಗಳಿಗಿಂತ ದೊಡ್ಡ ಹಬ್ಬ. ಹಳ್ಳಿಯ ಎಲ್ಲಾ ಜನರೂ ಸಹಕರಿಸುವ ಹಬ್ಬ. ಈ ಹಬ್ಬವು ಒಂದು ವಾರ ಕಾಲ ನಡೆಯುತ್ತದೆ. ಹಬ್ಬಕ್ಕೆ ಒಂದು ವಾರ ಮುಂಚೆಯೇ ಯುವಕರು ರಾತ್ರಿಯ ಬೆಳದಿಂಗಳಿನಲ್ಲಿ ಕೋಲಾಟ ಕಲಿಯುತ್ತಾರೆ. ಇದನ್ನು ಈಡ್ ಎನ್ನುತ್ತಾರೆ. ಪುಳದ್ ದಿನ (ಹೊಸ ಬೆಳೆ ಕೊಯ್ಯುವ ಸಮಾರಂಭ) ಕೊಡವರು ತಮ್ಮ ಐನ್‌ಮನೆಗಳಲ್ಲಿ ಸೇರುತ್ತಾರೆ. ಮನೆಯನ್ನು ಶುಚಿಗೊಳಿಸಿ, ಮಾವಿನ ತೋರಣ, ಹೂಮಾಲೆಗಳಿಂದ ಶೃಂಗರಿಸುತ್ತಾರೆ. ಅದೇ ರೀತಿ ಊರವರೆಲ್ಲ ಹುತ್ತರಿಗೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಕುಂಬಾರನು ಹುತ್ತರಿ ಕುಡಿಕೆಯನ್ನು, ಬಿದಿರಿನ ಕೆಲಸದವರು, ಹುತ್ತರಿ ಕುಕ್ಕೆಯನ್ನು (ಪುತ್ತರಿಪಚ್ಚಿ), ಅದೇ ರೀತಿ ಹುತ್ತರಿ ಚಾಪೆ, ಹುತ್ತರಿ ಕುತ್ತಿ, ಕತ್ತಿ ಮೊದಲಾದವುಗಳನ್ನು ಕೊಡವರಿಗೆ ತಂದು ಕೊಟ್ಟು ಅವರಿಂದ ಅಕ್ಕಿ, ಬೆಲ್ಲ, ಬಾಳೆ, ಉಪ್ಪು, ಎಣ್ಣೆ, ಹುತ್ತರಿ ಗೆಣಸು ಮೊದಲಾದವನ್ನು ಪಡೆಯುತ್ತಾರೆ. ದೇವಸ್ಥಾನದಲ್ಲಿ ಪೂಜೆ ಮಾಡುವ ಬ್ರಾಹ್ಮಣನು ಮನೆಗಳಿಗೆ ಹೋಗಿ ತೀರ್ಥ ಪ್ರೋಕ್ಷಿಸಿ ಬರುತ್ತಾನೆ. ನೆಲ್ಲಕ್ಕಿ ನಡುಬಾಡೆಯಲ್ಲಿ ತೂಗುದೀಪದ ಕೆಳಗೆ ಹುತ್ತರಿಚಾಪೆ ಹಾಸಿ ಹುತ್ತರಿ ಕುಕ್ಕೆಯಲ್ಲಿ ಮಾವಿನ ಎಲೆ, ಅರಳಿಎಲೆ ಮೊದಲಾದ ಎಲೆಗಳನ್ನು ಇಟ್ಟು ಕುಕ್ಕೆಯ ತುಂಬ ಬತ್ತ ತುಂಬಿ ಅದರ ಮೇಲೆ ಒಂದು ಬಳ್ಳದಲ್ಲಿ ಬತ್ತ ತುಂಬಿಟ್ಟು ಅದರ ಮೇಲೆ ಅರ್ಧ ಸೇರಿನಲ್ಲಿ ಅಕ್ಕಿ ತುಂಬಿಡುತ್ತಾರೆ. ಹುತ್ತರಿ ಕುಡಿಕೆಯಲ್ಲಿ ತಂಬಿಟ್ಟು ಹಾಕಿ ಅದರ ಪಕ್ಕದಲ್ಲಿ ಹಾಲು, ತುಪ್ಪ, ಜೇನುತುಪ್ಪ, ಎಳ್ಳು, ಶುಂಠಿ, ತೆಂಗಿನಕಾಯಿ, ಹಾಗಲಕಾಯಿಯ ಮುಳ್ಳು, ಇತ್ಯಾದಿಗಳನ್ನು ಇಡುತ್ತಾರೆ. ಹತ್ತಿರದಲ್ಲಿ ಕುಡುಗೋಲು, ಮುಕ್ಕಾಲಿಯ ಮೇಲೆ ತಳಿಯಕ್ಕಿ ಬೊಳಿಚ, 3 ವೀಳ್ಯದೆಲೆ, 3 ಅಡಿಕೆ ಇಡುತ್ತಾರೆ. ವಾದ್ಯ ಮಾಡುವವರು ವಾದ್ಯ ಮಾಡುವಾಗ ಮುತ್ತೈದೆಯರು ಅಕ್ಕಿ ಹಿಟ್ಟಿನಿಂದ ಅವುಗಳ ಮುಂದೆ ರಂಗೋಲಿ ಹಾಕುವರು. ಇದನ್ನು ನೆರೆ ಕಟ್ಟುವುದು ಎನ್ನುತ್ತಾರೆ. ನೆರೆ ಕಟ್ಟಿಯಾದ ಮೇಲೆ ಎಲ್ಲರೂ ಫಲಾಹಾರ ಮಾಡುತ್ತಾರೆ. ಫಲಾಹಾರದಲ್ಲಿ ಹುತ್ತರಿ ಗೆಣಸನ್ನು ಬೇಯಿಸಿ ಜೇನು ತುಪ್ಪ, ಬೆಲ್ಲ, ತುಪ್ಪ ಮಿಶ್ರಮಾಡಿ ತಿನ್ನುವರು. ಮನೆಯ ಹಿರಿಯನು ಕದಿರು ತೆಗೆಯುವ ಕುತ್ತಿಯನ್ನು ಕದಿರು ತೆಗೆಯುವವನಿಗೆ ಕೊಡುತ್ತಾನೆ. ಮುತ್ತೈದೆಯೊಬ್ಬಳು ತಳಿಯಕ್ಕಿ ಬೊಳಿಚನ್ನು ತೆಗೆದುಕೊಳ್ಳುತ್ತಾಳೆ. ಎಲ್ಲರೂ ಕದಿರು ಕೊಯ್ಯಲು ಗದ್ದೆಗೆ ಹೋಗುತ್ತಾರೆ. ಕದಿರು ತೆಗೆಯುವ ಗದ್ದೆಗೆ ದಾರಿಯಲ್ಲಿ ಶೃಂಗರಿಸಿರುತ್ತಾರೆ. ಕುಕ್ಕೆಯಲ್ಲಿರುವ ಹಾಲು, ಜೇನು ಮೊದಲಾದವನ್ನು ಕದಿರಿನ ಬುಡಕ್ಕೆ ಸುರಿದು, ಬುಡವನ್ನು ಕಟ್ಟಿ, ಗುಂಡೊಂದನ್ನು ಹಾರಿಸಿ, ದೇವರನ್ನು ಪ್ರಾರ್ಥಿಸಿ ಕದಿರು ಕೊಯ್ಯುವರು. ಇತರರು 'ಪೊಲಿಪೊಲಿ ದೇವ' ಎಂದು ಕೂಗುವರು. ಬೆಸಸಂಖ್ಯೆಯಲ್ಲಿ ಬುಡಗಳನ್ನು ಕೊಯ್ದು ಕುಕ್ಕೆಯೊಳಗಿಟ್ಟು ತಲೆಯ ಮೇಲಿಟ್ಟುಕೊಂಡು 'ಪೊಲಿಪೊಲಿದೇವ' ಎಂದು ಕೂಗುತ್ತಾ ಮನೆಯ ಕೈಮಡ, ಸಮಾಧಿ ಮೊದಲಾದ ಸ್ಥಳಗಳಲ್ಲಿ ಒಂದೊಂದು ಕದಿರನ್ನು ಇಟ್ಟು ಮನೆಗೆ ಬಂದಾಗ ಮುತ್ತೈದೆಯೊಬ್ಬಳು ಕಾಲು ತೊಳೆದ ನಂತರ, ಕೊಟ್ಟ ಹಾಲನ್ನು ಕುತ್ತಿ ತೆಗೆದವನು ಕುಡಿದ ನಂತರ ಒಳಕ್ಕೆ ಪ್ರವೇಶಿಸಿ ಕುತ್ತಿಯನ್ನು ನೆಲ್ಲಕ್ಕಿ ನಡುಬಾಡೆಯಲ್ಲಿ ಚಾಪೆಯ ಮೇಲಿಡುವನು. ಕದಿರನ್ನು ಮನೆಬಾಗಿಲಿಗೂ ಎಲ್ಲಾ ವಸ್ತುಗಳಿಗೂ ಕಟ್ಟುವರು. ತಂಬಿಟ್ಟು, ಎಳ್ಳು, ಹಾಗಲಕಾಯಿ ಮುಳ್ಳು, ತೆಂಗಿನಕಾಯಿ, ಕಲ್ಲುಹರಳು,

ಪೆರಂಬುಕೊಡಿ, ಹಾಲುಜೇನು, ಬಾಳೆಹಣ್ಣು ಕಲಸಿ ಉಂಡೆಗಳನ್ನು ಮಾಡಿ ಅರಳಿಎಲೆಗಳ ಮೇಲಿಟ್ಟು ಹಿರಿಯರ ಹೆಸರು ಹೇಳಿ ಮಾಡಿಗೆ ಎಸೆಯುವರು. ಆ ದಿನ ಮಾಡಿದ ಭಕ್ಷ್ಯ ಪದಾರ್ಥಗಳನ್ನು ಅಗ್ರದ ಬಾಳೆ ಎಲೆಯ ಮೇಲಿಟ್ಟು ಕೈಮಠ, ಸಮಾಧಿ ಮತ್ತು ಕನ್ನಿಕೋಂಬರೆಯಲ್ಲಿ ನೈವೇದ್ಯ ಮಾಡುವರು. ಇವೆಲ್ಲವಾದ ನಂತರ ಊಟ. ಇವೆಲ್ಲವನ್ನು ಪೊಳದ್ ಎನ್ನುವರು. ಪೊಳದ್ ಮುಗಿದ ನಂತರ ಐದು ದಿನಗಳು ಕೋಲಾಟ, ನಂತರ ನಾಡಿನ ಮಂದಿನಲ್ಲಿ ನಾಡಿನವರು ಸೇರಿ ಕೋಲಾಟ. ಕೋಲಾಟವಾದ ನಂತರ ಪರಿಯಕಳಿ. ಈ ಹಬ್ಬದಲ್ಲಿ ವಿವಿಧ ರೀತಿಯ ಕೋಲಾಟವು ಆಕರ್ಷಣೀಯವಾದ ಮುಖ್ಯ ಕಾರ್ಯಕ್ರಮ. ಪರಿಯ ಕಳಿ ಎಂಬುದು ಒಂದು ರೀತಿಯ ಯುದ್ಧ ನೃತ್ಯವೆನ್ನಬಹುದು. ಕೋಲಾಟದ ದಿನಗಳಲ್ಲಿ ರಾತ್ರಿ ವೇಳೆ ಮನೆಮನೆಗೂ ಹೋಗಿ ಹಾಡಿ ಹೊಗಳಿ ಕಾಣಿಕೆ ಪಡೆಯುತ್ತಾರೆ. ಹೀಗೆ ಬಂದ ಹಣದಿಂದ ಊರೊರ್ಮೆ ನಡೆಸುತ್ತಾರೆ. ಈಗ ಪೊಳದ್ ನಂತರ ಒಂದು ವಾರದೊಳಗೆ 3–4 ಗ್ರಾಮದವರು ಸೇರಿ ಮಂದುಗಳಲ್ಲಿ ಒಂದು ದಿನ ಕೋಲಾಟ, ಪರಿಯಕಳಿ ಏರ್ಪಡಿಸುತ್ತಾರೆ. ಪಾಡಿಯಲ್ಲಿ ಇಗ್ಗುತಪ್ಪ ದೇವರಿಗೆ ಕದಿರು ತೆಗೆದ ಮೇಲೆ ಇತರ ಎಲ್ಲಾ ಕಡೆಗಳಲ್ಲೂ ಮನೆಗಳಲ್ಲೂ ರಾತ್ರಿ ಕದಿರು ತೆಗೆಯುತ್ತಾರೆ.

ಈ ಮೂರು ಹಬ್ಬಗಳ ಜೊತೆಗೆ ಕೊಡವರಲ್ಲಿ ಭಗವತಿ ದೇವಸ್ಥಾನಗಳಲ್ಲಿ ರಾತ್ರಿ ವೇಳೆ ಬೆಳಕು ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಕುಣಿಯುವುದನ್ನು ಬೊಳಕಾಟವೆನ್ನುತ್ತಾರೆ. ಬೆಳದಿಂಗಳ ರಾತ್ರಿಯಲ್ಲಿ ದೀಪವನ್ನು ಮಧ್ಯದಲ್ಲಿಟ್ಟು ಅದರ ಸುತ್ತಲೂ ಕುಣಿಯುತ್ತಾರೆ. ಕೊಡವರು ತಮ್ಮ ಹಬ್ಬಗಳ ಜೊತೆಗೆ ಹಿಂದೂಗಳ ಎಲ್ಲಾ ಮುಖ್ಯವಾದ ಹಬ್ಬಗಳನ್ನೂ ಆಚರಿಸುತ್ತಾರೆ.

ವೀರರಾಜಪೇಟೆ ತಾಲೂಕು ತಿತಿಮತಿಯ ದೇವರ ಕಾಡಿನಲ್ಲಿ ಮೇ ತಿಂಗಳ ಕಡೆಯ ವಾರದಲ್ಲಿ ಗುರುವಾರದಂದು ನಡೆಯುವ ಕುದುರೆ ಹಬ್ಬವು ಆ ಸುತ್ತಿನ ಗಿರಿಜನ ಹಾಗೂ ಇತರರನ್ನು ಆಕರ್ಷಿಸುತ್ತದೆ. ಈ ಹಬ್ಬದಲ್ಲಿ ಸುತ್ತು ಮುತ್ತಿನ ಜನರು ಭಾಗವಹಿಸಿದರೂ ಬೆಟ್ಟ ಕುರುಬರು ಮತ್ತು ಜೇನುಕುರುಬರು ಹೆಚ್ಚಾಗಿ ಭಾಗವಹಿಸುತ್ತಾರೆ. ಇವರಲ್ಲಿ ಕೆಲವರು ಸೀರೆಯುಟ್ಟು ಸ್ತ್ರೀವೇಷ ಹಾಕಿಕೊಂಡು ಮುಖಕ್ಕೆ ಮಸಿ ಬಳಿದುಕೊಂಡು ಹೂವು ಎಲೆಗಳಿಂದ ಅಲಂಕರಿಸಿಕೊಂಡು ಭಿಕ್ಷೆ ಬೇಡುತ್ತಾರೆ. ಆ ದಿನ ಜನರು ಸರಾಗವಾಗಿ ದೇವರನ್ನು ಬಯ್ಯುತ್ತಿರುತ್ತಾರೆ (ಹಾಗೇ ಬಯ್ಯುವುದಕ್ಕೆ ಹರಕೆ ಹೊತ್ತಿರುತ್ತಾರೆ). ಆದುದರಿಂದ ಈ ಹಬ್ಬವನ್ನು ಬೇಡುವ ಹಬ್ಬವೆಂದೂ, ಬಯ್ಯುವ ಹಬ್ಬವೆಂದೂ ಕರೆಯುತ್ತಾರೆ. ಕುಂಡೆಯ ಹಬ್ಬವೆಂದೂ ಇನ್ನೊಂದು ಹೆಸರಿದೆ. ಈ ಹಬ್ಬವನ್ನು ಕೊಡವರ ಸನ್ನುವಂಡ ಕುಟುಂಬದವರು ವ್ಯವಸ್ಥೆ ಮಾಡುತ್ತಾರೆ. ಈ ಹಬ್ಬವು ದೇವರ ಕಾಡಿನ ಅಯ್ಯಪ್ಪನ ಹೆಸರಿನಲ್ಲಿ ನಡೆಯುತ್ತದೆ. ಹಬ್ಬವು ಮೂರು ವಾರಗಳ ಮುಂಚೆ ಕುಟ್ಟದಮ್ಮನ ದೇವಸ್ಥಾನದಲ್ಲಿ ಶುರುವಾಗುತ್ತದೆ. ಹಬ್ಬದ ದಿನವಾದ ಗುರುವಾರದ ಹಿಂದಿನ ದಿನ ದೇವರಕಾಡಿನ ಅಂಬಲದಲ್ಲಿ ಜನ ಸೇರುತ್ತಾರೆ. ಕುಂಬಾರರು ಕುದುರೆ ವಿಗ್ರಹಗಳನ್ನು ತಂದು ಪೂಜಿಸಿಯಾದ ಮೇಲೆ ಭಂಡಾರವನ್ನು ತೆಗೆದು ಆಭರಣಗಳನ್ನು ತೊಳೆದು ಮೆರವಣಿಗೆಯಲ್ಲಿ ದೇವರ ಕಾಡಿಗೆ ಹೋಗಿ ಅಲ್ಲಿ ಕಾಣಿಕೆಗಳೊಂದಿಗೆ ಪೂಜೆ ಮಾಡುತ್ತಾರೆ. ಮಾರನೇಯ ದಿನ ಇಬ್ಬರು ಕೊಡವರು ಅಯ್ಯಪ್ಪನ ಕುದುರೆ ವೇಷದಿಂದ ಬರುತ್ತಾರೆ. ಫಣಿಕನೊಬ್ಬನು ಬಿಳಿಪಂಚೆಯುಟ್ಟು ಕತ್ತಿ ಹಿಡಿದು ತಲೆಯ ಮೇಲೆ ಕಾಳಿಯನ್ನು ಹೊತ್ತು ಬರುತ್ತಾನೆ. ದೇವಸ್ಥಾನವನ್ನು ಮೂರು ಸುತ್ತು ವಿರುದ್ಧ ದಿಕ್ಕುಗಳಲ್ಲಿ ಸುತ್ತಿದ ನಂತರ ಕುದುರೆಗಳು ಗಿರಿಜನರ ಕುಣಿತದೊಂದಿಗೆ ಸೇರಿಕೊಳ್ಳುತ್ತವೆ. ಸಾಯಂಕಾಲದ ವೇಳೆಗೆ ಗಂಡಸರು ಮೆರವಣಿಗೆಯಲ್ಲಿ ಅರ್ಧ ಕಿಲೋ ಮೀಟರ್ ದೂರದಲ್ಲಿ ಗುಡ್ಡದ ಮೇಲಿರುವ ಭದ್ರಕಾಳೀ ದೇವಸ್ಥಾನಕ್ಕೆ ತೆರಳಿ ಅಲ್ಲಿ ಬಲಿಯಾದ ಮೇಲೆ ಹಬ್ಬವು ಪೂರ್ಣಗೊಳ್ಳುತ್ತದೆ. ಹಿಂದೆ ಇಲ್ಲಿ ನರಬಲಿಯಾಗುತ್ತಿತ್ತೆಂದು ಹೇಳುತ್ತಾರೆ.

### ಯಾತ್ರೆಗಳು

ಧಾರ್ಮಿಕ ವಿಧಿಯ ಅಂಗವಾಗಿ ಜನರು ತಮ್ಮ ಇಷ್ಟ ದೇವರುಗಳ ಊರುಗಳಿಗೆ ಯಾತ್ರೆ ಹೋಗುತ್ತಾರೆ. ಮತ್ತೆ ಕೆಲವರು ತಮ್ಮ ಕಷ್ಟ ಕಾಲಗಳಲ್ಲಿ ಹರಕೆ ಹೊತ್ತಿದ್ದು ಅವುಗಳನ್ನು ಪೂರೈಸಲೂ ಕೂಡ ಯಾತ್ರೆ ಹೋಗುತ್ತಾರೆ. ಕೊಡಗು ಜಿಲ್ಲೆಯೊಳಗೆ ಕೆಲವು ಯಾತ್ರಾಕ್ಷೇತ್ರಗಳಿವೆ. ಅವುಗಳು ಯಾವುವೆಂದರೆ ಭಾಗಮಂಡಲ, ತಲಕಾವೇರಿ, ಬಲಮುರಿ, ಇರ್ಪು, ಪಾಡಿ, ಸೋಮಮಲೆ, ಪಾಲೂರು, ಯವಕಪಾಡಿ, ಕಕ್ಕಬ್ಬೆ, ಕುಟ್ಟ ಮೊದಲಾದವುಗಳು. ಕೊಡವರು ಹಾಗೂ ಇತರ ಮೂಲನಿವಾಸಿಗಳು ಕೇರಳದ ಬೈತೂರು, ತಿರನೆಲ್ಲಿಗಳಿಗೆ ಯಾತ್ರೆ ಹೋಗುತ್ತಾರೆ. ಜಿಲ್ಲೆಯ ಹೊರಗೆ ಧರ್ಮಸ್ಥಳ, ಬಿಳಿಗಿರಿರಂಗನ ಬೆಟ್ಟ, ಸುಬ್ರಮಣ್ಯ, ಮಲೈಮಾದೇಶ್ವರ, ನಂಜನಗೂಡು, ಮೊದಲಾದವು ರಾಜ್ಯದ ಇತರ ಯಾತ್ರಾಸ್ಥಳಗಳು. ಇವಲ್ಲದೆ ಕಾಶಿ, ರಾಮೇಶ್ವರ, ಗಯಾ, ಬದರಿ, ಕೇದರ, ಶಬರಿಮಲೈ ಮೊದಲಾದ ಕ್ಷೇತ್ರ

ಗಳಿಗೂ ಜಿಲ್ಲೆಯ ಜನರು ಯಾತ್ರೆ ಹೋಗುವುದು ರೂಢಿಯಲ್ಲಿದೆ.

### ಜಾತ್ರೆಗಳು

ಜಾತ್ರೆಗಳು ಸಾಮಾಜಿಕ ಜೀವನದ ಒಂದು ಪ್ರಧಾನ ಅಂಶವಾಗಿವೆ. ಇವುಗಳು ಪಾಲ್ಗೊಳ್ಳುವ ಜನರಿಗೆ ಮನರಂಜನೆಯನ್ನು ಒದಗಿಸುತ್ತವೆಯಲ್ಲದೆ ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡಿ ಮನೋವಿಕಾಸಕ್ಕೆ ಎಡೆಮಾಡಿ ಕೊಡುತ್ತವೆ. ಹಿಂದೆ ಜಾತ್ರೆಗಳು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದ್ದವು. ಜಾತ್ರೆಗಳು ಜನಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತವೆ. ಜಾತ್ರೆಗಳು ಸಾಮಾನ್ಯವಾಗಿ ದೇವರ ಹೆಸರಿನಲ್ಲಿ ನಡೆಯುತ್ತವೆ. ಮುಸಲ್ಮಾನ ಸಂತರ ಸಮಾಧಿಗಳ ಬಳಿ ಉರುಸುಗಳೂ ನಡೆಯುತ್ತವೆ. ಇವು ಬಹಳವಾಗಿ ವಾರ್ಷಿಕವಾಗಿರುತ್ತವೆ. ಕೆಲವೊಮ್ಮೆ ಮೂರು, ಐದು ಅಥವಾ ಏಳು ವರ್ಷಗಳಿಗೊಮ್ಮೆ ನಡೆಯುತ್ತದೆ. ಹಳ್ಳಿಗಳಲ್ಲಿ ನಡೆಯುವ ಗ್ರಾಮದೇವತೆಗಳ ಜಾತ್ರೆಗಳು ಪ್ರಮಾಣದಲ್ಲಿ ಸಣ್ಣ ಸ್ವರೂಪದ್ದಾಗಿದ್ದರೂ ಅವುಗಳಲ್ಲಿ ಪಾಲ್ಗೊಳ್ಳುವವರಿಗೆ ಹೆಚ್ಚು ಪ್ರಯೋಜನಕಾರಿಯಾದವುಗಳು. ಕೆಲವು ಜಾತ್ರೆಗಳಲ್ಲಿ ದನಗಳ ಸಂತೆಯೂ ಸೇರುವುದರಿಂದ ಹಳ್ಳಿಗಳ ಆರ್ಥಿಕ ಕ್ಷೇತ್ರದಲ್ಲಿ ಮೌಲ್ಯವುಳ್ಳಂತಹವುಗಳು. ಕೊಡಗು ಜಿಲ್ಲೆಯು ಬೆಟ್ಟ ಕಣಿವೆಗಳಿಂದ ಕೂಡಿದ್ದು ಜನರು ದೂರ ದೂರದಲ್ಲಿ ಹೆಚ್ಚು ಕಾಲ ಬೇರೆಯವರ ಸಂಪರ್ಕವಿಲ್ಲದೇ ಕಾಲ ಕಳೆಯುವುದರಿಂದ ಜಾತ್ರೆಗಳು ಮನರಂಜನೆಯ ಜೊತೆಗೆ ಮಾನವನ ಸ್ವಾಭಾವಿಕ ಗುಣವಾದ ಸಮಾಜ ಜೀವನಕ್ಕೆ ಅವಕಾಶ ಮಾಡಿಕೊಡುವುದಲ್ಲದೆ ಹೊರಗಿನ ಪ್ರಪಂಚಕ್ಕೆ ಅವರನ್ನು ಕರೆದೊಯ್ಯುತ್ತವೆ. ಈ ಕೆಳಗಿನ ಪಟ್ಟಿಯಲ್ಲಿ ಜಿಲ್ಲೆಯಲ್ಲಿ ನಡೆಯುವ ಜಾತ್ರೆಗಳನ್ನೂ ಉರುಸುಗಳನ್ನೂ ಪ್ರತಿ ತಾಲೂಕಿಗೂ ಬೇರೆ ಬೇರೆಯಾಗಿ ಕೊಟ್ಟಿದೆ.

ಮಡಿಕೇರಿ ತಾಲೂಕು

| ಜಾತ್ರೆ / ಉರುಸ್ ನಡೆಯುವ ಸ್ಥಳ | ದೇವರ/ಸಂತರ ಹೆಸರು | ಜಾತ್ರೆಯಾಗುವ ತಿಂಗಳು | ಜಾತ್ರೆ ನಡೆಯುವ ದಿನಗಳು | ಸೇರುವವರ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| ಇಬ್ನಿವಳವಾಡಿ | ಭದ್ರಕಾಳಿ | ಮಾರ್ಚ್ | 7 | 1,000 |
| ಇಬ್ನಿವಳವಾಡಿ | ಭುವನೇಶ್ವರಿ | ಮೇ | 2 | 500 |
| ಕರ್ಣಂಗೇರಿ | ಮುತ್ತಪ್ಪ | ಮಾರ್ಚ್ | 3 | 1,000 |
| ಕರ್ಣಂಗೇರಿ | ಅಯ್ಯಪ್ಪ | ಜನವರಿ | 3 | 3,000 |
| ಕರ್ಣಂಗೇರಿ(ಉರುಸು) | ಹಜರತ್ ಸೈಯದುಲ್ಲ | ಮಾರ್ಚ್ | 2 | 1,500 |
| ಕರ್ಣಂಗೇರಿ | ರಾಜರಾಜೇಶ್ವರಿ | ಏಪ್ರಿಲ್ | 2 | 3,000 |
| ಕೆ. ಬಾಡಗ | ಭಗವತಿ | ಏಪ್ರಿಲ್ | 7 | 1,000 |
| ಹೊಸಕೇರಿ | ಕುಡಿವಚಾತ | ಮಾರ್ಚ್ | 2 | 500 |
| ಮರಗೋಡು | ಭಗವತೀ | ಮಾರ್ಚ್ | 7 | 2,000 |
| ಕಟ್ಟೆಮಾಡು | ಭದ್ರಕಾಳಿ | ಏಪ್ರಿಲ್ | 7 | 2,500 |
| ಮಕ್ಕಂದೂರು | ಭದ್ರಕಾಳಿ | ಏಪ್ರಿಲ್ | 7 | 1,800 |
| ಮುಕ್ಕೋಡ್ಲು | ಭದ್ರಕಾಳಿ | ಏಪ್ರಿಲ್ | 7 | 1,000 |
| ಮಡಿಕೇರಿ (ಉರುಸು) | ಸೈಯದ್ ಸಿಕಂದರ್ ಷಾವಲಿ ದರ್ಗಾ | ಮಾರ್ಚ್ | 6 | 1,000 |
| ಕಾಂತೂರು | ಭಗವತಿ | ಏಪ್ರಿಲ್ | 7 | 1,000 |
| ಬಾಡಗ | ಭಗವತಿ | ಏಪ್ರಿಲ್ | 2 | 1,200 |
| ಕಿಗ್ಗಾಲು | ಚೌಂಡಿ | ಮಾರ್ಚ್ | 2 | 500 |

| 1 | 2 | 3 | 4 | 5 |
|---|---|---|---|---|
| ಕೋಡಂಬೂರು | ಭದ್ರಕಾಳಿ | ಏಪ್ರಿಲ್ | 2 | 1,000 |
| ಹೊದ್ದೂರು | ಪಾಟ ಅಯ್ಯಪ್ಪ | ಮಾರ್ಚ್ | 7 | 1,000 |
| ಹೊದ್ದೂರು | ಅಯ್ಯಪ್ಪ | ಮಾರ್ಚ್ | 2 | 400 |
| ಹೊದ್ದೂರು (ಉರುಸು) | (ತಿಳಿದಿಲ್ಲ) | ಮಾರ್ಚ್ | 2 | 1,000 |
| ಹೊದವಾಡ | ಅಯ್ಯಪ್ಪ | ಜೂನ್ | 2 | 750 |
| ಕುಂಜಿಲದಾಳು | ಪಾಟ ಅಯ್ಯಪ್ಪ | ಮಾರ್ಚ್ | 2 | 500 |
| ಸಂಪಾಜಿ ಅರೆಕಲ್ಲು | ಅಯ್ಯಪ್ಪ | ಮಾರ್ಚ್ | 2 | 1,000 |
| ಕೊಯನಾಡು (ಉರುಸು) | (ತಿಳಿದಿಲ್ಲ) | ಮಾರ್ಚ್ | 2 | 1,500 |
| ಮದೆ | ಅಯ್ಯಪ್ಪ (ಮೂದೂರಪ್ಪ) | ಮಾರ್ಚ್ | 3 | 1,000 |
| ಕಾಟಕೇರಿ | ಅಪ್ಪಂದಿರಪ್ಪ | ಮಾರ್ಚ್ | 4 | 1,000 |
| ಹಾಕತ್ತೂರು | ಭಗವತಿ | ಫೆಬ್ರವರಿ | 3 | 1,000 |
| ಕಗ್ಗೋಡು | ಚಾಮುಂಡಿ | ಫೆಬ್ರವರಿ | 3 | 1,000 |
| ಮೇಕೇರಿ | ಈಶ್ವರ | ಫೆಬ್ರವರಿ | 3 | 1,000 |
| ಹೆರವನಾಡು | ಭಗವತಿ | ಫೆಬ್ರವರಿ | 3 | 1,000 |
| ಅರವತ್ತೊಕ್ಲು | ಈಶ್ವರ | ಫೆಬ್ರವರಿ | 3 | 1,000 |
| ಭಾಗಮಂಡಲ | ತಲಕಾವೇರಿ | ಅಕ್ಟೋಬರ್ | 1 | 50,000 |
| ಕೊಳಗದಾಳು | ಪಾಕದೇವಸ್ಥಾನ | ಡಿಸೆಂಬರ್ | 3 | 1,500 |
| ತಾವೂರು (ಉರುಸು) | (ತಿಳಿದಿಲ್ಲ) | ಏಪ್ರಿಲ್ | 3 | 2,000 |
| ಐಯ್ಯಂಗೇರಿ | ಚಿನ್ನತಪ್ಪದೇವರು | ಡಿಸೆಂಬರ್ | 3 | 2,000 |
| ಐಯ್ಯಂಗೇರಿ (ಉರುಸು) | ಶೇಕಮೊಹಿದ್ದೀನ್‌ಷಾವಲಿ | ಏಪ್ರಿಲ್ | 4 | 2,000 |
| ಕುಂಜಿಲಕಕ್ಕಬ್ಬೆ | ಪಾಡಿಇಗ್ಗುತಪ್ಪ | ಮಾರ್ಚ್ | 2 | 2,500 |
| ಪಾಲೂರು | ಮಹಾಲಿಂಗೇಶ್ವರ | ಮೇ | 2 | 3,000 |
| ಬಲಮುರಿ | ಮಹಾದೇವ | ಅಕ್ಟೋಬರ್ | 1 | 15,000 |
| ಎಮ್ಮೆಮಾಡು (ಉರುಸು) | ಸೂಫಿ ಶಯಿದ್ ಷಾವಲಿ ಉಲ್ಲಾ ದರ್ಗಾ | ಮಾರ್ಚ್ | 2 | 15,000 |
| ಕುಂಜಲ ಪರಂಬು (ಉರುಸು) | ಪಯ್ಯಿ ನರಿ ವಲಿಉಲ್ಲಾ ದರ್ಗಾ | ಮಾರ್ಚ್ | 2 | 15,000 |
| ನಾಪೋಕ್ಲು (ಚೆರಿಯಪರಂಬು) (ಉರುಸು) | ಸೈಯದ್ ಅಬ್ದುಲ್ ರಹಮಾನ್ ವಲಿಉಲ್ಲಾ | ಮಾರ್ಚ್ | 2 | 3,000 |
| ಕರಡ (ಉರುಸು) | ಅಬ್ದುಲ್ ರಹೀಂಖಾನ್ | ಮಾರ್ಚ್ | 2 | 2,000 |
| ಕೊಳಕೇರಿ (ಚಪ್ಪಯಂದಂಡಿ ಉರುಸು) | ಮೊಕ್ಕಾಂದರ್ಗ | ಮಾರ್ಚ್ | 2 | 1,000 |
| ಯಡ ಪಾಲ (ಚಯ್ಯಂಬಾಣೆ ಉರುಸು) | ಅಂಡತ್ತಮಾನಿ ದರ್ಗಾ ಶರೀಫ್ | ಮಾರ್ಚ್ | 3 | 4 – 5 ಸಾವಿರ |
| ಮಡಿಕೇರಿ (ಉರುಸು) | ಹಜರತ್‌ಗಂಜಿ ಗೌಹರ್ ಅಲಿಷಾ ದರ್ಗಾ | ಏಪ್ರಿಲ್ | 4 | 10,000 |

| 1 | 2 | 3 | 4 | 5 |
|---|---|---|---|---|
| ಮಡಿಕೇರಿ (ಉರುಸು) | ಸೈಯದ್ ಸುಲ್ತಾನ್ ಅಲಿಷಾ ಮದನಿ | ಮಾರ್ಚ್ | 2 | 5,000 |
| ಹಾಕತ್ತೂರು | ಹಜರತ್ ಫಕೀರ್ ಉಲ್ಲಾ ದರ್ಗಾ ಶರೀಫ್ | ಏಪ್ರಿಲ್ | 3 | 5,000 |
| | | ಸೋಮವಾರಪೇಟೆ ತಾಲೂಕು | | |
| ಶನಿವಾರ ಸಂತೆ ಗುಡಗಳಲೆ | ಶ್ರೀ ಬಸವೇಶ್ವರ (ದನಗಳ ಜಾತ್ರೆ ಸಹ) | ಜನವರಿ | 15 | 5,000 ರಿಂದ 6,500 |
| ಶನಿವಾರ ಸಂತೆ (ಗುಡಗಳಲೆ ಉರುಸು) | ಹಜರತ್‌ತಕೀರ್ ಬಾಬಾ | ಫೆಬ್ರವರಿ | 1 | (ತಿಳಿಯದು |
| ಕುಶಾಲನಗರ | ಗಣಪತಿ (ದನಗಳ ಜಾತ್ರೆ ಸಹ) | ಜನವರಿ | 5 | 3,000 |
| ಶಾಂತಳ್ಳಿ | ಕುಮಾರ ಲಿಂಗೇಶ್ವರ (ದನಗಳ ಜಾತ್ರೆ ಸಹ) | ಫೆಬ್ರವರಿ | 1 | 1,000 |
| ಹೆಬ್ಬಾಲೆ | ಬನಶಂಕರಿ | ಜನವರಿ/ಫೆಬ್ರವರಿ | 1 | — |
| ಕಣಿವೆ | ರಾಮೇಶ್ವರ | ಫೆಬ್ರವರಿ | 1 | — |
| ಕೊಡಿಗೆ | ಸುಬ್ರಹ್ಮಣ್ಯ | ಫೆಬ್ರವರಿ | 1 | — |
| ಸೋಮವಾರಪೇಟೆ (ಉರುಸು) | ಹಜರತ್ ಮಲಂಗೀಶಾವಲಿ | ಷಾಬಾನ್ | 1 | — |
| | | ವೀರರಾಜಪೇಟೆ ತಾಲೂಕು | | |
| ಕುಟ್ಟ | ಕುಟ್ಟಪಮ್ಮಾ | ಮೇ | 2 | 5,000 |
| ಅಂಬಟ್ಟಿ (ಬಿಟ್ಟಂಗಾಲ ಉರುಸು) | ಕೊಡಗಮಾರ ಶೇಕಮಾರ್ ಮಕ್ಕಾನ್ ದರ್ಗಾ | ಫೆಬ್ರವರಿ | 2 | 2,000 |
| ನಾಲ್ಕೇರಿ | ಬಂಣಮೊಟ್ಟೆ ಸುಬ್ರಮಣಿ | ಡಿಸೆಂಬರ್ | 7 | 2,000 |
| ಕೋತೂರು | ಮಾರಿಯಮ್ಮ | ಮೇ | 8 | 5,000 |
| ತಾವಳಗೇರಿ | ಸುಬ್ರಮಣಿ | ಡಿಸೆಂಬರ್ | 1 | 1,000 |
| ಕುರ್ಚಿ | ಇರ್ಪುರಾಮೇಶ್ವರ | ಫೆಬ್ರವರಿ | 2 | 5,000 |
| ಪೊನ್ನಂಪೇಟೆ/ ಗೋಣಿಕೊಪ್ಪಲು | ಉಮಾಮಹೇಶ್ವರ | ಡಿಸೆಂಬರ್ | 3 | 2,000 |
| ಮಾಯಮುಡಿ | ಕಮುಟ ಮಹಾದೇವರು | ಏಪ್ರಿಲ್ | 7 | 1,000 |
| ಚಿಕ್ಕಸೊಡ್ಲೂರು | ಮಂದತ್ತಾವ್ವೆ ದೇವರು | ಏಪ್ರಿಲ್ 3 ವರ್ಷಕ್ಕೊಮ್ಮೆ | 10 | 1,000 |
| ಹುದಿಕೇರಿ | ಮಹಾದೇವರು | ಏಪ್ರಿಲ್ | 1 | 1,000 |
| ಹೈಸೊಡ್ಲೂರು | ಮಹಾದೇವ | ಮಾರ್ಚ್ | 1 | 800 |

| 1 | 2 | 3 | 4 | 5 |
|---|---|---|---|---|
| ಬಲ್ಯಮಂಡೂರು | ಮಾರಮ್ಮ | ಏಪ್ರಿಲ್ | 1 | 1,500 |
| ಬೇಗೂರು ಚಿನಿವಾಡ (ಉರುಸು) | — | ಫೆಬ್ರವರಿ | 1 | 700 |
| ಬೇಳೂರು | ಕುಲ್ಲಗುಡ್ಡೇಶ್ವರ | ಮೇ | 2 | 1,200 |
| ದೇವನೂರು | ನಾದಮೇಶ್ವರ | ಮೇ | 2 | 1,200 |
| ಬೈರಂಬಾಡಿ | ಸುಬ್ರಮಣ್ಯ | ಡಿಸೆಂಬರ್ | 2 | 5,000 |
| ಬೈರಂಬಾಡಿ ಹುಲ್ಲುಮಾಡ (ಉರುಸು) | — | ಏಪ್ರಿಲ್ | 1 | 2,000 |
| ಪೊಲ್ಲಿಬೆಟ್ಟ (ಉರುಸು) | ಪಠಾಣ್ ಷಾವಲಿ ದರ್ಗಾ | ಮಾರ್ಚ್–ಏಪ್ರಿಲ್ | 4 | 10,000 |
| ಕೋಡಂಗೇರಿ | ಸೈಯದ್ ಅಬ್ದುಲ್ಲಾ ಹಿ ವಲಿ ಉಲ್ಲಾ ದರ್ಗಾ | ಏಪ್ರಿಲ್ | 5 | 6,000 |
| ಕರಡಿಗೋಡು | ಶ್ರೀರಾಮ | ಸೆಪ್ಟಂಬರ್ | 7 | 7,000 |
| ಅರಪಟ್ಟು (ಉರುಸು) | ಕೊಕ್ಕಂಡಬಾಣೆ ದರ್ಗಾ | ಮಾರ್ಚ್ | 3 | 5,000 |
| ಗುಂಡಿಕೇರಿ (ಬೇಟೋಳಿ) (ಉರುಸು) | ಮೊಕ್ಕಾಂ ಉರುಸ ದರ್ಗಾ | ಫೆಬ್ರವರಿ | 3 | 5,000 |

## ಶೌರ್ಯ ಪರಂಪರೆ

ಕೊಡವರು ಹುಟ್ಟಿನಿಂದಲೇ ಧೀರರು ಹಾಗೂ ಸಾಹಸಿಗಳು. ಶೌರ್ಯಕ್ಕೆ ಕೊಡವರು ಪ್ರಸಿದ್ಧರಾಗಿದ್ದಾರೆ. ರಾಜರ ಕಾಲದಲ್ಲೇ ಅವರು ತಮ್ಮ ನಾಡನ್ನು ಕಾಪಾಡುವಲ್ಲಿ ನೆರೆಹೊರೆಯ ರಾಜರೊಡನೆ, ನಾಯಕರೊಡನೆ ಹೋರಾಟದಲ್ಲಿ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದಾರೆ. ಲಿಂಗಾಯತ ರಾಜರೂ ಕೂಡ ಒಳ್ಳೆಯ ಬೇಟೆಗಾರರಾಗಿದ್ದಂತೆ ಕಂಡುಬರುತ್ತದೆ. ಚಿಕ್ಕವೀರ ರಾಜೇಂದ್ರನು 1822ರ ಶಾಸನವೊಂದರ ಪ್ರಕಾರ ಅನೇಕ ಆನೆಗಳನ್ನು, ಚಿರತೆ, ಕರಡಿ, ಜಿಂಕೆಗಳನ್ನು ಕೊಂದದ್ದಾಗಿ ಕಂಡುಬರುತ್ತದೆ. ಲಿಂಗರಾಜೇಂದ್ರನು ಒಂದು ವರುಷದಲ್ಲಿ ದಿನಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹುಲಿಗಳನ್ನು ಕೊಂದಿದ್ದಾಗಿ ಹೇಳಿಕೊಂಡಿದ್ದಾನೆ. ಕುಡಿಯರು, ಮುಳ್ಳುಕುರುಬರು, ಯೆರವರು, ಗೌಡರು, ಬೆಟ್ಟಕುರುಬರು, ಮೊದಲಾದವರು ಹಿಂದೆ ಸೈನ್ಯಗಳನ್ನು ಸೇರಿ ವೀರಯೋಧರಾಗಿ ಸೆಣಸಿದ್ದಾರೆ. ಅದೇ ರೀತಿ ಬ್ರಾಹ್ಮಣರು, ಲಿಂಗಾಯಿತರು, ಗೌಡರು, ವಕ್ಕಲಿಗರು ಪಳವಾಯಿಗಳಾಗಿ ಯುದ್ಧ ಮಾಡಿದ್ದಾರೆ. ಕೊಡವರು ಬ್ರಿಟಿಷರ ಆಳ್ವಿಕೆಯಲ್ಲಿಯೂ ನಂತರ ಸ್ವಾತಂತ್ರ್ಯೋತ್ತರದಲ್ಲಿಯೂ ಭಾರತದ ಭೂಸೈನ್ಯ, ವಾಯುದಳ ಹಾಗೂ ನೌಕಾಪಡೆಯಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಜನರಲ್ ಕೆ.ಎಂ. ಕಾರಿಯಪ್ಪ, ಜನರಲ್ ತಿಮ್ಮಯ್ಯ ಹಾಗೂ ಅಪ್ಪಾರಂಡ ಅಯ್ಯಪ್ಪ ಇವರುಗಳನ್ನು ಇಲ್ಲಿ ಸ್ಮರಿಸಬಹುದು. ಮೊದಲ ಇಬ್ಬರು ಪ್ರಪಂಚದ ಪ್ರತಿಷ್ಠಿತ ಗೌರವಾನ್ವಿತ ದಂಡನಾಯಕರಾಗಿದ್ದರು. ಜನರಲ್ ಕಾರಿಯಪ್ಪನವರಿಗೆ ನಿವೃತ್ತಿಯ ನಂತರ ಫೀಲ್ಡ್ ಮಾರ್ಷಲ್ ಸ್ಥಾನಮಾನದ ವಿಶೇಷ ಗೌರವ ಸಂದಿದೆ.

ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು ಸ್ಥಾಪಿಸಿದ ಸೈನಿಕರಿಗೆ ಮೀಸಲಾದ ಪ್ರಶಸ್ತಿಗಳಲ್ಲಿ ಅಶೋಕ ಚಕ್ರ, ಕೀರ್ತಿ ಚಕ್ರ, ಶೌರ್ಯಚಕ್ರಗಳನ್ನು, ಜೀವ ಭಯವನ್ನೂ ಲೆಕ್ಕಿಸದೆ ತೋರಿಸುವ ಅಪ್ರತಿಮ ಧೈರ್ಯ, ಸಾಹಸಗಳಿಗೆ ಮರಣೋತ್ತರವಾಗಿ ಕೊಡಲಾಗುವುದು. ಇದೇ ರೀತಿ ಪರಮವೀರ ಚಕ್ರ, ಮಹಾವೀರಚಕ್ರ ಮತ್ತು ವೀರಚಕ್ರಗಳನ್ನು, ಪರಮ ವಿಶಿಷ್ಟ ಸೇವಾಪದಕ, ಅತಿ ವಿಶಿಷ್ಟ ಸೇವಾಪದಕ, ಸೇವಾಪದಕ, ನವ ಸೇವಾ ಪದಕ ಮತ್ತು ವಾಯುಸೇವಾ ಪದಕಗಳನ್ನು ಅತ್ಯಂತ ಧೈರ್ಯದಿಂದ ದೇಶವನ್ನು ಕಾಪಾಡುವಲ್ಲಿ ತೊಡಗುವ ಸೈನಿಕರಿಗೆ, ಅಧಿಕಾರಿಗಳಿಗೆ ಭಾರತ ಸರ್ಕಾರವು ಕೊಡುತ್ತದೆ. ಈ ಕೆಳಗಿನ ಮಹನೀಯರುಗಳು ತಾವು ಸಲ್ಲಿಸಿರುವ ಸೇವೆಗೆ ಬೇರೆ ಬೇರೆ ಪ್ರಶಸ್ತಿಗಳನ್ನು ಪಡೆದಿದ್ದಾರೆ. ವೀರರಾಜಪೇಟೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ಸಿ.ಎನ್. ಸೋಮಣ್ಣನವರಿಗೆ ಪರಮ ವಿಶಿಷ್ಟ ಸೇವಾಪದಕ, ಮಡಿಕೇರಿ ತಾಲೂಕಿನ ಡಾಕ್ಟರ್ಸ್ ಎಸ್ಟೇಟಿನ ನಿವೃತ್ತ ಬ್ರಿಗೇಡಿಯರ್ ಸಿ.ಎಂ. ಕಾರಿಯಪ್ಪನವರಿಗೆ ಅತಿ ವಿಶಿಷ್ಟ ಸೇವಾ ಪದಕ, ಮಡಿಕೇರಿಯ ಏರ್‌ಕಮ್ಯಾಂಡರ್ ಕೆ.ಎಂ. ಪೊನ್ನಪ್ಪನವರಿಗೆ ವಾಯು ಸೇವಾ ಪದಕ ಸಂದಿವೆ. ವೀರಚಕ್ರ ಪದಕಗಳನ್ನು ಫ್ಲೈಟ್ ಲೆಫ್ಟಿನೆಂಟ್ ಎಂ.ಎ. ಗಣಪತಿ (ಇವರ ತಂದೆ ಅಪ್ಪಚ್ಚು ಕೂಡ ವೀರ ಚಕ್ರ ಪ್ರಶಸ್ತಿ ಪಡೆದಿದ್ದಾರೆ), ಮೇಜರ್ ಕೆ.ಪಿ. ನಂಜಪ್ಪ

ಮೇಜರ್ ಎಂ.ಎಂ. ರವಿ; ಫ್ಲೈಯಿಂಗ್ ಆಫೀಸರ್ ಬಲ್ಲ ಚಂಡ ಚಂಗಪ್ಪ ಕರುಂಬಯ್ಯನವರಿಗೆ ನೀಡಲಾಗಿದೆ. ಸೇವಾ ಪದಕಗಳನ್ನು ಮೇಜರ್ ಕುಲ್ಲೇಟಿರ ಅಪ್ಪಚ್ಚು ಸೋಮಯ್ಯ, ಮೇಜರ್ ಪಾಲಚಂಡ ಪೂವಯ್ಯ ಗಣಪತಿ, ಮೇಜರ್ ಸಿ.ಕೆ. ಕರುಂಬಯ್ಯ, ಕ್ಯಾಪ್ಟನ್ ಎಂ.ಎ. ಕರಿಯಪ್ಪ, ಸಿಪಾಯಿ ಮಂದೇಟಿರ ಬೋಪಯ್ಯ, ಹವಲ್ದಾರ್ ಬಾಚಮಾಡ ಎಂ. ಪೋವಪ್ಪ ಮತ್ತು ಜಿ.ಎನ್.ಆರ್. ಆಗಿದ್ದ ಎಂ.ಬಿ. ಕುಶಾಲಪ್ಪನವರಿಗೆ ನೀಡಲಾಗಿದೆ.

ಈ ಕೆಳಗೆ ತಿಳಿಸುವ ಜಿಲ್ಲೆಯ ಧೀರರು ಶತ್ರುಗಳ ಕಾರ್ಯಾಚರಣೆಯಲ್ಲಿ ಮೃತಪಟ್ಟಿದ್ದಾರೆ. ಕ್ಯಾಪ್ಟನ್ ಪಿ.ಕೆ. ಅಪ್ಪಯ್ಯ, ಕೊಡನೂರು; ಮೇಜರ್ ಪಿ. ಎಂ. ಮಧು, ಸಿಪಾಯಿ ಪಿ.ಪಿ. ಭೀಮಯ್ಯ, ಸಿಪಾಯಿ ಮಂಗೇರೀರ ಮಾದಪ್ಪ (1947), ಜಿ.ಎನ್.ಆರ್. ಆಗಿದ್ದ ಎಂ. ಬಿ. ದೇವಯ್ಯ (1962) ಜಿ.ಎನ್.ಆರ್. ಆಗಿದ್ದ ಎಂ. ಕಾಳಯ್ಯ(1962), ಜಿ.ಎನ್.ಆರ್. ಆಗಿದ್ದ ಬಿ.ಬಿ. ಸುಬ್ಬಯ್ಯ (1962), ಜಿ.ಎನ್.ಆರ್. ಆಗಿದ್ದ ಟಿ.ಡಿ. ಪೂವಯ್ಯ (1962), ದಫೇದಾರ್ ಸಿ. ನಂಜಪ್ಪ ಅಯ್ಯನ್ (1965), ದಫೇದಾರ್ ಮಾದಂಡ ಎಂ. ಪೋವಪ್ಪ (1965), ಎನ್.ಎಸ್. ಕಾರಿಯಪ್ಪ (1965), ನಾಯಕ್ ಕೆ.ಎಸ್. ಪೊನ್ನಪ್ಪ (1965), ಎನ್.ಎಂ. ಗಣಪತಿ (1965), ಸುಬೇದಾರ್ ಬಿ.ಎಂ.ಕಾವೇರಿಯಪ್ಪ (1971), ಜಿ.ಎನ್.ಆರ್. ಆಗಿದ್ದ ಎಸ್. ಆರ್. ಪಳಂಗಪ್ಪ (1971), ಎಂ. ಎಸ್. ಪೊನ್ನಣ್ಣ (1971), ಲೂಯಿ ವೇಗಸ್ (1971), ಸಿಪಾಯಿ ಎನ್.ಎ. ಅಪ್ಪಚ್ಚು (1971), ಸಿಪಾಯಿ ಹೆಚ್.ಎಸ್. ಮುತ್ತಣ್ಣ (1971), ಜಿ.ಎನ್.ಆರ್. ಆಗಿದ್ದ ಪಿ.ಎಸ್. ರಾಮು (1987–88), ಜಿ.ಎನ್.ಆರ್. ಆಗಿದ್ದ ಕುಶಾಲಪ್ಪ (1987–88), ಬಲ್ಯಂಡ ಕಾವೇರಪ್ಪ (ಮುರೂರು), ಸಿಪಾಯಿ ಎಂ. ಪಿ. ಜೋಯಪ್ಪ (1987–88), ಸಿಪಾಯಿ ಕೆ.ವಿ. ರಾಮಕೃಷ್ಣ (1987–88) ಹಾಗೂ ಕೆ.ಎಂ. ಮಂದಣ್ಣ (ಕೊಟ್ಟೋಳಿ). ಈ ಕೆಳಗೆ ತಿಳಿಸಿರುವ ಜಿಲ್ಲೆಯ ವೀರರು ಶತ್ರುಗಳ ಕಾರ್ಯಾಚರಣೆಯಲ್ಲಿ ಗಾಯಗೊಂಡಿದ್ದಾರೆ. ನಾಯಕ್ ಎ. ಸಿ. ಸುಬ್ಬಯ್ಯ, ಸಿ.ಟಿ. ನಂಜಪ್ಪ, ಎಸ್.ಜಿ. ನಾಣಯ್ಯ, ಲೆಫ್ಟಿನೆಂಟ್ ಕರ್ನಲ್ ಎಂ. ಸಿ. ನಂಜಪ್ಪ, ಹವಾಲ್ದಾರ್ ಐರೀರ ಸುಬ್ಬಯ್ಯ ಮುತ್ತಣ್ಣ, ಸಿಪಾಯಿ ಎ. ಕೆ. ಕುಶಾಲಪ್ಪ, ಸಿಪಾಯಿ ಟಿ. ಗಣಪತಿ, ನಾಯಕ್ ಬಿ. ಎಂ. ಉಮೇಶ್‌ಕುಮಾರ್, ಕೆ. ಬಿ. ನಾಗೇಶ್, ಸಿಪಾಯಿ ಸಿ. ಎನ್. ಪೊನ್ನಪ್ಪ, ಹವಾಲ್ದಾರ್ ಸಿ. ಎಸ್. ಚರ್ಮಣ್ಣ ಮತ್ತು ಸಿಪಾಯಿ ಡಿ. ಎನ್. ಪಶ್ಮಕುಮಾರ್.

ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಕೆಳಗೆ ತಿಳಿಸಿದವೀರರಿಗೆ ಹಣಹಾಗೂ ಜಮೀನು ಅಥವಾ ಮನೆಗಳನ್ನು ಕೊಡುವುದರ ಮೂಲಕ ಗೌರವಿಸಿದೆ. ವೀರರಾಜಪೇಟೆ ತಾಲೂಕಿನ ಮೈತೋಡಿ ಗ್ರಾಮದ ಸಿ. ಟಿ. ನಂಜಪ್ಪ, ಎಸ್. ಜಿ. ನಾಣಯ್ಯ, ಕಟಕೇರಿ ಗ್ರಾಮ (ಮಡಿಕೇರಿ ತಾ||) ಲೆಫ್ಟಿನೆಂಟ್ ಕರ್ನಲ್ ಎಂ. ಸಿ. ನಂಜಪ್ಪ, ಐರೀರ ಸುಬ್ಬಯ್ಯ ಮುತ್ತಣ್ಣ, ಹವಾಲ್ದಾರ್ ಬಿ. ಎಲ್. ಪೂವಯ್ಯ, ಕುಂಜಿಲ ವೀರರಾಜಪೇಟೆ ತಾ|| ದಿ|| ಎಂ. ಬಿ. ಕುಶಾಲಪ್ಪ, ದೇವನೂರು ವೀರರಾಜಪೇಟೆ ತಾ|| ಹಾಗೂ ಕ್ಯಾಪ್ಟನ್ ಎಂ. ಚಿಣ್ಣಪ್ಪ ನಂಜಪ್ಪ (ಮೂರೂ ಮಂದಿ)ಮೆನ್ಶನ್–ಇನ್–ದಿಸ್ಪ್ಯಾಚ್.

ಯುದ್ಧದಲ್ಲಿ ಆಪರೇಶನ್ ಮೇಘದೂತ್ ಮತ್ತು ಆಪರೇಶನ್ ಪಾವನ್‌ಗಳಲ್ಲಿ ಸತ್ತವರ ಕುಟುಂಬದವರಿಗೆ ಪರಿಹಾರವನ್ನು ಒದಗಿಸಲಾಗಿದೆ. ಅವರುಗಳ ವಿವರ ಹೀಗಿದೆ : ಶ್ರೀಮತಿ ಎಂ. ಎಂ. ಗಂಗವ್ವ (ಹೆಂಡತಿ) ದಿ. ಮೇದಪ್ಪ ಪಡಕ್ಕಲ್ ಗ್ರಾಮ; ಶ್ರೀಮತಿ ಗಂಗಮ್ಮ (ಹೆಂಡತಿ) ದಿವಂಗತ ಎಂ. ಬಿ. ದೇವಯ್ಯ ಬೇಗೂರು, ವೀರರಾಜಪೇಟೆ ತಾ||; ಮುತ್ತಣ್ಣ (ತಂದೆ) ದಿವಂಗತ ವಿ. ಎಂ. ಕಾಳಯ್ಯ, ಅರ್ಜಿಗ್ರಾಮ, ವೀರರಾಜಪೇಟೆ ತಾ||; ಶ್ರೀಮತಿ ಮಾಚವ್ವ (ತಾಯಿ) ದಿ|| ಟಿ. ಡಿ. ಪೂವಯ್ಯ, ಅರವತ್ತೊಕ್ಕಲು, ವೀರರಾಜಪೇಟೆ ತಾ||; ಬಿ. ವಿ. ಬೋಪಯ್ಯ (ತಂದೆ) ದಿ|| ಬಿ. ಬಿ. ಹುದಿಕೇರಿ, ವೀರರಾಜಪೇಟೆ ತಾ||; ಶ್ರೀಮತಿ ಸಿ. ಎ. ಕಾಮವ್ವ (ಹೆಂಡತಿ) ಸಿ. ಎನ್. ಅಯ್ಯಣ್ಣ ಕಿರಿಂದಾಡು, ವೀರರಾಜಪೇಟೆ ತಾ||; ಎ. ವಿ. ಜಾನಕಿ (ಹೆಂಡತಿ) ದಿವಂಗತ ಎಂ. ಎಂ. ಪೂವಯ್ಯ, ಮಡಿಕೇರಿ; ಶ್ರೀ ಎನ್. ಸುಬ್ಬಯ್ಯ (ತಂದೆ) ದಿವಂಗತ ಎನ್. ಎಸ್. ಕಾರಿಯಪ್ಪ, ಪರಕಟಗೇರಿ, ವೀರರಾಜಪೇಟೆ ತಾ||; ಶ್ರೀಮತಿ ಗಂಗಮ್ಮ (ತಾಯಿ) ದಿವಂಗತ ಕೆ. ಎಸ್. ಪೊನ್ನಪ್ಪ ಹಳ್ಳಿಗಟ್ಟು, ವೀರರಾಜಪೇಟೆ ತಾ||; ಶ್ರೀ ಎನ್. ಮುತ್ತಣ್ಣ (ತಂದೆ)ದಿವಂಗತ ಎನ್.ಕೆ. ಗಣಪತಿ, ಗಾಳಿಬೀಡು; ಶ್ರೀ ಎನ್. ಮುತ್ತಣ್ಣ (ತಂದೆ) ದಿ. ಎನ್.ಎಂ. ಗಣಪತಿ, ಗಾಳಿಬೀಡು; ಶ್ರೀಮತಿ ಬಿ.ಕೆ. ಪೊನ್ನಮ್ಮ (ಹೆಂಡತಿ) ದಿವಂಗತ ಬಿ.ಎಂ. ಕಾವೇರಿಯಪ್ಪ, ಮಡಿಕೇರಿ; ಶ್ರೀಮತಿ ಎಸ್. ಪಿ. ಹೊನ್ನಮ್ಮ

ಹೆಂಡತಿ, ದಿ|| ಪಳಂಗಪ್ಪ, ಮಡಿಕೇರಿ; ಶ್ರೀ ಎಂ. ಜಿ. ಸುಬ್ಬಯ್ಯ (ತಂದೆ) ದಿ|| ಎಂ. ಎಸ್. ಪೊನ್ನಣ್ಣ, ಗೋಣಿ ಕೊಪ್ಪಲು; ಶ್ರೀಮತಿ ಅಂಜ (ತಾಯಿ) ಲೂಯಿ ವೇಗಸ್, ಸಂಪಾಜೆಕೊಲ್ಲಿ; ಶ್ರೀಮತಿ ದೇಚವ್ವ, (ತಾಯಿ) ದಿವಂಗತ ಎನ್. ಎಂ. ಅಪ್ಪಚ್ಚು, ಬಿಳಿಗುಂದ, ವೀರರಾಜಪೇಟೆ ತಾ||; ಶ್ರೀಮತಿ ಪೂವಮ್ಮ (ತಾಯಿ) ದಿ|| ಹೆಚ್. ಎಸ್. ಮುತ್ತಣ್ಣ ಆರವತ್ತೊಕ್ಕಲು, ವೀರರಾಜಪೇಟೆ ತಾ||; ಶ್ರೀಮತಿ ಎಂ. ಬಿ. ಮುತ್ತಮ್ಮ (ತಾಯಿ) ದಿ|| ಕುಶಾಲಪ್ಪ, ದೇವನೂರು, ವೀರ ರಾಜಪೇಟೆ ತಾ||; ಶ್ರೀಮತಿ ಮಾಚಮ್ಮ (ತಾಯಿ) ದಿ|| ಎಂ. ಪಿ. ಬೋಪಯ್ಯ, ಹೈಸೊಡ್ಲೂರು, ವೀರರಾಜಪೇಟೆ ತಾ||; ಶ್ರೀಮತಿ ಲಕ್ಷ್ಮಿ (ತಾಯಿ)ದಿ|| ಹೆಚ್.ವಿ. ವೆಂಕಟೇಶ, ನಂಗಲ ವೀರರಾಜಪೇಟೆ ತಾ||; ಶ್ರೀಮತಿ ಕೆ. ಪೊನ್ನವ್ವ (ತಾಯಿ) ದಿವಂಗತ ಎ. ರಾಮಕೃಷ್ಣ, ಬಡಗ ಗ್ರಾಮ, ಮಡಿಕೇರಿ ತಾ||; ಶ್ರೀಮತಿ ಅಕ್ಕಮ್ಮ (ತಾಯಿ) ದಿವಂಗತ ಪಿ. ಎಸ್. ರಾಮು, ಹೆಗ್ಗಡೆ, ವೀರರಾಜಪೇಟೆ ತಾ||.

(ಮಾಹಿತಿಯನ್ನು ಸೈನಿಕ ಕಲ್ಯಾಣ ಹಾಗೂ ಪುನರ್ವಸತಿ, ಕಛೇರಿ, ಮಡಿಕೇರಿಯಿಂದ ಪಡೆಯಲಾಗಿದೆ).